ಶ್ರೀ ಗುಜ್ಜಲ ಹನುಮಂತಪ್ಪ:- ಇದ್ದೇನೆ.

ಅಧ್ಯಕ್ಷರು:- ಇವತ್ತು ನಿಮ್ಮ ಹುಟ್ಟಿದ ದಿವಸವಾಗಿರುವುದರಿಂದ ನಾನು ಸದನದ ಪರವಾಗಿ ನಿಮಗೆ ಹಾರ್ದಿಕವಾದಂಥ ಶುಭಾಶಯಗಳನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು:- ಈಗ ಮಾನ್ಯ ಮುಖ್ಯ ಮಂತ್ರಿಯವರು ತಮ್ಮ ಸಚಿವ ಸಂಪುಟದ ಸದಸ್ಯರುಗಳನ್ನು ಸದನಕ್ಕೆ ಪರಿಚಯ ಮಾಡಿಕೊಡಬೇಕು.

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಸಭಾಧ್ಯಕ್ಷರೇ, ನೂತನವಾಗಿ ರಚನೆಯಾಗಿರತಕ್ಕಂಥ ನಮ್ಮ ಮಂತ್ರಿಮಂಡಲದ ಸದಸ್ಯರುಗಳನ್ನು ನಾನು ತಮ್ಮ ಮುಖೇನ ಈ ಸದನಕ್ಕೆ ಪರಿಚಯ ಮಾಡಿಕೊಡುವಂಥ ಕೆಲಸ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ನನ್ನದು ಕ್ರಿಯಾಲೋಪವಿದೆ. ಇವರು ಮುಖ್ಯಮಂತ್ರಿಗಳಾಗಿರುವುದಕ್ಕೆ ಬಲಾಬಲ ಎಷ್ಟು ಇದೆ ಎಂದು ಪ್ರದರ್ಶನವಾಗಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಇವರು ಮುಖ್ಯ ಮಂತ್ರಿಗಳೆಂದು ಮೊದಲು ತೀರ್ಮಾನವಾಗಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಸನ್ಮಾನ್ಯ ಮುಖ್ಯ ಮಂತ್ರಿಗಳು, ಅವರ ಮಂತ್ರಿಮಂಡಲದ ಸದಸ್ಯರುಗಳನ್ನು ಪರಿಚಯ ಮಾಡಿಕೊಡುವುದರ ಬಗ್ಗೆ ನಮ್ಮ ವಿರೋಧ ಇಲ್ಲ. ಆದರೆ ಇಲ್ಲಿ ನಡೆದು ಬಂದಿರುವ ಪರಿಪಾಠ ಏನೆಂದರೆ, ಹೊಸ ಮುಖ್ಯ ಮಂತ್ರಿಗಳಾದವರು ಅವರಿಗೆ ಬಹುಮತ ಇದೆಯೆಂದು ಸಾಬೀತು ಆದ ಮೇಲೆ ಕ್ಯಾಬಿನೆಟ್ ಸದಸ್ಯರುಗಳ ಪರಿಚಯ ಮಾಡಿಕೊಡಬಹುದು. ಆ ಪದ್ಧತಿಯನ್ನು ಮೊದಲಿನಿಂದಲೂ ಅನುಸರಿಸಿಕೊಂಡು ಬರಲಾಗಿದೆ. ಬೇಕಾದರೆ ಹಿಂದಿನ ರೆಕಾರ್ಡ್ಸ್‌ನ್ನು ತೆಗೆಸಿ ನೋಡಿ. ಆ ಪದ್ಧತಿಗೆ ವ್ಯತಿರಿಕ್ತವಾಗಿ ಈಗ ನಡೆಯುವುದು ಬೇಡ. ನಾನು ತಮ್ಮ ಗಮನಕ್ಕೆ ತರುವುದೇನೆಂದರೆ, ಈ ದಿನದ ಅಜೆಂಡಾದಲ್ಲೂ ಸಹಾ ಸನ್ಮಾನ್ಯ ಬಂಗಾರಪ್ಪನವರು ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸುವುದು ಎಂದು ಹೇಳಿ, "ಈ ಸದನವು ಶ್ರೀ ಎಸ್. ಬಂಗಾರಪ್ಪ ಅವರ ನೇತೃತ್ವದ ಮಂತ್ರಿ ಮಂಡಲದಲ್ಲಿ ತನ್ನ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ". ಎಂದು ನಮೂದು ಮಾಡಲಾಗಿದೆ. ಈ ಪದ್ಧತಿಯಂತೆ ನಡೆದರೆ ನಮ್ಮ ವಿರೋಧ ಇಲ್ಲ.

ಶ್ರೀ ವಾಟಾಳ್ ನಾಗರಾಜ್:- ಬಹುಮತ ಇದೆಯೆಂದು ಆ ಕಡೆಯವರು ಕೂಗಾಡಿದರೆ ಅದಕ್ಕೆ ತಾವು ಬೆಲೆ ಕೊಡಬಾರದು. ಬಹುಮತವನ್ನು ಪ್ರದರ್ಶನ ಮಾಡದೇ ಹೋದರೆ ಅದು ಕರ್ತವ್ಯಲೋಪವಾಗುತ್ತದೆ.

(ಗೊಂದಲ)

MR. SPEAKER:- Order Please.

ಶ್ರೀ ಬಿ.ಹೆಚ್. ಬನ್ನಿಕೋಡ್:- ಅವರು ಮುಖ್ಯ ಮಂತ್ರಿಗಳಾಗಿರಬಹುದು, ಆದರೆ ಇಲ್ಲಿ ಅದು ಸಾಬೀತಾಗಬೇಕು. ಅನಂತರ ಅವರು ತಮ್ಮ ಸಚಿವ ಸಂಪುಟದ ಸದಸ್ಯರುಗಳನ್ನು ಪರಿಚಯ ಮಾಡಿಕೊಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಸನ್ಮಾನ್ಯ ಅಧ್ಯಕ್ಷರೇ, ಸಚಿವ ಸಂಪುಟದ ಸದಸ್ಯರುಗಳನ್ನು ಪರಿಚಯ ಮಾಡಿಕೊಡುವುದರ ಬಗ್ಗೆ ನಮ್ಮ ವಿರೋಧ ಇಲ್ಲ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಮೊದಲು ಅವರು ಮುಖ್ಯ ಮಂತ್ರಿಯಾಗಿರುವ ಬಗ್ಗೆ ಮತ್ತು ಅದನ್ನು ಸದನದಲ್ಲಿ ಸಾಬೀತು ಮಾಡುವ ಬಗ್ಗೆ ತಾವು ರೂಲಿಂಗ್ ಕೊಡಬೇಕು. ಅವರು ಸಭಾನಾಯಕರೆಂದು ತೀರ್ಮಾನವಾದ ಮೇಲೆ ಅವರ ಮಂತ್ರಿ ಮಂಡಲದ ಸದಸ್ಯರುಗಳನ್ನು ಸದನಕ್ಕೆ ಪರಿಚಯ ಮಾಡಿಕೊಡಲಿ.

ಅಧ್ಯಕ್ಷರು: ಮಾನ್ಯ ಸಿಂಧ್ಯರವರು ಕ್ರಿಯಾಲೋಪ ಎತ್ತಿದ್ದಾರೆ. ಅವರು ಹೇಳಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ನಮ್ಮ ಕ್ರಿಯಾಲೋಪಕ್ಕೆ ತಮ್ಮಿಂದ ನಾವು ಉತ್ತರವನ್ನು ನಿರೀಕ್ಷೆ ಮಾಡುತ್ತೇವೆ. ಅವರು ಮುಖ್ಯ ಮಂತ್ರಿಗಳಾಗಿದ್ದಾರೆ ಎಂಬುದನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೇವೆಯೇ ಹೊರತು ಬೇರೆ ಇಲ್ಲ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:- ಈ ತರಹ ನನ್ನ ಮಾತುಗಳು ಅವರಿಗೆ ಹಿಡಿಸದೇ ಹೋದರೆ ನಾನು ಸುಮ್ಮನೆ ಕುಳಿತುಕೊಳ್ಳಬೇಕಾಗುತ್ತದೆ. ಇದೇ ತರಹ ಒಂದು ಸರ್ಕಾರ ಲೋಕ ಸಭೆಯಲ್ಲಿ ಹೋಗಿರತಕ್ಕಂಥಾದ್ದು ನಮಗೆಲ್ಲರಿಗೂ ಗೊತ್ತಿದೆ. ನಮ್ಮ ದೇಶದಲ್ಲಿ ಎಲ್ಲಾ ತರಹದ ಉದಾಹರಣೆಗಳು ಇವೆ. ಯಾವ ಘಳಿಗೆಯಲ್ಲಿ ಏನಾಗುತ್ತದೆ ಎಂಬುದು ನಮಗೆ ಗೊತ್ತಾಗುವುದಿಲ್ಲ....

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಬಂಗಾರಪ್ಪನವರು ನಮ್ಮ ವಾದವನ್ನು ಒಪ್ಪುತ್ತಾರೆ ಎಂದು ನಾನು ಅಂದುಕೊಂಡಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವುದು ಏನೆಂದರೆ, ಈ ಸದನದಲ್ಲಿ ಮುಖ್ಯಮಂತ್ರಿಗಳವರಿಗೆ ಬಹುಮತ ವಿಶ್ವಾಸ ಇದೆಯೇ? ಅದು ಸಾಬೀತು ಆದನಂತರ ಅವರ ಮಂತ್ರಿಮಂಡಲದ ಸದಸ್ಯರನ್ನು ಸದನಕ್ಕೆ ಪರಿಚಯ ಮಾಡಿಕೊಡತಕ್ಕಂಥಾದ್ದು ಸರಿಹೋಗುತ್ತದೆ. ಅದರ ಬಗ್ಗೆ ನಮಗೆ ತಿಳುವಳಿಕೆ ಕೊಡಬೇಕೆಂದು ನಾನು ಮಾನ್ಯ ಅಧ್ಯಕ್ಷರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್‌ನಾಗರಾಜ್:- ಮಾನ್ಯ ಮುಖ್ಯಮಂತ್ರಿಯವರು ನಿರ್ಣಯವನ್ನು ಮಂಡಿಸುವುದಕ್ಕೆ ನಮ್ಮದು ಅಭ್ಯಂತರವಿಲ್ಲ. ಆದರೆ ಮೊದಲು ಅವರು ವಿಶ್ವಾಸ ಬಹುಮತವನ್ನು ಪ್ರದರ್ಶನ ಮಾಡಿ, ಅದನ್ನು ಸಾಬೀತುಮಾಡಿಕೊಂಡು ಅನಂತರ ತಾವು ಮುಖ್ಯಮಂತ್ರಿಗಳು ಎಂದು ಹೇಳುವುದು ಸರಿಯಾಗುತ್ತದೆ. ಯಾಕೆಂದರೆ, ಸಧ್ಯ ಏನೇನು ಪರಿಸ್ಥಿತಿಯು ಇದೆ ಎಂದು ನಮಗಂತೂ ಗೊತ್ತಿಲ್ಲ. ಇಂಥ ಸಂದಿಗ್ಧವಾದಂಥ ಪರಿಸ್ಥಿತಿಯಲ್ಲಿ ಏನೂ ಹೇಳಲು ಬರುವುದಿಲ್ಲ. ಮಾನ್ಯ ಬಂಗಾರಪ್ಪನವರಿಗೆ ಅಂಥ ಯಾವ ಆಕಸ್ಮಿಕವೂ ಆಗದಿದ್ದಲ್ಲಿ ನಮಗೆ ಸಂತೋಷ. ಒಂದು ವೇಳೆ ಏನಾದರು ಅಕಸ್ಮಾತ್ತಾಗಿ ನಡೆದರೆ ಸುಮಾರು 80 ಜನರು ಈ ಕಡೆಗೆ ಬರುತ್ತಾರೆ ಎಂದು ತಿಳಿದುಕೊಳ್ಳೋಣ ಆಗ ಏನಾದೀತು? ಮನಃಸಾಕ್ಷಿಯಾಗಿ ಸದಸ್ಯರುಗಳಿಗೆ ಮತವನ್ನು ನೀಡುವುದಕ್ಕೆ ಅವಕಾಶವನ್ನು ಮಾನ್ಯ ಅಧ್ಯಕ್ಷರು ಮಾಡಿಕೊಡಿ. ಆಗ ಕೆಲವರು ಈ ಕಡೆಗೆ ಬಂದಾರು.

(ಗೊಂದಲ)

ಶ್ರೀ ವಾಟಾಳ್‌ನಾಗರಾಜ್:- ಪಕ್ಷಾಂತರ ಮಸೂದೆಯನ್ನು ಹೇರಿ, ಇಲ್ಲಿ ಓಟು ಹಾಕಿಸಿಕೊಳ್ಳುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಅಧ್ಯಕ್ಷರೆ, ಎರಡು ಕಾರಣಗಳಿಂದ ಮಾನ್ಯ ವಿರೋಧಿ ಪಕ್ಷದವರು ಎತ್ತಿರತಕ್ಕಂಥ ಕ್ರಿಯಾಲೋಪದಲ್ಲಿ ಅರ್ಥವಿಲ್ಲ, ಅದು ನಿಲ್ಲತಕ್ಕದ್ದಲ್ಲ. ಒಂದನೆಯದು, ಸಂವಿಧಾನ ಬದ್ಧವಾಗಿ ಮುಖ್ಯಮಂತ್ರಿಯವರು ಪ್ರಮಾಣ ವಚನ ಸ್ವೀಕಾರ ಮಾಡಿ ಸರ್ಕಾರ ರಚನೆ ಮಾಡಿದ್ದಾರೆ. ಎರಡನೆಯದಾಗಿ, ಅವರ ನಾಯಕತ್ವದಲ್ಲಿ ಮಂತ್ರಿಗಳು ನೇಮಕಗೊಂಡು ಇವತ್ತು ಸಂವಿಧಾನಬದ್ಧವಾಗಿ ಪ್ರಮಾಣ ವಚನ ಸ್ವೀಕಾರ ಮಾಡಿದ್ದಾರೆ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ:- ಈ ಸದನಕ್ಕೆ ಮೊದಲನೇ ಬಾರಿಗೆ ಪ್ರವೇಶ ಮಾಡಿದ ತಕ್ಷಣ ಮಂತ್ರಿಮಂಡಲದ ಸದಸ್ಯರ ಪರಿಚಯವನ್ನು ಮಾಡಿಕೊಡತಕ್ಕಂಥಾದ್ದು ಮುಖ್ಯಮಂತ್ರಿಗಳಿಗೆ ಇರತಕ್ಕಂಥ ಸಂವಿಧಾನಬದ್ಧವಾಗಿರತಕ್ಕಂಥ ಸಂಪ್ರದಾಯದ ಹಕ್ಕು, ಆದುದರಿಂದ ಮಾನ್ಯ ಮುಖ್ಯಮಂತ್ರಿಯವರು ತಮ್ಮ ಮಂತ್ರಿಮಂಡಲದ ಸದಸ್ಯರುಗಳ ಪರಿಚಯ ಮಾಡಿಕೊಡತಕ್ಕಂಥ ಕೆಲಸವನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಅದನ್ನು ಅವರು ಮಾಡಿಕೊಡಲೇ ಬೇಕು. ಏಕೆಂದರೆ, ವಿಶ್ವಾಸ ಮತದ ನಿರ್ಣಯವನ್ನು ಸದನದ ಮುಂದಿಡತಕ್ಕಂಥಾದ್ದೇ ಬೇರೆ ವಿಷಯ. ಮಂತ್ರಿಮಂಡಲದ ಸದಸ್ಯರನ್ನು

ಪರಿಚಯ ಮಾಡಿಕೊಡತಕ್ಕಂಥಾದ್ದೇ ಬೇರೆ ವಿಷಯ. ಅದಕ್ಕೂ ಇದಕ್ಕೂ ಏನೂ ಸಂಬಂಧ ಇಲ್ಲ. ಆದುದರಿಂದ ಅವರುಗಳು ಎತ್ತಿದ ಕ್ರಿಯಾಲೋಪವನ್ನು ಮಾನ್ಯ ಅಧ್ಯಕ್ಷರು ತಳ್ಳಿ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ:- ಮಾನ್ಯ ಕಾಗೋಡು ತಿಮ್ಮಪ್ಪನವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಇದುವರೆಗೆ ನಡೆದಿರತಕ್ಕಂಥ ರಾಜಕೀಯ ನಡವಳಿಕೆಗಳು ಸದನದ ಹೊರಗೆ ನಡೆದಿರುವಂಥವುಗಳು. ಮಾನ್ಯ ರಾಜ್ಯಪಾಲರು ಈ ಸದನದಲ್ಲಿ ಬಹುಮತವನ್ನು ಸಾಬೀತು ಪಡಿಸಲು ಕೇಳಿಕೊಂಡಿದ್ದಾರೆ....

(ಗೊಂದಲ)

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ತಮ್ಮ ಸಂಪೂರ್ಣವಾದಂಥ ರಕ್ಷಣೆ ನನಗೆ ಬೇಕಾಗಿದೆ.

ಅಧ್ಯಕ್ಷರು:- ನಾನು ನಿಮಗೆ ರಕ್ಷಣೆ ಕೊಡುತ್ತೇನೆ. ನಾನು ಬಾಕಿಯವರನ್ನು ಕೂಡಿಸುತ್ತೇನೆ.

ಶ್ರೀ ಸಿ. ಬೈರೇಗೌಡ:- ಸಂತೋಷ. ಮಾನ್ಯ ರಾಜ್ಯಪಾಲರು ನಿಮಗೆ ಇರತಕ್ಕಂಥ ಬೆಂಬಲ, ಬಹುಮತವನ್ನು ಸಭೆಯಲ್ಲಿ ಸಾಬೀತು ಮಾಡಿ ಎಂದು ಹೇಳಿದ್ದಾರೆ. ಅದಕ್ಕನುಗುಣವಾಗಿ ಮಾನ್ಯ ಬಂಗಾರಪ್ಪನವರು ತಮ್ಮ ಮೇಲಿನ ವಿಶ್ವಾಸ ಮತವನ್ನು ಸಾಬೀತುಗೊಳಿಸಬೇಕಾಗಿದೆ. ವಿಶ್ವಾಸ ಬಹುಮತ ಸಾಬೀತು ಆಗುವವರೆವಿಗೂ ಅವರು ಮಂತ್ರಿಮಂಡಲದ ಪರಿಚಯ ಮಾಡಿಕೊಡುವುದಾಗಲಿ, ಅಥವಾ ನಾನು ಮುಖ್ಯಮಂತ್ರಿ ಎಂದು ಹೇಳತಕ್ಕಂಥಾದ್ದಾಗಲಿ ಅದು ಸಾಧ್ಯವಿಲ್ಲ ಎಂದು ಹೇಳಬಯಸುತ್ತೇನೆ. ಆದರೆ ವಾಸ್ತವಾಂಶ ಏನಿದೆ ಎಂದು ನನಗೆ ಗೊತ್ತಿದೆ. ಆದರೆ ವಾಸ್ತವಾಂಶ ಈ ವಿಧಿವಿಧಾನಕ್ಕೆ ವಿರೋಧವಾಗಿರಬಾರದು. ಅವರಿಗೆ 170-180 ಸದಸ್ಯರ ಬಹುಮತ ಇರಬಹುದು, ಇಲ್ಲವೆಂದು ನಾನು ಹೇಳುವುದಿಲ್ಲ. ವಿಧಿವಿಧಾನಗಳನ್ನು ಬಹುಮತದ ಮೂಲಕ ತುಳಿಯುವ ಪ್ರಯತ್ನವಾಗುವುದು ಬೇಡ ಎನ್ನುವುದು ನನ್ನ ಮನವಿ.

ಶ್ರೀ ಕೆ.ಎಸ್. ಈಶ್ವರಪ್ಪ:- ಅಧ್ಯಕ್ಷರೇ, ನಾನು ಈ ಸದನಕ್ಕೆ ಇದೇ ಮೊದಲನೇ ಬಾರಿ ಗೆದ್ದು ಬಂದಿರುವುದು. ನನಗಿಂತ ಮುಂಚೆ ಬಂದಿರುವ ಶಾಸಕರ ಬಿಹೇವಿಯರನ್ನು ಇಲ್ಲಿ ನೋಡಿದರೆ ನಾನು ಇದನ್ನು ಕಲಿಯಬೇಕೇನೋ ಎನ್ನುವ ಭಯವಾಗುತ್ತಿದೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:- ನನಗೆ ಒಂದು ವಿಷಯ ನೆನಪಿಗೆ ಬರುತ್ತಿದೆ. ಕೇಂದ್ರ ಸರ್ಕಾರ ಕೂಡ ಬರುವ 7ನೇ ತಾರೀಖು ಬಹುಮತ ಸಾಬೀತು ಮಾಡಬೇಕೆಂದು ರಾಷ್ಟ್ರಪತಿಯವರು ಹೇಳಿದ್ದಾರೆ. ಪ್ರಧಾನಮಂತ್ರಿಗಳು ಸುಮ್ಮನೆ ನಮಗೆ ಬಹುಮತ ಇದೆ ಎಂದು ಇದೇ ರೀತಿ ಮಂತ್ರಿಮಂಡಲವನ್ನು ಘೋಷಣೆ ಮಾಡಿದರೆ ಗತಿಯೇನು? ಇದಕ್ಕೆ ಅವರೆಲ್ಲ ಉತ್ತರ ಕೊಡಬೇಕು.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:- ಇವರೆಲ್ಲ ಇದೇ ರೀತಿ ಕೂಗಿಕೂಗಿ ವೀರೇಂದ್ರಪಾಟೀಲರನ್ನು ತೆಗೆದರು. ಈಗ ಅಜೆಂಡಾ ಪ್ರಕಾರ ತಾವು ಸಭೆಯನ್ನು ನಡೆಸಿ ಕರ್ನಾಟಕದ ಜನತೆಗೆ ಪ್ರಜಾಪ್ರಭುತ್ವ ಮೌಲ್ಯಗಳ ಬಗ್ಗೆ ಏನು ಅನುಮಾನ ಉಂಟಾಗಿದೆ ಅದರ ಬದಲಿಗೆ ನಂಬಿಕೆ ಬರುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ಮಾನ್ಯ ಸಚಿವರ ಪರಿಚಯ ಮಾಡಿಕೊಡುವ ಪ್ರಶ್ನೆ ಹೇಗೆ ಉದ್ಭವವಾಗುತ್ತದೆ ಎನ್ನುವುದು ಆ ಕಡೆ ಕುಳಿತಿರತಕ್ಕ ಮಿತ್ರರ ಅಭಿಪ್ರಾಯ. ಮಂತ್ರಿಮಂಡಲದ ರಚನೆ ಈ ಸದನದ ಒಳಗಡೆ ಆಗುವುದಿಲ್ಲ ಎನ್ನತಕ್ಕಂಥ ಮಾತನ್ನು ತಾವು ಕೂಡ ಹೇಳಿದ್ದೀರಿ. ನಾನು ಕೇಳಿದ್ದೇನೆ. ಇವತ್ತು ನಾವು ಅಧಿವೇಶನ ಕರೆದಿರುವುದು ರಾಜ್ಯಪಾಲರ ಆದೇಶಕ್ಕನುಗುಣವಾಗಿ. ಅದೇ ರಾಜ್ಯಪಾಲರು ಸಂವಿಧಾನಾತ್ಮಕವಾ ಮಂತ್ರಿಮಂಡಲವನ್ನು ರಚನೆ ಮಾಡುವ ನಮ್ಮ ಹಕ್ಕು ಏನಿತ್ತು ಅದನ್ನು ಮಾನ್ಯ ಮಾಡಿ ಸರ್ಕಾ

ರಚನೆಗೆ ಅವಕಾಶ ಕೊಟ್ಟು ಮಂತ್ರಿಗಳಿಗೆ ಪ್ರಮಾಣ ವಚನ ಉಪದೇಶ ಕೂಡ ಮಾಡಿದ್ದಾರೆ. ನಿಜ ಹೇಳಬೇಕೆಂದರೆ, ಮೊನ್ನೆ ನಡೆದಂಥ ಪ್ರಮಾಣ ವಚನ ಸಂದರ್ಭದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರಿ ಡಿ.ಬಿ. ಚಂದ್ರೇಗೌಡರು ಕೂಡ ಹಾಜರಿದ್ದರು. ಇದು ನಡೆದುಬಂದಿರುವ ಪದ್ಧತಿ. ಯಾವುದೇ ಪಕ್ಷ ಸರ್ಕಾರ ರಚನೆ ಮಾಡಬೇಕಾದರೆ ಅದು ಚುನಾವಣೆ ಆದ ಮೇಲಿರಬಹುದು, ಮಧ್ಯೆ ಇರಬಹುದು, ಯಾವುದೇ ಸಂದರ್ಭದಲ್ಲಿ ಇರಬಹುದು, ಒಂದು ಸರ್ಕಾರ ರಚನೆ ಆಗುವ ಉದ್ದೇಶ ಬರೀ ಅಧಿಕಾರ ಪಡೆಯುವುದಲ್ಲ. ಒಂದು ಪಕ್ಷಕ್ಕೆ ಬಹುಮತ ಇರುತ್ತದೆ, ಆ ಪಕ್ಷಕ್ಕೆ ಅಧಿಕಾರ ಕೊಟ್ಟು ಅದರ ಮುಖಾಂತರ ರಾಜ್ಯದ ಜನತೆಯ ಸೇವೆ ಮಾಡುವ ಅವಕಾಶ ಇರುತ್ತದೆ. ಆ ಸಂದರ್ಭದಲ್ಲಿ ಕೆಲವರು ಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕಾರ ಮಾಡುತ್ತಾರೆ. ಹಾಗೆಯೇ ನನ್ನ ಸಹೊದ್ಯೋಗಿಗಳು ಪ್ರಮಾಣ ವಚನ ಸ್ವೀಕಾರ ಮಾಡಿದ್ದನ್ನು ಜನತೆ ವೀಕ್ಷಣೆ ಮಾಡಿದ್ದಾರೆ. ಅಂದ ಮೇಲೆ ಮಂತ್ರಿಮಂಡಲದ ರಚನೆ ನಡೆದಿದೆ. ನಾವು ಒಂದೇ ಉದ್ದೇಶಕ್ಕೆ ಸೇರಿದ್ದೇವೆ. ಅದೇನೆಂದರೆ, ನಮ್ಮನ್ನು ನೀವು ಯಾರು ಎಂದು ಕೇಳುವುದಕ್ಕಲ್ಲ, ಎಷ್ಟು ಬಹುಮತ ಇದೆ ಎಂದು ನಾವು ತೋರಿಸುವುದಕ್ಕೆ ಮಾತ್ರ ಸೇರಿದೇವೆಯೇ ವಿನಃ ಇಲ್ಲಿ ಮಂತ್ರಿಗಳು ಹೌದೋ ಅಲ್ಲವೋ ಎಂದು ಕೇಳುವುದಕ್ಕಲ್ಲ. ಈ ಮೂಲ ಅಂಶವನ್ನು ಮಾನ್ಯ ಸಭಾಧ್ಯಕ್ಷರ ಮುಖಾಂತರ ಎಲ್ಲಾ ಮಾನ್ಯ ವಿರೋಧ ಪಕ್ಷದ ಮಿತ್ರರ ಗಮನಕ್ಕೆ ನಾನು ಈ ಸಂದರ್ಭದಲ್ಲಿ ತರುತ್ತಿದ್ದೇನೆ. ಇದು ಒಂದು ಸೌಜನ್ಯದ, ಸಂಪ್ರದಾಯದ ಪ್ರಶ್ನೆ. ನನಗೆ ಗೊತ್ತಿರುವ ಹಾಗೆ, ಸಂವಿಧಾನಬದ್ಧವಾಗಿ ಪರಿಚಯ ಮಾಡಿಕೊಡತಕ್ಕಂಥದ್ದಕ್ಕೆ ಅಲ್ಲಿ ವಿಧಿ ಇದೆ ಎಂದು ನಾನೇನು ತಿಳಿದುಕೊಂಡಿಲ್ಲ. ಒಂದು ವೇಳೆ ಅಲ್ಲಿ ಏನಾದರೂ ಇದ್ದರೆ ಅದರ ಉಲ್ಲೇಖವನ್ನು ನಾನಾದರೂ ಮಾಡಬಹುದು ಅಥವಾ ತಾವಾದರೂ ಕೂಡಾ ಮಾಡಬಹುದು. ಅದರ ಒಂದು ಕನ್‌ವೆನ್‌ಷನ್‌ನನ್ನು ಇಟ್ಟುಕೊಂಡಿದ್ದೇವೆ. ಅದು ಪಾರ್ಲಿಮೆಂಟ್‌ನಲ್ಲೂ ಕೂಡಾ ನಡೆಯುತ್ತಿದೆ, ಶಾಸನಸಭೆಯಲ್ಲಿಯೂ ಕೂಡಾ ನಡೆಯುತ್ತಿದೆ. ಮಂತ್ರಿಮಂಡಲ ರಚನೆಯಾದ ಕೂಡಲೇ ಅಲ್ಲಿರತಕ್ಕಂಥ ಮಂತ್ರಿಮಂಡಲದ ಸನ್ಮಾನ್ಯ ಸದಸ್ಯರುಗಳನ್ನು ಸದನಕ್ಕೆ ಪರಿಚಯ ಮಾಡಿಕೊಡತಕ್ಕಂಥ ಒಂದು ಪದ್ಧತಿ. ಅದು ಒಂದು ಕನ್‌ವೆನ್‌ಷನ್. ಆದರೆ ಅದೇ ಮಹಾನ್ ಸಾಧನೆ ಎನ್ನತಕ್ಕಂಥಾದ್ದೂ ಏನೂ ಇಲ್ಲ. ಅದು ಒಂದು ಕರ್ತವ್ಯದ ಪ್ರಶ್ನೆ. ತಾವು ಕೂಡಾ ಅದನ್ನು ಸೂಕ್ತವಾಗಿ ಅವಲೋಕನ ಮಾಡಿದಾಗ ಗೊತ್ತಾಗುತ್ತದೆ. ನಿಮಗೆ ಅವರ ಪರಿಚಯ ಇಲ್ಲ ಎಂದು ಏನೂ ಇಲ್ಲ. ಮಾನ್ಯ ವೀರಪ್ಪಮೊಯಿಲಿಯವರು ಇರಬಹುದು, ಮತ್ತೊಬ್ಬ ಮಾನ್ಯ ಸದಸ್ಯರು ಯಾರಾದರೂ ಇರಬಹುದು, ನಿಮಗೇನೂ ಗೊತ್ತಿಲ್ಲ ಎನ್ನತಕ್ಕಂಥ ಪ್ರಶ್ನೆ ಇಲ್ಲ. ಮಂತ್ರಿಮಂಡಲ ರಚನೆಯಾಗಿ ಅದರಲ್ಲಿ ಇವರು ಒಬ್ಬರು ಇದ್ದಾರೆ ಎನ್ನತಕ್ಕಂಥದ್ದನ್ನು ನಾನು ಮತ್ತೊಂದು ಸಾರಿ ತಮ್ಮ ಗಮನಕ್ಕೆ ತಂದರೆ ಅದು ನಮಗೆ ಉಪಯೋಗ ಅಷ್ಟೇ ಅಲ್ಲ, ತಮಗೂ ಕೂಡಾ ಅದರಲ್ಲಿ ಉಪಯೋಗ ಇದೆ. ಆ ಒಂದು ದೃಷ್ಟಿಯಿಂದ ಸೌಜನ್ಯದ, ಒಂದು ಪದ್ಧತಿಯ ಅಥವಾ ಒಂದು ಕನ್‌ವೆನ್‌ಷನ್ ವಿಚಾರಕ್ಕಾಗಿ ನಾನು ಮಾನ್ಯ ಅಧ್ಯಕ್ಷರ ಅಪ್ಪಣೆಯನ್ನು ಪಡೆದು ಎದ್ದನೇ ವಿನಹ ನಿಮಗೆ ಗೊತ್ತಿಲ್ಲ ಎನ್ನತಕ್ಕಂಥ ವಿಚಾರ ಸ್ಪಷ್ಟವಾಗಿ ಅಲ್ಲ. ಇಷ್ಟು ಮಾತ್ರ ನಾನು ಹೇಳುತ್ತೇನೆ, ಆದರೆ ತಾವು ಎತ್ತಿರತಕ್ಕಂಥ ವಿಚಾರ ಏನು ಎಂದರೆ, ಮೊದಲು ಈ ಸದನದಲ್ಲಿ ವಿಶ್ವಾಸ ಮತ ಪಡೆಯತಕ್ಕಂಥ ನಿರ್ಣಯ ಏನು ಇದೆ, ಆ ನಿರ್ಣಯವನ್ನು ಹಾಕಿದಮೇಲೆ ತಾವು ಆನಂತರ ಮಂತ್ರಿಮಂಡಲದ ಸದಸ್ಯರನ್ನು ಪರಿಚಯ ಮಾಡಿಕೊಡಬಹುದಲ್ಲ ಎನ್ನತಕ್ಕಂಥದ್ದು. ನಾನು ಹೇಳುತ್ತೇನೆ, ಸಂವಿಧಾನಬದ್ಧವಾಗಿ ಈಗಾಗಲೇ ನಿಮ್ಮ ಮುಂದೆ ಇರತಕ್ಕಂಥ ಒಂದು ಮಂತ್ರಿಮಂಡಲ ಕರ್ನಾಟಕ ರಾಜ್ಯದ ಜನತೆಯ ಮುಂದೆ ಇದೆ, ತನ್ನ ಕರ್ತವ್ಯಗಳನ್ನು ಪಾಲನೆ ಮಾಡುತ್ತಿದೆ, ಮಾನ್ಯ ರಾಜ್ಯಪಾಲರು ರಾಜ್ಯಾಂಗಬದ್ಧವಾಗಿ ಇದನ್ನು ಸ್ಪಷ್ಟವಾಗಿ ನೇಮಕ ಮಾಡಿದ್ದಾರೆ ಎನ್ನತಕ್ಕಂಥ ಅಂಶವನ್ನು ತಾವು ತಮ್ಮ ಗಮನಕ್ಕೆ ಮತ್ತೊಂದು ಸಾರಿ ತಂದುಕೊಂಡರೆ ಈ ಒಂದು ಅನುಮಾನದ ಅಂಶ ತಮ್ಮ ಗಮನಕ್ಕೆ ಬರಲಾರದು ಎಂದು ನಾನು ಅಂದುಕೊಂಡಿದ್ದೇನೆ, ಇದರ ಬಗ್ಗೆ ಹೆಚ್ಚಿನ ಗಮನವನ್ನು ಕೊಡಲಾರಿರಿ ಎಂಬ ನಂಬಿಕೆ ನನಗಿದೆ. ಆ ಒಂದು ದೃಷ್ಟಿಯಿಂದ ಈ ಮಾತನ್ನು ಆಡಿದ್ದೇನೆ. ಇದರ ಮೇಲೆ ತಮ್ಮ ಇಚ್ಛೆ. ಅದನ್ನು ಮಾನ್ಯ ಅಧ್ಯಕ್ಷರಿಗೆ ಬಿಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಮಾನ್ಯ ವಿರೋಧಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಹಿರಿಯ ಸದಸ್ಯರು ಕ್ರಿಯಾಲೋಪವನ್ನು ಏನು ಎತ್ತಿದ್ದಾರೆ, ಇದು ಪ್ರಸ್ತುತವಾದರೂ ಕೂಡಾ ನನ್ನ ಮಿತ್ರರಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ಈ ಒಂದು ಅಂಶವನ್ನು ನಾವು ಗಮನಿಸಬೇಕು. ಮುಖ್ಯವಾಗಿ ಇವತ್ತು ಹಾಕಿರತಕ್ಕಂಥ ಠರಾವಿನಲ್ಲಿ ನಾವು ಏನು ಹೇಳಿದ್ದೇವೆ ಎಂದರೆ,

"This House expresses its confidence in the Council of Ministers headed by Mr. S.Bangarappa."

ಎಂದು ಇದೆ. ಆದ್ದರಿಂದ ಕೌನ್ಸಿಲ್ ಆಫ್ ಮಿನಿಸ್ಟರ್ಸ್ ಯಾರು ಎನ್ನುವುದು ಸದನಕ್ಕೆ ಗೊತ್ತಾಗುವುದು ಸರಿ ಎಂದು ನಾನು ಭಾವನೆ ಮಾಡಿದ್ದೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಅವರ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ನಾವು ಈಗಾಗಲೇ ಹೇಳುತ್ತಿರುವಂಥ ಸಂಗತಿ, ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್‌ನಲ್ಲಿ ಚರ್ಚೆಯಾದಂತೆ, ತೀರ್ಮಾನವಾದಂತೆ ಮತ್ತು ಈ ಸದನದಲ್ಲಿ ನಡೆದುಕೊಂಡು ಬಂದಿರುವಂಥ ಪರಿಪಾಠದಂತೆ ವಿಧಾನಸಭಾ ಚುನಾವಣೆಯಾಗಿ ಹೊಸದಾಗಿ ಸರ್ಕಾರ ರಚನೆಯಾದಂಥ ಸಂದರ್ಭದಲ್ಲಿ ಎಂದೂ ಈ ಪರಿಸ್ಥಿತಿ ಉದ್ಭವವಾಗಿರಲಿಲ್ಲ. ಇದು ಒಂದು ವಿಶೇಷವಾದಂಥ ಸಂದರ್ಭವಾಗಿರುವುದರಿಂದ ಮತ್ತೆ ಯಾರು ಮಂತ್ರಿಯಾಗಿ ನೇಮಕ ಆಗಿದ್ದಾರೆ, ಅವರ ಪೋರ್ಟ್‌ಫೋಲಿಯೊ ಯಾವುದು ಎನ್ನುವುದು ಏನು ತೀರ್ಮಾನ ಆಗಿಲ್ಲದೇ ಇರತಕ್ಕಂಥ ಸಂದರ್ಭ ಇರುವುದರಿಂದ ಕೊನೆಯ ನಿಮಿಷದವರೆಗೆ ಈ ರೀತಿಯ ಒಂದು ಪರಿಸ್ಥಿತಿ ಒದಗಿ ಬಂದುದರಿಂದ ನಾನು ಹೇಳುತ್ತಿರುವಂತೆ ಪ್ರಾರಂಭದಲ್ಲಿ ಈ ಒಂದು ಪರಿಸ್ಥಿತಿ ಒದಗಿಬಂತು. ಈಗ ಆಗಿರಬಹುದು. ನಾನು ಹೇಳತಕ್ಕಂಥಾದ್ದು ಏನೆಂದರೆ, ಸನ್ಮಾನ್ಯ ವಿರೋಧಪಕ್ಷದ ನಾಯಕರು ಅವರ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಹಿಂದೆ ಇಲ್ಲಿ ಸತ್‌ಸಂಪ್ರದಾಯಗಳು ನಡೆದುಕೊಂಡು ಬಂತು, ಮತ್ತೆ ಮುಂದೆ ಇದೇ ರೀತಿ ತಮ್ಮಂಥ ಹಿರಿಯರು ಆ ಒಂದು ಸ್ಥಾನವನ್ನು ಅಲಂಕಾರ ಮಾಡಿರತಕ್ಕಂಥ ಸಂದರ್ಭದಲ್ಲಿ ನಾವು ಮಾಡಿಕೊಂಡು ಬಂದಂಥ ಸಂಪ್ರದಾಯಗಳ ವಿರುದ್ಧವಾಗಿ ಆಗಬಾರದು. ಎನ್ನುವ ಒಂದೇ ಒಂದು ಕಳಕಳಿಯಿಂದ ವಿರೋಧ ಪಕ್ಷದ ನಾಯಕರು ಹೇಳಿದಾಕ್ಷಣಕ್ಕೆ ಅದೇ ಆಗಬೇಕು ಎನ್ನುವ ಪ್ರಶ್ನೆಯೂ ಇಲ್ಲ. ತಾವು ಇದರ ಬಗ್ಗೆ ರೂಲಿಂಗನ್ನು ಕೊಡಬೇಕು. ಇಲ್ಲದಿದ್ದರೆ ನಾನು ಅನುಮತಿಯನ್ನು ಕೊಡುತ್ತಿದ್ದೇನೆ ಎಂದು ತಾವು ರೂಲಿಂಗನ್ನು ಕೊಟ್ಟಮೇಲೆ ಸನ್ಮಾನ್ಯ ಸಭಾನಾಯಕರು ಮುಂದುವರೆಯುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ದಯಮಾಡಿ ನಾನು ನಿಮ್ಮ ರೂಲಿಂಗನ್ನು ಮಾತ್ರ ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇವೆ.

ಅಧ್ಯಕ್ಷರು:- ಮಾನ್ಯ ವಿರೋಧ ಪಕ್ಷದ ಉಪನಾಯಕರಾದ ಶ್ರೀಮಾನ್ ಸಿಂಧ್ಯವರು ಒಂದು ಕ್ರಿಯಾಲೋಪವನ್ನು ಸದನದ ಮುಂದೆ ಮಂಡಿಸಿದ್ದಾರೆ. ಅದಕ್ಕೆ ಈಗಾಗಲೇ ಉತ್ತರವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಕೊಟ್ಟಿದ್ದಾರೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಸಹ ಇದರ ಬಗ್ಗೆ ಕೊಂಚ ಮಟ್ಟಿಗೆ ವಿಶ್ಲೇಷಣೆ ಮಾಡಿದ್ದಾರೆ. ಪ್ರಶ್ನೆ ಏನು ಎಂದರೆ, ಕರ್ನಾಟಕ ರಾಜ್ಯದಲ್ಲಿ ಈ ದಿವಸ ಒಂದು ಮಂತ್ರಿಮಂಡಲ ರಾಜ್ಯಾಂಗದ ಚೌಕಟ್ಟಿನಲ್ಲಿ ಕಾರ್ಯ ನಿರ್ವಹಣೆ ಮಾಡುತ್ತಿದೆಯೇ ಅಥವಾ ಇಲ್ಲವೇ ಎನ್ನತಕ್ಕದ್ದು ಪ್ರಶ್ನೆ. ಇದಕ್ಕೆ ರಾಜ್ಯಾಂಗದ ಚೌಕಟ್ಟಿನಲ್ಲಿಯೇ ಉತ್ತರಿಸಬಹುದಾದರೆ ವಿಧಿ ದ್ವಾರಾ ಸ್ಥಾಪಿತವಾದಂತಹ, ಈ ರಾಜ್ಯಾಂಗದ ಚೌಕಟ್ಟಿನ ಪ್ರಕಾರ ರಾಜ್ಯಪಾಲರು ಮುಖ್ಯಮಂತ್ರಿಗಳನ್ನು ನಿಯೋಜಿಸಿದ್ದಾರೆ, ಮತ್ತು ಆ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಂತ್ರಿ ಸಂಪುಟಕ್ಕೆ ಪ್ರಮಾಣ ವಚನ, ವಿಧಿ ಮುಂತಾದವುಗಳನ್ನು ಸಹ ಕೊಟ್ಟಿದ್ದಾರೆ. ಇದು ಏನನ್ನು ದ್ಯೋತಕ ಮಾಡುತ್ತದೆ ಎಂದು ಹೇಳಿದರೆ ಈ ರಾಜ್ಯದಲ್ಲಿ ಮಂತ್ರಿ ಮಂಡಲ ಇದೆ, ಈ ರಾಜ್ಯದಲ್ಲಿ ಮುಖ್ಯಮಂತ್ರಿಗಳು ಇದ್ದಾರೆ, ಆ ಮುಖ್ಯಮಂತ್ರಿಗಳು ರಾಜ್ಯಾಂಗದ ಚೌಕಟ್ಟಿನಲ್ಲಿ ತಮ್ಮ ಕೆಲಸ ಕಾರ್ಯಗಳನ್ನು ನಿರ್ವಹಣೆ ಮಾಡುತ್ತಿದ್ದಾರೆ. ಅಲ್ಲಿ ಶೂನ್ಯ

ಉಂಟಾಗುವುದಕ್ಕೆ ಸಾಧ್ಯ ಆಗದು. ತಾತ್ಕಾಲಿಕವಾಗಿ ರಾಜ್ಯಪಾಲರ ಆಡಳಿತ ಏಳು ಅಥವಾ ಎಂಟು ದಿವಸ ನಡೆಯಿತು. ಅನಂತರ ರಾಷ್ಟ್ರಪತಿಯವರ ಆಳ್ವಿಕೆ ವಾಪಸ್ ಆಯಿತು. ಮತ್ತೆ ಜನ ತಾಂತ್ರಿಕ ಚೌಕಟ್ಟಿನಲ್ಲಿ ಹೊಸದೊಂದು ಸರ್ಕಾರ ಕರ್ನಾಟಕ ರಾಜ್ಯದಲ್ಲಿ ಈಗ ಪ್ರತಿಷ್ಠಾಪನೆ ಆಗಿದೆ. ಆದುದರಿಂದ ಈ ಸದನ ಮೊಟ್ಟಮೊದಲು ಅಧಿವೇಶನ ನಡೆಸುತ್ತಾ ಇರುವಾಗ ನಾನು ನಮ್ಮ ಎಲ್ಲಾ ವಿಧಿ ನಿಯಮಗಳನ್ನು ನೋಡಿದೆ, ಎಲ್ಲೂ ಕೂಡ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸಚಿವ ಸಂಪುಟವನ್ನು ಪರಿಚಯ ಮಾಡಿಕೊಡಬೇಕೆಂಬ ಉಲ್ಲೇಖ ಇಲ್ಲ. ಆದರೂ ಕೂಡ ಇದು ನಡೆದುಕೊಂಡು ಬಂದಿರತಕ್ಕ ಸಂಪ್ರದಾಯ. ವಸ್ತುಸ್ಥಿತಿಯನ್ನು ಗಮನಿಸಿದರೂ ಕೂಡ ಇವೊತ್ತು ಹೊಸ ಮುಖ್ಯಮಂತ್ರಿಗಳು ಬಂದಿದ್ದಾರೆ, ಹೊಸದೊಂದು ಮಂತ್ರಿ ಸಂಪುಟ ರಚನೆಯಲ್ಲಿದೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸಚಿವ ಸಂಪುಟದ ಸಹೋದ್ಯೋಗಿಗಳನ್ನು ಸಭೆಗೆ ಪರಿಚಯ ಮಾಡಿಕೊಡುವುದರಿಂದ ನಾವು ನಮ್ಮ ಯಾವ ಸಂಪ್ರದಾಯಗಳನ್ನೂ ಉಲ್ಲಂಘಿಸಿದಂತೆ ಆಗುವುದಿಲ್ಲ. ರಾಜ್ಯಪಾಲರು ಮುಖ್ಯಮಂತ್ರಿಗಳಿಗೆ ಏನು ನಿರ್ದೇಶನವನ್ನು ಕೊಟ್ಟಿದ್ದಾರೆ ಅದರ ಉಲ್ಲಂಘನೆಯೂ ಆಗಲಿಲ್ಲ. ಆದ್ದರಿಂದ ಯಥೋಚಿತವಾಗಿ ಹಿಂದೆ ನಡೆದುಕೊಂಡು ಬಂದಂತೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸಚಿವ ಸಂಪುಟದ ಇತರ ಸದಸ್ಯರನ್ನು ಈ ಸಭೆಗೆ ಪರಿಚಯ ಮಾಡಿಕೊಡಬಹುದು. ಈ ಕ್ರಿಯಾಲೋಪವನ್ನು ತಳ್ಳಿ ಹಾಕುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು:- ಅಧಿಕಾರಕ್ಕೆ ಹೋಗುವುದು ಬೇಡ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):- ಮಾನ್ಯ ಸಭಾಧ್ಯಕ್ಷರೇ, ನಾನು ಈ ಒಂದು ಸಂದರ್ಭದಲ್ಲಿ ನನ್ನ ಸಹೋದ್ಯೋಗಿಗಳ ಪರಿಚಯ ಮಾಡಿಕೊಡತಕ್ಕ ಸಂದರ್ಭ ಸಿಕ್ಕೇ ಬಿಟ್ಟಿದೆಯಲ್ಲಾ ಎಂದು ಅತಿಯಾಗಿ ಸಂತೋಷ ಪಡತಕ್ಕ ಅವಶ್ಯಕತೆ ಇಲ್ಲ ಎಂದು ನಾನು ಭಾವಿಸಿದ್ದೇನೆ. ಆದರೆ ಸಭಾಧ್ಯಕ್ಷರು ಅಪ್ಪಣೆ ಕೊಟ್ಟ ಹಾಗೆ, ಇಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಅಭಿಪ್ರಾಯ ಪಟ್ಟ ಹಾಗೆ, ನಾವು ಸತ್ಸಂಪ್ರದಾಯಗಳನ್ನು ಏನು ಸ್ಥಾಪನೆ ಮಾಡಿದ್ದೇವೆ, ಮತ್ತೊಮ್ಮೆ ಅದನ್ನು ಪ್ರತಿಷ್ಠಾಪನೆ ಮಾಡತಕ್ಕ ದಿಸೆಯಲ್ಲಿ, ಕರ್ತವ್ಯದಲ್ಲಿ ಇದೊಂದು ಅಂಶ ಅಷ್ಟೆ. ಅದಕ್ಕಾಗಿ ನಾನು ಈ ಕರ್ತವ್ಯವನ್ನು ಮಾಡುವುದಕ್ಕೆ ಎದ್ದು ನಿಂತಿದ್ದೇನೆ. ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಒಂದೊಂದು ಸಾರಿ ನನಗೆ ಅನಿಸುತ್ತದೆ. ಹಿಂದೆ ಸಹ ಈ ವಿಚಾರ ಪ್ರಸ್ತಾಪ ಆಗಿತ್ತು, ಆಗ ಮಾನ್ಯ ಸಭಾಧ್ಯಕ್ಷರು ಈ ರೀತಿಯಾಗಿ ತಮ್ಮ ತೀರ್ಪನ್ನು ನೀಡಿದ್ದರು ಎಂದು ಉಲ್ಲೇಖ ಮಾಡುವುದಕ್ಕೂ ಕೂಡ ಒಂದು ಅನುವು ಆಯಿತು ಎನ್ನತಕ್ಕದ್ದು ನನ್ನ ಅನಿಸಿಕೆ. ನಾನು ನಿಮ್ಮ ಹಕ್ಕಿಗೆ ಅಡ್ಡಿ ಬರುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾನು ಹೇಳಿದ್ದು ಹಾಗಲ್ಲ. ರೆಗ್ಯುಲರ್ ನಾವು ನೆಕ್ಸ್ಟ್ ಸೆಷನ್ ಸೇರಿದಾಗ ಇನ್ನೊಬ್ಬರು ಚೀಫ್ ಮಿನಿಸ್ಟರ್ ಆಗಬೇಕೆಂಬ ಆಸೆ ಇದೆಯೇ ಅಥವಾ ನೀವೇ ಇರಬೇಕೆಂದು ಆಸೇನಾ? ನೀವೇ ಇರಬಹುದಾ?

ಶ್ರೀ ಎಸ್. ಬಂಗಾರಪ್ಪ:- ನಾನು ಇಷ್ಟು ಮಾತ್ರ ತಮಗೆ ಹೇಳಬಲ್ಲೆ. ಪದೇ ಪದೇ ಈ ವಿಚಾರವನ್ನು ತಾವು ಪ್ರಸ್ತಾಪ ಮಾಡತಕ್ಕ ಸಂದರ್ಭವನ್ನು ನಾವು ನಿಮಗೆ ತಂದುಕೊಡುವುದಿಲ್ಲ. ಇದರ ಬಗ್ಗೆ ನಿಮಗೆ ಅನುಮಾನ ಬೇಕಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಮುಂದೆ ಅಸೆಂಬ್ಲಿ ಸೇರುವುದಿಲ್ಲ ಎಂತಲೋ?

ಶ್ರೀ ಎಸ್. ಬಂಗಾರಪ್ಪ:- ಕರ್ನಾಟಕ ರಾಜ್ಯದ ಜನತೆಯ ತೀರ್ಪು ನಮ್ಮ ಪರವಾಗಿ ಬಹುಮತದ ರೂಪದಲ್ಲಿ ಬಂದುಬಿಟ್ಟರೆ ಐದುವರ್ಷಕ್ಕೆ ಒಂದೇ ಸಾರಿ ಈ ಅವಕಾಶ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್:- ನೀವು 5 ವರ್ಷ ಮುಂದುವರಿಯುವುದು ಸ್ವಲ್ಪ ಅನುಮಾನವಿದೆ. ಅಷ್ಟೆ ಇನ್ನೇನೂ ಇಲ್ಲ.

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರ ಉಪನಾಯಕರ ಮತ್ತು ಮಾನ್ಯ ಸದಸ್ಯರ ಅನಿಸಿಕೆಗಳು ಹಾಗೆ ಬಂದಿವೆ. ಆ ವಿಚಾರವನ್ನು ಪ್ರಸ್ತಾಪ ಮಾಡುವುದಿಲ್ಲ. ಪ್ರಸ್ತಾಪ ಮಾಡಿದರೆ ತಪ್ಪಲ್ಲ, ಅದರ ಬಗ್ಗೆ ಆ ಒಂದು ಭಾವನೆಯಿಂದ ನಾವು ಏನೇನೂ ಕಾಣುವುದಿಲ್ಲ. ಆದರೆ ಈ ಸತ್‌ಸಂಪ್ರದಾಯದ ಅಂಶವನ್ನು ಸಭಾಧ್ಯಕ್ಷರ ಮುಖೇನ ತಮ್ಮ ಗಮನಕ್ಕೆ ತಂದಾಗ, ಮಾನ್ಯ ವಿರೋಧ ಪಕ್ಷದ ನಾಯಕರಾದ ಚಂದ್ರೇಗೌಡರು ಮೆಚ್ಚಿದ್ದಾರೆ. ಇದರಲ್ಲಿ ಅರ್ಥವಿದೆ. ಏಕೆಂದರೆ, ವಿಷಯವನ್ನು ನಾವು ಪ್ರಸ್ತಾಪ ಮಾಡಬಹುದು. ಅನಂತರ ಮತ್ತೊಂದು ಅಭಿಪ್ರಾಯ ಬಂದು ಅದು ಸರಿ ಎಂದು ಕಂಡುಬಂದಾಗ ಒಪ್ಪತಕ್ಕದ್ದು ಸೌಜನ್ಯತೆ ಅಷ್ಟೇ ಅಲ್ಲ, ಅದು ಈ ಸಂಪ್ರದಾಯವನ್ನು ಎತ್ತಿಹಿಡಿಯತಕ್ಕದ್ದು ಒಂದು ಪ್ರಶ್ನೆ. ಆ ವಿಚಾರವನ್ನು ಮನಗಂಡೇ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಚಂದ್ರೇಗೌಡರು ಈ ರೀತಿ ಪ್ರಸ್ತಾಪ ಮಾಡಿದ್ದಾರೆ. ಅದಕ್ಕನುಗುಣವಾಗಿ ತಾವೆಲ್ಲರೂ ಸೇರಿ, ನಮ್ಮ ಬೇರೆ ಪಕ್ಷದ ಮಿತ್ರರು ಸೇರಿ ಮಾಡಿದ್ದಾರೆಂದು ನಾನು ಭಾವಿಸುತ್ತೇನೆ. ಅದಕ್ಕಾಗಿ ನಾನು ಈ ಸಂದರ್ಭದಲ್ಲಿ ಅಧ್ಯಕ್ಷರ ಮುಖಾಂತರ ವಿರೋಧ ಪಕ್ಷದ ನಾಯಕರನ್ನು, ಉಪ ನಾಯಕರನ್ನು ಮತ್ತು ಬೇರೆ ಮಾನ್ಯ ಸದಸ್ಯರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ತಾವು ಈ ಸಂದರ್ಭದಲ್ಲಿ ಸಂಪ್ರದಾಯವನ್ನು ಎತ್ತಿಹಿಡಿದಿದ್ದಕ್ಕಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಕ್ಕಾಗಿ ಅಭಿನಂದಿಸುತ್ತೇನೆ. ಮಾನ್ಯ ಅಧ್ಯಕ್ಷರ ಅಪ್ಪಣೆಯನ್ನು ಪಡೆದು ನಾನು ಈಗ ಈ ಒಂದು ಮಂತ್ರಿ ಮಂಡಲದ ಮಾನ್ಯ ಸದಸ್ಯರನ್ನು ಸಭೆಗೆ ಪರಿಚಯ ಮಾಡಿಕೊಡುತ್ತೇನೆ. ಹಿರಿಯ ಸದಸ್ಯರಾದ, ಹಿಂದೆಯೂ ಕೂಡ ಮಂತ್ರಿಯಾಗಿದ್ದು, ಈಗಲೂ ಕೂಡ ಮಂತ್ರಿಯಾಗಿರುವ ಮಾನ್ಯ ವೀರಪ್ಪ ಮೊಯಿಲಿಯವರು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಯಾಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಈಗಲು ಅದೇ ಖಾತೆ ಕೊಟ್ಟಿದ್ದೀರಿ, ನಾವು ಯಾರಾದರೂ ಹೊಸಬರನ್ನು ತರುತ್ತಾರೆಂದು ಯೋಚನೆ ಮಾಡಿದ್ದೆವು. ಅದೇ ಖಾತೆ, ಅದೇ ಮಂತ್ರಿಗಳು, ಶ್ರೀಮತಿ ನಾಗರತ್ನಮ್ಮನವರು ಒಬ್ಬರು ಬಿಟ್ಟರೆ ಉಳಿದವರು ಹಳಬರು.

ಶ್ರೀ ಎಸ್. ಬಂಗಾರಪ್ಪ:- ಬೇರೆಯವರು ಬಂದಾಗ ಬೇರೆ ರೂಪದಲ್ಲಿ ಪರಿಚಯ ಮಾಡಿಕೊಡುತ್ತೇವೆ.

ಶ್ರೀ ಸಿ. ಬೈರೇಗೌಡ:- ಮಾನ್ಯ ಮೊಯಿಲಿಯವರು ರಾಜೀನಾಮೆ ಕೊಟ್ಟಿದ್ದಾರೆಂದು ಪತ್ರಿಕೆಯಲ್ಲಿಯೂ ಕೂಡ ವರದಿಯಾಗಿದೆ. ಅವರು ರಾಜೀನಾಮೆ ಕೊಟ್ಟಿದ್ದಾರೋ ಅಥವಾ ರಾಜೀನಾಮೆ ಪತ್ರ ತಮ್ಮ ಕೈಗೆ ಬಂದಿದೆಯೋ ಅಥವಾ ಇಲ್ಲವೋ ಅನ್ನತಕ್ಕ ವಿವರಣೆಯನ್ನು ದಯವಿಟ್ಟು ಕೊಡಿ.

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಹಿರಿಯ ಸದಸ್ಯರಾದ ಬೈರೇಗೌಡರು ಯಾವುದೋ ರಾಜೀನಾಮೆ ವಿಚಾರ ಪತ್ರಿಕೆಯಲ್ಲಿ ಬಂದಿದೆ ಎಂದು ಸದನದ ಗಮನಕ್ಕೆ ತರುತ್ತಿದ್ದಾರೆ. ಪತ್ರಿಕೆಯಲ್ಲಿ ಬಂದಿರತಕ್ಕ ಪ್ರತಿಯೊಂದನ್ನು ಕೂಡ ಕೆಲವೊಮ್ಮೆ ನಾವು ಪ್ರಸ್ತಾಪ ಮಾಡುವುದಿಲ್ಲ. ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡಿದರೂ ಕೂಡ ಉತ್ತರ ಕೊಡತಕ್ಕ ಸಂದರ್ಭ ಒದಗಿಬರಬೇಕಾದಂತಹ ಅವಶ್ಯಕತೆ ಉದ್ಭವವಾಗುವುದಿಲ್ಲ. ಆದ್ದರಿಂದ ಈ ಒಂದು ಗುಂಪಿಗೆ ತಮ್ಮ ಅಭಿಪ್ರಾಯವನ್ನು ಸೇರಿಸಿಟ್ಟಿದ್ದೇನೆ. ಅದಕ್ಕೆ ಉತ್ತರ ಈಗ ಬೇಕಾಗಿಲ್ಲವೆನ್ನತಕ್ಕದ್ದು ನನ್ನ ಭಾವನೆ. ಇದೇ ನನ್ನ ಉತ್ತರ. ಅನಂತರ ಮತ್ತೊಬ್ಬ ಹಿರಿಯ ಸದಸ್ಯರಾದ ಶ್ರೀಮಾನ್ ಬಸವಲಿಂಗಪ್ಪನವರು ಹಿಂದೆ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ. ಈಗ ಸಚಿವರಾಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಅವರೇ ಬಸವಲಿಂಗಪ್ಪನವರಾ?

ಶ್ರೀ ಎಸ್. ಬಂಗಾರಪ್ಪ:- ಅವರೇ, ವಾಟಾಳ್ ನಾಗರಾಜ್ ಅವರು ಹೇಗಿದ್ದಾರೊ ಹಾಗೆ ಇದ್ದಾರೆ, ಅವರೂ ಕೂಡ ಏನೂ ಬದಲಾವಣೆ ಆಗಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಈಗಲೂ ಇದೇ ಕುರ್ಚಿಯಲ್ಲಿ ಕುಳಿತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಬಸವಲಿಂಗಪ್ಪನವರನ್ನು ಪರಿಚಯ ಮಾಡಿಕೊಟ್ಟಿದ್ದೇನೆ. ಆಮೇಲೆ ಮಾನ್ಯ ಅಜೀಜ್ ಸೇಠ್‌ರವರನ್ನು ನೀವು ಮರೆಯುವುದಕ್ಕೆ ಸಾಧ್ಯವಿಲ್ಲ. ಶ್ರೀಮಾನ್ ಅಜೀಜ್‌ಸೇಠ್ ಅವರು ಅತ್ಯಂತ ಹಿರಿಯರು. ಅವರನ್ನು ನಾನು ಸದನಕ್ಕೆ ಪರಿಚಯ ಮಾಡಿಕೊಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:- ಅವರು ಈ ಕಡೆ ಇದ್ದಗಲೂ ಸಚಿವರಾಗಿದ್ದರು. ಆ ಕಡೆ ಇದ್ದಾಗಲೂ ಸಚಿವರಾಗಿದ್ದಾರೆ.

ಶ್ರೀ ಎಸ್. ಬಂಗಾರಪ್ಪ:- ಅತ್ಯಂತ ಹಿರಿಯರು ಹಾಗೂ ಸಹಕಾರ ಕ್ಷೇತ್ರದಲ್ಲಿ ದುಡಿದವರಾದ ಶ್ರೀ ಕೆ.ಹೆಚ್.ಪಾಟೀಲರನ್ನು ಪರಿಚಯ ಮಾಡಿಕೊಡುತ್ತಿದ್ದೇನೆ. ಅವರನ್ನು ಮತ್ತೊಂದು ಸಾರಿ ಪರಿಚಯ ಮಾಡಿಕೊಡುವುದು ಅನಾವಶ್ಯಕ. ಸದನದ ಅತ್ಯಂತ ಹಿರಿಯ ಸದಸ್ಯರಾದ ಶ್ರೀಮತಿ ಕೆ.ಎಸ್. ನಾಗರತ್ನಮ್ಮನವರು ಮೊಟ್ಟ ಮೊದಲ ಬಾರಿಗೆ ಸಚಿವರಾಗಿದ್ದಾರೆ. ಅವರನ್ನು ಪರಿಚಯ ಮಾಡಿಕೊಡುತ್ತಿದ್ದೇನೆ. ನಂತರ ಮಾನ್ಯ ಶ್ರೀ ಜಿ. ಪುಟ್ಟಸ್ವಾಮಿಗೌಡರು ಸಚಿವರಾಗಿದ್ದವರು, ಮತ್ತೊಮ್ಮೆ ಕೂಡ ಅವರು ಸಚಿವರಾಗಿದ್ದಾರೆ. ಇದೇ ಸಂದರ್ಭದಲ್ಲಿ ಸರ್ಕಾರದ ಮುಖ್ಯ ಸಚೇತಕರಾಗಿ ನೂತನವಾಗಿ ನಾಮಕರಣಗೊಂಡಿರತಕ್ಕ ಧಾರವಾಡ ಜಿಲ್ಲೆಯ ಬ್ಯಾಡಗಿ ಕ್ಷೇತ್ರದ ಡಾ: ಹೆಚ್.ಡಿ. ಲಮಾಣಿಯವರನ್ನು ಈ ಸಭೆಗೆ ಪರಿಚಯ ಮಾಡಿಕೊಡುತ್ತಿದ್ದೇನೆ. ಇಷ್ಟು ಹೇಳಿ ಮಾನ್ಯ ಸಭಾಧ್ಯಕ್ಷರಿಗೆ ವಂದಿಸುತ್ತೇನೆ.

<u>ಗೈರು ಹಾಜರಿಗೆ ಅನುಮತಿ ಕೋರಿಕೆ</u>

ಅಧ್ಯಕ್ಷರು:- ಈ ಸದನದ ಮಾನ್ಯ ಸದಸ್ಯರಾದ ಸನ್ಮಾನ್ಯ ಶ್ರೀ ವೀರೇಂದ್ರ ಪಾಟೀಲ್‌ರವರು ಈಗಿನ ಆರೋಗ್ಯ ಪರಿಸ್ಥಿತಿಯಿಂದಾಗಿ ದಿನಾಂಕ 25-10-90ರಂದು ನಡೆಯಲಿರುವ ವಿಧಾನ ಸಭಾ ಅಧಿವೇಶನದಲ್ಲಿ ಹಾಜರಾಗಲು ಸಾಧ್ಯವಾಗುವುದಿಲ್ಲ ಎಂದು ನನಗೆ ಪತ್ರ ಬರೆದಿದ್ದಾರೆ. ಇದನ್ನು ಈ ಸದನದ ಗಮನಕ್ಕೆ ತರಬಯಸುತ್ತೇನೆ.

"ಶ್ರೀ ವೀರೇಂದ್ರ ಪಾಟೀಲರು ದಿನಾಂಕ: 25-10-90ರಂದು ಅನಾರೋಗ್ಯದ ನಿಮಿತ್ತ ಸದನಕ್ಕೆ ಗೈರು ಹಾಜರಾಗಲು ಅನುಮತಿಯನ್ನು ಕೊಡಬೇಕೆಂದು ಸದನವು ಅಪೇಕ್ಷಿಸುತ್ತದೆಯೇ?"

<u>ಯಾವ ಸದಸ್ಯರು ವಿರೋಧ ವ್ಯಕ್ತಪಡಿಸಲಿಲ್ಲ.</u>

ಅಧ್ಯಕ್ಷರು:- ಶ್ರೀ ವೀರೇಂದ್ರ ಪಾಟೀಲರವರಿಗೆ ಗೈರುಹಾಜರಾಗಲು ಅನುಮತಿಯನ್ನು ನೀಡಲಾಗಿದೆ.

<u>ಶ್ರೀ ವೀರೇಂದ್ರ ಪಾಟೀಲರವರಿಗೆ ಗೈರುಹಾಜರಾಗಲು ಅನುಮತಿ ನೀಡಲಾಯಿತು.</u>

ಅಧ್ಯಕ್ಷರು:- ಈಗ ಮಾನ್ಯ ಶ್ರೀ ಎಸ್. ಬಂಗಾರಪ್ಪನವರು ವಿಶ್ವಾಸ ಮತವನ್ನು ಕುರಿತ ನಿರ್ಣಯವನ್ನು ಮಂಡಿಸುತ್ತಾರೆ.

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಸಭಾಧ್ಯಕ್ಷರೆ, ನಾನು ತಮ್ಮ ಅಪ್ಪಣೆಯನ್ನು ಕೋರಿ ಈ ಕೆಳಕಂಡ ನಿರ್ಣಯವನ್ನು ಈ ಸದನದ ಒಪ್ಪಿಗೆಗೋಸ್ಕರ ಅಥವಾ ಅನುಮೋದನೆಗೋಸ್ಕರ ಮಂಡಿಸುತ್ತೇನೆ.

"ಈ ಸದನವು ಶ್ರಿ ಎಸ್. ಬಂಗಾರಪ್ಪ ಅವರ ನೇತೃತ್ವದ ಮಂತ್ರಿಮಂಡಲದಲ್ಲಿ ತನ್ನ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ."

(ಆಡಳಿತ ಪಕ್ಷದ ಸದಸ್ಯರು ಮೇಜು ಕುಟ್ಟಿ ತಮ್ಮ ಒಪ್ಪಿಗೆಯನ್ನು ವ್ಯಕ್ತಪಡಿಸಿದರು.)

ಶ್ರೀ ವಾಟಾಳ್ ನಾಗರಾಜ್:- ಇದು ನಮಗಂತೂ ಅರ್ಥವಾಗುತ್ತಿಲ್ಲ.

(ಗೊಂದಲ)

ಅಧ್ಯಕ್ಷರು:- ಯಾವುದಾದರೂ ಒಂದು ಪ್ರಸ್ತಾವಕ್ಕೆ ಒಪ್ಪಿಗೆಯನ್ನು ಸೂಚಿಸುವಾಗ ಮೇಜು ಕುಟ್ಟಿ ಸ್ವಾಗತಿಸುವುದು ವಾಡಿಕೆ. ಮೇಜು ಕುಟ್ಟಿದರೆ ಅದು ಮುರಿದು ಹೋಗುತ್ತದೆ ಎಂಬ ಕಳವಳ ನಿಮಗಿದ್ದರೆ ಅದಕ್ಕೆ ನನ್ನ ಸಹಾನುಭೂತಿ ಇದೆ. ಆದರೆ ನಿಮ್ಮ ಅನುಮಾನಕ್ಕೆ ಉತ್ತರ ಸಿಕ್ಕಿತು ಎಂದು ನಾನು ಭಾವನೆ ಮಾಡುತ್ತೇನೆ.

"ನಿರ್ಣಯ ಮಂಡನೆ ಆಗಿದೆ"

† ಶ್ರೀ ಎಸ್. ಬಂಗಾರಪ್ಪ (ಮಾನ್ಯ ಮುಖ್ಯಮಂತ್ರಿಗಳು):- ಮಾನ್ಯ ಸಭಾಧ್ಯಕ್ಷರೆ, ರಾಜಕಾರಣದಲ್ಲಿ ಕೆಲವೊಮ್ಮೆ ಅಪರೂಪದ ಪ್ರಸಂಗಗಳು ಉದ್ಭವವಾಗುತ್ತವೆ. ಅಂತಹ ಪ್ರಸಂಗಗಳಲ್ಲಿ ಇದೂ ಒಂದು ಎಂದು ನಾನು ಭಾವಿಸುತ್ತೇನೆ. ಪ್ರಜಾಪ್ರಭುತ್ವದಲ್ಲಿ ಚುನಾವಣೆ ಆದ ಕೂಡಲೆ ಒಂದು ಪಕ್ಷಕ್ಕೆ ಬಹುಮತ ನಿಚ್ಚಳವಾಗಿ ಬಂದರೆ, ಬಹುಮತದ ಆಧಾರದ ಮೇಲೆ ಆ ಒಂದು ಪಕ್ಷ ತನ್ನ ಮಂತ್ರಿಮಂಡಲವನ್ನು ರಚನೆ ಮಾಡತಕ್ಕಂಥ ಸದಾವಕಾಶವನ್ನು ಕಾನೂನು ಚೌಕಟ್ಟಿನಲ್ಲಿ, ಸಂವಿಧಾನದ ಚೌಕಟ್ಟಿನಲ್ಲಿ ಪಡೆಯುತ್ತದೆ. ಈ ಮಾತನ್ನು ಆಡುವಾಗ ನಾನು ಇದು ಬರೀ ನಮ್ಮ ರಾಜ್ಯಕ್ಕೆ ಸೀಮಿತವಾಗಿ ಮಾತಾಡುತ್ತಿಲ್ಲ. ಎಲ್ಲಾ ರಾಜ್ಯಗಳಲ್ಲೂ ಮತ್ತು ರಾಷ್ಟ್ರಮಟ್ಟದಲ್ಲೂ ಅರ್ಥಾತ್ ಕೇಂದ್ರದಲ್ಲೂ ರಚನೆಯಾಗತಕ್ಕಂಥ ಮಂತ್ರಿಮಂಡಲದ ವಿಚಾರ ಕೂಡ ಇದರಲ್ಲಿ ಅಡಕವಾಗಿದೆಯೆಂದು ನಾನು ಭಾವಿಸುತ್ತೇನೆ. ಮಾನ್ಯ ಸಭಾಧ್ಯಕ್ಷರೇ, ಕೆಲವೊಮ್ಮೆ ಏಕಪಕ್ಷೀಯವಾಗಿ ಬಹುಮತವನ್ನು ಪಡೆಯುವುದಕ್ಕೆ ಆಗುವುದಿಲ್ಲ. ಅಂಥ ಸಂದರ್ಭಗಳನ್ನೂ ಕೂಡ ನಾವು ಕಂಡಿದ್ದೇವೆ. ಇದು ರಾಜ್ಯ ಮಟ್ಟದಲ್ಲೂ ಮತ್ತು ರಾಷ್ಟ್ರ ಮಟ್ಟದಲ್ಲೂ ಕೂಡ ನಡೆದಿದೆ. ಕಳೆದ ಸಲ ನಡೆದಂತಹ ಲೋಕಸಭೆಯ ಚುನಾವಣೆಯಲ್ಲಿ ಬಹು ಅಪರೂಪವಾಗಿರತಕ್ಕಂಥ ತೀರ್ಪು ರಾಷ್ಟ್ರದ ಜನತೆಯಿಂದ ಸ್ಪಷ್ಟವಾಗಿ ಒಡಮೂಡಿ ಬಂತು. ರಾಜ್ಯ ಮತ್ತು ರಾಷ್ಟ್ರದ ಜನತೆಗೆ ಕೆಲವೊಮ್ಮೆ ಇಂತಹ ಒಂದು ಪರಿಸ್ಥಿತಿಯನ್ನು ವಿನೂತನವಾಗಿ ಅವಲೋಕನ ಮಾಡತಕ್ಕಂಥ ಒಂದು ಸಂದರ್ಭ ಬರುತ್ತದೆ. ನಮ್ಮ ಫೆಡರಲ್ ಸಿಸ್ಟಮ್‌ನಲ್ಲಿ ಒಂದು ಪಕ್ಷ ಬಹುಮತ ಪಡೆದು ಕೇಂದ್ರದಲ್ಲಿ ಸರ್ಕಾರ ರಚನೆ ಮಾಡಿದರೆ ಮತ್ತೊಂದು ಪಕ್ಷ ರಾಜ್ಯದಲ್ಲಿ ಸರ್ಕಾರವನ್ನು ರಚನೆ ಮಾಡತಕ್ಕಂಥ ಸದವಕಾಶವಿದೆ. ಕೆಲವು ಪಕ್ಷಗಳು ಸೇರಿ ಕೇಂದ್ರದಲ್ಲಿ ಸರ್ಕಾರವನ್ನು ರಚನೆ ಮಾಡಿದರೆ, ಕೆಲವು ಪಕ್ಷಗಳು ಸೇರಿ ಸರ್ಕಾರವನ್ನು ರಾಜ್ಯದಲ್ಲಿ ರಚನೆ ಮಾಡಲು ಸದಾವಕಾಶವಿದೆ. ನಮ್ಮದು ಸಂಯುಕ್ತರಂಗ ಸರ್ಕಾರ, ಏಕಪಕ್ಷೀಯ ಸರ್ಕಾರ ಇತ್ಯಾದಿ, ಇತ್ಯಾದಿ ಎಂದು ಹೇಳತಕ್ಕಂಥ ಸರ್ಕಾರಗಳನ್ನು ನಮ್ಮ ಅನುಭವದ ಚೌಕಟ್ಟಿನಲ್ಲಿ ಕಂಡು ಉಂಡಿರತಕ್ಕಂಥ ವಿಚಾರ ಇದೆ. ಇದನ್ನು ನಾನು ಹೊಸದಾಗಿ ಏನು ಪ್ರಸ್ತಾಪ ಮಾಡುತ್ತಿಲ್ಲ. ಈ ರೀತಿಯಲ್ಲಿ ಆಗಿದೆ. ಕಳೆದ ಚುನಾವಣೆಯನ್ನು ನೋಡಿದರೆ ನನಗನಿಸುತ್ತದೆ. ನಮ್ಮ ರಾಜ್ಯದಲ್ಲಿ ಇಲ್ಲಿ, ತಮ್ಮ ಪಕ್ಷ ಅಧಿಕಾರವನ್ನು ಬಿಟ್ಟು ಕೊಡತಕ್ಕ ಒಂದು ಸಂದರ್ಭ ಬಂದು ನಮ್ಮ ಪಕ್ಷಕ್ಕೆ ಅಧಿಕಾರವನ್ನು ಕರ್ನಾಟಕ ರಾಜ್ಯದ ಜನತೆ ನೀಡಿದರು. ಕಳೆದ ಚುನಾವಣೆಯಲ್ಲಿ ಅಂದರೆ ಲೋಕಸಭಾ ಚುನಾವಣೆಯಲ್ಲಿ ರಾಷ್ಟ್ರಮಟ್ಟದಲ್ಲಿ ಏಕಪಕ್ಷೀಯವಾಗಿ ಬಹುಮತವನ್ನು ಕೊಡಲಿಲ್ಲ. ಜನತೆ ಯಾವರೀತಿ ಮತವನ್ನು ಕೊಟ್ಟರು ಅಂದರೆ, ಯಾವ ಪಕ್ಷವೂ ಬಹುಮತ ಪಡೆಯಬಾರದು ಎನ್ನತಕ್ಕಂಥ ರೀತಿಯಲ್ಲಿ ರಾಷ್ಟ್ರದ ಜನತೆ ಮತವನ್ನು ಕೊಟ್ಟಿದ್ದರಿಂದ ಯಾವ ಪಕ್ಷಕ್ಕೂ ಬಹುಮತ ಬರಲಿಲ್ಲ. ಅದರ ಅರ್ಥ ಏನೆಂದರೆ, ಸಾಧ್ಯವಿದ್ದರೆ ನೀವು ಸಂಯುಕ್ತವಾಗಿ ಒಂದು ಸರ್ಕಾರವನ್ನು ರಚನೆ ಮಾಡತಕ್ಕಂಥ ಪ್ರಯತ್ನವನ್ನು ಕೇಂದ್ರಮಟ್ಟದಲ್ಲಿ ನೀವು ಮಾಡಬಹುದು ಎನ್ನತಕ್ಕ ಅಣತಿಯನ್ನು ರಾಷ್ಟ್ರದ ಜನತೆ ಕೊಟ್ಟರು. ಆದರೆ ರಾಜ್ಯ ಸರ್ಕಾರದಲ್ಲಿ ಹಾಗೆ ಆಗಲಿಲ್ಲ. ಏಕಪಕ್ಷೀಯವಾದ ಸರ್ಕಾರವನ್ನು ರಚನೆ ಮಾಡಲಿ ಎಂದು ಜನತೆ ಮತವನ್ನು ಕೊಟ್ಟಿದೆ. ಕೆಲವೊಮ್ಮೆ ಜನತೆಯ ತೀರ್ಪು ಆ ರೀತಿಯಾಗಿ ಬಂದಾಗ ಸರ್ಕಾರ ರಚನೆ ಮಾಡಬೇಕಾಗುತ್ತದೆ. ನನಗೆ ಯಾರನ್ನೂ ಖಂಡಿಸಿ ಮಾತನಾಡತಕ್ಕ ಹಕ್ಕು ಇಲ್ಲ. ರಾಜ್ಯಾಂಗಬದ್ಧವಾಗಿ ಚುನಾವಣೆ ನಡೆದು ತೀರ್ಪು ಹೊರಹೊಮ್ಮಿ ಬಂದಾಗ ಅದನ್ನು ಗೌರವಿಸತಕ್ಕಂಥಾದ್ದು ಆದ್ಯಕರ್ತವ್ಯ ಎಂಬ ದೃಷ್ಟಿಯಿಂದ ಮಾತನಾಡುತ್ತಿದ್ದೇನೆ. ಜನತೆಯ ತೀರ್ಪಿಗೆ ತಲೆಬಾಗುವ ಕರ್ತವ್ಯ ದೃಷ್ಟಿಯಿಂದ ನಾನು ಮಾತನಾಡುತ್ತಿದ್ದೇನೆ. ಇದೆಲ್ಲಾ

ತಮಗೆ ಗೊತ್ತಿಲ್ಲ ಎಂದು ಅಲ್ಲ. ಅಲ್ಲಿ ಶ್ರೀಮಾನ್ ವಿ.ಪಿ.ಸಿಂಗ್ ಅವರ ನಾಯಕತ್ವದಲ್ಲಿ ಕೆಲವು ಪಕ್ಷಗಳು ಸೇರಿ ಸರ್ಕಾರ ರಚನೆ ಮಾಡತಕ್ಕಂಥ ತೀರ್ಪನ್ನು ರಾಷ್ಟ್ರದ ಜನತೆ ಕೊಟ್ಟಿದ್ದಾರೆ. ಅದು ಸರಿ ಅಥವಾ ತಪ್ಪು ಎಂದು ನಾನು ಹೇಳಲಿಕ್ಕೆ ಹೋಗುವುದಿಲ್ಲ. ನನ್ನ ಪ್ರಕಾರ ಏಕಪಕ್ಷೀಯವಾಗಿ ಬಹುಮತ ಪಡೆದು ಸರ್ಕಾರವನ್ನು ರಚನೆ ಮಾಡಿದರೆ ಸುಭದ್ರ ಸರ್ಕಾರ ಇರುತ್ತದೆ. ಕೆಲವು ಪಕ್ಷಗಳು ಸೇರಿ ಸರ್ಕಾರ ರಚನೆ ಮಾಡಿದರೆ ಕೆಲವು ಮೂಲಭೂತ ವಿಚಾರಗಳಲ್ಲಿ ವ್ಯತ್ಯಾಸಗಳು ಬರುವುದರಿಂದ, ತಾತ್ವಿಕವಾಗಿ, ಸೈದ್ಧಾಂತಿಕ ಕಾರ್ಯಕ್ರಮಗಳ ಚೌಕಟ್ಟಿನಲ್ಲಿ ವ್ಯತ್ಯಾಸಗಳು ಕೆಲವೊಮ್ಮೆ ಬರುವುದರಿಂದ ಕಷ್ಟವಾಗುತ್ತದೆ. ಸುಭದ್ರ ಸರ್ಕಾರದ ಹಿನ್ನೆಲೆಯಲ್ಲಿ ಜನತೆಗೆ ಕಾರ್ಯಕ್ರಮಗಳನ್ನು ರೂಪಿಸಿ ರಾಷ್ಟ್ರದ ಜನತೆಗೆ ಜನತೆಯ ಹಿತದೃಷ್ಟಿಯಿಂದ ಕೊಡತಕ್ಕಂಥ ಒಂದು ಚಿಂತನೆ ಏನಿರುತ್ತದೆ ಅದನ್ನು ವಿಭಿನ್ನ ವೈಚಾರಿಕತೆಯ ಹಿನ್ನೆಲೆಯಲ್ಲಿರತಕ್ಕ ಪಕ್ಷಗಳು, ಆರ್ಥಿಕ ಕಾರ್ಯಕ್ರಮಗಳನ್ನು ರೂಪಿಸಿ ಕೊಡತಕ್ಕಂಥಾದ್ದು ಕಷ್ಟವಾಗುತ್ತದೆ. ಆ ಒಂದು ಪರಿಸ್ಥಿತಿ ಉದ್ಭವಾಗುತ್ತದೆ. ಅದೇ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರ ಇತ್ತು ಎಂದು ನನಗನಿಸುತ್ತದೆ. ನಾನು ಆ ಮಾತನ್ನು ಅಲ್ಲಿಗೆ ನಿಲ್ಲಿಸುತ್ತೇನೆ. ಅದರ ಬಗ್ಗೆ ಮಾತನಾಡತಕ್ಕ ಆಸಕ್ತಿ ನನಗೆ ಇಲ್ಲ. ಆ ವಿಷಯ ಈ ಚರ್ಚೆಯಲ್ಲಿ ಬೇಕಾಗಿಲ್ಲ. ನಾನು ಅದರ ಇತಿಮಿತಿಯನ್ನಿಟ್ಟುಕೊಂಡು ಮಾತನಾಡತಕ್ಕ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ನಾವು ಆ ಮಾತಿನ ಹಿನ್ನೆಲೆ ಇಟ್ಟರೆ, ಇವೊತ್ತು ಅಲ್ಲಿಯ ಪರಿಸ್ಥಿತಿ ಏನು ಎನ್ನತಕ್ಕ ವ್ಯಾಖ್ಯಾನ ಈಗ ಬೇಡ. ಅದು ರಾಷ್ಟ್ರದ ಜನತೆ ಕೊಟ್ಟಿರತಕ್ಕಂಥಾ ತೀರ್ಪು. ಜನತೆ ಮುಂದೆ ಯಾವರೀತಿ ಮಾಡಬೇಕೆಂಬ ಯೋಚನೆ ಮಾಡುವಂಥ ಪರಿಸ್ಥಿತಿ ಇದೆ ಎನ್ನುವ ಒಂದು ಮಾತನ್ನು ಹೇಳಲಿಕ್ಕೋಸ್ಕರ ಈ ವಿಷಯವನ್ನು ಪ್ರಸ್ತಾಪ ಮಾಡಬೇಕಾಯಿತು. ಕೆಲವೊಮ್ಮೆ 5 ವರ್ಷಗಳ ಅವಧಿಗೆ ಜನತೆ ತೀರ್ಪು ಕೊಡಲಿಕ್ಕೋಸ್ಕರ ಕಾಯಬೇಕಾಗಿತ್ತು. ಹಾಗೆ ಕಾಯದೆ, ಕೆಲವೊಮ್ಮೆ ಮಧ್ಯಂತರ ಚುನಾವಣೆಗಳು ಬಂದು ಬಿಡಬಹುದು. ಏಕೆಂದರೆ, ಒಂದು ಸರ್ಕಾರ ಅಲ್ಲಿ ಅಧಿಕಾರ ಕಳೆದುಕೊಳ್ಳತಕ್ಕಂಥ ಪ್ರಸಂಗ ಬರತಕ್ಕಂಥ ಹಿನ್ನೆಲೆ ಉದ್ಭವವಾಗಿರುವುದರಿಂದ ಆ ಮಾತನ್ನು ಹೇಳಬೇಕಾಗಿ ಬಂತು. ಆ ಮಾತನ್ನು ಅಲ್ಲಿಗೆ ಬಿಟ್ಟು ನಮ್ಮ ರಾಜ್ಯಕ್ಕೆ ಸೀಮಿತಗೊಳಿಸಿ ಹೇಳುವುದು ಇದ್ದರೆ, ಕರ್ನಾಟಕ ರಾಜ್ಯದ ಜನತೆ ನಮ್ಮ ಪಕ್ಷಕ್ಕೆ ಭಾರಿ ಬಹುಮತವನ್ನು ಕೊಟ್ಟಿದ್ದಾರೆ. ಅದು ಎಷ್ಟು ಎನ್ನತಕ್ಕಂಥ ಅಂಕಿ ಅಂಶ ಅನಾವಶ್ಯಕ. ಒಟ್ಟು ಸರ್ಕಾರ ರಚನೆಯಾಗಿದೆ. ನಮ್ಮ ಪಕ್ಷದ ಹಿರಿಯ ರಾಜಕಾರಣಿಗಳಲ್ಲಿ ಒಬ್ಬರಾಗಿರತಕ್ಕ ಶ್ರೀಮಾನ್ ವೀರೇಂದ್ರಪಾಟೀಲ್‌ಜೀ ಅವರ ನಾಯಕತ್ವದಲ್ಲಿ ನಾವು ಸರ್ಕಾರ ರಚನೆ ಮಾಡಿ ಸುಭದ್ರವಾಗಿರತಕ್ಕ ಮಂತ್ರಿಮಂಡಲವನ್ನು ರಚನೆ ಮಾಡಿ, ಕರ್ನಾಟಕ ರಾಜ್ಯದ ಹಿತದೃಷ್ಟಿಯಿಂದ ಕಾರ್ಯಕ್ರಮ ರೂಪಿಸತಕ್ಕಂಥ ಒಂದು ಕಾರ್ಯವನ್ನು ನಾವು ಮಾಡಿದೆವು. ಈ ಸಂದರ್ಭದಲ್ಲಿ ನಾನು ಮುಖ್ಯಮಂತ್ರಿಯಾಗಿ ಮಾನ್ಯ ವೀರೇಂದ್ರಪಾಟೀಲರ ಸೇವೆಯ ಬಗ್ಗೆ ಹೇಳುತ್ತಿದ್ದೇನೆ. ಪಕ್ಷದ ದೃಷ್ಟಿಯಿಂದ ಅವರು ಹಿರಿಯರಲ್ಲಿ ಒಬ್ಬರಾಗಿ, ಮಾರ್ಗದರ್ಶಕರಲ್ಲಿ ಒಬ್ಬರಾಗಿ ನಮ್ಮ ಕರ್ನಾಟಕ ರಾಜ್ಯದ ಅಧಿಕಾರದ ಚುಕ್ಕಾಣಿಯನ್ನು ಹಿಡಿದು ರಾಜ್ಯವನ್ನು ಪ್ರಗತಿ ಪಥದಲ್ಲಿ ಮುಂದಕ್ಕೆ ತೆಗೆದುಕೊಂಡು ಹೋಗತಕ್ಕ ಪ್ರಾಮಾಣಿಕ ಕರ್ತವ್ಯವನ್ನು, ಪ್ರಯತ್ನವನ್ನು ಅವರು ಮಾಡಿದ್ದಾರೆ. ಅದಕ್ಕಾಗಿ ನಾನು ಈ ಸಂದರ್ಭದಲ್ಲಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈಗ ಅವರ ಆರೋಗ್ಯ ಸರಿಯಾಗಿಲ್ಲ. ನಾನು ಮುಖ್ಯ ಮಂತ್ರಿಯಾಗುವುದಕ್ಕೆ ಮೊದಲು ಮತ್ತು ಮುಖ್ಯ ಮಂತ್ರಿಯಾದ ಮೇಲೆ ಅವರ ಮನೆಗೆ ಹೋಗಿ ಅವರನ್ನು ಮಾತನಾಡಿಸಿಕೊಂಡು ಬಂದಿದ್ದೇನೆ. ಅವರು ಈಗ ಗುಣಮುಖರಾಗುತ್ತಿದ್ದಾರೆ. ಅವರು ಶೀಘ್ರವಾಗಿ ಗುಣಮುಖರಾಗಲೆಂದು ದೇವರಲ್ಲಿ ಬೇಡಿಕೆಯನ್ನು ಅನೇಕ ಜನರು ಇಟ್ಟಿರುವಂತೆ ನಾನೂ ಕೂಡ ಬೇಡಿಕೆಯನ್ನು ಇಟ್ಟಿದ್ದೇನೆ. ಅವರು ಶೀಘ್ರವಾಗಿ ಗುಣಮುಖರಾಗಿ ಕರ್ನಾಟಕ ರಾಜ್ಯದ, ರಾಷ್ಟ್ರದ ಸೇವೆಗೆ ಏನು ತಮ್ಮ ಸೇವೆಯನ್ನು ಮುಡುಪಾಗಿಟ್ಟಿದ್ದಾರೆ ಅದು ನೆರವೇರಲೆಂದು ನಾನು ನನ್ನ ಆಸೆಯನ್ನು ವ್ಯಕ್ತಪಡಿಸುತ್ತೇನೆ. ಮಾನ್ಯ ಸಭಾಧ್ಯಕ್ಷರೆ, ಕಾಲದ ಪ್ರಸ್ತಾಪ ಇಲ್ಲಿ ಅನಾವಶ್ಯಕ ಎಂದು ನಾನಾದರೂ ಭಾವಿಸಿದ್ದೇನೆ. ತಾವೂ ಕೂಡ ಇದನ್ನು ಪ್ರಸ್ತಾಪ ಮಾಡುವುದರಿಂದ ಅಷ್ಟೊಂದು ಒಳ್ಳೆಯದಾಗಲಾರದೆಂದು ನಾನು ಭಾವಿಸಿದ್ದೇನೆ. ಇದು ಆ ಕಡೆ ಕೂತಿರತಕ್ಕ ನನ್ನ ಮಿತ್ರರಿಗೆ ಹೇಳತಕ್ಕ ಮಾತು....

ಶ್ರೀ ಆರ್.ಎಲ್. ಜಾಲಪ್ಪ:- ಯಾವ ವಿಚಾರದಲ್ಲಿ?

ಶ್ರೀ ಎಸ್. ಬಂಗಾರಪ್ಪ:- ಕೆಲವೊಮ್ಮೆ ಬದಲಾವಣೆ ಆಗುತ್ತವೆ. ನಮ್ಮಲ್ಲೂ ಆಗುತ್ತದೆ, ನಿಮ್ಮಲ್ಲೂ ಆಗುತ್ತದೆ. ಈ ವಿಚಾರವನ್ನು ತಾವು ಗಮನಿಸಿದರೆ ಒಳ್ಳೆಯದೆಂದು ನನ್ನ ಭಾವನೆ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಬದಲಾವಣೆ ನಮ್ಮಲ್ಲಿ ಆಗತಕ್ಕ ರೀತಿಯೇ ಬೇರೆ, ನಿಮ್ಮಲ್ಲಿ ಆಗತಕ್ಕ ರೀತಿಯೇ ಬೇರೆ.

ಶ್ರೀ ಎಸ್. ಬಂಗಾರಪ್ಪ:- ಒಂದು ಸಾರಿ ಆದ ಕಾರಣವೇ ಇನ್ನೊಂದು ಸಾರಿ ಇರಬಾರದು. ಅದು ಒಂದು ರೀತಿ ಮಜಾ ಇರುವುದಿಲ್ಲ. ಬೇರೆ ಬೇರೆ ಕಾರಣ ಇದ್ದರೆ ಮಜಾ ಇರುತ್ತದೆ. ನಾನು ಈ ಸಂದರ್ಭದಲ್ಲಿ ಸದನದ ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ಅನಿವಾರ್ಯ ಕಾರಣಗಳಿಂದ ಈ ರಾಜ್ಯದ ಮಂತ್ರಿಮಂಡಲ ಮತ್ತೊಂದು ಸಾರಿ ರಚನೆಯಾಗತಕ್ಕ ಸಂದರ್ಭ ಬಂತು. ಅದು ಸಂವಿಧಾನಬದ್ಧವಾಗಿ, ಮೂಲಭೂತ ಪ್ರಜಾಪ್ರಭುತ್ವದ ನೀತಿಗನುಗುಣವಾಗಿ ರಾಜ್ಯದ ಜನತೆ ಕಳೆದ ಚುನಾವಣೆಯಲ್ಲಿ ತಮ್ಮ ತೀರ್ಪಿನ ಮುಖಾಂತರ ಬಹುಮತವನ್ನು ಕೊಟ್ಟಿದ್ದರು. ಅದರ ಆಧಾರದ ಮೇಲೆ ಮತ್ತೊಮ್ಮೆ ಸರ್ಕಾರವನ್ನು ರಚನೆ ಮಾಡತಕ್ಕ ಸಂದರ್ಭ ಇವತ್ತು ನಮಗೆ ಸಿಕ್ಕಿದೆ. ಈ ವಿಷಯ ಇವತ್ತು ತಮ್ಮ ಮುಂದಿದೆ. ರಾಜ್ಯದ ಜನತೆಯ ಮುಂದಿದೆ. ಇನ್ನು ಕೊನೆಯದಾಗಿ ಒಂದು ಮಾತನ್ನು ಮಾನ್ಯ ಸಭಾಧ್ಯಕ್ಷರ ಮುಖಾಂತರ ತಮ್ಮೆಲ್ಲರ ಗಮನಕ್ಕೆ ತರುತ್ತಿದ್ದೇನೆ. ಒಂದು ಸಾರಿ ಜನತೆಯ ತೀರ್ಪು ಐತೀರ್ಪಾಗಿ ಬಂದಾಗ ಅದನ್ನು ನಾವು ಗೌರವಿಸಿ 5 ವರ್ಷಗಳ ಅವಧಿಗೆ ನಾವು ಜನತೆಗೆ ಆಡಳಿತವನ್ನು ಕೊಡಬೇಕು. ಚುನಾವಣಾ ಸಂದರ್ಭದಲ್ಲಿ, ಚುನಾವಣಾ ಪ್ರಣಾಳಿಕೆಯಲ್ಲಿ ಏನು ಹೇಳಿರುತ್ತೇವೆಯೋ ಅದರಲ್ಲಿ ಪ್ರಸ್ತಾಪವಾಗಿರತಕ್ಕ ಅಂಶಗಳೇ ಅಲ್ಲದೆ ಬೇರೆ ಕಾರ್ಯಕ್ರಮಗಳೂ ಇರಬಹುದು. ಜನರ ಹಿತದೃಷ್ಟಿಯಿಂದ ನಾವು ಆಗಿಂದಾಗ್ಗೇ ಬೇರೆ ಕಾರ್ಯಕ್ರಮಗಳನ್ನೂ ಕೂಡ ಹಾಕಿಕೊಳ್ಳಬೇಕಾಗುತ್ತದೆ. ಈ ರಾಜ್ಯದ ಆರ್ಥಿಕ ಪ್ರಗತಿಯ ಜೊತೆಗೆ ಪ್ಲಾನಿಂಗ್‌ನಲ್ಲಿ ಯಾವುದು ಆದ್ಯ ವಲಯದಲ್ಲಿ ಬರುತ್ತದೆ ಅಂದರೆ ಅದು ಪವರ್ ಜನರೇಷನ್ ಇರಬಹುದು, ನೀರಾವರಿ, ಇಂಡಸ್ಟ್ರೀಸ್ ಇರಬಹುದು, ಅಗ್ರಿಕಲ್ಚರ್ ಇರಬಹುದು ಅಂತಿಮವಾಗಿ ಆರ್ಥಿಕ ಪ್ರಗತಿ ಎಂದರೆ ಎಕಾನಮಿಕ್ ಗ್ರೋತ್ ಎಂದು ನಾವು ಏನು ಹೇಳುತ್ತೇವೆ ಅದಕ್ಕೆ ಗಮನವನ್ನು ಕೊಟ್ಟು ಈ ಕಾರ್ಯಕ್ರಮಗಳ ಜೊತೆಗೆ ಸಮಾಜದಲ್ಲಿರತಕ್ಕ ಜನಸಾಮಾನ್ಯರಿಗೆ ಅಂದರೆ ಹರಿಜನಗಿರಿಜನರಿಗೆ, ಅಲ್ಪಸಂಖ್ಯಾತರಿಗೆ ರಕ್ಷಣೆಯನ್ನು ಕೊಡತಕ್ಕ ವಿಚಾರ ಇರಬಹುದು, ಯಾವ ವರ್ಗಗಳು ರಾಜ್ಯಾಂಗಬದ್ಧವಾಗಿರತಕ್ಕ ಸೌಲಭ್ಯಗಳಿಂದ ವಂಚಿತವಾಗಿ ಬಹಳ ದೂರದಲ್ಲಿದ್ದುವು, ಅವುಗಳನ್ನು ಈ ಸೌಲಭ್ಯಗಳ ಹತ್ತಿರಕ್ಕೆ ತರಬೇಕು, ಸೌಲಭ್ಯಗಳ ಚೌಕಟ್ಟಿನಲ್ಲಿ ತರುತ್ತೇವೆಂಬ ವಾಗ್ದಾನವನ್ನು ಚುನಾವಣಾ ಸಂದರ್ಭದಲ್ಲಿ ಏನು ಕೊಡುತ್ತೇವೆ ಅದನ್ನು ನಾವು ನೆರವೇರಿಸಬೇಕು. ಇದನ್ನು ನಾನು ಕೇವಲ ನಮ್ಮ ಒಂದು ಪಕ್ಷದ ವಿಚಾರದಲ್ಲಿ ಹೇಳುತ್ತಿಲ್ಲ. ಯಾವುದೇ ರಾಜಕೀಯ ಪಕ್ಷವಾದರೂ ಕೂಡ ಚುನಾವಣಾ ಸಂದರ್ಭದಲ್ಲಿ ತಮ್ಮ ಮ್ಯಾನಿಫೆಸ್ಟೋದಲ್ಲಿ ಏನು ಹೇಳಿರುತ್ತಾರೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಕೊಟ್ಟಿರತಕ್ಕ ಮಾತನ್ನು ನಾವು ನೆರವೇರಿಸಬೇಕು. ಇದು ನಮ್ಮ ಜವಾಬ್ದಾರಿ. ನಾವು ಇದನ್ನು ನಮ್ಮ ತಲೆಯ ಮೇಲೆ ಹೊತ್ತುಕೊಂಡಿದ್ದೇವೆ. ಅದಕ್ಕನುಗುಣವಾಗಿ ನಾವು ಇನ್ನುಳಿದಿರತಕ್ಕ 4 ವರ್ಷಗಳ ಅವಧಿಯನ್ನು ಸದ್ವಿನಿಯೋಗಮಾಡಿ, ಸ್ಪಷ್ಟ ವಿಚಾರಧಾರೆಗಳ ಗೊತ್ತು ಗುರಿಯನ್ನು ಹೊಂದಿ ಕಾರ್ಯಕ್ರಮಗಳನ್ನು ರೂಪಿಸಿ ಕಾನೂನು ಚೌಕಟ್ಟಿನಲ್ಲಿ ತಂದು ಆರ್ಥಿಕ ಶಕ್ತಿಗನುಗುಣವಾಗಿ ಜಾರಿಮಾಡಿ, ಶಕ್ತಿಮೀರಿ ಶ್ರಮವಹಿಸಿ ಅದರ ಫಲವನ್ನು ಜನಸಾಮಾನ್ಯರಿಗೆ, ರೈತವರ್ಗಕ್ಕೆ ಹಾಗೂ ಇನ್ನಿತರ ವರ್ಗಗಳಿಗೆ ಒಡಗಿಸತಕ್ಕ ಆದ್ಯ ಕರ್ತವ್ಯ ನಮ್ಮ ಮೇಲಿದೆ. ಅದು ಜನತೆಯ ತೀರ್ಪಿಗೆ ಅನುಗುಣವಾಗಿದೆ. ಆ ಕಾರಣದಿಂದಲೇ ಇವತ್ತು ಸರ್ಕಾರ ನಡೆದುಕೊಂಡು ಬರುತ್ತಿದೆ, ಆದರಿಂದಲೇ ಮಂತ್ರಿಮಂಡಲ ರಚನೆಯಾಗಿ ನಾವು ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗುತ್ತಿದ್ದೆವು. ಆದರೆ ರಾಜಕಾರಣದ ಕೆಲವೊಂದು ಬೆಳವಣಿಗೆಗಳ ಆಧಾರದಮೇಲೆ ಕೆಲವೊಂದು ಬದಲಾವಣೆಯಾಗುತ್ತದೆ. ಇವತ್ತು ನಾನು ಬೇರೆ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ.

ಇಷ್ಟು ಮಾತ್ರ ನಿಜ. ಮಾನ್ಯ ರಾಜ್ಯಪಾಲರು ಒಂದು ಷರತ್ತನ್ನು ವಿಧಿಸಿದ್ದರಿಂದ ಇವತ್ತು ಈ ವಿಶ್ವಾಸ ಮತವನ್ನು ಈ ಸದನದಲ್ಲಿ ಕೇಳತಕ್ಕಂಥ ಸಂದರ್ಭ ಬಂತು. ನನಗನಿಸುತ್ತದೆ, ಆ ವಿಶ್ವಾಸ ಮತವನ್ನು ಕೇಳತಕ್ಕಂಥ ಅವಶ್ಯಕತೆ ಸ್ಪಷ್ಟವಾಗಿ ಇರಲಿಲ್ಲ. ಅದರ ಅವಶ್ಯಕತೆ ಬೇಕಾಗಿರಲಿಲ್ಲ. ಹಿಂದೆ ಇದೇ ರೀತಿಯ ಸಂದರ್ಭ ಬಂದಾಗ ವಿಶ್ವಾಸ ಮತವನ್ನು ಕೇಳಿರತಕ್ಕಂಥ ಒಂದು ವಿಚಾರಧಾರೆ ಇತ್ತು. ಇದು ಸಂವಿಧಾನದಲ್ಲಿದ್ದರೂ ಕೂಡ ಒಂದು ಪಕ್ಷ ಪಡೆದಿರತಕ್ಕಂಥ ವಾಸ್ತವಾಂಶದ ಆಧಾರದಲ್ಲಿರತಕ್ಕಂಥ ಬಹುಮತದ ಆಧಾರದಮೇಲೆ ಅದನ್ನು ಕೂಡ ಬಿಟ್ಟು ಮಂತ್ರಿಮಂಡಲದ ರಚನೆಗೆ ಅವಕಾಶವನ್ನು ಕೊಡುವುದಕ್ಕೆ ಸಾಧ್ಯತೆ ಇತ್ತು. ಆದರೂ ಕೂಡ ಮಾನ್ಯ ರಾಜ್ಯಪಾಲರು ಆ ಅಭಿಪ್ರಾಯಪಟ್ಟ ಮೇಲೆ ಇಲ್ಲ, ಇಲ್ಲ ನಿಮ್ಮ ಬಹುಮತವನ್ನು ಸಾಬೀತು ಮಾಡತಕ್ಕಂಥ ಅವಶ್ಯಕತೆ ಹೆಚ್ಚಾಗಿ ಇದೆ, ಅದಕ್ಕೋಸ್ಕರ ನೀವು ಇಷ್ಟು ದಿವಸಗಳಲ್ಲಿ ಅಂದರೆ ನಾನು ಏನು 17ನೇ ತಾರೀಖು ಮುಖ್ಯಮಂತ್ರಿಯಾಗಿ ಪ್ರಮಾಣ ವಚನವನ್ನು ಸ್ವೀಕಾರಮಾಡಿದೆ ಅಂದಿನಿಂದ 15 ದಿವಸಗಳಲ್ಲಿ ನೀವು ಈ ಸದನದಲ್ಲಿ ಬಹುಮತವನ್ನು ಸಾಬೀತು ಮಾಡಬೇಕು, ಆ ತೀರ್ಪನ್ನು ಪಡೆಯಬೇಕು ಎನ್ನತಕ್ಕಂಥ ಷರತ್ತನ್ನು ಅಥವಾ ನಿಬಂಧನೆಯನ್ನು ಅವರು ಪ್ರಸ್ತಾಪಮಾಡಿ ಇಟ್ಟಿದ್ದರಿಂದ ಇವತ್ತಿನ ದಿವಸ ಈ ಸದನವನ್ನು ಕರೆಯಬೇಕಾಯಿತು. ಇಲ್ಲದಿದ್ದರೆ ತತ್‌ಕ್ಷಣ ಸದನವನ್ನು ಕರೆಯತಕ್ಕಂಥ ವಿಚಾರ ಕೂಡ ಇರಲಿಲ್ಲ. ಆದರೆ ಮುಂದೆ ಕಾನೂನು ಬದ್ಧವಾಗಿ ಸದನವನ್ನು ಕರೆಯತಕ್ಕಂಥಾದ್ದು ನಮ್ಮ ಮೇಲೆ ಜವಾಬ್ದಾರಿ ಇದೆ. ಅನೇಕ ವಿಚಾರಗಳನ್ನು ಈ ಸದನದಲ್ಲಿ ಚರ್ಚೆ ಮಾಡಬೇಕು, ಅನೇಕ ವಿಚಾರಗಳನ್ನು ನಾವು ತಮ್ಮ ಮುಂದೆ ಇಡಬೇಕು. ಅದೆಲ್ಲ ಒಳ್ಳೆಯ ಕೆಲಸವೆಂದು ಭಾವಿಸಿದ್ದೇನೆ. ಅದರಲ್ಲಿ ಏನಾದರೂ ಹೆಚ್ಚು ಕಡಿಮೆಯಾದರೆ ನಾವು ನಿಮ್ಮ ಮಾತಿನ ಮುಖಾಂತರ, ನಿಮ್ಮ ಮಾರ್ಗದರ್ಶನವನ್ನು ಕೂಡ ಕೇಳುತ್ತಿದ್ದೆವು. ಸ್ಪಷ್ಟವಾಗಿ ನಮ್ಮ ಮಂತ್ರಿಮಂಡಲಕ್ಕಾಗಿ ಈ ಮಾತನ್ನು ಪದೇ ಪದೇ ಹೇಳುತ್ತಿದ್ದೇನೆ. ವಿರೋಧಪಕ್ಷದಲ್ಲಿ ತಾವು ಕುಳಿತಿದ್ದೀರಿ ಎನ್ನುವ ಒಂದು ಕಾರಣದಿಂದ ಏನಾದರು ಮಾಡಿ ವಿರೋಧ ಮಾಡಬೇಕು ಎನ್ನುವ ವಿಚಾರವನ್ನು ನಾನು ಒಪ್ಪುವುದಿಲ್ಲ. ನಿಮ್ಮ ಮಾರ್ಗದರ್ಶನ ಸದಾ ಬೇಕು. ಏತಕ್ಕೆಂದರೆ ತಮ್ಮಲ್ಲಿ ಅನೇಕ ಜನ ಸಚಿವರಾಗಿದ್ದವರು ಇದ್ದೀರಿ. ಈ ಕಡೆಯಲ್ಲೂ ಇದ್ದಾರೆ. ಆ ಕಡೆಯಲ್ಲೂ ಇದ್ದಾರೆ. ಇವತ್ತು ನಾವೆಲ್ಲರೂ ಕೂಡ ಎಲ್ಲ ವಿಚಾರಗಳನ್ನು ತಿಳಿದುಕೊಂಡಿರುತ್ತೇವೆನ್ನುವ ಭಾವನೆ ಬೇಡ. ನಾನು ಕೂಡ ಸುಮಾರು 24 ವರ್ಷಗಳಿಂದ ಅಂದರೆ 1967ರಿಂದ ಈ ಸದನದ ಸದಸ್ಯನಾಗಿದ್ದೇನೆ. ನಾನು ಎಲ್ಲವನ್ನು ತಿಳಿದುಕೊಂಡಿರುತ್ತೇನೆ ಎನ್ನುವ ಮಾತನ್ನು ಎಂದೂ ಕೂಡ ಆಡಿಲ್ಲ, ಮುಂದೆ ಕೂಡ ಆಡಲಾರೆ. ಆ ಹಕ್ಕು ನನಗಿದೆ ಎಂದು ಭಾವಿಸುತ್ತೇನೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಮ್ಮ ಕರ್ತವ್ಯದಲ್ಲಿ ಕೆಲವೊಮ್ಮೆ ಲೋಪ ಬಂದು ಬಿಡುತ್ತದೆ. ಅದು ಗೊತ್ತಿದ್ದೋ ಗೊತ್ತಿಲ್ಲದೆಯೋ ಬಂದು ಬಿಡುತ್ತದೆ. ಗೊತ್ತಿದ್ದೂ ಮಾಡಿದರೆ ಅದರಂಥ ಅನ್ಯಾಯ ಇನ್ನಾವುದೂ ಇಲ್ಲ. ಗೊತ್ತಿಲ್ಲದೆ ಮಾಡಿದರೆ ಆ ಒಂದು ಹೊಣೆಗಾರಿಕೆಯನ್ನು ನಾವು ಹೊರಲೇಬೇಕಾಗುತ್ತದೆ. ಮತ್ತು ಅದನ್ನು ನಾವು ನಿರ್ವಹಣೆ ಮಾಡಲೇಬೇಕಾಗುತ್ತದೆ. ಅದು ಆಗದಹಾಗೆ ನೋಡಿಕೊಳ್ಳತಕ್ಕಂಥ ವಿಚಾರದಲ್ಲಿ ತಮ್ಮ ಸಂಪೂರ್ಣ ಸಹಕಾರವನ್ನು ತಮ್ಮದು ಅಂದರೆ ಬರೀ ನಮ್ಮ ಕಡೆ ಕುಳಿತಿರತಕ್ಕಂಥವರನ್ನಷ್ಟೇ ಅಲ್ಲ ಆ ಕಡೆ ಕುಳಿತಿರತಕ್ಕಂಥವರನ್ನು ಕೂಡ ಕೇಳುತ್ತೇನೆ. ನಾನು ಕೇಳುತ್ತೇನೆ. ಸಂವಿಧಾನಬದ್ಧವಾಗಿ No political party is recognised in this august House at all. ಯಾವುದೇ ರಾಜಕೀಯ ಪಕ್ಷವನ್ನು ಈ ಸದನ ಮಾನ್ಯತೆ ಮಾಡಿಲ್ಲ. ಇಲ್ಲಿ ಅಷ್ಟೇ ಅಲ್ಲ ಪಾರ್ಲಿಮೆಂಟ್‌ನಲ್ಲಿಯೂ ಕೂಡ ಮಾಡಿಲ್ಲ. ಗ್ರೂಪ್ ಆಫ್ ಇಂಡಿವಿಜಯಲ್ಸ್‌ನ್ನು ಮಾನ್ಯತೆ ಮಾಡುತ್ತದೆ. ಅದೇ ಕಾನೂನಿನಲ್ಲಿರತಕ್ಕಂಥದ್ದು. ಇವತ್ತು ಪಕ್ಷವನ್ನು ನಾವು ಏತಕ್ಕೆ ಇಟ್ಟುಕೊಳ್ಳುತ್ತೇವೆಂದರೆ, ಗ್ರೂಪ್ ಅಂದುಬಿಟ್ಟರೆ ಅದಕ್ಕೆ ಒಂದು ಅರ್ಥ ಬರುವುದಿಲ್ಲವೆಂಬ ಉದ್ದೇಶದಿಂದ ನಾವು ರಾಜಕೀಯ ಪಕ್ಷದ ಹೆಸರನ್ನು ಇಟ್ಟು ಪ್ರಜಾಪ್ರಭುತ್ವಕ್ಕೆ ನಾವು ಬೆಲೆಯನ್ನು ಕಟ್ಟಬೇಕೆನ್ನುವ ದೃಷ್ಟಿಯಿಂದ ನಾವು ಚುನಾವಣೆಗೆ ಹೋಗುತ್ತೇವೆ. ಅದೇ ಪಕ್ಷದ ಹೆಸರನ್ನು ಕೂಡ ಇಲ್ಲಿ ನಮೂದು ಮಾಡುತ್ತೇವೆ. ಇದು ನಾವೂ ನಾವೆಲ್ಲರೂ ಸೇರಿ

ಒಪ್ಪಿಕೊಂಡಿರತಕ್ಕಂಥ ಒಂದು ಮೂಲಭೂತ ವ್ಯವಸ್ಥೆ. ಪೊಲಿಟಿಕಲ್ ಸಿಸ್ಟಮ್ ಇದು. ಇದನ್ನು ನಾವು ಒಪ್ಪಿಕೊಳ್ಳುತ್ತೇವೆ. ಈ ಮಾತನ್ನು ಪೂರ್ವಭಾವಿಯಾಗಿ ಅಧ್ಯಕ್ಷರ ಮುಖಾಂತರ ತಮ್ಮ ಗಮನಕ್ಕೆ ತಂದು ಮಾನ್ಯ ರಾಜ್ಯಪಾಲರು ಇಟ್ಟಿರತಕ್ಕಂಥ ಶರತ್ತು ಅದು ಅನಿವಾರ್ಯವಾಗಿತ್ತು ಎನ್ನುವ ಭಾವನೆ ನಾನು ಇಟ್ಟಿಲ್ಲ. ಆದರೂ ಕೂಡ ಅವರಿಗೆ ಏನನಿಸಿತೋ ಅದನ್ನು ಇಟ್ಟರು. ಆ ಉದ್ದೇಶಕ್ಕಾಗಿ ನಾವು ಈ ಸದನವನ್ನು ಕರೆದಿದ್ದೇವೆ.

ಮಾನ್ಯ ಸಭಾಧ್ಯಕ್ಷರೆ, ನಾನು ಈ ಸದನದ ಮಾನ್ಯ ಸದಸ್ಯರಲ್ಲಿ ವಿನಂತಿಸಿಕೊಳ್ಳುತ್ತೇನೆ. ವಿಶ್ವಾಸಮತ ಕೇಳತಕ್ಕದ್ದು ನಮಗೆ ಒಬ್ಬರಿಗೆ ಅಲ್ಲ, ಎಲ್ಲಾ ಪಕ್ಷಗಳಲ್ಲೂ ಅದು ಇದೆ. ಶ್ರೀ ವಿ.ಪಿ.ಸಿಂಗ್‌ರವರೂ ಕೂಡ ನೇ ತಾರೀಖು ವಿಶ್ವಾಸಮತನ್ನು ಕೇಳುವವರಿದ್ದಾರೆ. ಅದರ ಮೇಲೆ ವ್ಯಾಖ್ಯಾನ ಮಾಡುವುದಕ್ಕೆ ನನಗೆ ಇಚ್ಚೆ ಇಲ್ಲ. ಅವರಿಗೆ ಏನು ಕಾನೂನು ಇದೆಯೋ ನಮಗೂ ಅದೇ ಕಾನೂನು ಇದೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ತಂದೆ. ನಾವು ವಿಶ್ವಾಸ ಮತವನ್ನು ಕೇಳದಿದ್ದರೆ ಯಾರ್ಯಾರಿಗೆ ಮತ ಹಾಕುತ್ತಿದ್ದರು ಎಂಬುದನ್ನು ನೋಡಬಹುದಿತ್ತು ಎಂಬ ತಮ್ಮ ಅನಿಸಿಕೆ, ಆ ರೀತಿ ತಮ್ಮ ಮನಸ್ಸಿನಲ್ಲಿ ಬರಬಾರದೆಂದು ಈ ನಿರ್ಣಯದಲ್ಲಿ ಸೇರಿಸಿದ್ದೇನೆ. ಮತ ಕೊಡುವುದು ಬಿಡುವುದು ತಮಗೆ ಬಿಟ್ಟಿರತಕ್ಕ ವಿಚಾರ. ಈ ಸಂದರ್ಭದಲ್ಲಿ ಈ ಸದನದಲ್ಲಿ ಕುಳಿತಿರತಕ್ಕ ನಮ್ಮ ಪಕ್ಷದ ಮಾನ್ಯ ಸದಸ್ಯರಲ್ಲಿ ಈ ನಿರ್ಣಯಕ್ಕೆ ಬೆಂಬಲ ಕೊಡಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ. ಅದೇ ರೀತಿ, ಇಲ್ಲಿ ಬೇರೆ ಬೇರೆ ರಾಜಕೀಯ ಪಕ್ಷಗಳು ಇವೆ. ಮುಸ್ಲಿಂ ಲೀಗಿನ ಸದಸ್ಯರು ಇದ್ದಾರೆ, ಎ.ಡಿ.ಎಂ.ಕೆ. ಸದಸ್ಯರಾದ ಭಕ್ತವತ್ಸಲಂ ಇದ್ದಾರೆ, ಬಿ.ಜೆ.ಪಿ. ಸದಸ್ಯರು ಇದ್ದಾರೆ, ಅಸೋಸಿಯೇಟ್ ಮೆಂಬರ್ಸ್ ಇದ್ದಾರೆ, ಸ್ವತಂತ್ರವಾಗಿ ಗೆದ್ದುಬಂದಿರತಕ್ಕ ಅಭ್ಯರ್ಥಿಗಳು ಇದ್ದಾರೆ, ಜನತಾ ಪಕ್ಷದ ಸದಸ್ಯರು ಮಾನ್ಯ ಬೈರೇಗೌಡರ ನಾಯಕತ್ವದಲ್ಲಿ ಇದ್ದಾರೆ, ಮಾನ್ಯ ಚಂದ್ರೇಗೌಡರ ನಾಯಕತ್ವದಲ್ಲಿ ಜನತಾ ದಳದ ಸದಸ್ಯರು ಆಸೀನರೂಢರಾಗಿದ್ದಾರೆ. ರೈತಸಂಘದ ಹಿರಿಯರಾದ ಪ್ರೊ: ನಂಜುಂಡಸ್ವಾಮಿಯವರು, ಬಾಬುಗೌಡ ಪಾಟೀಲರು ಇದ್ದಾರೆ. ಇವರೆಲ್ಲರನ್ನು ನಾನು ನನಗೆ ವಿಶ್ವಾಸ ಮತ ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಯಾರಾನ್ನಾದರೂ ಬಿಟ್ಟಿದ್ದರೆ ಕ್ಷಮಿಸಬೇಕು.

ಒಬ್ಬ ಮಾನ್ಯ ಸದಸ್ಯರು:- ವಾಟಾಳ್ ನಾಗರಾಜ್ ಅವರನ್ನು ಕೇಳಲಿಲ್ಲವಲ್ಲ.

ಶ್ರೀ ಎಸ್. ಬಂಗಾರಪ್ಪ:- ನನಗೆ ಗೊತ್ತಿತ್ತು. ಅವರ ಬಗ್ಗೆ ಸ್ಪೆಶಲ್ ಆಗಿ ಹೇಳಬೇಕೆಂದು ಇದ್ದೆ. ವಾಟಾಳ್‌ನಾಗರಾಜ್ ಅವರು ಇಲ್ಲಿ ಕುಳಿತಿದ್ದಾರೆಂಬುದನ್ನು ನಾನು ಮರೆಯುತಕ್ಕವನಲ್ಲ. ಅವರ ಗಮನಕ್ಕೆ ನಾನು ಈ ವಿಚಾರವನ್ನು ಸ್ಪೆಶಲ್ ಆಗಿ ತಂದು ಮಾನ್ಯ ಅಧ್ಯಕ್ಷರ ಅಪ್ಪಣೆ ಪಡೆದು ಅವರಲ್ಲಿ ನಾನು ನಮ್ರವಾಗಿ ಮತ್ತು ವಿನಯಪೂರ್ವಕವಾಗಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಬಹುಮತ ಇದೆ ಎಂಬ ಪ್ರಶ್ನೆ ಒಂದು ಕಡೆ ಇರಲಿ. ಈ ಸದನದಲ್ಲಿ ಈ ನಿರ್ಣಯಕ್ಕೆ ಯಾವುದೇ ವಿರೋಧ ಬಂದಿಲ್ಲ ಎಂಬ ಅಂಶ ಬಂದರೆ ಒಳ್ಳೆಯದು. ನಿಜ ಹೇಳಬೇಕೆಂದರೆ, ನೀವು ವಿರೋಧ ಮಾಡುವುದಾದರೆ ಮಾಡಿ. ವಿರೋಧ ಮಾಡಿದರೂ ನಾವು ನಂಬಿಕೆಗೆ ತೆಗೆದುಕೊಂಡು ಹೋಗುವ ಕೆಲಸ ಮಾಡುತ್ತೇವೆ. ವಿರೋಧ ಮಾಡುವುದಕ್ಕೆ ತಮಗೆ ಹಕ್ಕು ಇದೆ. ಅದನ್ನು ಮರೆಯತಕ್ಕ ರಾಜಕಾರಣಿ ನಾನು ಅಲ್ಲ.

ಶ್ರೀ ವಾಟಾಳ್‌ನಾಗರಾಜ್:- ಎಂ.ಇ.ಎಸ್.ನವರನ್ನು ಮರೆತಿದ್ದೀರಿ, ಅವರನ್ನು ಸೇರಿಸಿಕೊಂಡಿದ್ದರೆ ಆಗುತ್ತಿತ್ತಲ್ಲವೆ?

ಶ್ರೀ ಎಸ್. ಬಂಗಾರಪ್ಪ:- ಕ್ಷಮಿಸಬೇಕು, ಎಂ.ಇ.ಎಸ್.ನವರಲ್ಲೂ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಆದರಲ್ಲೂ ಕೂಡ ಕನ್ನಡದ ಹುಟ್ಟು ಹೋರಾಟಗಾರರಾದ ಶ್ರೀ ವಾಟಾಳ್ ನಾಗರಾಜ್ ಅವರು ಎಂ.ಇ.ಎಸ್.ನವರ ವಿಚಾರ ಪ್ರಸ್ತಾಪ ಮಾಡುವುದರಲ್ಲಿ ಅರ್ಥವಿದೆ ಎಂದು ಪ್ರಸ್ತಾಪ ಮಾಡಿ, ಎಂ.ಇ.ಎಸ್. ಸದಸ್ಯರಲ್ಲಿ ವಿನಂತಿಸುತ್ತಾ, ವಿರೋಧ ಮಾಡಬೇಕೆಂಬುವವರಿಗೆ ನಾನು ವಿರೋಧ ಮಾಡಬೇಡಿ ಎಂದು ಅಡ್ಡಿ ಬರುವುದಿಲ್ಲ. ಆದರೆ ಯಾರೂ ವಿರೋಧ ಮಾಡದೆ ಈ ನಿರ್ಣಯ ಈ ಸದನದಲ್ಲಿ ಸರ್ವಾನುಮತದಿಂದ ಪಾಸ್ ಆಗುವುದಕ್ಕೆ ಒಳ್ಳೆಯ ವಾತಾವರಣ ವನ್ನು ತಾವೆಲ್ಲಾ ಸೃಷ್ಟಿಮಾಡಿಕೊಡಬೇಕೆಂದು ಮಾನ್ಯ ಸಭಾಧ್ಯಕ್ಷರ ಮೂಲಕ ಇಲ್ಲಿ ಕುಳಿತಿರತಕ್ಕ ಎಲ್ಲಾ

ಪಕ್ಷಗಳ ಸದಸ್ಯರಲ್ಲಿ ಹಾಗೂ ಸ್ವತಂತ್ರವಾಗಿರತಕ್ಕ ಮಾನ್ಯ ಸದಸ್ಯರೆಲ್ಲರಲ್ಲಿ, ಈ ಕಡೆ ಆ ಕಡೆ ಕುಳಿತಿರತಕ್ಕ ಸದಸ್ಯರೆಲ್ಲರಲ್ಲಿ ವಿನಂತಿಸಿಕೊಳ್ಳುತ್ತೇನೆ. ಇಷ್ಟು ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಪ್ರಜಾಪ್ರಭುತ್ವವನ್ನು ಮತ್ತೊಮ್ಮೆ ಎತ್ತಿಹಿಡಿಯೋಣ. ಸತ್‌ಸಂಪ್ರದಾಯವನ್ನು ಎತ್ತಿ ಹಿಡಿಯೋಣ, ಸದನದ ಗೌರವವನ್ನು ಎತ್ತಿಹಿಡಿಯೋಣ, ಕರ್ನಾಟಕ ರಾಜ್ಯದ ಕೀರ್ತಿಯನ್ನು ಎತ್ತಿಹಿಡಿದು ಈ ಸದನಕ್ಕೆ ಅತ್ಯಂತ ಗೌರವ ತಂದುಕೊಟ್ಟು ಯಾವುದೇ ಸಂದರ್ಭದಲ್ಲಿ ಕೂಡ ನಾವು ಸಂಯತೆಯನ್ನು ಕಳೆದುಕೊಳ್ಳದೆ ಮಾತುಕತೆ ಮುಖಾಂತರ, ಚರ್ಚೆಯ ಮುಖಾಂತರ ಸಮಸ್ಯೆಗಳನ್ನು ಪರಿಹಾರ ಮಾಡಿಕೊಳ್ಳೋಣ. ನಿಮ್ಮಿಂದ ಕಠೋರವಾಗಿರತಕ್ಕ ಟೀಕೆ ಟಿಪ್ಪಣಿಗಳು ಬಂದಾಗ ನಾವು ಅಷ್ಟೇ ಸೌಜನ್ಯದಿಂದ ಸ್ವೀಕಾರ ಮಾಡತಕ್ಕ ಮನೋಭೂಮಿಕೆ ಈ ಕಡೆ ಸಿದ್ಧವಾಗಿದೆ ಎಂಬ ಅಂಶವನ್ನು ಮತ್ತೊಮ್ಮೆ, ತಮ್ಮ ಗಮನಕ್ಕೆ ಈ ಸಂದರ್ಭದಲ್ಲಿ ತರುತ್ತಿದ್ದೇನೆ. ಆದರೆ ಅದು ಕನ್‌ಸ್ಟ್ರಕ್ಟೀವಾಗಿ ಬರಲಿ ಎಂದು ಆಸೆ. ಆ ರೀತಿ ಮಾಡತಕ್ಕ ಸ್ವಶಕ್ತಿ ನಿಮ್ಮಲ್ಲಿದೆ ಎನ್ನತಕ್ಕ ಅಂಶ ಕೂಡ ಹೇಳಿ ಅತ್ಯಂತ ಗೌರವದಿಂದ ನಾನು ತಾವೆಲ್ಲರೂ ಸೇರಿ ಬೆಂಬಲ ಕೊಟ್ಟು ಈ ನಿರ್ಣಯ ಸರ್ವಾನುಮತದಿಂದ ಪಾಸಾಗುವುದಕ್ಕೆ ಅನುವು ಮಾಡಿಕೊಡಬೇಕೆಂದು ಈ ಬೇಡಿಕೆಯನ್ನು ಈ ಸದನದ ಮುಂದೆ ಅಧ್ಯಕ್ಷರ ಮುಖಾಂತರ ಇಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

† ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧಪಕ್ಷದ ನಾಯಕರು) :- ಸನ್ಮಾನ್ಯ ಸಭಾಧ್ಯಕ್ಷರೆ, ಈ ವಿಶ್ವಾಸಮತದ ಯಾಚನೆ ಮೊದಲನೇ ಬಾರಿಗೆ ಈ ಸಭೆಯಲ್ಲಿ ಬರುತ್ತಿಲ್ಲ. ಹಿಂದೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಾಗ 1984ನೇ ಇಸವಿ ಜನವರಿ ತಿಂಗಳಲ್ಲಿ ಮೊದಲಬಾರಿಗೆ ಇಂಥ ಒಂದು ಪ್ರಸ್ತಾಪ ಈ ಸದನದಲ್ಲಿ ಬಂತು. ಈಗ ಎರಡನೇ ಬಾರಿಗೆ ಇಂಥ ವಿಶ್ವಾಸಮತವನ್ನು ಶ್ರೀಮಾನ್ ಬಂಗಾರಪ್ಪನವರು ಯಾಚನೆ ಮಾಡಿದ್ದಾರೆ. ಒಂದು ವ್ಯತ್ಯಾಸ ಏನೆಂದರೆ, ಆಗ ತಾನೇನು, ತನ್ನ ಸ್ಥಾನ ಏನು, ತನ್ನ ಸ್ಥಿತಿ ಏನು ಎಂಬುದನ್ನು ತಿಳಿದುಕೊಳ್ಳಬೇಕು ಎಂದು ಸ್ವಯಂಪ್ರೇರಣೆಯಿಂದ ಮಾಡಿದಂಥ ಒಂದು ಠರಾವು ಅದು. ಈಗ ರಾಜ್ಯಾಂಗದ ಅಧಿಪತಿ ರಾಜ್ಯಪಾಲರ ಆದೇಶದಂತೆ ಈ ಒಂದು ಠರಾವನ್ನು ಮಂಡನೆ ಮಾಡಿದ್ದೇವೆಂದು ಶ್ರೀಮಾನ್ ಬಂಗಾರಪ್ಪನವರು ಹೇಳಿದ್ದಾರೆ. ಈ ಸ್ಥಿತಿ ಏತಕ್ಕೆ ಬಂತು? ಇದನ್ನು ವಿಶ್ಲೇಷಣೆ ಮಾಡಲೇಬೇಕಾದ ಸ್ಥಿತಿಯಲ್ಲಿ ನಾನಿದ್ದೇನೆ. ಇದನ್ನು ವಿಶ್ಲೇಷಣೆ ಮಾಡುವಾಗ ರಾಜ್ಯದ ರಾಜಕೀಯ, ಕಾನೂನಿನ ಚೌಕಟ್ಟು ಮತ್ತು ರಾಜ್ಯಾಂಗದ ವಿಧಿವಿಧಾನಗಳನ್ನು ಸ್ವಲ್ಪ ಸೂಕ್ಷ್ಮವಾಗಿ ಪರ್ಯಾಲೋಚನೆ ಮಾಡಬೇಕಾಗುತ್ತದೆ. ಶ್ರೀಮಾನ್ ಬಂಗಾರಪ್ಪನವರು ಪ್ರಾರಂಭಿಕವಾಗಿ ಹೇಳಿದರು. ಅವರು ಹೇಳಿದ್ದನ್ನೇ .ನಾನು ಹೇಳುತ್ತೇನೆ. "ರಾಜ್ಯದಲ್ಲಿ ಏಕಪಕ್ಷೀಯ ಸರ್ಕಾರಕ್ಕಾಗಿ ಜನ ಅಣತಿ ಕೊಟ್ಟಿದ್ದಾರೆ, ಏಕಪಕ್ಷೀಯ ಸರ್ಕಾರವೇ ಸುಭದ್ರ, ಆ ಸರ್ಕಾರ ಸುಭದ್ರವಾಗಿರುತ್ತದೆ" ಎಂದು ಹೇಳಿದ್ದಾರೆ. ಆದ್ದರಿಂದ ಅಲ್ಲಿಂದಲೇ ಪ್ರಾರಂಭ ಮಾಡೋಣ. ಸಂಖ್ಯಾಬಲದಿಂದ ಆಡಳಿತದಲ್ಲಾಗಲೀ, ಸರ್ಕಾರದಲ್ಲಾಗಲೀ, ಸುಭದ್ರತೆ ಬರುವುದಿಲ್ಲ, ಸ್ಥಿರತೆ ಉಳಿಯುವುದಿಲ್ಲ ಎಂಬುದನ್ನು ಈ ಠರಾವು ಸಾಬೀತು ಮಾಡುತ್ತದೆ. ಒಂದು ಪಕ್ಷ ಅಧಿಕಾರದಲ್ಲಿ 178 ಜನ ಸದಸ್ಯರ ಸದಸ್ಯರನ್ನು ಆಯ್ಕೆ ಮಾಡಿ ಆ ಆಯ್ಕೆಯ ಯಜಮಾನಿಕೆಯನ್ನು ಹೊತ್ತಂಥ ಮನುಷ್ಯ ಅನಾರೋಗ್ಯದ ಕಾರಣ ನಾನು ಬರುವುದಕ್ಕೆ ಸಾಧ್ಯವಿಲ್ಲ ಎನ್ನುವಂಥ ಸ್ಥಿತಿಯಲ್ಲಿ ಕಾಗದ ಬರೆದು ಈ ಆನೆ ಶಕ್ತಿಗೆ ಆರೇಳು ಬಾಲಗಳು ಸೇರಿ 185-86 ಮಹಾ ಸಂಖ್ಯೆ ಸ್ಥಿರತೆಯನ್ನು ಕೊಡಲು ಸಾಧ್ಯವಾಗಲಿಲ್ಲ, ಆಡಳಿತದಲ್ಲಿ ಅಥವಾ ಒಂದು ರಾಜಕೀಯ ವ್ಯವಸ್ಥೆಯ ಸ್ಥಿರತೆ ಸಾಧ್ಯವಾಗಲಿಲ್ಲ ಎನ್ನತಕ್ಕಂಥ ಸತ್ಯವನ್ನು ಇಲ್ಲಿ ನಾವು ನೋಡುತ್ತೇವೆ. ಮಾನ್ಯ ಅಧ್ಯಕ್ಷರೆ, ಏತಕ್ಕೆ ಈ ಅಸ್ಥಿರತೆ? ಮಂತ್ರಿಮಂಡಲದ ಸದಸ್ಯರನ್ನು ಪರಿಚಯ ಮಾಡಿಕೊಟ್ಟು, ನಾನು ಅದಕ್ಕಾಗಿಯೇ ಕೌನ್ಸಿಲ್ ಆಫ್ ಮಿನಿಸ್ಟ್ರಿ ಗೊತ್ತಾಗಲಿ ಎಂದು, ಏತಕ್ಕೆ ಹೇಳಿದೆ ಎಂದರೆ, ಎಲ್ಲಾ ಜಂಟಿ ಜವಾಬ್ದಾರಿ ಶ್ರೀಮತಿ ನಾಗರತ್ನಮ್ಮನವರನ್ನು ಹೊರತುಪಡಿಸಿ ಹೊಂದಿದ್ದರು. ಆ ಜವಾಬ್ದಾರಿಯನ್ನು ಇವರು ಎಷ್ಟರಮಟ್ಟಿಗೆ ನಿರ್ವಹಿಸಿದ್ದಾರೆ ಎಂಬ ಕಾರಣದಿಂದ ಮಂತ್ರಿಗಳ ಪರಿಚಯ ಈ ಸದನಕ್ಕೆ ಆಗಬೇಕು.ಆಗ ಜವಾಬ್ದಾರಿಯನ್ನು ನಿರ್ವಹಿಸುವುದರಲ್ಲಿ ವಿಫಲರಾಗಿದ್ದರೆ ಪುನಃ ಅವರ ಮೇಲೆ ಈ ಹೊರೆಯನ್ನು ಹೊರಿಸಿ ರಾಜ್ಯದ ಜನ ನಂಬಿಕೆಯನ್ನು

ವ್ಯಕ್ತ ಮಾಡುವುದು, ಈ ಸದನ ನಂಬಿಕೆ ವ್ಯಕ್ತ ಮಾಡುವುದು ಸಾಧ್ಯವೇ ಎನ್ನುವ ಮೂಲ ಪ್ರಶ್ನೆಯನ್ನು ನಾನು ಸದನದ ಮುಖಾಂತರ ಸದಸ್ಯರನ್ನು ಕೇಳುವುದಕ್ಕೆ ಬಯಸುತ್ತೇನೆ. ಯಾರು ಪ್ರಾರಂಭ ಮಾಡಿದರು? ಎಲ್ಲಿಂದ ಪ್ರಾರಂಭವಾಯಿತು? ನಾವು ಕೇಳಿಲ್ಲ. ನಿಮ್ಮ ವಿರುದ್ಧ ಅವಿಶ್ವಾಸ ನಿರ್ಣಯವನ್ನು ನಾವು ಮಂಡನೆ ಮಾಡಲಿಲ್ಲ. ವಿಶ್ವಾಸಮತ ಕೊಡಿ ಎಂದು ಹೊರಗಡೆಯೂ ಕೇಳಲಿಲ್ಲ. ರಾಜ್ಯದ ರಾಜ್ಯಪಾಲರು ಕೇಳಿದ್ದಾರೆ. ಹಾಗಾದರೆ ಏನೋ ಶಂಕೆ ಇರಬೇಕು. ರಾಜ್ಯಪಾಲರಿಗೆ ಶಂಕೆ ಬಂದಿರಬಹುದು. ಈ ಶಂಕೆಗೆ ಕಾರಣ ಏನು? ಈ ಬಗ್ಗೆ ನಾವು ಈ ತಿಂಗಳ ಮೂರು ವಾರಗಳು ನಡೆದಂತಹ ಪ್ರಕ್ರಿಯೆಗಳಿಗೆ ಸ್ವಲ್ಪ ಹಿಂದೆ ಹೋಗಬೇಕಾಗುತ್ತದೆ. ಮೊದಲು ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿಯವರು, ಜವಾಬ್ದಾರಿಯುತ ಚುನಾಯಿತ ಸಂಸತ್ ಸದಸ್ಯರು, ಹಿರಿಯ ಮತ್ತು ಹಳೆಯ ಅನುಭವೀ ಕಾಂಗ್ರೆಸ್‌ನ ಮುಖಂಡರು ಕಳೆದ ತಿಂಗಳ 17ನೇ ತಾರೀಖು ಮೊದಲು ಪತ್ರಿಕಾ ಹೇಳಿಕೆಯನ್ನು ಕೊಟ್ಟರು. ಆ ಹೇಳಿಕೆಯಲ್ಲಿ ವಿಶೇಷವಾಗಿ ಪ್ರಸ್ತಾಪ ಮಾಡಿದ್ದು ಏನೆಂದರೆ, ಗುಂಪುಗಾರಿಕೆ, ಜಾತೀಯತೆ ಈ ಪ್ರವೃತ್ತಿಯನ್ನು ವೀರೇಂದ್ರಪಾಟೀಲರ ನೇತೃತ್ವದ ಕಾಂಗ್ರೆ ಸರ್ಕಾರ, ಈ ರಾಜ್ಯದಲ್ಲಿ ಮಾಡುತ್ತಿದೆ ಎನ್ನುವ ಆಪಾದನೆ ನಮ್ಮಿಂದ ಬಂದಿದ್ದು ಅಲ್ಲ. ಅದು ಬಂದದ್ದು ಅಖಿಲಭಾರತ ಕಾಂಗ್ರೆಸ್ ಸಂಸ್ಥೆಯ, ಆಳುವ ಪಕ್ಷದ ಮಹಾ ಪ್ರಧಾನ ಕಾರ್ಯದರ್ಶಿಯವರಿಂದ. ಆದುದರಿಂದ ಅದನ್ನು ನಾವು ನಂಬಬೇಕು. ಇಲ್ಲಿ ಜಾತೀಯತೆ ಇತ್ತು, ಸರ್ಕಾರ ಸರಿಯಾಗಿ ಕೆಲಸ ಮಾಡುತ್ತಾ ಇರಲಿಲ್ಲ ಎಂಬುದನ್ನು ನಂಬಬೇಕು. ಇದನ್ನು ನಂಬಬಹುದೆಂದಾರೆ, ಇದಕ್ಕೆ ಯಾರು ಕಾರಣರು? ವೀರೇಂದ್ರ ಪಾಟೀಲರು ಒಬ್ಬರೇ ಕಾರಣವೊ? ಅಥವಾ ಜಂಟೀ ಜವಾಬ್ದಾರಿ ಹೊತ್ತ ಎಲ್ಲರೂ ಕಾರಣರೋ? ಈ ಪ್ರಶ್ನೆಗೆ ನಾನು ಉತ್ತರವನ್ನು ಬಯಸುತ್ತೇನೆ. ಅವರು ಇಡೀ ಮಂತ್ರಿಮಂಡಲದ ಮೇಲೆ ಆಪಾದನೆ ಮಾಡಿದ್ದಾರೆ. ಕೊನೆಗೆ ಒಂದು ಮಾತನ್ನು ಹೇಳುತ್ತಾರೆ, ಸರ್ಕಾರ ಎರಡು ಜನರಿಗೆ ಸೀಮಿತವಾಗಿದೆ, ಎರಡು ಜನರ ಕೈಯಲ್ಲಿ ಇದೆ ಎಂದು. ಎಂದರೆ ಕಾಂಗ್ರೆಸ್‌ನ ಸರ್ಕಾರ ಅಲ್ಲ ಇದು, ಆದುದರಿಂದ ಏನು ಮಾಡಬೇಕು? ಅವರ ಕೈ ತಪ್ಪಿಸಬೇಕು. ಇದು ಕಾರಾಸ್ಥಾನ. ಅವರ ಪ್ರಕಾರ ಇಬ್ಬರ ಕೈಯ್ಯಲ್ಲಿ ಸರ್ಕಾರ ಇದೆ, ಅದನ್ನು ತಪ್ಪಿಸಬೇಕು. ಅಲ್ಲಿ ಪ್ರಾರಂಭವಾಯಿತು. ಕಾಂಗ್ರೆಸ್ ಪಕ್ಷದಲ್ಲಿ ತನ್ನ ನಾಯಕರಲ್ಲಿ ವಿಶ್ವಾಸ ಎನ್ನುವುದು ಇದ್ದರೆ ಇವತ್ತು ಮಂತ್ರಿಮಂಡಲದ ಸದಸ್ಯರನ್ನು ಪರಿಚಯ ಮಾಡಿಕೊಂಡೆವಲ್ಲಾ ಇವರಲ್ಲಿ ಶ್ರೀಮತಿ ನಾಗರತ್ನಮ್ಮನವರನ್ನು ಹೊರತುಪಡಿಸಿ ಉಳಿದವರ ಜಂಟಿ ಜವಾಬ್ದಾರಿ ಏನು? ಅವರು ಪುನಃ ಮಂತ್ರಿಗಳಾಗುವುದಕ್ಕೆ ಪಕ್ಷದ ಆದೇಶ ಇದೆಯೆ? ಒಪ್ಪುತ್ತಾರೆಯೇ? ಈ ದೇಶದ ಜನರು ಒಪ್ಪಬೇಕೇ? ನಾವು ಒಪ್ಪಬೇಕೇ? ಜಂಟಿ ಜವಾಬ್ದಾರಿ ಎಲ್ಲ ಎನ್ನುವುದಾದರೆ ವೀರೇಂದ್ರ ಪಾಟೀಲರು ಒಬ್ಬರೇ ಹೊಣೆಗಾರರು ಎನ್ನುವುದನ್ನಾದರೂ ಕೂಡಾ ಅವರು ಒಪ್ಪಿಕೊಳ್ಳಬೇಕು. ಹಾಗಿದ್ದರೆ ಮುಂದೆ ಶ್ರೀಮಾನ್ ಬಂಗಾರಪ್ಪನವರ ನಾಯಕತ್ವದ ಮಂತ್ರಿಮಂಡಲದಲ್ಲಿ ಉಳಿದವರ ಮೇಲೆ ಜವಾಬ್ದಾರಿ ಇಲ್ಲ. ಅವರು ಅಷ್ಟೇ ಜವಾಬ್ದಾರರು. ಈ ಸಿದ್ಧಾಂತಕ್ಕೆ ನಾವು ಬರಬೇಕಾಗುತ್ತದೆ. ಸೆಪ್ಟೆಂಬರ್ 17ರಂದು ಪ್ರಾರಂಭ ಮಾಡಿ 18ನೇ ತಾರೀಖು ಪ್ರಜಾವಾಣಿ ಪತ್ರಿಕೆಯಲ್ಲಿ ಮೊದಲು ಬಂತಲ್ಲಾ ಅಲ್ಲಿಂದ ಮುಂದೆ ನಡೆದ ಪ್ರಕ್ರಿಯೆ ಏನು? ಅದರ ಹಿಂದಕ್ಕೆ ಹೋಗುವುದಾದರೆ ಒಟ್ಟು ಕಾಂಗ್ರೆಸ್ ಪಕ್ಷದಲ್ಲಿ ನಿಷ್ಠೆ ಪ್ರಶ್ನೆ ಇದೆ. ರಾಜ್ಯದ ಜನತೆ ಯಾರ ನಿಷ್ಠರು ಎಂದು ಅಲ್ಲ. ಈ ರಾಜ್ಯದ ಸಂಪನ್ಮೂಲಗಳ ಕ್ರೋಢೀಕರಣದ ನಿಷ್ಠೆಯಲ್ಲ. ಈ ದೇಶದ ಜನತೆಗೆ ವೀರೇಂದ್ರಪಾಟೀಲರ ನೇತೃತ್ವದಲ್ಲಿ ಸರ್ಕಾರ ರಚನೆ ಮಾಡುತ್ತೇವೆಂದು ಮಾತು ಕೊಟ್ಟಿದ್ದ ನಿಷ್ಠೆಯಲ್ಲ. ರಾಜೀವ್ ಗಾಂಧಿಯವರಿಗೆ ಯಾರು ನಿಷ್ಠರು ಎನ್ನುವುದು ಪ್ರಶ್ನೆ. ಶ್ರೀಮಾನ್ ವೀರೇಂದ್ರಪಾಟೀಲರು ಅಥವಾ ಶರದ್‌ಪವಾರ್‌ರವರು ಇಲ್ಲವೇ, ಆಂಧ್ರಪ್ರದೇಶದ ಡಾಃ ಚೆನ್ನಾರೆಡ್ಡಿಯವರು ನಿಷ್ಠರಾಗಲಿಲ್ಲವೆಂದರೆ, ಅದರಿಂದ ಏನು ಮಾಡಬೇಕು? ಯಾರನ್ನಾದರೂ ನಿಷ್ಠರನ್ನು ಹುಡುಕಿ ತರಬೇಕು. ಅದರಿಂದ ವೀರೇಂದ್ರಪಾಟೀಲರನ್ನು ಬದಲಾವಣೆ ಮಾಡಬೇಕು. ಅದು ಹೇಗೆ ಸಾಧ್ಯ? ಅದನ್ನು ಮಾಡುವುದಿಲ್ಲ, ಅದಕ್ಕೊಂದು ಕಾರಸ್ಥಾನ. ಇದನ್ನು ಸೆಪ್ಟೆಂಬರ್ 17ನೇ ತಾರೀಖು ಬೆಂಗಳೂರಿನಲ್ಲಿ ಕಾಂಗ್ರೆಸ್ ಪಕ್ಷದಿಂದ ಹುಟ್ಟು ಹಾಕಿದರು. ಈ ಹಿಂದೆ ಮೂರು ಜನ ಕಾಂಗ್ರೆಸ್ಸಿನ ಮುಖ್ಯಮಂತ್ರಿಗಳು

ತಿರುಪತಿಯಲ್ಲಿ ಸಭೆ ನಡೆಸಿದ್ದರು. ಬೆಂಗಳೂರಿನಲ್ಲಿ ಸಭೆ ನಡೆಸಿದ್ದರು. ನಂತರ ಮೈಸೂರಿನಲ್ಲಿ ಸಭೆ ನಡೆಸಿದ್ದರು. ಮುಂದೆ ಮಹಾಬಲೇಶ್ವರದಲ್ಲಿ ಸಭೆ ನಡೆಸುವುದಕ್ಕೆ ಸ್ಥಳವನ್ನು ಆಯ್ಕೆ ಮಾಡಿದ್ದರು. ಅದರ ಬಗ್ಗೆ ಪತ್ರಕರ್ತರು ನನಗೆ ಒಂದು ಮಾತು ಕೇಳಿದರು. ಈ ಮೂರು ಜನ ಸೇರಿದ್ದರು. ಆ ಬಗ್ಗೆ ನಿಮ್ಮ ಅಭಿಪ್ರಾಯವೇನು ಎಂದು ಪತ್ರಕರ್ತರು ನನ್ನನ್ನು ಕೇಳಿದರು. ಅವರು ಏತಕ್ಕೆ ಸಭೆ ಸೇರಿದ್ದಾರೆಂದು ನನಗೆ ಗೊತ್ತಾದರೆ, ನನ್ನ ಪ್ರತಿಕ್ರಿಯೆಯನ್ನು ವ್ಯಕ್ತ ಮಾಡುತ್ತೇನೆಂದು ಹೇಳಿದೆ. ಪಾಪ ಅವರು ಕೃಷ್ಣಾ, ಕಾವೇರಿ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಸಭೆ ಸೇರಿದ್ದರು. ಶಂಕೆ ಎಲ್ಲಿ ಬಂತು? ನಿಷ್ಠೆಯಿಂದ ಬಂತು. ಈ ನಿಷ್ಠೆಯನ್ನು ಎಲ್ಲಿಯಾದರೂ ಒಂದು ಕಡೆ ಪರೀಕ್ಷೆ ಮಾಡತಕ್ಕ ಪ್ರಯತ್ನ ನಡೆಯಬೇಕು. ಕರ್ನಾಟಕದಲ್ಲಿ ದುರ್ದೈವ, ವೀರೇಂದ್ರಪಾಟೀಲರಿಗೆ ಪಾರ್ಶ್ವವಾಯು ಹೊಡೆದ ನೆಪ ಸಿಕ್ಕಿತು. ಆಗ ನಿಷ್ಠೆಯ ಪ್ರಶ್ನೆ ಉದ್ಭವವಾಯಿತು. ಈ ದೇಶದ ಪ್ರಧಾನಮಂತ್ರಿಯಾಗಿದ್ದಂತಹವರು ಒಂದು ಶತಮಾನದಷ್ಟು ಇತಿಹಾಸ ಇರತಕ್ಕ ಕಾಂಗ್ರೆಸ್ ಪಕ್ಷದ ರೂವಾರಿ ರಾಜ್ಯದಲ್ಲಿ ನಡೆದಿರತಕ್ಕ ಮತೀಯ ಗಲಭೆಗಳ ದರ್ಶನಕ್ಕೆ ಬಂದು ರಾಜಕೀಯ ಮಾಡತಕ್ಕ ಸ್ಥಿತಿಗೆ ಹೋದರೆ ಯಾರ ಮೇಲೆ ವಿಶ್ವಾಸ ಇಡುವುದು?

(ಗೊಂದಲ)

† ಶ್ರೀ ಡಿ.ಬಿ. ಚಂದ್ರೇಗೌಡ:- ಆ ಕಾರಣ ನಿಷ್ಠೆ. ಇವತ್ತು ಅದಕ್ಕಾಗಿಯೇ ಈ ವಿಶ್ವಾಸ ಮತ ಇದೆಯಲ್ಲ. ಇದು ನಿಮ್ಮ ಪಾಪಾದ ಶಿಶು. ಅದನ್ನು ನಿಮ್ಮ ತೊಡೆಯ ಮೇಲಿಟ್ಟು ಲಾಲನೆ ಮಾಡಿ, ಪಾಲನೆ ಮಾಡಿ ಆದರೆ ಒಂದು ಮಾತು, ಕಾಂಗ್ರೆಸ್ಸಿನ ನಾಯಿನಿಷ್ಠೆ** ಸದಸ್ಯರಿದ್ದಾರಲ್ಲ, ತಪ್ಪು ತಿಳಿದುಕೊಳ್ಳಬೇಡಿ ** ಅಂದರೆ, Dog is the most faithfull animal. ನಿಷ್ಠೆಗೆ ಮತ್ತೊಂದು ಹೆಸರು ಇಲ್ಲ. ** ಇದೆಯಲ್ಲ, ಅಂತಹ ನಿಷ್ಠೆಯ ಪ್ರದರ್ಶನ..

ಶ್ರೀ ಗೋಪಾಲಮುಕುಂದ ಕಾನಡೆ:- ನೀವು ಮತ್ತೆ ಕತೆಯನ್ನು ಹೇಳುತ್ತಿದ್ದಿರಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು ಅದನ್ನೇ ಹೇಳುತ್ತಿದ್ದೇನೆ.

ಅಧ್ಯಕ್ಷರು:- ನಿಷ್ಠೆಯ ಬಗ್ಗೆ ವ್ಯಾಖ್ಯಾನವನ್ನು ಮಾಡುವಾಗ ನಾಯಿ ಬಿಟ್ಟು ಬಿಟ್ಟು ಬರೀ ನಿಷ್ಠೆಗೆ ಹೊರತುಪಡಿಸಿ.

(ಗೊಂದಲ)

ಶ್ರೀ ಡಿ.ಎ. ಚಿನ್ನಪ್ಪ:- ಮಾನ್ಯ ವಿರೋಧಪಕ್ಷದ ನಾಯಕರು ** ಎಂದು ಹೇಳಿದ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಅಧ್ಯಕ್ಷರು:- ನಾನು ಹೇಳುವವರೆಗೂ ನೀವು ಯಾರೂ ಅಬ್ಜೆಕ್ಷನ್ ತೆಗೆದುಕೊಳ್ಳಲಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಸುಂದರವಾದ ಕನ್ನಡ ಮಾತನಾಡುತ್ತಾರೆ. ಆದ್ದರಿಂದ ಅವರು ಸುಂದರವಾದ ಪದವನ್ನು ಉಪಯೋಗಿಸಬಹುದು.

ಶ್ರೀ ವಾಟಾಳ್ ನಾಗರಾಜ್:- ಸಿಂಡಿಕೇಟ್ ಬ್ಯಾಂಕಿನ ಗುರುತು ನಾಯಿಯ ಗುರುತು. ಆದ್ದರಿಂದ ತಪ್ಪೇನಿದೆ? ಇದರಲ್ಲಿ ತಪ್ಪೇನಿದೆ ಎಂದು ನನಗೆ ಅರ್ಥವಾಗುವುದಿಲ್ಲ.

ಅಧ್ಯಕ್ಷರು:- ಈಗ ನೀವೆಲ್ಲರೂ ಅಭಿಪ್ರಾಯ ಪಡುವುದಾದರೆ ಈ ಪದವನ್ನು ಉಪಯೋಗಿಸಬಹುದು ಅಂತ ಹೇಳಿ ಅದನ್ನು ಚಾಲೂ ಮಾಡೋಣ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ:- ನಾನು ಮಾನ್ಯ ವಿರೋಧ ಪಕ್ಷದ ನಾಯಕರನ್ನು ಕೇಳುವುದು ಇಷ್ಟೆ...

ಅಧ್ಯಕ್ಷರು:- ಮಾನ್ಯ ಜಾಲಪ್ಪನವರು ನನ್ನ ಲಕ್ಷ್ಯ ಸೆಳೆದಿದ್ದಾರೆ. ಅವರು ಮಾತನಾಡುತ್ತಾರೆ.

** ಅಧ್ಯಕ್ಷರ ಅಪ್ಪಣೆ ಮೇರೆಗೆ ಮೇಲಿನ ಪದವನ್ನು ತೆಗೆದುಹಾಕಲಾಗಿದೆ

ಶ್ರೀ ಆರ್.ಎಲ್. ಜಾಲಪ್ಪ:- ನಮ್ಮ ನಾಯಕರು ಏನು ಪದವನ್ನು ಹೇಳಿದ್ದಾರೆ ಅದಕ್ಕೆ ನನ್ನ ಆಕ್ಷೇಪವನ್ನು ವ್ಯಕ್ತಪಡಿಸುತ್ತಿದ್ದೇನೆ. ಕೆಲವರು ಕಾಂಗ್ರೆಸ್ಸಿಗರ ನಿಷ್ಠೆ ಪ್ರಶ್ನೆ ಬಂದಾಗ ** ಎಂದು ಹೇಳಿ ನಾಯಿಗೆ ರೆಫರ್ ಮಾಡಿ ಅದಕ್ಕೆ ಅವಮಾನ ಮಾಡುವುದು ಬೇಡ.

ಶ್ರೀ ಬಿ.ಎಂ. ಇದಿನಬ್ಬ:- ನಾಯಿ ನಿಷ್ಠೆ ಎಂದು ಹೇಳತಕ್ಕದ್ದು ಅನ್‌ಪಾರ್ಲಿಮೆಂಟರಿ. ಅದು ಸರಿಯಾದ ಶಬ್ದ ಅಲ್ಲ.

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಅಧ್ಯಕ್ಷರೇ, ಮಾನ್ಯ ಜಾಲಪ್ಪನವರು ಈ ಪದಕ್ಕೆ ಅತ್ಯಂತ ಹೆಚ್ಚಿನ ಗೌರವ ಕೊಟ್ಟು, ಅಂದರೆ, ನಾಯಿಯೇ ಸರ್ವಶ್ರೇಷ್ಠವಾದದ್ದು ಎನ್ನತಕ್ಕಂಥ ಮಟ್ಟಕ್ಕೆ ತೆಗೆದುಕೊಂಡುಹೋಗಿದ್ದೀರಲ್ಲ, ಆ ಮಟ್ಟದಲ್ಲಿ ತಾವೇ ಇರಿ. ನಾವು ಬೇಡವೆಂದು ಹೇಳುವುದಿಲ್ಲ.

(ಗೊಂದಲ)

ಶ್ರೀ ಬಿ.ಎಚ್. ಬನ್ನಿಕೋಡ್:- ಮಾನ್ಯ ಮುಖ್ಯಮಂತ್ರಿಗಳಿಗೆ ಈ ಪದ ಅನ್ವಯವಾಗುವುದಿಲ್ಲ. ಆ ನಿಷ್ಠೆ ತಮಗೆ ಅಲ್ಲ.

ಶ್ರೀ ಎಸ್. ಬಂಗಾರಪ್ಪ:- ಇಷ್ಟನ್ನು ನಾನು ಮಾನ್ಯ ವಿರೋಧ ಪಕ್ಷದ ನಾಯಕರನ್ನು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ನಿಷ್ಠೆ ಎಂದು ಹೇಳಬೇಕಾದರೆ ಬೇರೆ ಬೇರೆ ನಿಷ್ಠೆಗಳು ಇವೆ. ಅದು ಯಾವುದು ಎಂದು ವ್ಯಾಖ್ಯಾನ ಮಾಡಿದರೆ ಬಹಳ ಒಳ್ಳೆಯದು. ಏಕೆಂದರೆ ಅತ್ಯಂತ ನಿಷ್ಠೆ, ಅತ್ಯಂತ ಪ್ರೀತಿಪಾತ್ರರಾಗಿರತಕ್ಕಂಥಾದ್ದು, ಹೃದಯಾಂತರಾಳಕ್ಕೆ ಅತಿ ಹತ್ತಿರ ಹೋಗಿರತಕ್ಕಂಥವರು ಇತ್ಯಾದಿ ಇತ್ಯಾದಿ ಪದಪ್ರಯೋಗಗಳಿವೆ. ಕನ್ನಡ ಭಾಷೆಯನ್ನು ನಿರರ್ಗಳವಾಗಿ ಮಾತನಾಡತಕ್ಕಂಥ ತಮಗೆ ಈ ಪದಗಳ ಪ್ರಯೋಗ ಅಷ್ಟೊಂದು ಕೊರತೆ ಬೀಳಲಾರದೆಂದು ನಾನು ಭಾವಿಸಿದ್ದೇನೆ. ಮಾನ್ಯ ಸಭಾಧ್ಯಕ್ಷರೆ, ನಾನು ಋಣಿಯಾಗಿದ್ದೇನೆ. ನಾನು ಹೇಳಬೇಕೆನ್ನುವಷ್ಟರಲ್ಲಿ ತಾವೇ ಹೇಳಿದ್ದೀರಿ. ಸ್ವಲ್ಪ ಈ ಪದವನ್ನು ಕಳಚಿ ಬಿಟ್ಟುಬಿಟ್ಟರೆ ಬಹಳ ಒಳ್ಳೆಯದೆಂದು ನನ್ನ ಭಾವನೆ. ಇದು ಅಷ್ಟೊಂದು ಶೋಭೆ ತರಲಾರದು. ಇದನ್ನು ತಮಗೇ ಬಿಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು ಯಾವುದಾದರೂ ವಿಶೇಷಣಗಳನ್ನು ಹೇಳದೇ ಇದ್ದರೆ ಪೂರ್ಣ ನಿಷ್ಠೆಗೆ ಅರ್ಥ ಸಿಗುವುದಿಲ್ಲ. ನಿಷ್ಠೆಯ ಪೂರ್ಣ ಅರ್ಥ ಸಿಗಲಿ ಎಂದು ಹೇಳಿದೆ. ನಿಮಗೆ ಇದು ಬೇಡ ಎಂದರೆ ಬಿಟ್ಟು ಬಿಡೋಣ. ನಾನು ಹೇಳಿದ ಉದ್ದೇಶ ಏನು ಎಂದರೆ, ಕಾಂಗ್ರೆಸ್ ಪಕ್ಷಕ್ಕೆ ನಿಷ್ಠೆಯಿಂದ ಇದ್ದಾರಲ್ಲ, ಬಹಳ ವರ್ಷಗಳ ಕಾಲದಿಂದ ನಿಷ್ಠೆಯಿಂದ ನಡೆದುಕೊಂಡು ಬಂದಿರತಕ್ಕವರು ಇದ್ದಾರಲ್ಲ ಅವರು ಹಿಂದಿನ ಸಾಲಿನಲ್ಲಿ ಕುಳಿತಿದ್ದಾರೆ. ಅವರು ಹಿಂದಿನ ಸಾಲಿನಲ್ಲೇ ಕುಳಿತಿರಬೇಕಾಗುತ್ತದೆ.

(ಗೊಂದಲ)

ಒಬ್ಬರು ಮಾನ್ಯ ಸದಸ್ಯರು:- ನೀವು ಕೂಡ ಕಾಂಗ್ರೆಸ್ಸಿನಲ್ಲಿ ಬೆಳೆದವರು.

ಶ್ರೀ ಡಿ.ಬಿ. ಚಂದ್ರೇಗೌಡ:- ತಮ್ಮ ಬದುಕಿನ ಉದ್ದಕ್ಕೂ ತಮ್ಮನ್ನು ತಾವು ಆ ಪಕ್ಷಕ್ಕೆ ಅರ್ಪಣೆ ಮಾಡಿಕೊಂಡಂಥ ಜನ ಇದ್ದಾರಲ್ಲ....

ಶ್ರೀ ಆರ್.ಎನ್. ನಾಯಕ್:- ನಮ್ಮದು ಅಧಿಕಾರದ ನಿಷ್ಠೆ ಆಗಿರಬಹುದು. 1983ರಿಂದ ನಾನು ನೋಡಿದ್ದೇನೆ. ನಿಮ್ಮದು ಅಧಿಕಾರ ನಿಷ್ಠೆ ಎಲ್ಲಿ ಅಧಿಕಾರ ಇದೆ ಅವರಿಗೆ ನಿಷ್ಠರಾಗಿರುವುದು ನಿಮ್ಮ ಕೆಲಸ, ಅವರನ್ನು ಒಲೈಸುವುದು ನಿಮ್ಮ ಕೆಲಸ. 1983ರಿಂದ ನಿಮ್ಮ ಬಗ್ಗೆ ನಾನು ತಿಳಿದುಕೊಂಡಿದ್ದೇನೆ. ನಮ್ಮದು ನಾಯಿನಿಷ್ಠೆ ಇರಬಹುದು. ನಿಮ್ಮ ನಿಷ್ಠೆ ಬಗ್ಗೆ ನೀವು ವಿಚಾರ ಮಾಡಿ.

ಶ್ರೀ ಗೋಪಾಲಮುಕುಂದ ಕಾನಡೆ:- ಮಾನ್ಯ ಅಧ್ಯಕ್ಷರೇ, ಈ 'ನಾಯಿ' ಎಂಬ ಪದವನ್ನು ತೆಗೆಸಬೇಕಲ್ಲ? ಅದು ಅವರ ಕಡೆಯೇ ಉಳಿದುಬಿಡಲಿ.

** ಅಧ್ಯಕ್ಷರ ಅಪ್ಪಣೆ ಮೇರೆಗೆ ಮೇಲಿನ ಪದವನ್ನು ತೆಗೆದುಹಾಕಲಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು ಎಂದೂ ಅಧಿಕಾರಕ್ಕಾಗಿ ಒಂದು ಪಕ್ಷವನ್ನು ಬದಲಾವಣೆ ಮಾಡಿದವನಲ್ಲ. ಆರೇಳು ವರ್ಷಗಳ ಕಾಲ ಜನತಾ ಪಕ್ಷ ಅಧಿಕಾರದಲ್ಲಿದ್ದರೂ....

(ಗೊಂದಲ)

ಶ್ರೀ ಆರ್.ಎನ್. ನಾಯಕ್:- ಇವರು ಕೇವಲ ಅಧಿಕಾರಕ್ಕಾಗಿ ಏನು ಮಾಡುತ್ತಾರೆ ಎಂಬುದು ಜನತೆಗೆ ಗೊತ್ತಿದೆ. ಅಧಿಕಾರಕ್ಕೆ ನೀವು ಏನು ಮಾಡಿಲ್ಲ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೇ....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಇಲ್ಲಿ ಪದ ಬಳಸಬಾರದೆಂದು ಅನೇಕ ಜನ ಹೇಳುತ್ತಿದ್ದಾರೆ. ಈ ನಾಯಿನಿಷ್ಠೆ ನಮಗೇ ಬಿಡಿ, ಇದು ನಿಮಗೆ ಬರದೇ ಇದ್ದರೂ ಚಿಂತೆ ಇಲ್ಲ. ಅವರು ಬೇಡ ಎನ್ನುವುದಾದರೆ ಈ ಕಡೆಗೇ ಬಿಡೋಣ. ಅವರು ಯಾವ ನಿಷ್ಠೆ ಬೇಕಾದರೂ ಇಟ್ಟುಕೊಳ್ಳಲಿ, ಅದಕ್ಕೆ ಚಿಂತೆ ಪಡಬೇಕಾಗಿಲ್ಲ. ನಾಯಿನಿಷ್ಠೆ ಎಂದಾಕ್ಷಣ ಏನೋ ಬಹಳ ಆಘಾತವಾಗಿ, ಅನ್ಯಾಯ ನಡೆದುಹೋಗಿದೆ ಎನ್ನುವ ರೀತಿ ಕೂಗಾಡಿದರೆ ನನಗೆ ಅರ್ಥವಾಗುವುದಿಲ್ಲ. ನಾಯಿಗೆ ಇರತಕ್ಕ ಸೌಜನ್ಯ, ನಿಷ್ಠೆ ಇವರಿಗೆ ಇಲ್ಲ ಎಂದು ಹೇಳುತ್ತಿದ್ದಾರೆಯೇ ಹೊರತು ಬೇರೆ ಏನೂ ಇಲ್ಲ. ಆದಕ್ಕಾದರೂ ನಿಷ್ಠೆ ಇದೆ, ಇವರಿಗೆ ಇಲ್ಲ ಎಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಅಂತಹ ನಿಷ್ಠೆ ಪ್ರದರ್ಶನ ಮಾಡಿದ್ದೀರಲ್ಲ, ನೀವು ಏಕೆ ಹಿಂದೆ ಸಾಲಿನಲ್ಲಿ ಕುಳಿತಿದ್ದೀರಿ. ಎಲ್ಲಾ ಕಾಲಕ್ಕೂ ಸಂಶಯಾಸ್ಪದವಾದ ಕಾಂಗ್ರೆಸ್ ಪಕ್ಷಕ್ಕೆ ಸಂಶಯವಾದ ನಿಷ್ಠೆ ಕೊಟ್ಟವರು ಮುಂದಿನ ಸೀಟಿಗೆ ಏಕೆ ಬಂದಿದ್ದಾರೆ. ನಾನು ಇಷ್ಟೇ ಹೇಳುವುದು, ಇದಕ್ಕಿಂತ ಹೆಚ್ಚಿಗೆ ಹೇಳುವುದಿಲ್ಲ. ಮಾನ್ಯ ವೀರಪ್ಪಮೊಯ್ಲಿಯವರನ್ನು ಹೊರತುಪಡಿಸಿ, ಉಳಿದ ಎಲ್ಲರೂ...

ಶ್ರೀ ಆರ್.ಎನ್ ನಾಯಕ್:- ನೀವು ಮುಂದಿನ ಸಾಲಿನಲ್ಲಿ ಕುಳಿತುಕೊಳ್ಳುವುದಕ್ಕೆ 1983ರಲ್ಲಿ ಯಾವ ನಿಷ್ಠೆ ತೋರಿಸಿದಿರಿ, ಅದರ ಬಗ್ಗೇ ಹೇಳಿ. ಬೇಕಾದರ ಚರ್ಚೆ ಮಾಡೋಣ.

(ಗೊಂದಲ)

ಅಧ್ಯಕ್ಷರು:- ಈಗ ಚರ್ಚೆಯನ್ನು ಮುಂದುವರಿಸೋಣ.

(ಗೊಂದಲ)

ಶ್ರೀ ಟಿ.ಎಂ. ಮಂಜುನಾಥ್:- ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮ ಮುಂದೆ ಇರತಕ್ಕಂಥಾದ್ದು, ನಮ್ಮ ರಾಜ್ಯದ ಅತಿ ಮುಖ್ಯವಾಗಿರತಕ್ಕ ಒಂದು ಪ್ರಶ್ನೆಯನ್ನು ಈ ಸದನದ ಮುಂದೆ ತಂದಿದ್ದೇವೆ. ಆದ್ದರಿಂದ, ಮಾನ್ಯ ಚಂದ್ರೇಗೌಡರಲ್ಲಿ ಕಳಕಳಿಯ ಪ್ರಾರ್ಥನೆಯಿಂದ ಕೇಳುತ್ತೇನೆ. ರಾಜಕೀಯದ ವ್ಯಕ್ತಿಗತವಾಗಿರತಕ್ಕ ಪ್ರಶ್ನೆಗಳನ್ನು ಇಲ್ಲಿ ಎತ್ತುವುದು ಬೇಡ. ಏಕೆಂದರೆ, ಅವರಿಗೆ ಸ್ವಂತ ಅನುಭವ ಇದೆ, ಯಾರು ನಿಷ್ಠೆ, ಯಾರು ತತ್ವ, ಸಿದ್ಧಾಂತಗಳಿಗೆ, ಎಲ್ಲರೂ ಒಂದೊಂದು ರೀತಿಯಲ್ಲಿ ಅನುಭವಿಸಿಕೊಂಡು ಬಂದಿರತಕ್ಕಂಥಾದ್ದು. ಈ ಪರಿಸ್ಥಿತಿಯಲ್ಲಿ ನಾನು ಅವರನ್ನು ಕೇಳುತ್ತಿದ್ದೇನೆ. ಈ ರಾಜ್ಯದ ಇವತ್ತಿನ ಸಕಾಲಿಕವಾಗಿರತಕ್ಕಂಥ ಪ್ರಶ್ನೆಯನ್ನು ತಾವು ರಾಜ್ಯದ ಮುಂದೆ ಇಟ್ಟುಕೊಂಡು, ವಿವಾದಕ್ಕೆ ಆಸ್ಪದ ಕೊಡದ ರೀತಿಯಲ್ಲಿ ತಮ್ಮ ವ್ಯಕ್ತಿತ್ವವನ್ನು ಹರಿಸಬೇಕಾಗಿರತಕ್ಕಂಥ, ಚರ್ಚೆಯನ್ನು ಮಾಡಬೇಕಾದಂಥ ಪರಮ ಪವಿತ್ರವಾದ ಕರ್ತವ್ಯದ ಸನ್ನಿವೇಶ ತಮ್ಮ ಮುಂದೆ ಇದೆ. ಇವತ್ತು, ನಮ್ಮ ನಾಯಕರು ಇಟ್ಟಿರತಕ್ಕ ಪ್ರಶ್ನೆಯನ್ನು ತಾವು ಮುಂದೆ...

ಶ್ರೀ ವಾಟಾಳ್ ನಾಗರಾಜ್:- ಇವರು ಕೊನೆಯ ಘಳಿಗೆಯಲ್ಲಿ ನಿಷ್ಠೆಯನ್ನು ಪ್ರದರ್ಶನ ಮಾಡಿದವರು...

(ಗೊಂದಲ)

ಶ್ರೀ ಟಿ.ಎಂ. ಮಂಜುನಾಥ್:- ನಿಜ, ನನ್ನ ವ್ಯಕ್ತಿತ್ವ ಏನು, ನನ್ನ ಚರಿತ್ರೆ ಏನು, ನನ್ನ ಗುಣ ಏನು ಎನ್ನುವುದು ತಮಗೂ ಗೊತ್ತಿದೆ. ಆದರೆ ಯಾವುದೇ ಒಂದು ಪಕ್ಷದಲ್ಲಿದ್ದು, ಆ ಪಕ್ಷಕ್ಕೆ ದ್ರೋಹ ಬಗೆದವನು ನಾನಲ್ಲ. ವ್ಯಕ್ತಿ ದೊಡ್ಡವನಲ್ಲ, ಪಕ್ಷ ದೊಡ್ಡದು. ಯಾವುದೇ ಆಸೆಗೆ, ಕಾಲಕಾಲಕ್ಕೆ ಮರುಳಾಗಿ, ವೇಷಭೂಷಣಗಳನ್ನು ಹಾಕಿಕೊಂಡು ಮಾತನಾಡುವ ವ್ಯಕ್ತಿ ನಾನಲ್ಲ. ಮಾನ್ಯ ಅಧ್ಯಕ್ಷರೇ, ರಾಜಕೀಯ ಸಿದ್ಧಾಂತವನ್ನು ಇಡುತ್ತಾ ಹೋದರೆ, ಇವರ ಮುಖ್ಯ ಪ್ರಧಾನಿಯಾಗಿರತಕ್ಕಂಥವರು ಎಲ್ಲಿದ್ದರು, ಏನು ಮಾಡಿದರು, ಅಲ್ಲಿಗೆ ನಾವು ಹೋಗಬೇಕಾಗುತ್ತದೆ. ಆದುದರಿಂದ ಇವತ್ತಿನ ಪರಿಸ್ಥಿತಿಯನ್ನು ಅನುಸರಿಸಿ ತಾವು ಒಳ್ಳೆಯ ಸಲಹೆಯನ್ನು ಕೊಡಿರಿ.

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಸಭಾಧ್ಯಕ್ಷರೇ, ವಿಷಯಾಂತರವಾಗುವುದು ಬೇಡ ಎನ್ನುವುದು ನನ್ನ ಭಾವನೆ. ಇವತ್ತು ಯಾರಿದ್ದರು, ಹೇಗಿದ್ದರು ಎಂಬ ಪ್ರಶ್ನೆಗೆ ಹೋದರೆ, ಅದಕ್ಕೆ ಉತ್ತರ, ತಮ್ಮಲ್ಲಿಯೂ ಕೂಡಾ ಯಾರು ಯಾರು ಎಲ್ಲೆಲ್ಲಿದ್ದರು ಎಂಬುದು ಸಹಜವಾಗಿ ಬರುತ್ತದೆ. ಬರೀ ರಾಜ್ಯದಲ್ಲಿ ಅಷ್ಟೇ ಅಲ್ಲ, ತಮ್ಮ ಪಕ್ಷದಲ್ಲಿ ಕೂಡ ಕೇಂದ್ರದಲ್ಲಿ ಈಗ ಇರತಕ್ಕಂಥ ಮಂತ್ರಿಗಳಾಗಲಿ ಶ್ರೀ ವಿ.ಪಿ.ಸಿಂಗ್‌ರವರ ಜೊತೆಗೆ ಇರತಕ್ಕಂಥವರು ಯಾರು ಯಾರು ಎಲ್ಲೆಲ್ಲಿದ್ದರು ಎಂಬುದು ಬರುತ್ತದೆ. ಈ ರಾಷ್ಟ್ರದ ರಾಜಕಾರಣದಲ್ಲಿ, ರಾಜ್ಯದ ರಾಜಕಾರಣದಲ್ಲಿ ನಡೆದಿದೆ, ಇದು ವಾಸ್ತವಾಂಶ. ಅದನ್ನು ಮುಚ್ಚಿಡತಕ್ಕಂಥ ಅವಶ್ಯಕತೆ ಇಲ್ಲ. ಆ ಸಂದರ್ಭದಲ್ಲಿ ಹಾಗಿತ್ತು, ಮುಂದೆ ಕೂಡಾ ಹೇಗೆ ಆಗುತ್ತದೆ, ಎಂಬುದು ಕೂಡಾ ಸಹಜವಾಗಿ ಎಲ್ಲರ ಮನಸ್ಸಿಗೆ ಬರತಕ್ಕಂಥ ವಿಚಾರ ಆದುದರಿಂದ ಆ ಅಂಶವನ್ನು ಬಿಟ್ಟು ಹೋದರೆ ಒಳ್ಳಿತು. ಅದು ಎಲ್ಲರಿಗೂ ಕೂಡಾ ಒಳಿತಾಗಬಹುದೆಂದು ನನ್ನ ಭಾವನೆ. ಇದೊಂದು ಸಲಹೆ. ಇದರ ಮೇಲೆ ತಮ್ಮ ಇಷ್ಟ.ಆಮೇಲೆ ನಿಷ್ಠೆಯ ಬಗ್ಗೆ ಹೇಳಬೇಕಾದರೆ, ತಾವು ಹೇಳಿದ್ದೀರಿ, ಅದನ್ನು ತಮಗೇ ಬಿಟ್ಟಿದ್ದೇನೆ ಎಂದು ನಾನು ಹೇಳಿದೆ. The use of the word "ನಾಯಿ" ಎನ್ನತಕ್ಕಂಥಾದ್ದು ಅನ್‌ಪಾರ್ಲಿಮೆಂಟರಿ ಎಂದು ನಾನು ಹೇಳುವುದಿಲ್ಲ. ಆದರೆ I don't think that it sounds well with the established conventions here. ತಾವು ಅದನ್ನು ಕಡತದಿಂದ ತೆಗೆದರೆ ಬಹಳ ಒಳ್ಳೆಯದು, ನಾಳೆ ಪತ್ರಿಕೆಗೆ ಹೋಗುತ್ತದೆ ಎಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಅದನ್ನು ಬಿಟ್ಟು ಬಿಟ್ಟೆನಲ್ಲ. ಬೇಡ ಎಂದರೆ ಬೇಡ, ಗಲಾಟೆ ಏತಕ್ಕೆ? ಬಿಟ್ಟು ಬಿಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಚಂದ್ರೇಗೌಡರು ಅದನ್ನು ಬಿಟ್ಟಿದ್ದಕ್ಕೆ ಅಭಿನಂದನೆಗಳು. ಅದು ಕಡತದಲ್ಲಿ ಉಳಿದುಕ್ಕೋಸ್ಕರ ನಮಗೆ ಖೇದವಾಗಿದೆ. ಅಧ್ಯಕ್ಷರು ಅದನ್ನು ತೆಗೆದು ಹಾಕಿದರೆ ಒಳ್ಳೆಯದು ಎಂದು ನನ್ನ ಭಾವನೆ.

ಅಧ್ಯಕ್ಷರು:- ನಿಮ್ಮ ಇಂಗಿತ, ಅದನ್ನು ವಾಪಾಸ್ ತೆಗೆದುಕೊಳ್ಳುತ್ತೇನೆ ಎಂದೋ.

ಶ್ರೀ ಡಿ. ಬಿ. ಚಂದ್ರೇಗೌಡ:- ಇಲ್ಲ ಅದು ಕಡತದಲ್ಲಿ ಇರಲಿ, ಮುಂದೆ ಬಳಸುವುದಿಲ್ಲ ಎಂದು ಹೇಳಿದೆ. It is not un-parliamentary. If you rule out that it is un-partliamentary I have no objection.

ಶ್ರೀ ಎಸ್. ಬಂಗಾರಪ್ಪ:- ತಾವು ಹೇಳುವುದಕ್ಕಿಂತ ಮೊದಲೇ ನಾನು ಹೇಳಿದೆ. ಅದಕ್ಕೆ ನಾನು ಇದನ್ನು ನಿಮಗೇ ಬಿಡುತ್ತೇನೆಂದು ಹೇಳಿದೆ. ಏಕೆಂದರೆ, ತಾವೂ ಸಹ ಅಧ್ಯಕ್ಷರಾಗಿದ್ದವರು. ಅದನ್ನು ಉಪಯೋಗ ಮಾಡುವುದನ್ನು ನಿಮಗೇ ಬಿಡುತ್ತೇನೆ. ಅಧ್ಯಕ್ಷರಿಗೆ ಏತಕ್ಕೆ ಬಿಡಬೇಕು. ಅದನ್ನು ತಾವು ಹಿಂದಕ್ಕೆ ತೆಗೆದುಕೊಂಡರೆ ಒಳ್ಳೆಯದು ಎನ್ನುವುದು ನನ್ನ ಸಲಹೆ. ಕಡತದಲ್ಲಿ ಉಳಿಯುವುದು ಬೇಡ.

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು ಏತಕ್ಕೆ ನಿಷ್ಠೆಯ ಬಗ್ಗೆ ಇಷ್ಟು ಪ್ರಸ್ತಾಪ ಮಾಡಿದೆ ಎಂದರೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಮಂಜುನಾಥ್‌ರವರೇ, ನಿಮ್ಮ ಕೇಸ್‌ನ್ನು ರೆಕಮೆಂಡ್ ಮಾಡುತ್ತೇನೆ

(ಗೊಂದಲ)

ಶ್ರೀ ಆರ್.ಎನ್. ನಾಯಕ್:- ನಿಮ್ಮ ರೆಕಮೆಂಡೇಷನ್ ಈಗ ನಡೆಯುವುದಿಲ್ಲ.

(ಗೊಂದಲ)

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ಯಾವುದೋ ಒಂದು ಪದದಮೇಲೆ ಚರ್ಚೆ ನಡೆಯುತ್ತಿದೆ. ** ಎನ್ನುವುದರ ಬಗ್ಗೆ ನಡೆಯುತ್ತಿದೆ. ನನ್ನ ಅನುಭವದಲ್ಲಿ that is what, is lacking in our political parties. Dogs are more faithful than whatever hon'ble members in different political parties are behaving. ನಾಯಿಗೆ ಅವಮಾನ ಮಾಡುವುದು ಬೇಡ. ಏತಕ್ಕೆಂದರೆ, ಏಕೆಂದರೆ ಈಗ ದೆಹಲಿಯಲ್ಲಿಯೂ ಚರ್ಚೆಯಾಗುತ್ತಿದೆ. ಇಲ್ಲೂ ಚರ್ಚೆಯಾಗುತ್ತಿದೆ. ಶಾಸಕರಿಗೆ ಸಂಭಂಧಪಟ್ಟಹಾಗೆ ಈಗ ಬೇರೆ ಪದ ಉಪಯೋಗಿಸುತ್ತಿದ್ದಾರೆ. 'ಕುದುರೆ' ಎಂದು ಉಪಯೋಗಿಸುತ್ತಿದ್ದಾರೆ. ಆ ಕೆಲಸವೂ ಆಗಬಾರದು. ಅದು ಶುದ್ಧ ಅವಮಾನದ ವಿಚಾರ. ಆದುದರಿಂದ ತಮ್ಮ ಮಟ್ಟಿಗೆ ಪದಗಳನ್ನು ಸೀಮಿತಗೊಳಿಸಬೇಕೆ ಹೊರತು, ನಮಗಿಂತ ಒಳ್ಳೆಯ ನಡವಳಿಕೆ ಇರುವಂಥ ಪ್ರಾಣಿಗಳ ಬಗ್ಗ ಮಾತನಾಡಬಾರದು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ, ನಾನು ನಿಷ್ಠೆ ಬಗ್ಗೆ ಅಷ್ಟು ಒತ್ತು ಕೊಟ್ಟಿದ್ದರ ಉದ್ದೇಶವೇನು ಎನ್ನುವುದನ್ನು ಹೇಳಲೇಬೇಕಾಗುತ್ತದೆ. ಇಷ್ಟು ನಿಷ್ಠೆ ಇದ್ದರೂ ಕೂಡ ವಿಪ್ ನೋಟೀಸ್ ಕೊಡತಕ್ಕಂಥ ಪ್ರಸಂಗ ಏತಕ್ಕೆ ಬಂತು? ವಿಶ್ವಾಸ ಮತ ಪಡೆಯುವುದಕ್ಕೆ ತ್ರೀಲೈನ್ ವಿಪ್ ನೋಟೀಸ್ ಏತಕ್ಕೆ ಬೇಕು? ಅಂದರೆ ಅದು ತಾಂತ್ರಿಕ ಒಪ್ಪಿಗೆಯೋ ಹೊರತು ಮನಸ್ಸಿನ ಒಪ್ಪಿಗೆ ಅಲ್ಲ. ಪಕ್ಷಾಂತರ ಮಸೂದೆಯ ಮೊರೆ ಹೊಕ್ಕು ತಾಂತ್ರಿಕ ಒಪ್ಪಿಗೆಯನ್ನು ಪಡೆಯುವುದಕ್ಕೆ ಮಾಡಿರತಕ್ಕಂಥ ತಂತ್ರ. ಹಾಗೆ ಇಲ್ಲದಿದ್ದರೆ ನಿಷ್ಠೆ ಪ್ರಶ್ನೆ ಆಗಿದಿದ್ದರೆ ವಿಪ್ ಏತಕ್ಕೆ ಬೇಕು? ಏಕ ಪಕ್ಷಕ್ಕೆ ವಿಪ್ ಏತಕ್ಕೆ ಬೇಕು? ಶ್ರೀಮಾನ್ ವೀರೇಂದ್ರಪಾಟೀಲರನ್ನು ಪಕ್ಷದಿಂದ ಸಸ್‌ಪೆಂಡ್ ಮಾಡಿದ್ದೇವೆ ಎಂದು....

ಶ್ರೀ ಎಲ್.ಆರ್. ಶಿವರಾಮೇಗೌಡ:- ನಿಮ್ಮ ಪಾರ್ಟಿಯಲ್ಲಿ ದುಡ್ಡು ಕೊಡುತ್ತಿದ್ದಿರಿ, ನಮ್ಮ ಪಾರ್ಟಿಯಲ್ಲಿ ವಿಪ್ ನೋಟಿಸ್ ಕೊಟ್ಟಿದ್ದೇವೆ ಅಷ್ಟೆ? ನಮಗೂ ನಿಮಗೂ ಇರುವ ವ್ಯತ್ಯಾಸ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ನೀವು ಯಾವ ಪಾರ್ಟಿಯಿಂದ ಆದರೂ ಸರಿಯೇ ದುಡ್ಡು ತೆಗೆದುಕೊಂಡು ಹೋಗಿಬಿಡುತ್ತೀರಲ್ಲ?.....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ತಾವೀಗ ತ್ರಿಶಂಕು ಸ್ವರ್ಗದಲ್ಲಿ ಇದ್ದೀರಿ..

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ:- ಮಾನ್ಯ ಅಧ್ಯಕ್ಷರೇ....

ಶ್ರೀ ಡಿ.ಬಿ. ಚಂದ್ರೇಗೌಡ:- ನೋಡೋಣ ನಿಮ್ಮ ಅರ್ಜಿಯನ್ನು ಪರಿಶೀಲನೆ ಮಾಡಲು ಹೇಳುತ್ತೇನೆ....

(ಗೊಂದಲ)

ಶ್ರೀ ಬಸವರಾಜರಾಯರೆಡ್ಡಿ:- ಮಾನ್ಯ ಅಧ್ಯಕ್ಷರೇ, ಆ ಮಾತನ್ನು ತೆಗೆಸಿ. ದುಡ್ಡು ತೆಗೆದುಕೊಂಡಿದ್ದಾರೆ ಎಂದು ಹೇಳಿದರೆ ಅದು ಆಪಾದನೆ ಮಾಡಿದಂತೆ ಆಗುತ್ತದೆ. ಆದ್ದರಿಂದ ಆ ಪದವನ್ನು ಕಡತದಿಂತ ತೆಗೆಸಿ.

** ಅಧ್ಯಕ್ಷರ ಅಪ್ಪಣೆ ಮೇರೆಗೆ ಮೇಲಿನ ಪದವನ್ನು ತೆಗೆದುಹಾಕಲಾಗಿದೆ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್:- ಮಾನ್ಯ ಅಧ್ಯಕ್ಷರೇ, ಎಕ್ಸೈಜ್ ಲಾಬಿಯಿಂದ ಹಣ ತೆಗೆದುಕೊಳ್ಳತಕ್ಕಂಥ ಸೋಗು ಏನಿದೆ ಅದು ಗೊತ್ತಿದೆ. ಎಕ್ಸೈಜ್ ಲಾಬಿಯವರ ದುರ್ಲಾಭ ಪಡೆದಂಥಾದ್ದು ಅವರ ಹಣವನ್ನು ಉಪಯೋಗ ಮಾಡಿರತಕ್ಕಂಥಾದ್ದು ಸದಸ್ಯರಿಗೆ ಗೊತ್ತು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪದ ಪ್ರಯೋಗ ಮಾಡಿದಂತಹ ವಿಚಾರದಲ್ಲಿ ನಾನು ಅವರಿಂದ ಉತ್ತರ ನಿರೀಕ್ಷೆ ಮಾಡುತ್ತೇನೆ. ಅದರ ಜೊತೆಯಲ್ಲಿಯೇ ಮಾನ್ಯ ಸದಸ್ಯರಾದ ಶ್ರೀಬನ್ನಿಕೋಡ್‌ರವರು ಏನಾದರೂ ಹೇಳಿದರೆ ಅದನ್ನು ಜವಾಬ್ದಾರಿಯಿಂದ ಹೇಳುತ್ತಾರೆ ಎಂದು ನನ್ನ ಅನಿಸಿಕೆ. ಇಲ್ಲಿಯವರೆಗೂ ಅವರು ಜವಾಬ್ದಾರಿಯಿಂದ ಮಾತನಾಡಿದ್ದಾರೆ. ಮುಂದೆಯೂ ಸಹ ಜವಾಬ್ದಾರಿಯಿಂದ ಮಾತನಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಸದಸ್ಯರು ಹೇಳಿರತಕ್ಕಂಥಾದ್ದನ್ನು ನಾನು ಕೇಳಿದ್ದೇನೆ. ಅವರು ಏನು ಹೇಳಿದರು ಎಕ್ಸೈಜ್ ಲಾಬಿಯಿಂದ ಹಣ ಪಡೆದಿರತಕ್ಕಂಥ ವಿಚಾರ ಇತ್ಯಾದಿ ಮಾತನ್ನು ಹೇಳಿದಾಗ ಜವಾಬ್ದಾರಿಯಿಂದ ಹೇಳುತ್ತಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರ ನಾನು ಅವರನ್ನು ಕೇಳುತ್ತೇನೆ. ನಿಮ್ಮ ಹತ್ತಿರ ಏನಾದರೂ ದಾಖಲೆಗಳು ಇದ್ದರೆ ಅದನ್ನು ರುಜುವಾತು ಪಡಿಸಬೇಕಾಗುತ್ತದೆ. ಆ ಬಗ್ಗೆ ವಿವರಗಳನ್ನು ಕೊಡಬೇಕಾಗುತ್ತದೆ. ನಾನು ಅದನ್ನು ಸ್ಪಷ್ಟಪಡಿಸುತ್ತೇನೆ. ಇದು ಬಹಳ ಸೀರಿಯಸ್ ಮ್ಯಾಟರ್...

(ಗೊಂದಲ)

ಶ್ರೀ ಎಸ್. ಬಂಗಾರಪ್ಪ:- ನಾನು ಆ ವಿಚಾರವನ್ನು ಹೇಳುತ್ತಿದ್ದೇನೆ.....

ಅಧ್ಯಕ್ಷರು:- ಮಾನ್ಯ ಬನ್ನಿಕೋಡ್‌ರವರೇ ತಾವು ಕುಳಿತುಕೊಳ್ಳಿ..

ಶ್ರೀ ಬಿ.ಎಚ್. ಬನ್ನಿಕೋಡ್:- ನಮ್ಮ ಪಾರ್ಟಿಯಲ್ಲಿ ನಾವು ದುಡ್ಡು ಕೊಟ್ಟಿರುವುದನ್ನು ಅವರು ಸಾಬೀತು ಮಾಡಿದರೆ ನಾನು ಹೇಳಿದ್ದನ್ನು ನಾನು ಸಹ ಸಾಬೀತು ಮಾಡುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ:- ನಮ್ಮ ಪಾರ್ಟಿಯಲ್ಲಿ ವಿಪ್ ನೋಟಿಸ್ ಕೊಟ್ಟಿದ್ದಾರೆ. ಹಿಂದೆ ನಿಮ್ಮ ಪಾರ್ಟಿಯವರು ಬ್ರೀಫ್ ಕೇಸ್‌ಗಳಲ್ಲಿ ಹಣ ಕೊಟ್ಟಿದ್ದು ಕಂಡಿಲ್ಲವೇ...

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಸದಸ್ಯರಾದ ಶ್ರೀಮಾನ್ ಶಿವರಾಮೇಗೌಡರು ಏನು ಹೇಳಿದರು ಎಂದು ನಾನು ಕೇಳಲಿಲ್ಲ. ನಾನು ಹೇಳುವುದನ್ನು ಸ್ವಲ್ಪ ಪೂರ್ತಿಯಾಗಿ ಕೇಳಿ. ಅವರು ಒಂದು ವೇಳೆ ಹಾಗೆ ಹೇಳಿದ್ದರೆ ಏತಕ್ಕೆ ಹೇಳಿದರು ಎನ್ನುವುದನ್ನು ಸಹ ನಾವು ವಿಚಾರ ಮಾಡಬೇಕು. ಆದರೂ ಅವರು ಏನು ಹೇಳಿದರು ಎನ್ನುವುದನ್ನು ನಾನು ಕೇಳಲಿಲ್ಲ. ಆ ನಿಲುವು ನಾನು ಎಂದೂ ತೆಗೆದುಕೊಳ್ಳುವುದಿಲ್ಲ. ಅವರು ಹಾಗೆ ಹೇಳಿದರೆಂದು ನೀವು ಮತ್ತೊಂದು ವಿಷಯವನ್ನು ಹೇಳುವುದಾದರೆ ಅದು ಒಂದು ದೊಡ್ಡ ವಿಚಾರವಾಗುತ್ತದೆ. ಏಕೆಂದರೆ, ಎಕ್ಸೈಜ್ ಲಾಬಿ ಒಂದೆ ಅಲ್ಲ, ಕಮರ್ಷಿಯಲ್ ಟ್ಯಾಕ್ಸ್ ಲಾಬಿ ಇದೆ, ಇನ್ನೂ ಬೇರೆ ಬೇರೆ ಲಾಬಿಗಳು ಇವೆ. ರಾಬ್ಸ್‌ನ್ಸ್ ಲಾಬಿಗಳು ಇವೆ. ರಾಬಿಂಗ್ ಲಾಬಿಗಳು ಇವೆ. ಅದು ಒಂದೆ ಅಲ್ಲ. ಅನೇಕ ಲಾಬಿಗಳು ಇವೆ. ಆದ್ದರಿಂದ ದಯಮಾಡಿ ತಾವು ಯಾವುದಾದರೂ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ ಮೇಲೆ ಅದನ್ನು ಅಂತಿಮವಾಗಿ ರುಜುವಾತು ಪಡಿಸಬೇಕಾಗುತ್ತದೆ. ಆಗ ತಮಗೆ ಕಷ್ಟದ ಪರಿಸ್ಥಿತಿಗೆ ಬರಬಹುದು. ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಯಾರೇ ಮಾನ್ಯ ಸದಸ್ಯರು ಏನಾದರೂ ಹೇಳಿದರೂ ಕೂಡ ಒಂದು ಚೌಕಟ್ಟಿನಲ್ಲಿ ವಿಚಾರ ಇಟ್ಟುಕೊಂಡು ಮಾತನಾಡಿದರೆ ಒಳ್ಳೆಯದು. ಅದರ ಜೊತೆಯಲ್ಲಿಯೇ ನಾನು ಇನ್ನೊಂದು ವಿಚಾರವನ್ನು ಸ್ಪಷ್ಟಪಡಿಸುತ್ತಿದ್ದೇನೆ. ಮಾನ್ಯ ಸದಸ್ಯರು ಮನಸ್ಸಿನಲ್ಲಿ ಏನು ಇಟ್ಟುಕೊಂಡಿದ್ದಾರೆ ಅದು ಸತ್ಯಕ್ಕೆ ದೂರವಾಗಿರತಕ್ಕಂಥ ವಿಚಾರ. ಅದು ಅಸತ್ಯವಾದ ವಿಚಾರ.. ಈ ಲಾಬಿ ಈ ಲಾಬಿ ಯಾವುದು ಇಲ್ಲ. As long as I am here and

our Government is here, every lobby including excise lobby ಅದನ್ನು ಮಟ್ಟ ಹಾಕತಕ್ಕಂಥ ವ್ಯವಸ್ಥೆ ಮಾಡುತ್ತೇವೆ. ಏಕೆಂದರೆ strengthening the State Exchequer is greater than anything else.

ಶ್ರೀ ಆರ್.ವಿ. ದೇಶಪಾಂಡೆ:- ಆ ವಿಷಯ ಈಗ ಬೇಡ, ಬಿಡಿ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್:- ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು:- ಮಿಸ್ಟರ್ ಬನ್ನಿಕೋಡ್,

(ಗೊಂದಲ)

ಅಧ್ಯಕ್ಷರು:- ಚರ್ಚೆ ನಡೆಯುತ್ತಿರುವ ಕಾಲದಲ್ಲಿ ಮಧ್ಯೆ ಪ್ರವೇಶಿಸಿ ಮಾನ್ಯ ಸದಸ್ಯರುಗಳು ಮಾತನಾಡಿದರೆ ಅದರಿಂದ ಉದ್ಭವಿಸಬಹುದಾಂಥ ಗೊಂದಲಗಳನ್ನು ಮಾನ್ಯ ಸದಸ್ಯರು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಮಧ್ಯದಲ್ಲಿ ಇನ್ನಾರೇ ಮಾನ್ಯ ಸದ್ಯರು ಮಾತನಾಡಬಾರದು. ಮಾತನಾಡುತ್ತಿರುವವರು ಯೀಲ್ಡ್ ಆದರೆ ನನ್ನ ಅಭ್ಯಂತರವೇನು ಇಲ್ಲ. ನಾನು ಯಾರನ್ನು ಕರೆದಿರುತ್ತೇನೋ ಅವರು ತಮ್ಮ ಅವಕಾಶವನ್ನು ಬೇರೆಯವರಿಗೆ ಕೊಡುವುದಿಲ್ಲವೋ ಅಲ್ಲಿಯವರೆಗೆ ಬೇರೆಯವರು ಏನಾದರು ಹೇಳಿದರೂ ಕೂಡ ಅದು ಕಡತಕ್ಕೆ ಹೋಗುವುದಿಲ್ಲ. ಆದ್ದರಿಂದ ನೀವು ಮಧ್ಯದಲ್ಲಿ ಏನು ಹೇಳಿದರೂ ಕೂಡ ಅದು ನಮ್ಮ ಪ್ರೊಸೀಡಿಂಗ್ಸ್‌ಗೆ ಹೋಗುವುದಿಲ್ಲ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು.

ಶ್ರೀ ಡಿ.ಬಿ. ಚಂದ್ರೇಗೌಡ:- ನಾನು ಹೇಳುತ್ತಿದ್ದೇನೆ, ಪಕ್ಷಾಂತರ ನಿಷೇಧ ಶಾಸನದ ಮೊರೆ ಹೋಗಿ ವಿಪ್ ಕೊಟ್ಟು ಬಲವಂತದ ವಿಶ್ವಾಸ ಪಡೆಯುವುದಕ್ಕೆ ಪ್ರಯತ್ನಿಸಿದ್ದೀರಿ ಎನ್ನುವುದು ನನ್ನ ಕಾರಣ ಏನೆಂದರೆ, ಪತ್ರಿಕೆಗಳಲ್ಲಿ ಬಂದ ಸುದ್ದಿ ಪ್ರಕಾರ ಪಕ್ಷದಲ್ಲಿ ಯಾರು ಯಾರಿಗೆ ಎಷ್ಟೆಷ್ಟು ಮತ ಬಂದಿತ್ತು, ಆ ಮತಗಳನ್ನೆಲ್ಲ ಸೇರಿಸಿದರೆ, ಕಡಿಮೆ ಮತ ಬಂದವರು ಇದನ್ನು ಸರ್ವಾನುಮತ ಎನಿಸಿಕೊಂಡಿದ್ದಾರೆ ಎನ್ನುವ ಭಾವನೆ ಬರುವ ಹಾಗೆ ಬರೆದಿದ್ದಾರೆ. ಅದು ಸರಿ ಇಲ್ಲದೆ ಇರಬಹುದು. ಇದು ನಿಮ್ಮ ಪಕ್ಷಕ್ಕೆ ಸಂಬಂಧಪಟ್ಟಂಥ ವಿಚಾರ, ಅದನ್ನು ನಾನು ಪ್ರಸ್ತಾಪ ಮಾಡುವುದಿಲ್ಲ. ಆ ಕಾರಣ, ಹೀಗೆ ವಿಭಿನ್ನವಾದ ಮತಗಳನ್ನು ಪಡೆದಂಥ ಮುಖಂಡರು, ಶಾಸನ ಸಭೆಯಲ್ಲಿ ವಿಶ್ವಾಸ ಮತ ಕೇಳುವಾಗ ತೊಂದರೆಯಾದೀತೆಂದು ಶಂಕೆಯಿಂದ ಈ ಕೆಲಸ ಮಾಡಿದ್ದೀರೇನೊ, ವಿಪ್ ಕೊಟ್ಟಿದ್ದೀರೋ ಎಂದು ನನ್ನ ಶಂಕೆ. ಅದಕ್ಕಾಗಿ ಈ ಮಾತನ್ನು ನಾನು ಹೇಳಿದೆ. ಮಾನ್ಯ ಸಭಾಧ್ಯಕ್ಷರೆ, ಇಲ್ಲಿ ಒಂದು ಮಾತನ್ನು ಹೇಳಿದರೆ ಅಪ್ರಸ್ತುತವಲ್ಲವೆಂದು ಭಾವನೆ ಮಾಡುತ್ತೇನೆ. ಇವತ್ತು, ಕೇಂದ್ರ ಸರ್ಕಾರದ ಔದಾರ್ಯದಿಂದ ನೀವು ಸರ್ಕಾರವನ್ನು ರಚನೆ ಮಾಡುವುದಕ್ಕೆ, ಮುಖ್ಯಮಂತ್ರಿಗಳನ್ನು ರಚನೆ ಮಾಡುವುದಕ್ಕೆ ಸಾಧ್ಯವಾಯಿತೇ ಹೊರತು,

(ಗೊಂದಲ)

MR. SPEAKER:- Order, order please.

ಶ್ರೀ ಬಿ.ಹೆಚ್. ಬನ್ನಿಕೋಡ್:- ಸತ್ಯವನ್ನು ಹೇಳಿದರೆ ಅವರಿಗೆ ಸಿಟ್ಟು ಬರುತ್ತಾ ಇದೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಆದರೆ, ಈ ಔದಾರ್ಯದ ದುರುಪಯೋಗವಾಗಬಾರದು; ಮತ್ತೆ ನಿಮ್ಮ ಸರ್ಕಾರಕ್ಕೆ ಪಾರ್ಶ್ವವಾಯು ಬಡಿಯದೆ ಇರಲಿ...

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಆದರೆ ಒಂದು ಏನು? ನಮ್ಮಲ್ಲಿ ಹಿರಿಯ ಸದಸ್ಯರಾದ ಅಜೀಜ್ ಸೇಠ್ ಇದ್ದಾರೆ.

(ಗೊಂದಲ)

ಶ್ರೀ ಅಜೀಜ್ ಸೇಠ್:- ಅದನ್ನು ಏಕೆ ಹೇಳಿದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಏಕೆ ಹೇಳಿದೆ, ಅಂದರೆ ಸಾರ್ವಜನಿಕವಾಗಿ ಬೀದಿಯಲ್ಲಿ ಬಯ್ಯುವುದು, ಒಳಗೆ ಹೋಗಿ ಕಾಲು ಹಿಡಿಯುವುದು, ನೀವೇ ನಮ್ಮನ್ನು ಇಲ್ಲಿಗೆ ತಂದಿರಿ, ನೀವು ಹಿರಿಯರು ನಿಮ್ಮ ಆಶೀರ್ವಾದ ನಮಗೆ ಇರಬೇಕೆಂದು ಇವತ್ತು ಸದನದಲ್ಲಿ ಕೇಳುತ್ತೀರಲ್ಲ, ಅವತ್ತು ಶ್ರೀಮಾನ್ ವೀರೇಂದ್ರಪಾಟೀಲರು ಅನಾರೋಗ್ಯದಿಂದ ಬಿದ್ದಿದ್ದಾಗ ಈ ಮಾತನ್ನು ಏಕೆ ಹೇಳಲಿಲ್ಲ?

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಇವೊತ್ತು ಇಂತಹ ಮೊಸಳೆ ಕಣ್ಣೀರು ಸುರಿಸುವ ಕೆಲಸ ಬೇಡ. ಅದು ಅನಿವಾರ್ಯವಾದಂಥ ಅಗತ್ಯತೆ ಅಲ್ಲ. ಆದರೆ ಇದರಿಂದ ವೀರೇಂದ್ರಪಾಟೀಲರ ಭಯ ನಿಮಗೆ ಇದೆ ಎನ್ನುವುದು ಸಾಬೀತು ಆಗಿದೆ. ಇನ್ನು ಉಳಿದ ವಿಚಾರಗಳನ್ನು ನಮ್ಮ ಸ್ನೇಹಿತರುಗಳು ಮಾತನಾಡಲಿದ್ದಾರೆ. ಪ್ರಮಾಣ ವಚನ ಸ್ವೀಕಾರದ ವಿಚಾರವು ಜನರಿಗೆ ಗೊತ್ತಾಗುವುದು ಅವಶ್ಯಕವಲ್ಲವೆ? ನಾನು ವಿರೋಧ ಪಕ್ಷದ ನಾಯಕನಾಗಿ ಏನು ಕರ್ತವ್ಯ ನಿರ್ವಹಿಸಬೇಕಾಗಿತ್ತೋ ಅದನ್ನು ನಿರ್ವಹಣೆ ಮಾಡಿದ್ದೇನೆ. ಇನ್ನು ಕೊನೆಯದಾಗಿ ಒಂದು ಮಾತನ್ನು ಹೇಳಬಯಸುತ್ತೇನೆ. 17ನೇ ತಾರೀಖು ಮುಖ್ಯಮಂತ್ರಿಗಳವರ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮ. ಇವೊತ್ತು ಮಾನ್ಯ ಮುಖ್ಯಮಂತ್ರಿಯವರು ಸದನದ ಎಲ್ಲಾ ಸದಸ್ಯರ ಸಹಕಾರವನ್ನು ಕೇಳುತ್ತಾ ಇದ್ದಾರೆ. ಮಾನ್ಯ ಬಂಗಾರಪ್ಪನವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕಾರ ಮಾಡುತ್ತಾರೆ ಎಂದು ನಾನು ಅಂದುಕೊಂಡಿದ್ದೆ. ಆದರೆ ದುರ್ದೈವ ಅವರು ಕಾಂಗ್ರೆಸ್ಸಿನ ಮುಖ್ಯಮಂತ್ರಿಯಾಗಿ ಅಲ್ಲ, ಅವರು ಒಂದು ಗುಂಪಿನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ ಮಾಡಿದರು. ಎಲ್ಲ ವಿರೋಧ ಪಕ್ಷಗಳನ್ನು ಹೊರಗಿಟ್ಟರು. ಇದು ಖಾಸಗಿ ವ್ಯವಹಾರ ಅಲ್ಲ. ಇದು ಇಡೀ ರಾಜ್ಯದ ಜನರು ಕಾದು ನೋಡತಕ್ಕಂಥ ವ್ಯವಹಾರ. ಇದನ್ನು ಕದ್ದು ಮುಚ್ಚಿ ಮಾಡತಕ್ಕಂಥ ಪ್ರಸಂಗವೇನಿತ್ತೋ, ಏನು ಕಾರಣವಿತ್ತು ಎಂದು ನಾನು ಪ್ರಶ್ನೆ ಮಾಡುತ್ತೇನೆ.....

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಮುಖ್ಯಮಂತ್ರಿಯವರ ಹುದ್ದೆಯು ಇಷ್ಟೊಂದು ಖಾಸಗೀಕರಣವಾಗಬಾರದು. ಅಂತ ಖಾಸಗೀಕರಣಕ್ಕೆ ಅವಕಾಶವನ್ನು ಕೂಡ ಕೊಡಬಾರದು. ಮಂತ್ರಿಮಂಡಲದ ಸದಸ್ಯರು ಪ್ರಮಾಣ ವಚನ ಸ್ವೀಕಾರ ಮಾಡುವಾಗ ವಿರೋಧ ಪಕ್ಷದ ನಾಯಕನಾಗಿ ಇರಬೇಕಾದುದು ನನ್ನ ಕರ್ತವ್ಯ. ಆದರೆ ಅಂದು ಏತಕ್ಕಾಗಿ ನಮ್ಮನ್ನು ಹೊರಗೆ ಇಟ್ಟು ಮಾಡಿದ್ದೀರಿ? ಈ ಗುಟ್ಟಿಗೆ ಏನಾದರೂ ಪ್ರಬಲವಾದ ಕಾರಣ ಇದೆಯೋ? ಎಲ್ಲಾದರೂ ಒಂದು ಘಂಟೆ ಬಿಟ್ಟರೆ ಏನಾದರೂ ಬದಲಾವಣೆ ಆದೀತು ಎಂಬ ಭಯದ ಕಾರಣ ಇರಬಹುದೆ? ಇವೊತ್ತು ಈ ಸದನದಲ್ಲಿ ವಿಶ್ವಾಸ ನಿರ್ಣಯದ ಠರಾವನ್ನು ಮಂಡನೆ ಮಾಡಿದ್ದಾರೆ. ದೈತ್ಯ ಶಕ್ತಿ ಇರತಕ್ಕಂಥ ಈ ಪಕ್ಷಕ್ಕೆ ಇಂಥ ದೀನ ಸ್ಥಿತಿಯು ಬರಬಾರದಿತ್ತು ಎಂದು ಹೇಳಬಯಸುತ್ತೇನೆ. ಇದಕ್ಕೆ ರಾಜಕಾರಣದ ವ್ಯಾಖ್ಯಾನ ಇಲ್ಲ. ಈಗ ಮಾನ್ಯ ಬಂಗಾರಪ್ಪನವರು ದೈನ್ಯತೆಯನ್ನು ವ್ಯಕ್ತ ಮಾಡಿದ್ದಾರೆ. ಅವರು ಮಾನ್ಯ ವೀರೇಂದ್ರಪಾಟೀಲರ ಮನೆಗೆ ಹೋಗಿದ್ದಾರೆ. ಅವರ ಔಷಧೋಪ ಚಾರದ ವಿಚಾರವನ್ನು ಹೇಳಿದ್ದಾರೆ. ಮನೆಯ ವಿಚಾರ ಹೇಳಿದ್ದಾರೆ. ಅವರ ಆಶೀರ್ವಾದಗಳನ್ನು ಕೇಳಿಕೊಂಡಿದ್ದಾರೆ. ಅವರ ಸಹಕಾರವನ್ನು ಕೇಳಿಕೊಂಡಿದ್ದಾರೆ. ಮಾನ್ಯ ರಾಜಶೇಖರ ಮೂರ್ತಿಯವರೇ, ಸಾಧ್ಯವಾದರೆ ಅವರು ಕೇಳಿದುದನ್ನು ಕೊಟ್ಟು ಬಿಡಿ ಎಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ನನ್ನ ಹತ್ತಿರ ಪಟ್ಟಿ ಇದೆ, ಈಗ ಊಟವಾದ ನಂತರ ಸೇರೋಣವೇ?

ಶ್ರೀ ಎಸ್. ಬಂಗಾರಪ್ಪ:- ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಇಂಟರ್ವಲ್‌ಗೆ ಬಿಡುವುದು ಅವಶ್ಯಕತೆಯಿಲ್ಲವೆಂದು ನನ್ನ ಭಾವನೆ. ಹಾಗೆಯೇ ಕಂಟಿನ್ಯು ಮಾಡಬಹುದು.

ಶ್ರೀ ಕೆ.ಎಸ್. ಈಶ್ವರಪ್ಪ:- ಒಂದೇ ದಿವಸ ಇರುವುದರಿಂದ ಬೇಡ ಕಂಟಿನ್ಯೂ ಮಾಡೋಣ.

ಶ್ರೀ ಎಸ್. ಬಂಗಾರಪ್ಪ:- ಅಧ್ಯಕ್ಷರೇ, ಆ ನಾಯಿನಿಷ್ಠೆ ಅನ್ನುವ ಪದದ ಬಗ್ಗೆ ನಿಷ್ಠೆ ಇರಲಿ, ನಾಯಿ ಎನ್ನುವ ಪದಬೇಡ, ಏಕೆಂದರೆ ಅಷ್ಟರೊಳಗೆ ಮಧ್ಯಾಹ್ನದ ಪತ್ರಿಕೆಗೆ ಅಚ್ಚಿಗೆ ಅದು ಹೋಗಿಬಿಡುತ್ತದೆ, ಅದು ಇರುವುದು ಒಳ್ಳೆಯದಲ್ಲವೆಂದು ಹೇಳುತ್ತಿದ್ದೇನೆ. ಅದಕ್ಕೆ ಅವರೂ ಒಪ್ಪಿಗೆ ಕೊಡುತ್ತಾರೆಂದು ಭಾವಿಸಿದ್ದೇನೆ. ಆ ಪದವನ್ನು ತೆಗೆದುಬಿಟ್ಟರೆ ಬಹಳ ಒಳ್ಳೆಯದು.

ಶ್ರೀ ಬಿ. ಹೆಚ್. ಬನ್ನಿಕೋಡ್:- ಮಾನ್ಯ ಅಧ್ಯಕ್ಷರೇ, ಆ ಪದಕ್ಕೆ ಅರ್ಹರಲ್ಲ. ದಯವಿಟ್ಟು ವಿರೋಧ ಪಕ್ಷದ ನಾಯಕರು ಅದನ್ನು ವಾಪಸ್ ತೆಗೆದುಕೊಳ್ಳಲು ಅಡ್ಡಿಯಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ಪ್ರೊಫೆಸರ್ ಸಾಹೇಬರು ಹೇಳಿದ ಹಾಗೆ, ನಾನು ಒಂದು ತಪ್ಪು ಮಾಡಿದೆ. ಅಂಥಾ ಫೇಥ್‌ಫುಲ್ ಅನಿಮಲನ್ನು ಇಲ್ಲಿ ತರಬಾರದಿತ್ತು. ಬಿಟ್ಟುಬಿಡಿ ಬೇಕಾದರೆ.

ಶ್ರೀ ಕೆ. ಸೋಮಪ್ಪಸುವರ್ಣ:- ಅದು ನಮ್ಮ ಮನುಷ್ಯ ಸಮಾಜಕ್ಕೇ ಅವಮಾನ. ಆದುದರಿಂದ 'ನಾಯಿ'ಎನ್ನುವ ಪದವನ್ನು ಬಿಟ್ಟು ಒಳ್ಳೆಯ ಮನುಷ್ಯತ್ವ ಪದವನ್ನು ಉಪಯೋಗಿಸಿದರೆ ಈ ಸದನಕ್ಕೂ ಮನುಷ್ಯತ್ವಕ್ಕೂ ಗೌರವ ಬರುತ್ತದೆ. ಆದುದರಿಂದ ಆ ಪದವನ್ನು ಉಪಯೋಗಿಸದೆ. ಸುಲಲಿತವಾದ ಕನ್ನಡದ ಪದಗಳನ್ನು ಬಲ್ಲಂತ ನಾವುಗಳು ಒಳ್ಳೆಯ ಪದಗಳನ್ನು ಸದನದಲ್ಲಿ ಉಪಯೋಗಿಸುವುದು ಒಳ್ಳೆಯದು.

(ಗೊಂದಲ)

ಅಧ್ಯಕ್ಷರು:- ಸ್ಟ್ರಿಕ್ಟ್ಲಿ ಕೆಲವು ಪದಗಳು ಅನ್‌ಪಾರ್ಲಿಮೆಂಟರಿ ಆಗುವುದಿಲ್ಲ. ಆದರೆ ಕೆಲವು ಸಲ ಅಂಥವು ಗುಡ್‌ಟೇಸ್ಟ್‌ನಲ್ಲಿರುವುದಿಲ್ಲ. I leave it to your good sense, Whether it is in good taste or not.

SRI D.B. CHANDRE GOWDA:- With due apologies... ನಾನು ಸದನದಲ್ಲಿ ಬಳಕೆ ಮಾಡುವ ಮುನ್ನ ಸಾಧ್ಯವಾದಷ್ಟು ಮಟ್ಟಿಗೆ ಆಲೋಚನೆ ಮಾಡಿಯೇ ಬಳಸಿರುತ್ತೇನೆ. ಅಧ್ಯಕ್ಷರಿಗೆ ಅದು ಅನ್‌ಪಾರ್ಲಿಮೆಂಟರಿ ಎಂದು ಕಂಡುಬಂದರೆ ತೆಗೆದುಹಾಕಿರಿ ನನ್ನ ಅಭ್ಯಂತರವಿಲ್ಲ. ನಾನು ವಾಪಸ್ ತೆಗೆದುಕೊಳ್ಳುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ:- ಹಿಂದೆಯೆಲ್ಲ ಆ ರೀತಿ ಪದದ ಬಳಕೆಯಾಗಿರುವ ಘಟನೆಗಳಿವೆ. ಅವರು ಬಳಸಿರುವ ಪದ ಅನ್‌ಪಾರ್ಲಿಮೆಂಟರಿ ಎಂದು ನಾನೇನು ಹೇಳುತ್ತಿಲ್ಲ. I quite agree with the Leader of the Opposition. ಅದು ಅನ್‌ಪಾರ್ಲಿಮೆಂಟರಿ ಎಂದು ನಾವು ಹೇಳುತ್ತಿಲ್ಲ. But it is not in good taste. ಹಿಂದೆಯೂ ಕೂಡ ಎಂಥವನ್ನು ಕಡತದಿಂದ ತೆಗೆದುಹಾಕಿರುವುದು ಇದೆ, ಹಾಗೆ ಮಾಡತಕ್ಕಂಥ ಅವಶ್ಯಕತೆ ಈಗ ಇದೆ.

ಶ್ರೀ ಎಂ. ರಾಮಪ್ಪ:- ಒಂದು ಸಾರಿ ಒಬ್ಬ ಸದಸ್ಯರು ಕಡಿದಿದೆ ಎಂದು ಹೇಳಿದರು. ಅದು ಪಾರ್ಲಿಮೆಂಟರಿ ಎಂದು ಹೇಳಿದರು. ಆಮೇಲೆ ಅದು ಅನ್‌ಪಾರ್ಲಿಮೆಂಟರಿ ಎಂದು ಆ ಕಡೆಯಿಂದಲೇ ಬಂತು. ಆ ಮಾತು ನಿಮಗೆ ಬಂದಾಗ ಅನ್‌ಪಾರ್ಲಿಮೆಂಟರಿ ಎಂದು ಹೇಳುತ್ತೀರಿ. ಅದಕ್ಕೋಸ್ಕರ ಸೌಜನ್ಯವಾಗಿ ನೀವು ಅದನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಂಡು ಉಪಯೋಗಿಸಬೇಕಾಗುತ್ತದೆ. ನೀವು ಜಾಸ್ತಿ ಮಾತನಾಡಿದ ಹಾಗೆಲ್ಲ ಇನ್ನೊಂದು ಸಾರಿಗೆ ನಿಮ್ಮ ಮೇಲೆಯೇ ಬೀಳುತ್ತದೆ. ಏಕೆಂದರೆ, ಒಂದೊಂದು ರೀತಿಯಲ್ಲಿ ಒಂದೊಂದು ಸಾರಿ ನೀವೇ ಸಿಕ್ಕಿಹಾಕಿಕೊಳ್ಳುತ್ತೀರಿ. ಏಕೆಂದರೆ ನಾವು ಹಿಂದಿನದನ್ನು ನೋಡಬೇಕಾಗುತ್ತದೆ. 1983ರಲ್ಲಿ ನೀವು ಆಗ ಎಲ್ಲಿದ್ದಿರಿ? ನಾಯಿ ವಿಚಾರ ಬಂದಾಗ ನೀವು ಯಾವ ನಾಯಿಯ ಹತ್ತಿರ ಇದ್ದಿರಿ ಎಂದು ಅರ್ಥವಾಗುವುದಿಲ್ಲ. ಅದಕ್ಕೆ ನಿಮ್ಮನ್ನು ನಂಬಿಕೊಂಡು ಹೋಗುವುದಕ್ಕೂ ಕಷ್ಟವಾಗುತ್ತದೆ.

ಶ್ರೀ ಕೆ.ಹೆಚ್. ಪಾಟೀಲ್:- ಮಾನ್ಯ ಅಧ್ಯಕ್ಷರೇ, ಈ ರೀತಿ ಸದನದಲ್ಲಿ ಒಮ್ಮೊಮ್ಮೆ ಮಾತನಾಡುವಾಗ ಅದರ ವಿಪರ್ಯಾಸವನ್ನು ನಾವು ತಪ್ಪದಾರಿಗೆ ಎಣಿಸದ ಹಾಗೆ ನೋಡಬೇಕಾಗುತ್ತದೆ. ಅಳಿಲುಸೇವೆ ಎಂದಾಗಲಿ ಅಥವಾ ಶಬರಿ ಭಕ್ತಿ ಎಂದಾಗಲೀ, ನಾಯಿಯ ಭಕ್ತಿ ಎಂದಾಗಲಿ ಆ ಭಕ್ತಿಗೆ ಹೆಚ್ಚಿನ ಶ್ರೇಷ್ಠತೆ ಆಗುತ್ತದೆಯೇ ಹೊರತು ಅದು ಕಾಂಗ್ರೆಸ್ಸಿಗೆ ನಾಯಿ ಎಂದ ಹಾಗೆ ಆಗುವುದಿಲ್ಲ. ಅದಕ್ಕಾಗಿ ಅವರಿಗೆ ನಾನು ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ಸ್ನೇಹಿತರು ಯಾರಾದರೂ ತಪ್ಪು ತಿಳಿದಿದ್ದರೆ ಅದನ್ನು ತೆಗೆದು ಹಾಕಬೇಕು. ಆ ದೃಷ್ಟಿಯಿಂದೇನೂ ಅಲ್ಲ. ನಾಯಿ ಭಕ್ತಿ ಎಂದರೆ ನಾಯಿ ಭಕ್ತಿ ಎಂಥದ್ದು ಇರುತ್ತದೆ, ತನ್ನ ಪ್ರಾಣ ಕೊಟ್ಟು ಮಂದಿಯನ್ನು ಉಳಿಸುತ್ತದೆ. ಹಾಗೆಯೇ ಕಾಂಗ್ರೆಸ್ಸಿನವರು ತಮ್ಮ ಪ್ರಾಣವನ್ನು ಕೊಟ್ಟು ನಿಮ್ಮನ್ನು ಉಳಿಸುತ್ತಾರೆ. ಈ ಮಾತನ್ನು ತಾವು ಲಕ್ಷ್ಯದಲ್ಲಿ ಇಡಬೇಕು.

ಶ್ರೀ ಎಂ. ವೀರಪ್ಪಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ, ಇದು ನಮ್ಮ ಪಕ್ಷ ಅಥವಾ ಅವರ ಪಕ್ಷ ಎಂಬ ವಿಚಾರ ಅಲ್ಲ. ಏಕೆಂದರೆ, ಸಂಸದೀಯ ಒಂದು ಖಾತೆಯ ವ್ಯವಹಾರವನ್ನು ನೋಡಿಕೊಳ್ಳ ತಕ್ಕಂಥದ್ದು ನನ್ನ ಕರ್ತವ್ಯದಿಂದ ದೃಷ್ಟಿಯಿಂದ ಈ ಸದನದಲ್ಲಿ ನಾವು ಇವತ್ತು ಹಾಕತಕ್ಕಂಥದ್ದು ಮುಂದೆ ಅನುಸರಿಸತಕ್ಕಂಥ ಕೆಲವು ಸತ್‌ಪರಂಪರೆಗಳನ್ನು ಅನುಸರಿಸಿಕೊಂಡು ಈ ಸದನ ನಡೆಯಬೇಕಾಗಿದೆ. ಈಗ ಒಂದು ಶಬ್ದವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಉಪಯೋಗ ಮಾಡಿದರು. ಆ ಶಬ್ದವನ್ನು ನಾವು ಬರೀ ಪ್ರತ್ಯೇಕವಾಗಿ ನೋಡತಕ್ಕಂಥದ್ದು ಅಲ್ಲ. ಪ್ರತ್ಯೇಕವಾಗಿ ನೋಡಿದರೆ ಬಹುಶಃ ಅದು ಯಾವುದೇ ವ್ಯಾಖ್ಯಾನವನ್ನು ಅದರಲ್ಲಿ ಮಾಡಬಹುದು. ಆದರೆ ಒಟ್ಟು ಅರ್ಥ ಏನಾಗುತ್ತದೆ ಎಂದು ಹೇಳಿದರೆ, ಇಲ್ಲಿ ಈ ಕಡೆಯ ಸದಸ್ಯರು ಇರಬಹುದು, ಆ ಕಡೆಯ ಸದಸ್ಯರು ಇರಬಹುದು, ಜವಾಬ್ದಾರಿಯುತವಾದಂಥ ಶಾಸಕ ಸದಸ್ಯರು ಇರುತ್ತಾರೆ, ಜವಾಬ್ದಾರಿ ಯುತವಾದಂಥ ಶಾಸಕರು ಸದಸ್ಯರು ಅವರ ವಿಚಾರದಲ್ಲಿ ಏನಾದರೂ ಒಂಧು ರಿಫ್ಲೆಕ್ಷನ್ಸ್ ಬಂದರೆ, The dog, as well comparing the Legislators, mere ನಿಷ್ಠೆ ಪ್ರಶ್ನೆ ಇಲ್ಲ. Suppose there is reflection, what will the people on the street or the public will think about the Legislators. ಈ ವ್ಯಾಖ್ಯಾನ ಬರುತ್ತದೆ. The word used may not be literally unparliamentary but still it can reflect on the group of MLAs, which is not that much desired by the public or by this House. I think that is to be deleted. It serves as innuendo. Certain innuendo, will be a reflection on the MLAs. It can be read in any way. It will reflect on the Congress MLAs. That all the MLAs are equivalent to such and such a thing. ಈ ಅರ್ಥ ಬರುವುದು ಇದ್ದರೆ, ಬಹುಶಃ ಆ ಅರ್ಥದಲ್ಲಿ ಒಟ್ಟಿನ ಸಮಷ್ಟಿಯಲ್ಲಿ ವಿರೋಧ ಪಕ್ಷದ ನಾಯಕರು ಉಪಯೋಗ ಮಾಡಿಕೊಂಡಿದ್ದರೆ ಅದು ಸೌಜನ್ಯಯುತವಾದಂಥ ಶಬ್ದ ಆಗುವುದಿಲ್ಲ. ಮುಂದೆ ಯಾವುದಾದರು ಸಂದರ್ಭ ಬಂದಾಗ ಯಾರಾದರೂ ಕೂಡಾ ಉಪಯೋಗ ಮಾಡ ಬಹುದು, ನಾಯಿಯನ್ನು ಈ ರೀತಿ ಕಂಪೇರ್ ಮಾಡಬಹುದು.Then it will be very difficult to withdraw from that position. It is better we lay down a very safe position to-day so that it may not stretch too long which can cover wider area of the words which can reflect on the conduct or the status of particular individual or a group of individuals, particularly members of this House. It is not just comparing any gentleman with this particular dog or faithfullness of the dog, it is reflecting on the group of MLAs, with particular epithet which may not be desirable because once you lay down position, then it is likely that it may stretch a little further, far further and it may cover that much of an area which may

ultimately land us in rebuke and ridicule in the public. That is my submission. So this is deserved to be deleted.

ಶ್ರೀ ಕೆ. ಲಕ್ಕಪ್ಪ:- ಮಾನ್ಯ ಅಧ್ಯಕ್ಷರೇ, ಯಾವ ಪಾರ್ಲಿಮೆಂಟರಿ ಅಥವಾ ಅನ್‌ಪಾರ್ಲಿಮೆಂಟರಿ ವಿಷಯ ಎಂದು ಪ್ರಸ್ತಾಪ ಮಾಡುವುದು ಏನೂ ಇಲ್ಲ. ಈ ಸಭೆಯ ಘನತೆಗೌರವಗಳಿಗೆ ಕುಂದು ಬರತಕ್ಕಂಥ ಅಭಿಪ್ರಾಯಗಳು ಏನಾದರೂ ಈ ಕಡೆ ಹೇಳಿರಲಿ, ಅಥವಾ ಆ ಕಡೆ ಹೇಳಿರಲಿ, ಆ ವಿಚಾರಗಳು ಕಡತಕ್ಕೆ ಬರಬಾರದು ಎನ್ನತಕ್ಕಂಥ ಆದೇಶವನ್ನು ಕೊಡುವುದಕ್ಕೆ ತಮಗೆ ಸರ್ವಾಧಿಕಾರ ಇದೆ. ತಾವು ಕೂಲಂಕುಷವಾಗಿ ಅವರು ಯಾವ ವಿಚಾರದಲ್ಲಿ ಈ ಭಾಷೆಯನ್ನು ಬಳಸಿದರು, ಆ ಸಂದರ್ಭ ಮತ್ತು ವಿಷಯವನ್ನು ಪ್ರಸ್ತಾಪ ಮಾಡಿದಾಗ ಈ ಸಭೆಗೆ ಅಗೌರವ ಆಗತಕ್ಕ ರೀತಿಯಲ್ಲಿ ಏನಾದರೂ ಆ ಭಾವನೆ ವ್ಯಕ್ತ ಮಾಡಿದ್ದರೆ ಅದನ್ನು ಕಡತದಿಂದ ತೆಗೆದುಹಾಕತಕ್ಕಂಥ ಸರ್ವಾಧಿಕಾರ ತಮಗೆ ಇದೆ. ಜೊತೆಗೆ ನೀವು ನಿಮ್ಮ ಅಧಿಕಾರ ವ್ಯಾಪ್ತಿಯಲ್ಲಿ ನಡವಳಿಕೆಗಳು ಹೇಗೆ ನಡೆಯಬೇಕು ಎಂದು ವಿಚಾರ ಮಾಡತಕ್ಕಂಥ ಮತ್ತು ಆ ಬಗ್ಗೆ ತಾವು ಆದೇಶ ಕೊಡತಕ್ಕಂಥ ಅಧಿಕಾರವನ್ನು ನಿಮಗೆ ಕೊಟ್ಟಿದ್ದೇವೆ. ಆದ್ದರಿಂದ ಆ ಅಧಿಕಾರವನ್ನು ಚಲಾಯಿಸಿ ತಾವು ವಿಚಾರ ಮಾಡಿ ಕಡತದಿಂದ ತೆಗೆಯುವುದಕ್ಕೆ ಯಾವ ಅಭ್ಯಂತರವೂ ಇಲ್ಲ. ಆದ್ದರಿಂದ ಇದಕ್ಕೆ ಹೆಚ್ಚಿನ ಅಥವಾ ವಿಶೇಷವಾದ ಚರ್ಚೆಯು ಬೇಕಾಗಿಲ್ಲ.

ಅಧ್ಯಕ್ಷರು:- ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರಾದಂತಹ ಶ್ರೀಮಾನ್ ವೀರಪ್ಪ ಮೊಯಿಲಿಯವರು ಈ "ನಾಯಿ" ಪದದ ಉಪಯೋಗ ಬಗ್ಗೆ ಮತ್ತು ಈ ಪದದ ಹಿನ್ನೆಲೆ ಹಾಗೂ ಈ ಪದ ಯಾವ ಕಾಂಟೆಸ್ಟ್‌ನಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಉಪಯೋಗಿಸಿದರು, ಅದು ಈ ಸಭೆಯ ಗೌರವಕ್ಕೆ ಕುಂದು ತರತಕ್ಕಂಥ ಅಭಿಪ್ರಾಯ ಬರಬಹುದು ಎಂಬ ಅನುಮಾನ ಬಹು ಮಂದಿ ಸದಸ್ಯರಿಗೆ ಬಂದಿದೆ ಎಂದು ಹೇಳಿದರು. ಆದ್ದರಿಂದ ಮಾನ್ಯ ಸದಸ್ಯರುಗಳು ಘನತೆ ಗೌರವ ದೃಷ್ಟಿಯಿಂದ ಪದ ಅನ್‌ಪಾರ್ಲಿಮೆಂಟರಿ ಅಲ್ಲದಿದ್ದರೂ ಕೂಡ ಈ ಪದದ ಉಪಯೋಗದಿಂದ....

ಶ್ರೀ ವಾಟಾಳ್ ನಾಗರಾಜ್:- ತಾವು ತೀರ್ಪು ಕೊಡುವುದಕ್ಕೆ ಮುಂಚೆ ಇದರ ಬಗ್ಗೆ ಚರ್ಚೆಗೆ ಅವಕಾಶ ನನಗೂ ಮಾಡಿಕೊಡಬೇಕು.....

ಅಧ್ಯಕ್ಷರು:- ಇದು ಅಂತಹ ದೊಡ್ಡ ತೀರ್ಪೇನೂ ಅಲ್ಲ..

ಶ್ರೀ ವಾಟಾಳ್ ನಾಗರಾಜ್:- ತೀರ್ಪು ಕೊಡುವುದಕ್ಕೆ ಮುಂಚೆ ನಾವು ಇದರ ಬಗ್ಗೆ ಮಾತನಾಡಬೇಕಾಗಿದೆ. ನಾವು ಮಾತನಾಡಿದ ಮೇಲೆ ತೀರ್ಪು ಕೊಡಬಹುದು.

(ಗೊಂದಲ)

ಅಧ್ಯಕ್ಷರು:- ಮಾನ್ಯ ಕೆ.ಹೆಚ್.ಪಾಟೀಲರು ಹೇಳಿದ್ದನ್ನೂ ಕೇಳಿದ್ದೇನೆ. ಪ್ರೊ:ನಂಜುಂಡಸ್ವಾಮಿ ಅವರು ಹೇಳಿದ್ದನ್ನೂ ಕೇಳಿದ್ದೇನೆ. ಮಾನ್ಯ ಜಾಲಪ್ಪನವರ ವಿಶ್ಲೇಷಣೆಯನ್ನು ಸಹ ಕೇಳಿದ್ದೇನೆ. ಈ ಎಲ್ಲಾ ವಿಶ್ಲೇಷಣೆಗಳನ್ನು ಕೇಳಿದ ಬಳಿಕ ಮಾನ್ಯ ವಾಟಾಳ್ ನಾಗರಾಜ್ ಅವರ ವಿಶ್ಲೇಷಣೆಯನ್ನೂ ಕೇಳಿದ ನಂತರ ನಾನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಮಂತ್ರಿ ಮಂಡಲದಲ್ಲಿ ವಿಭಾಗ ಆದಾಗ ನಾನು ಒಂದು ಮಾತು ಹೇಳಬೇಕಾಗಿದೆ. ಮಂತ್ರಿ ಮಂಡಲದಲ್ಲಿ ಈ ವಿಚಾರದಲ್ಲಿ ಎರಡು ಭಾಗ ಆಯಿತು. ನಾಯಿ ಎಂಬ ಪದದಲ್ಲಿ ಎರಡು ಭಾಗ ಆಗಿ ಹೋಯಿತು....

ಶ್ರೀ ಎಸ್. ಬಂಗಾರಪ್ಪ:- ಆ ವಿಭಾಗ ಯಾಕೆ ಗೊತ್ತೇನು? ಒಂದೇ ಕಣ್ಣು ಇದ್ದರೆ ಏಕಾವಾಗಿ ಕಾಣುತ್ತಿತ್ತು. ಎರಡು ಕಣ್ಣು ಇರುವುದರಿಂದ ಎರಡೆರಡು ಕಂಡಿದೆ ಅಷ್ಟೆ.

ಶ್ರೀ ವಾಟಾಳ್ ನಾಗರಾಜ್:- ನಮ್ಮಿಬ್ಬರಿಗೂ ಒಂದೇ ತರಹ. ನೀವೂ ಕನ್ನಡಕ, ನಾನೂ ಕನ್ನಡಕ. ಮಾನ್ಯ ವಿರೋಧ ಪಕ್ಷದ ನಾಯಕರು ನಾಯಿ ಎನ್ನುವ ಪದವನ್ನು ಉಪಯೋಗಿಸಿ ** ಎಂದು ಹೇಳಿದರು. ಇದನ್ನು ತಾವು ತೆಗೆದುಕೊಳ್ಳಬೇಕು, ** ಎಂದು ಹೇಳಿದರೆ ನಾಯಿಗೆ ಪುರಾಣ,

---

** ಅಧ್ಯಕ್ಷರ ಅಪ್ಪಣೆಯ ಮೇರೆಗೆ ಮೇಲಿನ ಪದವನ್ನು ತೆಗೆದುಹಾಕಲಾಗಿದೆ.

ಪ್ರವಚನದಲ್ಲಿ ಅನೇಕ ಎತ್ತರವಾದ ವಿಚಾರಗಳನ್ನು ಹೇಳಿದ್ದಾರೆ. ನಾಯಿ ಎಂದರೆ ನಾರಾಯಣನಿಗೆ ಸಮ. ನಾಯಿ ಎನ್ನತಕ್ಕದ್ದು ಎಂದರೆ ನಾರಾಯಣ ಎಂದು...

ಶ್ರೀ ಎಸ್. ಬಂಗಾರಪ್ಪ:- ನಾರಾಯಣ ನಿಷ್ಠೆ ಎಂದು ಬೇಕಾದರೆ ಹೇಳಿಕೊಳ್ಳಿ....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಚಂದ್ರೇಗೌಡರು ಬಹಳ ದೊಡ್ಡ ಪದವನ್ನು, ಬಹಳ ಗೌರವಯುತವಾದ ಪದವನ್ನು ಉಪಯೋಗಿಸಿದ್ದಾರೆ. ಅವರು ಇದನ್ನು ಉಪಯೋಗಿಸಬಾರದಿತ್ತು. ** ಇದೆಯೆಲ್ಲ ಅಂತಹ ನಿಷ್ಠೆ ಮನುಷ್ಯನಿಗೂ ಇಲ್ಲ. ನಾಯಿಯದು ಅಂತಹ ಪರಿಣಾಮಕಾರಿಯಾದ ನಿಷ್ಠೆ. ಈ ಬಗ್ಗೆ ರೈತ ಸಂಘಧ ಅಧ್ಯಕ್ಷರಾದ ಪ್ರೊ:ನಂಜುಂಡಸ್ವಾಮಿಯವರು ವ್ಯಾಖ್ಯಾನ ಬಹಳ ಸರಿಯಾಗಿ ಮಾಡಿದ್ದಾರೆ. ಶ್ರೀಮಾನ್ ಕೆ.ಹೆಚ್. ಪಾಟೀಲರು ಈ ಪದವನ್ನು ಸಂತೋಷವಾಗಿ, ಅಭಿಮಾನದಿಂದ ಸ್ವೀಕಾರ ಮಾಡಿದ್ದಾರೆ. ಆದರೆ ನಮ್ಮ ಮೊಯಿಲಿಯವರ ವ್ಯಾಖ್ಯಾನ ಮಾತ್ರ ನನಗೆ ಅರ್ಥ ಆಗಿಲ್ಲ. ಅಂದರೆ ಅದು ಸರಿಯಾದುದು ಅಲ್ಲ. ಅವರಲ್ಲಿ ಎರಡು ಗುಂಪು ಆಯಿತು....

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:- ** ಇದೆ..

ಶ್ರೀ ವಾಟಾಳ್ ನಾಗರಾಜ್:- ಈ ** ಎನ್ನುವ ಪದ ಇದೆಯಲ್ಲಾ ಇದು ನಿಜವಾಗಿ ಅವರಿಗೆ ಪದ್ಮಶ್ರೀ ಕೊಟ್ಟ ಹಾಗೆ. ಅಥವಾ ಪದ್ಮಭೂಷಣ ಕೊಟ್ಟ ಹಾಗೆ. ಆದ್ದರಿಂದ ಅವರು ಈ ಪದವನ್ನು ತೆಗೆಯಿರಿ ಎಂದು ಹೇಳತಕ್ಕದ್ದು ಸರಿಯಾದುದಲ್ಲ. ಮತ್ತು ಇದು ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಉಪಯೋಗಿಸತಕ್ಕಂಥ ಪದಗಳೇ. ಇದು ನಮ್ಮ ಪ್ರಜಾತಂತ್ರಕ್ಕೆ ವಿರೋಧವಾದಂಥಹ ಪದಗಳೇನೂ ಅಲ್ಲ. ನಾಯಿ ನಿಷ್ಠೆ ಎಂದು ಹೇಳುತ್ತೇವೆ, ಅಥವಾ ಅಳಿಲು ಸೇವೆ ಎಂದು ಹೇಳುತ್ತೇವೆ. ಶ್ರೀರಾಮನಿಗೆ ಅಳಿಲು ಸೇವೆ ಮಾಡಿತು ಮರಳು ಭಕ್ತಿ ಇತ್ತು ಎಂದು ಹೇಳುತ್ತೇವೆ. ಹಾಗಾದರೆ ಈ ಸಭೆಯಲ್ಲಿ ಅಳಿಲು ಸೇವೆ ಎನ್ನತಕ್ಕಂಥ ಪದವನ್ನು ಉಪಯೋಗಿಸಬಾರದು ಎಂದು ಹೇಳಬಹುದು. ಆದರೆ ಹಿಂದೆ ಶ್ರೀರಾಮನಿಗೆ ಬಹಳ ಅಪ್ಯಾಯಮಾನವಾಗಿ ಅಳಿಲು ಸೇವೆ ಮಾಡಿದೆ. ಹಾಗೆಯೇ ಆಂಜನೇಯನ ಭಕ್ತಿ ಇದೆ.

ಅಧ್ಯಕ್ಷರು:- ಹಾಗೆಯೇ ಅಳಿಲು ಭಕ್ತಿ, ಎಮ್ಮೆ ಚರ್ಮ, ಇದಕ್ಕೆಲ್ಲ ಕಲೋಕ್ವಿಯಲ್ ಮೀನಿಂಗ್ ಬೇರೆ ಇದೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಚಂದ್ರೇಗೌಡರು ತಮ್ಮ ಉದ್ದೇಶವನ್ನು ಬರೀ ನಾಯಿ ಎನ್ನುವ ಪದಕ್ಕೆ ಸೀಮಿತ ಮಾಡಲಿಲ್ಲ, ** ಎಂದು ಹೇಳಿದ್ದಾರೆ. ಆದುದರಿಂದ ಅದು ಬಹಳ ಪರಿಣಾಮಕಾರಿಯಾಗಿ ಆಡಳಿತ ಪಕ್ಷದವರಿಗೆ ಗೌರವ ತರತಕ್ಕಂಥ ಪದವೇ ಹೊರತು ಕೆಟ್ಟ ಪದ ಏನು ಅಲ್ಲ. ಆದ್ದರಿಂದ ಆ ಪದವನ್ನು ಕಡತದಿಂದ ತೆಗೆಯತಕ್ಕದ್ದು ಒಳ್ಳೆಯದ್ದಲ್ಲ.

ಅಧ್ಯಕ್ಷರು:- ಇದರ ಬಗ್ಗೆ ಸೂಕ್ತ ನಿರ್ಧಾರವನ್ನು ಮಧ್ಯಾಹ್ನ ಪ್ರಕಟಿಸುತ್ತೇನೆ.

ಪ್ರಕಟಣೆ

ಅಧ್ಯಕ್ಷರು:- ಕರ್ನಾಟಕ ವಿಧಾನ ಸಭೆ ಕಾರ್ಯವಿಧಾನ ಹಾಗೂ ನಡವಳಿಕೆ 9ನೇ ನಿಯಮದ ಮೇರೆಗೆ ಈ ಕೆಳಕಂಡ ಮಾನ್ಯ ಸದಸ್ಯರುಗಳನ್ನು ಪ್ರಸ್ತುತ ಅಧಿವೇಶನದ ಸಮಯದಲ್ಲಿ ಅಧ್ಯಕ್ಷರು ಉಪಾಧ್ಯಕ್ಷರು. ಗೈರುಹಾಜರಿಯಲ್ಲಿ ಅಧ್ಯಕ್ಷತೆಯನ್ನು ವಹಿಸಲು ನಾಮನಿರ್ದೇಶನ ಮಾಡಿದ್ದೇನೆ.

ಶ್ರೀಮತಿ ರೇಣುಕಾ ರಾಜೇಂದ್ರನ್,

** ಅಧ್ಯಕ್ಷರ ಅಪ್ಪಣೆಯ ಮೇರೆಗೆ ಮೇಲಿನ ಪದವನ್ನು ತೆಗೆದುಹಾಕಲಾಗಿದೆ.

ಶ್ರೀಮತಿ ದಮಯಂತಿ ಬೋರೇಗೌಡ,
ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್,
ಶ್ರೀ ಬ್ಲೇಸಿಯಸ್ ಎಂ.ಡಿ.ಸೌಜ
ಶ್ರೀ ಎ.ಎಂ. ಹಿಂಡಸಗೇರಿ,
ಶ್ರೀ ಎಸ್.ಹೆಚ್. ಕೌಜಲಗಿ.

† ಡಾ: ಜೀವರಾಜ್ ಆಳ್ವ (ಮಲ್ಲೇಶ್ವರಂ):- ಮಾನ್ಯ ಅಧ್ಯಕ್ಷರೆ, ಅತ್ಯಂತ ಬಹಳ ವಿಸ್ಮಯಕಾರಿ ರಾಜಕೀಯ ಬದಲಾವಣೆಯಿಂದ ಇವತ್ತು ಕಾಂಗ್ರೆಸ್ (ಐ) ಪಕ್ಷದ ಶಾಸಕಾಂಗ ಪಕ್ಷದ ನಾಯಕರಾಗಿ ಶ್ರೀ ಎಸ್.ಬಂಗಾರಪ್ಪನವರು ಚುನಾಯಿತರಾಗಿ ರಾಜ್ಯದ ಮುಖ್ಯಮಂತ್ರಿಯಾಗಿದ್ದಾರೆ. ಇದು ಅವರ 10 ವರ್ಷಗಳ ಕನಸು. ವೈಯುಕ್ತಿಕವಾಗಿ ನಮ್ಮ ಒಬ್ಬ ಮಿತ್ರರು ಮುಖ್ಯಮಂತ್ರಿಯಾಗಿದ್ದಾರೆ. ಅವರು ನಮ್ಮ ಜೊತೆಯಲ್ಲಿ ಇದ್ದಿದ್ದರೆ ಎರಡು ವರ್ಷಗಳ ಮೊದಲೇ ಮುಖ್ಯಮಂತ್ರಿ ಆಗುತ್ತಿದ್ದರು ಎಂದು ನನಗೆ ಅನ್ನಿಸುತ್ತಿತ್ತು.

(ಗೊಂದಲ)

ಡಾ: ಜೀವರಾಜ್ ಆಳ್ವ:- ಮಾನ್ಯ ಅಧ್ಯಕ್ಷರೆ, ನಾನು ಹೇಳುವುದಕ್ಕೆ ಕಾರಣವಿದೆ. ಅತ್ಯಂತ ವಿಸ್ಮಯಕಾರಿ ಘಟನೆಗಳಿಂದಾಗಿ ಇವರು ಶಾಸಕಾಂಗ ಪಕ್ಷದ ನಾಯಕರಾಗಿದ್ದಾರೆ. ನಮ್ಮ ಜೊತೆಯಲ್ಲಿ ಇದ್ದಿದ್ದರೆ ಇವರ 10 ವರ್ಷದ ಕನಸು ಇತ್ತಲ್ಲ, ಅದು ನನಸಾಗುತ್ತಿತ್ತು. ಅದು ನನಗೂ ವೈಯುಕ್ತಿಕವಾಗಿ ಬಹಳ ಸಂತೋಷ. ಆದರೆ, ಎರಡು ವರ್ಷದ ಮೊದಲೇ ಮುಖ್ಯಮಂತ್ರಿ ಆಗುತ್ತಿದ್ದರು ಎಂದು ಹೇಳಿದೆ, ಅದಕ್ಕೆ ಏಕೋ ಹೆದರಿಕೆಯಾಗುತ್ತದೆ. ನಮ್ಮ ಜೊತೆಯಲ್ಲಿ ಇದ್ದಿದ್ದರೆ ಎರಡು ವರ್ಷ ಮೊದಲೆ ಆಗುವುದು ಅಲ್ಲದೆ ಸ್ವಲ್ಪ ಹೆಚ್ಚು ಸಮಯ ಮುಖ್ಯಮಂತ್ರಿ ಆಗಿರುತ್ತಿದ್ದರು. ನಿಮ್ಮ ಜೊತೆ ಇದ್ದರೆ ಜಾಸ್ತಿ ಸಮಯ ಇರುವುದಿಲ್ಲ. ಈಗ ಅವರು ವಿಶ್ವಾಸ ಮತಯಾಚನೆ ಮಾಡಿದ್ದಾರೆ. ಶಾಸನಸಭಾ ಸದಸ್ಯರ ವಿಶ್ವಾಸ ಮತ ಯಾಚನೆಯನ್ನು ತಮ್ಮ ಅಧ್ಯಕ್ಷತೆಯಲ್ಲಿ ಮಾಡುತ್ತಿದ್ದಾರೆ. ಆದರೆ, ಇದೇ ವಿಶ್ವಾಸ ಮತವನ್ನು ಅವರು ಶಾಸಕಾಂಗ ಪಕ್ಷದಲ್ಲಿ ಕೇಳಿದ್ದರೆ ಅದರ ಗತಿ ಏನಾಗುತ್ತಿತ್ತು ಎಂಬುದು ತಮಗೆ ಗೊತ್ತೇ ಇದೆ. ಪ್ರಥಮ ಬಾರಿಗೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು ಇಲ್ಲಿ ಓಟ್ ಆಫ್ ಕಾನ್‌ಫಿಡೆನ್ಸ್ ಕೇಳಿದರು. ಜೊತೆಗೆ ಓಟ್ ಆಫ್ ಕಾನ್‌ಫಿಡೆನ್ಸ್ ಅನ್ನು ಕೇಳಿದ್ದೇ ಶಾಸಕಾಂಗ ಪಕ್ಷದಲ್ಲಿ ಕೂಡ ಆ ಧೈರ್ಯವನ್ನು ಬಂಗಾರಪ್ಪನವರು ಕಾಂಗ್ರೆಸ್ ಐ ಶಾಸಕಾಂಗ ಪಕ್ಷದಲ್ಲಿ ಯುನಾನಿಮಸ್ ಆಗಿ ಆಯ್ಕೆ ಆದಮೇಲೆ ಮರುದಿವಸ ನಾನು ನಾಯಕನಾಗಿ ಚುನಾಯಿತನಾಗಿದ್ದೇನೆ; ಶಾಸನಸಭಾ ಸದಸ್ಯರೆ, ನಿಮಗೆ ನನ್ನ ಮೇಲೆ ವಿಶ್ವಾಸ ಇದೆಯೋ ಎಂದು ಕೇಳಿದ್ದರೆ ಏನು ಆಗುತ್ತಿತ್ತು ಎನ್ನುವುದು ಆಲೋಚನೆಗೆ ತರಬೇಕು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ:- ರಾಮಕೃಷ್ಣ ಹೆಗಡೆಯವರನ್ನು ನಾಯಕರನ್ನಾಗಿ ಮಾಡಬೇಕಾದರೆ ನಿಮ್ಮ ಪಾರ್ಟಿಯಲ್ಲಿ ಓಟ್ ನಡೆದಿತ್ತೇ? ಎಷ್ಟೆಷ್ಟು ಓಟು ಬಂದಿತ್ತು ಎಂದು ಲೆಕ್ಕ ಕೊಡಿ. ಸರ್ವಾನುಮತ ಎಂದು ಹೇಳಿದ್ದಿರಿ. ಅದೇ ರೀತಿ ನಾವು ಕೂಡ ಸರ್ವಾನುಮತ ಎಂದು ಮಾಡಿದ್ದೇವೆ.

ಡಾ: ಜೀವರಾಜ್ ಆಳ್ವ:- ನನಗೆ ಏನು ಯೋಚನೆ, ನೋವು ಅಂದರೆ ತಮಗೆ ನೆನಪು ಇದೆ. ಐತಿಹಾಸಿಕ ನಿರ್ಣಯನವನ್ನು ರಾಜ್ಯದ ಜನತೆ ಕಾಂಗ್ರೆಸ್ ಪಕ್ಷಕ್ಕೆ ಕೊಟ್ಟಿದೆ, ಒಳ್ಳೆಯ ನಾಯಕರು ಇದ್ದಾರೆ, ಚೆನ್ನಾಗಿ ಕೆಲಸ ಮಾಡಿ ಎಂದು ಹೇಳಿದರೆ ಆ ದಿವಸ ಭಾಷಣ ಮಾಡುವಾಗ ಹಾಸ್ಯ ಮಾಡಿದರು. ಹಾಸ್ಯ ಮಾಡಿದಾಗ ನಾನು ಒಂದು ಮಾತನ್ನು ಹೇಳಿದೆ. "This monolithic rock will break on one day." ಎಂದು.

(ಗೊಂದಲ)

ಡಾ: ಜೀವರಾಜ ಆಳ್ವ:- ಇವತ್ತು ಈ ಒಂದು ಅಭೇದ್ಯ ಬಂಡೆ ಎಂದು ಏನು ಜಂಬ ಕೊಚ್ಚುತ್ತಿದ್ದಿರೋ, 185 ಶಾಸಕರ ಬಲ ಇದೆಯೆಂದು ಅಹಂಕಾರದಿಂದ ವರ್ತಿಸುತ್ತಿದ್ದಿರೋ, ಅದರ ಪ್ರತಿಫಲವನ್ನು ನೀವು ಕಾಣುತ್ತಿದ್ದೀರಿ. ಇವತ್ತು ಈ ಕಾಂಗ್ರೆಸ್ಸಿನ ಹಡಗಿಗೆ ತೂತು ಬಿದ್ದಿದೆ. ಇವತ್ತು ಈ ತುತುಬಿದ್ದ ಹಡಗನ್ನು ಉಳಿಸಲಿಕ್ಕೆ ಬಂಗಾರಪ್ಪನವರನ್ನು ನಾಯಕರನ್ನಾಗಿ ಮಾಡಿದ್ದಾರೆ. ಆದರೆ ನಾಯಕರು ಸರಿ ಇದ್ದರೂ, ಅವರ ಮೇಲೆ 170 ಶಾಸಕರಲ್ಲಿ 120 ಶಾಸಕರಿಗೆ ಅವಿಶ್ವಾಸ ಇದೆ.

(ಗೊಂದಲ)

ಡಾ: ಜೀವರಾಜ ಆಳ್ವ:- ಅಲ್ಲಿ ಕುಳಿತಿದ್ದಾರಲ್ಲ ಆ 176 ಶಾಸಕರಲ್ಲಿ 120 ಜನಕ್ಕಿಂತ ಜಾಸ್ತಿ ಸ್ವಲ್ಪ ಪರವಾಗಿಲ್ಲ ಕೆಲಸ ಮಾಡಬಹುದು ಎಂಬ ಅಭಿಮಾನ ನಮಗಿದೆ. ಇದು ಅತಿಶಯೋಕ್ತಿಯಲ್ಲ, ಆದರೆ ಇದು ವಾಸ್ತವ ಸಂಗತಿ. ಇದು ಅವರಿಗೂ ಗೊತ್ತಿದೆ, ನಮಗೂ ಗೊತ್ತಿದೆ. ಈಗಿನ ರಾಜಕೀಯ ಪರಿಸ್ಥಿತಿಯಲ್ಲಿ instead of seeking a vote of confidence on this floor of the House he should have sought a confidence vote in his own legislature party the very next day.ಇದನ್ನು ಅವರಿಗೆ ಸಹಾಯವಾಗಲಿ ಎಂದು ಹೇಳುತ್ತಿದ್ದೇನೆ. ಇವತ್ತು ವೋಟ್ ಆಫ್ ಕಾನ್‌ಫಿಡೆನ್ಸ್ ಆಗುತ್ತದೆ. I am under false illusions. ನಾನು ಈ ನಾಯಿ ಭಕ್ತಿ ಈ ಮಾತನ್ನೆಲ್ಲ ಒಪ್ಪುತ್ತಿಲ್ಲ. ಆದರೆ ಇವತ್ತಿನ ರಾಜಕೀಯ ಪರಿಸ್ಥಿತಿಯಲ್ಲಿ ನಿಮಗೇನಾದರೂ ಆತ್ಮಗೌರವ ಇದ್ದರೆ ಅಥವಾ ಸ್ವಾಭಿಮಾನ ಎಂದು ಇದ್ದರೆ 176 ಜನ ನೀವು....

(ಗೊಂದಲ)

MR. SPEAKER:- Order, order, please.

ಡಾ: ಜೀವರಾಜ ಆಳ್ವ:- ಮಾನ್ಯ ಅಧ್ಯಕ್ಷರೆ, ನಾನು ಕಂಟಿನ್ಯೂ ಮಾಡುತ್ತೇನೆ. ನಾನು ಬಹಳಷ್ಟು ಬಯಸುವ ್ಲಿ. ಈ ಕಾಂಗ್ರೆಸ್‌ದವರಿಂದ ಹೆಚ್ಚೀನದನ್ನು ಬಯಸಲು ನಾನು ತಯಾರು ಇಲ್ಲ. ತಮ್ಮಲ್ಲಿ ಆತ್ ್ಭಿಮಾನ ಮತ್ತು ಸ್ವಾಭಿಮಾನ ಕಿಂಚಿತ್ ಇದ್ದರೆ, 179 ಜನ ಶಾಸಕರಲ್ಲಿ ಒಬ್ಬ ಶಾಸಕ ಇವತ್ತು ತಮ್ಮ ಆತ್ಮಾಭಿಮಾನಕ್ಕೆ ಸ್ವಾಭಿಮಾನಕ್ಕೆ ಚ್ಯುತಿ ಬಂದಿದೆ ಎಂದು ಇದನ್ನು ವಿರೋಧಿಸಿ ನಮ್ಮ ಜೊತೆ ಮತ ಕೊಡುತ್ತೇವೆ ಎಂದು ಮಾಡಿ, ಆದರೆ ನೀವು ಒಬ್ಬರೂ ಮಾಡುವುದಿಲ್ಲ. ನಮಗೆ ಇದು ಗೊತ್ತಿದೆ. They are incapable. The ramification of the political issue is much wider.

ಇದು ಒಬ್ಬ ವೀರೇಂದ್ರ ಪಾಟೀಲ್‌ರ ನಾಯಕತ್ವದ ಪ್ರಶ್ನೆಯಲ್ಲ. It is a question of fight between certain idealism - between democratic norms and dictatorship. ಇವತ್ತು ಯಾವುದೋ ಒಂದು ವ್ಯಕ್ತಿತ್ವ, ಒಂದು ಸರ್ವಾಧಿಕಾರ ವ್ಯಕ್ತಿತ್ವದ ಹಿಂದೆ ಹಿಂಬಾಲಕರಾಗುತ್ತಾ ಹೋಗಿದ್ದೀರಾ. ಏನು ಇಲ್ಲವೇ. I am not a sycophant I am not an admirer of Veerendra Patil. This very House...

(ಗೊಂದಲ)

MR. SPEAKER:- Order please.....

(ಗೊಂದಲ)

ಡಾ: ಜೀವರಾಜ ಆಳ್ವ:- ರಾಜ್ಯದ ಜನತೆಯ ಹತ್ತಿರ ಚುನಾವಣೆಯ ಸಂದರ್ಭದಲ್ಲಿ ಇವರು ಯಾರ ನಾಯಕತ್ವದಲ್ಲಿ ಹೋದರು? ರಾಜ್ಯದ ಅಧ್ಯಕ್ಷರಾದ ವೀರೇಂದ್ರ ಪಾಟೀಲ್ ಅವರ ನಾಯಕತ್ವದಲ್ಲಿ ಜನತೆಯ ಮುಂದೆ ಹೋದರು. ಅವರನ್ನು ನಮ್ಮ ಅಭೇದ್ಯ ನಾಯಕ ಎಂದು ಹೇಳಿ...

(ಗೊಂದಲ)

MR. SPEAKER:- I am sorry.....

DR. JEEVARAJ ALVA: I seek protection.....

MR. SPEAKER:- I would like to give you total protection. ದಯವಿಟ್ಟು ಮಾನ್ಯ ಆಡಳಿತ ಪಕ್ಷದ ಸದಸ್ಯರಲ್ಲಿ ವಿಶೇಷವಾದಂಥ ಮನವಿ ಏನು ಎಂದು ಹೇಳಿದರೆ, ಮುಕ್ತ ವಾತಾವರಣದಲ್ಲಿ ಚರ್ಚೆ ನಡೆಯಬೇಕಾಗಿದೆ. ಯಾರ ಬಾಯಿಗೂ ಬೀಗ ಹಾಕಲಿಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ, ಅವರು ಮಾತನಾಡುವಾಗ....

(ಗೊಂದಲ)

MR. SPEAKER:- Mr. Bannikod, would you kindly resume your seat? I will have to call you to order. ನೀವು ಪದೇ ಪದೇ ಎದ್ದು ನೀವು ಮಧ್ಯೆ ಪ್ರವೇಶ ಮಾಡುತ್ತಿದ್ದೀರಿ. I am trying to control them. I am going to restrian them.

(Interruption)

MR. SPEAKER:- Order please, I call both of you to order.

ಡಾ: ಜೀವರಾಜ ಆಳ್ವ:- ಮಾನ್ಯ ಅಧ್ಯಕ್ಷರೆ....

ಅಧ್ಯಕ್ಷರು:- ಮಾನ್ಯ ಆಳ್ವ ಅವರೆ, ಒಂದು ನಿಮಿಷ, ಮಾನ್ಯ ಸದಸ್ಯರುಗಳಾದ ಶಿವರಾಮೆಗೌಡರನ್ನು ಹರ್ಷಕುಮಾರಗೌಡರನ್ನು ಮತ್ತು ಮಾನ್ಯ ಆಳ್ವ ಅವರನ್ನು ಮಾತನಾಡಲಿಕ್ಕೆ ಕರೆದಿದ್ದೇನೆ. ಅವರು ತಮಗೆ ಸರಿತೋರಿದಂಥ ವಿಚಾರಗಳನ್ನು ಸದನದ ಮುಂದೆ ಪ್ರಸ್ತಾಪ ಮಾಡುತ್ತಿದ್ದಾರೆ. ನಿಮಗೂ ಅವಕಾಶ ಸಿಕ್ಕಿದಾಗ ನಿಮಗೆ ಸರಿತೋರಿದ ರೀತಿಯಲ್ಲಿ ವ್ಯಾಖ್ಯಾನ ಮಾಡುವುದಕ್ಕೆ ಸರ್ವಸ್ವಾತಂತ್ರ್ಯ ಇದೆ.

(ಗೊಂದಲ)

ಅಧ್ಯಕ್ಷರು:- ಈಗ ಇಬ್ಬಿಬ್ಬರು ಮಾತನಾಡಬೇಡಿ.

(ಗೊಂದಲ)

ಶ್ರೀ ಹರ್ಷಕುಮಾರಗೌಡ:- ಅಧ್ಯಕ್ಷರೆ, ಈಗ ಮುಕ್ತ ವಾತಾವರಣದಲ್ಲಿಯೇ ಚರ್ಚೆ ನಡೆಯುತ್ತಿದೆ. ಅವರು ಹೇಳುವುದನ್ನು ನಾವು ವಿರೋಧ ಮಾಡಲಿಕ್ಕೆ ಅವಕಾಶ ಇದೆ.

(ಗೊಂದಲ)

ಅಧ್ಯಕ್ಷರು:- ಅದು ಹೇಗೆ ಮಾಡಬೇಕು ನೀವೇ ಹೇಳಿ. ಹರ್ಷಕುಮಾರಗೌಡರೆ, ಅದು ಹೇಗೆ ನೀವೆ ಇತ್ಯರ್ಥ ಮಾಡಿ.

ಶ್ರೀ ಹರ್ಷಕುಮಾರಗೌಡ:- ನಮ್ಮ ನಾಯಕರ ಬಗ್ಗೆ ಅವರು ಪ್ರಚೋದನಾತ್ಮಕವಾಗಿ ಮಾತನಾಡಿದಾಗ ಅದನ್ನು ವಿರೋಧ ಮಾಡತಕ್ಕ ಹಕ್ಕು ನಮಗೆ ಇದೆ. ಅದರ ಬಗ್ಗೆ ತಾವು ನಮಗೆ ಮಾರ್ಗದರ್ಶನ ಕೊಡಬೇಕು.

ಅಧ್ಯಕ್ಷರು:- ತಮಗೆ ಮಾರ್ಗದರ್ಶನವನ್ನು ಮಾನ್ಯ ಸಂಸದೀಯ ವ್ಯವಹಾರ ಸಚಿವರು ಕೊಡುತ್ತಾರೆ.

ಡಾ: ಜೀವರಾಜ್ ಆಳ್ವ:- ಮಾನ್ಯ ಅಧ್ಯಕ್ಷರೆ, ನಾನು ನಾಲ್ಕನೆಯ ಸಾರಿ ಶಾಸನಸಭಾ ಸದಸ್ಯನಾಗಿ ಬಂದಿದ್ದೇನೆ. ನಾನು ಯಾವುದೇ ಸಮಯದಲ್ಲಿ ಆಗಲಿ ಭಾಷಣ ಮಾಡುವುದಾಗಲಿ, ಭಾಷಣ ಮಾಡಬೇಕೆಂದು ಕೇಳುವುದಾಗಲಿ, ಕಡಿಮೆ. ಯಾವತ್ತೂ ಕೂಡ ಪ್ರಚೋದನೆಕಾರಿ, provocative speeches are not mine. ಆದರೆ ನನ್ನ ಭಾಷಣದ ಅರ್ಥ ಆಗದೇ ಇದ್ದರೆ, ತಾವು ಅರ್ಥ ಮಾಡಿಕೊಳ್ಳಲಿ, ಆತ್ಮಾವಲೋಕನ ಮಾಡಿಕೊಳ್ಳಲಿ ಎಂದು ಹೇಳುತ್ತಿದ್ದೇನೆ. Let there be introspection. ನೀವು ತಪ್ಪು ಮಾಡಿದಿರಿ, ತಾವು ತಪ್ಪು ಸರಿಪಡಿಸಿಕೊಳ್ಳಿ ಎಂದು ನನ್ನ

ಭಾವನೆ. ಅಧ್ಯಕ್ಷರೆ, ನಾನು ಕೇಳುತ್ತಿರುವುದು ಏನು? ಆತ್ಮಾಭಿಮಾನವನ್ನು ಇಟ್ಟುಕೊಳ್ಳಿ, ಸ್ವಾಭಿಮಾನವನ್ನು ಬೆಳೆಸಿಕೊಳ್ಳಿ ಎಂದು ಹೇಳಿದರೆ ತಪ್ಪೇ? ನನ್ನ ಭಾಷಣದಲ್ಲಿ ಒಂದು ತಪ್ಪು, ಒಂದು ಅನ್‌ಪಾರ್ಲಿಮೆಂಟರಿ ಪದ ಇದ್ದರೆ ಹೇಳಿ. ನಾನು ಹೇಳುವುದು ಏನೆಂದರೆ, ರಾಜ್ಯದಲ್ಲಿ ಒಬ್ಬರು ಮುಖ್ಯ ಮಂತ್ರಿಗಳಿದ್ದರು. ಅವರಿಗೆ 176 ಜನರು ಪರಾಕು ಹಾಕಿದರು. ರಾಜ್ಯದ ಆಡಳಿತದ ಬಗ್ಗೆ, ದಕ್ಷತೆಯ ಬಗ್ಗೆ ಫೈನಾನ್ಷಿಯಲ್ ಮ್ಯಾನೇಜ್‌ಮೆಂಟ್ ಬಗ್ಗೆ ಇಂತಹ ಅತ್ಯುತ್ತಮವಾದಂಥ ಸರ್ಕಾರ ಇಲ್ಲ. ಅವರು ಅತ್ಯುತ್ತಮ ನಾಯಕರು ಎಂದು ಪರಾಕು ಹಾಕಿದರು. It is on the proceedings of the House. ನಾಯಕರಿಗೆ ನಾವು ಕೇಳುತ್ತಿರುವುದು, The way it was done, we don't question ಎಂದು ಯಾರೋ why are you indulging in internal matters of the congress (I) ಎಂದು ಪ್ರಶ್ನೆ ಕೇಳಿದರು. I am a political being. I have to react to every action. If they fail, I have to warnthem. I have to exploit the situation if they indulge in these things. ಅದನ್ನು ನಾವು ಮಾಡುತ್ತಿದ್ದೇವೆ. ಇನ್ನೂ ಮಾಡುತ್ತಿರುತ್ತೇವೆ. ಈಗ ನಾನು ಒಂದು ವಿಷಯ ಹೇಳಲೇನು. ನಾನು ಸತ್ಯವಾಗಿಯೂ ಹೇಳುತ್ತೇನೆ. ನಾವು ಈಗ ಪ್ರಯತ್ನ ಮಾಡುವುದಿಲ್ಲ. ಸ್ವಲ್ಪ ಕಾಲ ಬಂಗಾರಪ್ಪನವರಿಗೆ ಕೊಡುತ್ತೇವೆ. ಆದರೆ, ನೀವೇ ಮಾಡುತ್ತೀರಿ. I said any efforts to destabilise a government by any person however mighty he may be, he should be condemned. ಎಂದು ಹೇಳಿದೆ. ಆ ವ್ಯಕ್ತಿ ಇವೊತ್ತು ಇಲ್ಲಿಗೆ ಬಂದು, Can you think of a parallel? ರಾಷ್ಟ್ರದ ಇತಿಹಾಸದಲ್ಲಿ ಅಥವಾ ರಾಜ್ಯದ ಇತಿಹಾಸದಲ್ಲಿ ಏರ್‌ಪೋರ್ಟ್‌ಗೆ ಬಂದು, he has audacity to say...

SRI M. VEERAPPA MOILY: This is too much...

(Interruption)

MR. SPEAKER:- Order please... I have been repeatedly cautioning you not to provoke Members. You are bringing into certain developments which have taken place in their own political party. You cannot just make sweeping remarks about the audacity or somethingelse of any person. Let us not forget that every political party has its own style of functioning. Let us give respect to that....

SRI AZIZ SAIT:- Sir, before Dr. Alva proceed, I would only ask one question. What Mr. V.P.Singh would do when Mr. Devilal.....

(INTERRUPTION)

DR. JEEVRAJ ALVA:- We will say...

SRI AZIZ SAIT:- First search your own House...

MR. SPEAKER:- Mr. Aziz Sait, if I have taken objection to whatever Dr.Alva was telling or commenting upon, I have to take some objection to your comments also. Mr. V.P.Singh or Mr. Devilal are not the Members of this House. They cannot defend themselves... Let us try to keep out those personalities who are not here in this House. Now, immediately we are concerned about Vote of Confidence of the present Chief Minister of Karnataka. Let us confine to that only.

DR. JEEVRAJ ALVA:- With all humility I would like to submit to the Chair if we are to think that change of position, powers, or the personality at the whims and fancies of a particular individual...

MR. SPEAKER:- You are going beyond the scope... The parameters of this debate are defined. You cannot do...

DR. JEEVRAJ ALVA:- I am going on the reports...

MR. SPEAKER:- There may be 100 Reports. How are we concerned with the report?

SRI K.H. PATIL:- Sir, is it the right of anyone to take a position or ask for a resignation? How can we ask that? He is responsible for the whole administration of his party. We have not asked his resignation. It is your party leaders they have asked and said he must resign. At that time where was your sympathy?

SRI D.B. CHANDRE GOWDA:- Sir, I am on a point of order. Are we barred as Members of this House to quote whatever has appeared in the press. Are we barred?

MR. SPEAKER:- You are not barred.

SRI. D.B. CHANDRE GOWDA:- That is exactly what he is doing.

DR. JEEVRAJ ALVA:- Sir, my prime concern is, it is not superficial....

SRI K.H. PATIL:- The very object of resignation of the Sri Veerendra Patil was not at all mooted by Mr. Rajiv Gandhi. It was mooted by our Leader of the Opposition Mr. Chandregowda, Mr. Ramakrishna Hegde and other leaders. You have asked for resignation. At that time there was no mercy. Your mercy started only now. May I call this as creocodile tears? At that time you had no mercy about his health. You you condemned the whole Government and said the administration is paralysed. Why did you say so at that time...

ಶ್ರೀ ಡಿ.ಬಿ. ಚಂದ್ರೇಗೌಡ:- ಸ್ವಾಮಿ, ನಾನು ಒಬ್ಬ ವಿರೋಧಪಕ್ಷದ ನಾಯಕನಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ರಾಜೀನಾಮೆಯನ್ನು ಕೇಳುವ ಅಧಿಕಾರ ನನಗೆ ಇಲ್ಲ ಎಂದು ಹೇಳುತ್ತೀರೇನು? ನಾನು ಕೇಳಿದ್ದೇನೆ. ಆದರೆ ಅವರು ರಾಜೀನಾಮೆ ಕೊಡಲಿಲ್ಲ.

ಶ್ರೀ ಕೆ.ಹೆಚ್. ಪಾಟೀಲ್:- ಮಾನ್ಯ ಚಂದ್ರೇಗೌಡರೆ ಒಬ್ಬ ವಿರೋಧಪಕ್ಷದ ನಾಯಕರಿಗೆ ಅಧಿಕಾರವಿದೆ. ಆದರೆ ವಿರೋಧಪಕ್ಷದ ನಾಯಕರು ಕೇಳಿದ್ದನ್ನು ಸಾರ್ಥಕ ಮಾಡುವಂಥ ಅಧಿಕಾರ ನಮ್ಮ ಪಕ್ಷದ ನಾಯಕರಿಗೂ ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಎಲ್ಲಿ ರಾಜೀನಾಮೆಯನ್ನು ಕೊಟ್ಟರು?

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಪಕ್ಷದಿಂದ ಅವರನ್ನು ಏಕೆ ಸಸ್ಪೆಂಡ್ ಮಾಡಿದಿರಿ?

(ಗೊಂದಲ)

ಡಾ: ಜೀವರಾಜ್ ಆಳ್ವ:- ಮಾನ್ಯ ಅಧ್ಯಕ್ಷರೇ, ಅಂತ್ಯದಲ್ಲಿ ಎಷ್ಟು ಜನ, ಎಷ್ಟು ನೋವನ್ನು ಅನುಭವಿಸುತ್ತಿದ್ದಾರೆನ್ನುವುದು ನಮಗೆ ಗೊತ್ತು.

(ಗೊಂದಲ)

DR. JEEVRAJ ALVA:- I don't know why are they sotouchy. It is not hear say or anything like that ಅವರುಗಳು ಆತ್ಮವಲೋಕನ ಮಾಡಿದರೆ ಒಳ್ಳೆಯದು. We have tried. Our political aim endavour is to destablise you and exploit the situation. We have done it. We are not shy. ನಮ್ಮ ಭಾವನೆ ಏನೆಂದರೆ, we are all political beings...ರಾಜಕೀಯ ಶಕ್ತಿಗಳಿಗೆ, ಶಾಸಕ ಸದಸ್ಯರು...

SRI S. BANGARAPPA:- If you say it is your straight admission we will reply. You will get the reply.

DR. JEEVRAJ ALVA:- Absolutely - everything under the sun will be done and it will continue. This Congress Party in Karnataka in six months or it may be one year. ನಾನು ಹೇಳಿದೆನಲ್ಲ, ಇವರದು ತೂತುಬಿದ್ದ ಹಡಗು ಎಂದು. ಆರು ತಿಂಗಳಿಗೆ ಒಬ್ಬ ನಾಯಕ. ನಮ್ಮ ಹಿರಿಯರಾದ ಮಾನ್ಯ ಕೆ.ಹೆಚ್..ಪಾಟೀಲ್‌ರವರು ಮುಖ್ಯಮಂತ್ರಿಗಳಾಗಬೇಕು. ಮಾನ್ಯ ವೀರಪ್ಪಮೊಯಿಲಿಯವರು ಆರುತಿಂಗಳು ಮುಖ್ಯಮಂತ್ರಿಗಳಾಗಬೇಕು. we are not in hurry. ನಮಗೇನೂ ಅರ್ಜೆಂಟ್ ಇಲ್ಲ. Mandate has been to you as very rightly said. ಆದರೆ ಇದೇ ಮಾನ್ಯ ಬಂಗಾರಪ್ಪನವರಿಗೆ ತಾಳ್ಮೆ ಇರಲಿಲ್ಲ. ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಜನತೆ ಒಂದು ಐತಿಹಾಸಿಕ ಕೊಡುಗೆಯನ್ನು ಕೊಟ್ಟಾಗ ಆ ಐದು ವರ್ಷಗಳ ಕಾಲ ಇವರಿಗೆ ತಾಳ್ಮೆ ಇರಲಿಲ್ಲ. ಎದ್ದು ಎದ್ದು ರಾಜೀನಾಮೆಯನ್ನು ಕೊಡಬೇಕೆಂದು ಕೇಳುತ್ತಿದ್ದರು. ಐದು ವರ್ಷಗಳು ಅವಕಾಶ ಕೊಡಬೇಕು. ಅದು ಸಿಂಗ್ಯುಲರ್ ಮೆಜಾರಿಟಿ. ಆಗ ಏನೇನು ಪ್ರಯತ್ನ ಮಾಡಿದಿರಿ ಎನ್ನುವುದು ನಿಮಗೆ ಮರೆತುಹೋಯಿತೆ? ರಾಜ್ಯಸಭಾ ಸೀಟಿಗೆ ಮಾನ್ಯ ಬೂಟಾಸಿಂಗ್‌ರವರನ್ನು ಕರೆದುಕೊಂಡು ಬಂದು ಕ್ರಾಸ್ ಓಟೀಂಗಿಗೆ, ಸರ್ಪಲಿಸ್ ಓಟ್‌ಗಳಿಗೆ ಏನೇನು ಮಾಡಲಿಲ್ಲ. ನೀವೂ ಮಾಡುತ್ತೀರಿ, ನಾವೂ ಮಾಡುತ್ತೇವೆ. This is part of the political game.

MR. SPEAKER:- Why don't you make relative observation? Mr. Buta Singh is nowhere in the picture. Why do you drag Mr. Buta Singh?

ಶ್ರೀ ಎಲ್.ಆರ್. ಶಿವರಾಮೇಗೌಡ:- ಅವರು ಪ್ರಚೋದನೆಯ ಭಾಷಣ ಮಾಡುತ್ತಿದ್ದಾರೆ.

SRI S. BANGARAPPA:- My appeal to Hon.Member Dr. Alva is to make fair comments. The Sequences should be well within the ambit of the discussion. We have no objection for that. ಹತ್ತುಸಾರಿ ಹೇಳಿದ್ದೇವೆ, ನೂರುಸಾರಿ ಹೇಳಿದ್ದೇವೆ. ಬೇರೆ ಬೇರೆ ವಿಚಾರಗಳನ್ನು ಟಚ್ ಮಾಡಿದರೆ ಏನಾಗುತ್ತದೆಂದರೆ, that not only stretches too long to discussion but also takes us no where at all. If you confine yourself to the subject, there is no problem. Here you have referred certain names of persons who are not all Members of this August House. ನೀವೇ ಹೇಳುತ್ತಿದ್ದೀರಿ, ನಾವು ಚುನಾವಣೆಗಳಲ್ಲಿ ಗೆದ್ದು ಬಂದಿದ್ದೇವೆ. ಇಷ್ಟು ಅನುಭವ ಇದೆ ಎಂದು ಹೇಳುತ್ತಿದ್ದಿರಿ. ನಿಯಮಾವಳಿಯನ್ನು ಮರೆತು ನೀವೇ ಮುಂದೆ ಹೋಗುತ್ತಿದ್ದೀರಿ. ಜೊತೆಗೆ ನಿಮ್ಮ ಮಾತುಗಳು ಪ್ರತಿಯೊಂದನ್ನು ಅರ್ಥ ಮಾಡಿಕೊಳ್ಳದೆ ಯಾರೂ ಇಲ್ಲಿ ಕುಳಿತುಕೊಂಡಿಲ್ಲ. ಯಾರೂ ಬಾಳೆಹಣ್ಣು ತಿನ್ನುತ್ತಿಲ್ಲ. ಪ್ರತಿಯೊಂದು ಪದ, ಅರ್ಥ, ನೀವು ಹೇಳುವುದಕ್ಕೆ ಮೊದಲೇ ಅಪಾದಮಸ್ತಕವಾಗಿ ವಿಶ್ಲೇಷಣೆ ಮಾಡಿ ಇಟ್ಟವರು ನಾವು. ಈ ಮಾತಿನ ಅರ್ಥ ನೀವು ಹತ್ತು ಮೈಲಿ ದೂರ ಇದ್ದಾಗಲೇ ಅದರ ವಾಸನೆ ಹಿಡಿದು ಕುಳಿತಿದ್ದೇವೆ. well within the parameters of the discussion, you may please go ahead - we have no objection. ನೀವು ಬೇರೆ ಬೇರೆ ವಿಚಾರಗಳನ್ನು ತರುವುದರಿಂದ ಏನಾಗುತ್ತದೆಂದರೆ ಅನ್ಯಥಾ ಕಾಮೆಂಟ್ಸ್ ಮಾಡುತ್ತಾ ಹೋಗಿ

ಕೊನೆಗೆ ನಿಮಗೂ ಕಷ್ಟವಾಗಬಹುದು. ಅದಕ್ಕೆ ಹತ್ತರಷ್ಟು ಉತ್ತರ ಕೊಡುವ ಶಕ್ತಿ ಪಡೆದುಕೊಂಡು ನಾವು ಇಲ್ಲಿ ಕುಳಿತಿದ್ದೇವೆ. ಈ ಮಾತನ್ನು ನಾನು ಎಚ್ಚರಿಕೆಯ ರೂಪದಲ್ಲಿ ಹೇಳುತ್ತಿಲ್ಲ. ನೀವು ಉತ್ತರವನ್ನು ರಿಸೀವ್ ಮಾಡುವುದಕ್ಕೆ ಶಕ್ತಿಯನ್ನು ಪಡೆದುಕೊಂಡು ಕುಳಿತುಕೊಳ್ಳಬೇಕಾಗುತ್ತದೆ. ದಯವಿಟ್ಟು ವಿಚಾರಕ್ಕೆ ಏನು ಸಂಬಂಧ ಇದೆ ಅದಕ್ಕೆ ತಕ್ಕಂತೆ ಮಾತನಾಡಿ. ಮಾನ್ಯ ಅಧ್ಯಕ್ಷರಿಗೂ ಸಹಾಯ ಮಾಡೋಣ. ಚರ್ಚೆಗೂ ಅನುಕೂಲ ಮಾಡಿಕೊಡೋಣ. ಅದು ಬಿಟ್ಟು ಬೇರೆ ಬೇರೆ ಹೇಳಿದರೆ ಬೇರೆ ಬೇರೆ ವಿಚಾರಗಳಿಗೆ ಹೊರಟುಹೋಗುತ್ತದೆ.

ಒಬ್ಬ ಮಾನ್ಯ ಸದಸ್ಯರು:- ನಾಟಕದಲ್ಲಿ ಪಾರ್ಟ್ ಮಾಡಿದ ಹಾಗೆ ಮಾಡಬೇಡಿ, ಸಭೆಯಲ್ಲಿ ಗಂಭೀರವಾಗಿ ಭಾಷಣ ಮಾಡಿ.

ಡಾ: ಜೀವರಾಜ ಆಳ್ವ:- ಮಾನ್ಯ ಸಭಾನಾಯಕರು ಯಾವ ವಿಚಾರದ ಬಗ್ಗೆ ambit of discussion ಬರುತ್ತದೆ. ಆ ಹೆಸರುಗಳನ್ನು ಮಾತ್ರ ಉಚ್ಚರಿಸಿ ಎಂದು ಹೇಳಿದರು. ಆ ಹೆಸರುಗಳನ್ನು ಮಾತ್ರ ನಾನು ಉಚ್ಚರಿಸಿದ್ದೇನೆ.

ಶ್ರೀ ಎಸ್. ಬಂಗಾರಪ್ಪ:- ಬೂಟಾಸಿಂಗ್‌ರ ಹೆಸರು ಬಂದಿತ್ತೇ? You have made a reference to Mr. Buta Singh. I would like to know through the Hon'ble Chair whether it is permissible within the discussion?

DR. JEEVARAJ ALVA:- It is only reaction to the comments.

SRI S. BANGARAPPA:- Is he a Member of this August House? What is this?

DR. JEEVARAJ ALVA:- During the course of discussion, sometimes we have to express reactions. I may not be a great Parliamentarian...

SRI S. BANGARAPPA:- We never said that, you are a great Parliamentarian..

DR. JEEVARAJ ALVA:- It is only stray thoughts of youngsters very simple presentation ಅವರಿಗೆ ಅದಕ್ಕೆ ಅರ್ಥವಾಗುವುದಿಲ್ಲ. ಅದಕ್ಕೆ ನಾನು ಹೇಳಿದ್ದು, ಯಾವ ರೀತಿಯಲ್ಲಿ ತಂದೆ ಎಂದರೆ, ಅದು ಈ ತರಹ ಇದೆ. ಪ್ರಜಾಪ್ರಭುತ್ವ, ಡೆಮಾಕ್ರಟಿಕ್ ನಾರ್ಮ್ಸ್ ಎಂದು ಏನು ಹೇಳುತ್ತೇವೆ. ಆ ಪ್ರಜಾಪ್ರಭುತ್ವ ಪದ್ಧತಿಯ ಆಧಾರದ ಮೇಲೆ ಮಾನ್ಯ ಬಂಗಾರಪ್ಪನವರು ಆ ಸ್ಥಾನದಲ್ಲಿ ಕುಳಿತಿದ್ದಾರೆಂಬುದನ್ನು ತಾವು ಒಪ್ಪದೆ ಇರುತ್ತೀರಾ? ಆ ಪ್ರಜಾಪ್ರಭುತ್ವದ ನಾರ್ಮ್ಸ್‌ಗೆ ಧಕ್ಕೆ ಬಂದಾಗ ನನಗೆ ನೋವಾಗುತ್ತದೆ. ನೀವು ಅಲ್ಲಿ ಕೂರಿ, ಅಲ್ಲಿ ಕೂರಿ ಅದಲ್ಲ. ಉಳಿದ ವ್ಯವಹಾರಗಳು ನನಗೆ ಗೊತ್ತಿಲ್ಲ. but the democractic norms the very fabric - that is being destroyed. ಅದರ ಹೆದರಿಕೆ ನನಗೆ ಆಗುತ್ತದೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:- 1983ರಲ್ಲಿ ಶ್ರೀ ರಾಮಕೃಷ್ಣ ಹೆಗಡೆಯವರು ಈ ಸದನದ ಸದಸ್ಯರಾಗಿದ್ದರೆ ಅವರನ್ನು ಹೇಗೆ ಮುಖ್ಯ ಮಂತ್ರಿಗಳನ್ನಾಗಿ ಮಾಡಿದಿರಿ? ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತಿದ್ದೀರಿ. ಪ್ರಜಾಪ್ರಭುತ್ವ ಎಲ್ಲಿದೆ.?

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಸದಸ್ಯರು ಡಾ॥ ಆಳ್ವ ಅವರನ್ನು ಕೇಳುತ್ತಿದ್ದಾರೆ, ರಾಮಕೃಷ್ಣ ಹೆಗಡೆಯವರು 1983ರಲ್ಲಿ ಮುಖ್ಯ ಮಂತ್ರಿಗಳಾದಾಗ ಯಾವುದೇ ಸದನದ ಸದಸ್ಯರಾಗಿರಲಿಲ್ಲ. ನೀವು ಪ್ರಜಾಪ್ರಭುತ್ವದ ನೀತಿಯ ಬಗ್ಗೆ ಭಾಷಣ ಮಾಡುತ್ತಿದ್ದೀರಿ ಎಂದು ಅವರು ಕೆಣಕುತ್ತಿದ್ದಾರೆ. ಅದಕ್ಕೆ ಉತ್ತರ ಕೊಡಿ.

DR. JEEVARAJ ALVA:- That is also a democracctic norm. The Constitution provides for a Member outside the purview of the Legislature

to become a Chief Minister and get himself elected within six months. ಅಲ್ಲಿ ಪ್ರಜಾಪ್ರಭುತ್ವಕ್ಕೆ ಏನೂ ಧಕ್ಕೆ ಬಂದಿಲ್ಲ. ಪ್ರಜಾಪ್ರಭುತ್ವಕ್ಕೆ ಧಕ್ಕೆ ಬರುವುದು ಯಾವತ್ತು ಎಂದರೆ.....?

ಅಧ್ಯಕ್ಷರು:- ಬಂಗಾರಪ್ಪನವರು ಮುಖ್ಯ ಮಂತ್ರಿ ಆದಾಗ,

(ನಗು)

ಡಾ: ಜೀವರಾಜ ಆಳ್ವ:- ಮಾನ್ಯ ಅಧ್ಯಕ್ಷರೆ, ಇಷ್ಟು ಸುಲಭವಾಗಿ ನನ್ನ ಆರ್ಗ್ಯುಮೆಂಟನ್ನು ಒಪ್ಪುತ್ತೀರಿ ಎಂದು ನಾನು ನಂಬಿರಲಿಲ್ಲ. ಅಧ್ಯಕ್ಷರೆ, ಇವತ್ತು ನಾನು ಹಲವಾರು ವಿಚಾರಗಳನ್ನು ಹೇಳಿದೆ, ಎಲ್ಲಿಯವರೆಗೆ ಈ ಕಾಂಗ್ರೆಸ್ ಸಂಸ್ಕೃತಿ ಹೋಗಿದೆ ಎಂದರೆ, ಅವರ ಅಂತರಿಕ ಜಗಳ, ಇಷ್ಟರವರೆಗೆ ಕೇವಿಯಟ್ ಹಾಕುವುದು ಎಂದು ಇರಲಿಲ್ಲ, ಇವರು ಕೇವಿಯಟ್ ಹಾಕುತ್ತಾರೆ. Between Indian National Congress (I), Karnataka Pradesh Congress(I) represented by their Joint Secretary Shiva Murthy vs Veerendra Patil and J.H.Patel, President, Janata Dal. The Prayer is:

The First and Second respondent are colluding jointly and severally may institute proceedings in this Court to scuttle and present Sri S.Bangarappa - newly elected Leader of the Congress Legislature Party in Karnataka to form the Government by suppressing facts may obtain interim order. Therefore this petition of Caveat is filed...

ನಾವು ಯಾವ ದುಸ್ಥಿತಿಗೆ ಬಂದಿದ್ದೇವೆ, ನಮ್ಮ ದೇಶ, ನಮ್ಮ ರಾಜ್ಯ ನಮ್ಮ ಪ್ರಜಾಪ್ರಭುತ್ವದ ನಾರ್ಮ್ಸ್ ಏನಾಗಿದೆ? ಇವತ್ತು ವೀರೇಂದ್ರ ಪಾಟೀಲರು He is a real hero. he fought for a cause. Let it go to the Record. ನೀವು ಭಾಷಣ ಮಾಡಿ ಹೇಳಿ, ವೀರೇಂದ್ರ ಪಾಟೀಲರ ಆಡಳಿತ ಚೆನ್ನಾಗಿರಲಿಲ್ಲ, ಮುಖ್ಯಮಂತ್ರಿಗಳು ಚೆನ್ನಾಗಿರಲಿಲ್ಲ, ಅವರು ಒಳ್ಳೆಯವರಲ್ಲ ಎಂದು ನಿಮ್ಮ ಆತ್ಮಶೋಧನೆ ಮಾಡಿಕೊಂಡು ಹೇಳಿ ನೋಡೋಣ. ಅಂಥ ವ್ಯಕ್ತಿತ್ವದ ತೇಜೋವಧೆ ಈ ಕೇವಿಯಟ್, ಈ ಕೇವಿಯಟ್‌ನಲ್ಲಿ ನಿಮ್ಮ ನಾಯಕ, ರಾಜ್ಯದ ಅಧ್ಯಕ್ಷನಾಗಿದ್ದವನು, 11 ತಿಂಗಳುಗಳ ಕಾಲ ನಿಮಗೋಸ್ಕರ ರಾಜ್ಯಭಾರ ಮಾಡಿದಂಥ ವ್ಯಕ್ತಿಯನ್ನು you have thrown away; you have been so uncharitable. ಬಂಗಾರಪ್ಪನವರು ಆರೋಗ್ಯದ ಸ್ವಾಸ್ಥ್ಯ ನೋಡುವುದಕ್ಕೆ ಹೋಗುವುದಲ್ಲ, ಅಥವಾ ಅವರ ಆರೋಗ್ಯದ ಖರ್ಚನ್ನು ಬಂಗಾರಪ್ಪನವರು ನೋಡುವುದು ಬೇಕಾಗಿಲ್ಲ. ವೀರೇಂದ್ರಪಾಟೀಲರ ಆರೋಗ್ಯದ ಖರ್ಚನ್ನು ನಾವು, ಜನತಾ ದಳದವರು ನೋಡುತ್ತೇವೆ.

(ಗೊಂದಲ)

MR. SPEAKER:- May I draw your kind attention that the health of every hon.Member of this Assembly is taken care of. No Member of this House is at the mercy of any Political Party to keep his health.

DR. JEEVRAJ ALVA:- Sir, I stand corrected. I withdraw whatever I said. ಈ ತರಹ ವ್ಯಕ್ತಿ ನಿಂದನೆ ಕೇವಿಯಟ್‌ನಿಂದ ಆಗಿದೆ ಎಂದರೆ ಅಷ್ಟು ಅತಂತ್ರ ಇವರದ್ದು, ಇವರಿಗೆ ಏನೇನೋ ಆಗುತ್ತದೆ ಎಂದು ಹೆದರಿಕೆ. ಇವರಿಗಿರುವ ಇನ್‌ಹೆರೆಂಟ್ ವೀಕ್‌ನೆಸ್ ನಿಷ್ಠೆ ಇಲ್ಲದೇ ಇರುವುದು. ನಿಷ್ಠೆ ಎಂದರೆ it is not loyality to an individual. Their commitment to the institution of democracy is at doubt. Their bonafides are at doubt. ವೀರೇಂದ್ರ ಪಾಟೀಲರ ನಿಷ್ಠೆ ಅಲ್ಲಸ್ವಾಮಿ, ಈ ಕುರ್ಚಿಗೆ ಇದೆಯಲ್ಲ, ಈ ಸ್ಥಾನಕ್ಕೆ ಈ ಸಭೆಗೆ ನಿಷ್ಠೆ ತೋರಿಸಬೇಕಾಗಿತ್ತು. ಆ ನಿಷ್ಠೆ ನಿಮ್ಮಲ್ಲಿಲ್ಲ ಎಂದು ಹೇಳಬಯಸುತ್ತೇನೆ. Sir, In my whole career I have never accused, I have never pinpointed, I never levelled any [illegible] charge on any person but to-day I should say with all humility that

this very Legislature Congress(I) Party which wanted the change of Leadership of the Opposition, brought about a change of that opposition leadership because of the strictures passed by Justice Bopanna in a Land Tribunal case.

DR. JEEVRAJ ALVA:- They have forgotten that leader of the...

SRI M. VEERAPPA MOILY:- I rise on a point of order. He did mention about the Court case. That matter is still pending before the Division Bench of the Hon'ble High Court. Therefore, it is sub-judice to discuss or to raise the same matter.

SRI R.V. DESHPANDE:- The point where the President asked to resign, the same matter is pending. That is his point.

SRI M. VEERAPPA MOILY:- It is no more a political question. It is before the Division Bench of the Hon'ble High Court and sofar it has not been decided and it cannot be raised here. It is pending and therefore subjudice.

SRI R.V. DESHPANDE:- I fully agree with the Hon'ble Minister for Law and Parliamentary Affairs that it is subjudice and we cannot raise it but the point is where the Party President asked Sri Veerendra Patil to resign, that matter is pending......

DR. JEEVRAJ ALVA:- My submission to you is, I am not going into the merits of the case.

MR. SPEAKER:- You are only making a reference...

DR. JEEVRAJ ALVA:- I am not going into the merit of the case or the political overtones of that. If the Legislature could remove him or the Party High Command insists for a change of leadership, it is for the people.....

MR. SPEAKER:- Let me confine myself. I have repeatedly come back to this theme - style of functioning of a political party need not be discussed. You have your own culture, the Janata-Dal Culture. The Congress(I) has their own Congress culture. If you go on debating about Janatadal culture or the Congress culture, there will be no end and our democracy is caught between these two cultures.

DR. JEEVRAJ ALVA:- If the Congress culture is to have a Leader of the Opposition who has been removed because there were strictures & to make him a Chief Minister, I am very happy. Congratulations. Well done. Keep it up. I am concluding that, with all these, without any personal animosity, I have been with him. I have been associating with Mr.Bangarappa but my only plea is that he is on a wrong side. Sometimes, I feel he is on the wrong side. I only reiterate my demand, my very very fervent and sincere appeal to all my colleagues here ಆ ಆತ್ಮಾಭಿಮಾನವನ್ನು ತೋರಿಸಿ, ಕೆಚ್ಚೆದೆ ತೋರಿಸಿ. ಸ್ವಾಭಿಮಾನ ತೋರಿಸಿ, ನೀವು ಸ್ವಲ್ಪ ಜನರಾದರೂ ಓಟ್ ಆಫ್ ಕಾನ್‌ಫಿಡೆನ್ಸ್‌ನಲ್ಲಿ ನಮ್ಮ ಜೊತೆ ಓಟ್ ಮಾಡಿ

ನಮ್ಮಲ್ಲೂ ಕೆಚ್ಚೆದೆ ಇದೆ, ನಮ್ಮಲ್ಲೂ ಸ್ವಾಭಿಮಾನ ಇದೆ ಎಂಬುದನ್ನು ತೋರಿಸಿ ಎಂದು ತಮ್ಮ ಮೂಲಕ ಅವರನ್ನು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಬಿ.ಎಸ್. ಯಡಿಯೂರಪ್ಪ: (ಶಿಕಾರಿಪುರ):- ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಅತ್ಯಂತ ಒಂದು ಪ್ರಮುಖವಾದ ರಾಜಕೀಯ ಘಟ್ಟದಲ್ಲಿ ನಾವು ಬಂದು ಸೇರಿದಾಗ, ಸಹಜವಾಗಿ ಪ್ರಜಾಪ್ರಭುತ್ವ ವ್ಯವಸ್ಥೆಯಂತೆ ಹೊಸದಾಗಿ ಇಂಥ ವಿಶೇಷವಾದ ಸಂಧರ್ಭದಲ್ಲಿ ನಾಯಕರಾಗಿ ಆಯ್ಕೆಯಾದ ಸಂದರ್ಭದಲ್ಲಿ ರಾಜ್ಯಪಾಲರ ಒಂದು ಆದೇಶದಂತೆ ಈಗ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿರುವ ಸನ್ಮಾನ್ಯ ಬಂಗಾರಪ್ಪನವರು ಅವರ ನೇತೃತ್ವಕ್ಕೆ ಒಂದು ವಿಶ್ವಾಸಮತವನ್ನು ಗಳಿಸುವಂಥ ಸಂದರ್ಭದಲ್ಲಿ ಆ ಚರ್ಚೆಯ ಘಟ್ಟದಲ್ಲಿ ನಾವು ಚರ್ಚೆ ಮಾಡುತ್ತಿದ್ದೇವೆ. ಬಹುಶಃ ನನ್ನ ದೃಷ್ಟಿಯಿಂದ ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವುದೇ ರಾಜಕೀಯ ಪಕ್ಷ ಇರಬಹುದು ಅವರ ನಾಯಕತ್ವದಲ್ಲಿ ಪರಸ್ಪರ ಭಿನ್ನಾಭಿಪ್ರಾಯಗಳು ಬಂದಾಗ, ವಿಶೇಷವಾದ ಸಂದರ್ಭಗಳು ಬಂದಾಗ ಅವರಿಗೆ ಬೇಕಾದಂಥ ನಾಯಕನನ್ನು ಆರಿಸಿಕೊಳ್ಳುವಂಥ ಸಂಪೂರ್ಣ ಸ್ವಾತಂತ್ರ್ಯ ಆಯಾ ರಾಜಕೀಯ ಪಕ್ಷಗಳಿಗೆ ಇರುವಂಥದ್ದು ಸ್ವಾಭಾವಿಕ. ಆದರೆ ಇಲ್ಲಿ ಬಂದಿರುವ ವಿಶೇಷ ಸಂದರ್ಭ ಎಂದರೆ, ಹಿಂದೆ ಇದ್ದಂಥ ರಾಜಕೀಯ ವಾತಾವರಣದಿಂದ ಜನ ಬೇಸತ್ತು ರಾಜ್ಯದಲ್ಲಿ ರಾಜಕೀಯ ಅಸ್ಥಿರತೆ ಇತ್ತು, ಆರ್ಥಿಕ ದಿವಾಳಿತನದ ವಾತಾವರಣ ಇತ್ತು ಅದನ್ನು ನೋಡಿ ರಾಜ್ಯದ ಜನ ಬದಲಾವಣೆ ತಂದು ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತರುವುದರಲ್ಲಿ ತುಂಬಾ ಪ್ರಯತ್ನ ಮಾಡಿ ಆದರಿಂದ ತುಂಬಾ ನಿರೀಕ್ಷೆಯನ್ನು ಮಾಡುತ್ತಿದ್ದರು.

ಅತ್ಯಂತ ಸಂತೋಷದಿಂದ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆ ಮಾತನ್ನು ನಾನು ಈ ಸದನದಲ್ಲಿ ಹೇಳಿದ್ದೇನೆ. ಸನ್ಮಾನ್ಯ ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ರಾಜ್ಯದಲ್ಲಿ ಇದ್ದಂತಹ ಆರ್ಥಿಕ ದಿವಾಳಿತನದ ಒಂದು ಪರಿಸ್ಥಿತಿಯನ್ನು 9-10 ತಿಂಗಳುಗಳಲ್ಲಿ ಸುಧಾರಿಸಿ ಒಂದು ಒಳ್ಳೆಯ ಆಡಳಿತವನ್ನು ಕೊಡುವಂತಹ ಒಂದು ವಾತಾವರಣ ಮೂಡಿತ್ತು. ಈ ಸದನದಲ್ಲಿ ಆ ರೀತಿಯ ಒಂದು ಪ್ರಾಮಾಣಿಕ ಪ್ರಯತ್ನವನ್ನು ಅವೊತ್ತಿನ ಹಣಕಾಸಿನ ಸಚಿವರು ಮತ್ತು ಮುಖ್ಯಮಂತ್ರಿಯವರು ಮಾಡಿದ್ದಕ್ಕೆ ಅಭಿನಂದನೆಯನ್ನು ಇಲ್ಲಿ ನಾವು ಸಲ್ಲಿಸಿದ್ದೇವೆ. ಆದರೆ ಇಲ್ಲಿ ಚರ್ಚೆ ಮಾಡಬೇಕಾದ ಅತ್ಯಂತ ಪ್ರಮುಖವಾದ ವಿಶೇಷವಾದ ಸಂದರ್ಭ ಅಂದರೆ ಸನ್ಮಾನ್ಯ ವೀರೇಂದ್ರಪಾಟೀಲರನ್ನು ಪದಚ್ಯುತಗೊಳಿಸುವುದಕ್ಕೆ ಆರಿಸಿಕೊಂಡಂತಹ ಸಂದರ್ಭ ಏನಿದೆ ಇದು ಪ್ರಜಾಪ್ರಭುತ್ವ ವ್ಯವಸ್ಥೆಯ ಬಗ್ಗೆ ನಂಬಿಕೆ ಇರುವಂತಹ ಯಾವ ನಾಗರಿಕನೂ ಸಹ ಒಪ್ಪುವುದಕ್ಕೆ ಸಾಧ್ಯವಿಲ್ಲದೇ ಇರುವಂತಹ ಒಂದು ಸಂದರ್ಭದಲ್ಲಿ ಇವತ್ತು ನಾಯಕತ್ವ ಬದಲಾವಣೆಯಾಗಿದೆ. ಬಹುಶಃ ನಾನು ಪ್ರಾರಂಭದಲ್ಲಿ ಯಾವ ಸಂದರ್ಭದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರುವಂತಹ ಪ್ರಯತ್ನ ನಡೆಯುತ್ತಿದ್ದ ಸಂದರ್ಭದಲ್ಲಿ ನಮ್ಮ ಪಕ್ಷದ ನಾಯಕರಾದ ಲಾಲ್‌ಕೃಷ್ಣ ಅಡ್ವಾನಿಯವರು ಇರಬಹುದು, ಇಲ್ಲಿ ನಮ್ಮ ರಾಜ್ಯದ ಘಟಕ ಇರಬಹುದು, ನಾವು ಸ್ಪಷ್ಟವಾದ ವಿಚಾರವನ್ನು ರಾಜ್ಯಪಾಲರಿಗೆ ತಿಳಿಸಿದ್ದೇವೆ. ಇವತ್ತು ಸನ್ಮಾನ್ಯ ವೀರೇಂದ್ರಪಾಟೀಲರು ನನಗೆ ಬಹುಮತವಿದೆ, ನನಗೆ ಈಗ ಆರೋಗ್ಯ ಸರಿಯಿಲ್ಲ, ಕೆಲವೇ ವಾರಗಳಲ್ಲಿ ನನ್ನ ಆರೋಗ್ಯ ಸುಧಾರಣೆಯಾಗುತ್ತದೆ, ನನಗೆ ಬಹುಮತ ಸಾಬೀತು ಮಾಡಲು ಅವಕಾಶ ಮಾಡಿಕೊಡಿಯೆಂದು ಕೇಳಿದಾಗ, ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಂಬಿಕೆ ಇದ್ದಂತಹ ಯಾವುದೇ ಕಾಂಗ್ರೆಸ್ ಪಕ್ಷದ ಸ್ನೇಹಿತರು ಆ ರೀತಿಯ ಒಳ್ಳೆಯ ಕೆಲಸ ಮಾಡುವಂತಹ ಒಬ್ಬ ನಾಯಕನಿಗೆ ಈ ಸದನದಲ್ಲಿ ತನಗೆ ಬಹುಮತ ಇದೆ ಎನ್ನುವುದನ್ನು ಸಾಬೀತು ಮಾಡಲಿಕ್ಕೆ ಅವಕಾಶ ನೀಡಬೇಕಾಗಿತ್ತು. ರಾಜ್ಯಪಾಲರು ಆ ದಿಶೆಯಲ್ಲಿ ದಿಟ್ಟ ಹೆಜ್ಜೆಯನ್ನು ಇಡಬಹುದಾಗಿತ್ತು. ಆ ಪ್ರಯತ್ನವನ್ನು ಮಾಡದೆ ರಾಷ್ಟ್ರಪತಿ ಆಡಳಿತ ಹೇರಿದ ದಿವಸ ನಾವು ಅದನ್ನು ವಿರೋಧ ಮಾಡಿದ್ದೇವೆ. ಈ ಮಧ್ಯೆ ಆರೇಳು ದಿವಸಗಳ ಕಾಲ ರಾಷ್ಟ್ರಪತಿ ಆಳ್ವಿಕೆಯು ಬರುವಂತಹ ಸಂದರ್ಭ ಬಂತು. ಆ ಸ್ಥಿತಿ ನಮ್ಮ ರಾಜ್ಯದಲ್ಲಿ ಇರಲಿಲ್ಲ. 179 ಜನ ಕಾಂಗ್ರೆಸ್ ಶಾಸಕರು ಇದ್ದರು. ಸಹಜವಾಗಿ ವೀರೇಂದ್ರಪಾಟೀಲರ ನೇತೃತ್ವದ ಸರ್ಕಾರಕ್ಕೆ ಸದನ ಕರೆದು ನಿಮ್ಮ ಬಲಾಬಲವನ್ನು ಪರೀಕ್ಷೆ ಮಾಡಿ, ಬಹುಮತವನ್ನು ಸಾಬೀತು ಮಾಡಿ ಎಂದು

ಹೇಳಿದ್ದರೆ ಬಹುಶಃ ಇವೊತ್ತಿನ ರಾಜಕೀಯ ಪರಿಸ್ಥಿತಿಯೇ ಬೇರೆ ಆಗುತ್ತಿತ್ತು. ಆ ಕೆಲಸವನ್ನು ಸರಿಯಾದ ರೀತಿಯಲ್ಲಿ ರಾಜಕೀಯ ನಿರ್ವಹಿಸದೇ ಇದ್ದುದರಿಂದ ಆರೇಳು ದಿವಸಗಳ ಕಾಲ ರಾಷ್ಟ್ರಪತಿ ಆಳ್ವಿಕೆ ನಮ್ಮ ರಾಜ್ಯಕ್ಕೆ ಅನಿವಾರ್ಯ. ರಾಷ್ಟ್ರಪತಿ ಆಳ್ವಿಕೆಯನ್ನು ನಮ್ಮ ರಾಜ್ಯಕ್ಕೆ ಹೇರಿದಂತಹ ದಿವಸ ನಾವು ಖಂಡನೆ ಮಾಡಿದ್ದೇವೆ. ನಾವು ರಾಜ್ಯಪಾಲರನ್ನು ಭೇಟಿ ಮಾಡಿ ಪ್ರಜಾಪ್ರಭುತ್ವ ವ್ಯವಸ್ಥೆಗನುಗುಣವಾಗಿ ಚುನಾಯಿತ ಪ್ರತಿನಿಧಿಗಳು ಆರಿಸಿರುವಂತಹ ಜನತೆಗೆ ಸೇವೆ ಮಾಡಲು 5 ವರ್ಷ ಪೂರ್ಣವಾಗಿ ಇರುವುದಕ್ಕೆ ಅವಕಾಶ ಮಾಡಿ ಕೊಡಬೇಕು, ತಕ್ಷಣ ಬೇರೆ ವ್ಯವಸ್ಥೆಯನ್ನು ಮಾಡಬೇಕೆಂದು ನಾವು ಸ್ಪಷ್ಟವಾಗಿ ರಾಷ್ಟ್ರಪತಿ ಆಳ್ವಿಕೆ ಹೇರಿರುವಂತಹದ್ದು ಸರಿಯಲ್ಲವೆನ್ನುವ ಮಾತನ್ನು ನಾವು ಅವತ್ತು ಸ್ಪಷ್ಟವಾಗಿ ಹೇಳಿದ್ದೇವೆ. ಬಹುಶಃ ಈವೊಂದು ಸಂದರ್ಭದಲ್ಲಿ ಈ ಮಾತನ್ನು ಹೇಳದಿದ್ದರೆ ನನ್ನ ಕರ್ತವ್ಯಕ್ಕೆ ಚ್ಯುತಿಯಾಗಬಹುದು. ಮಾನ್ಯ ವೀರೇಂದ್ರಪಾಟೀಲರ ನೇತೃತ್ವದಲ್ಲಿ ರಾಜ್ಯದಲ್ಲಿ ಇದ್ದಂತಹ ಹಣಕಾಸಿನ ಪರಿಸ್ಥಿತಿಯನ್ನು ಸುಧಾರಣೆ ಮಾಡಿ ಒಳ್ಳೆಯ ಸುಸ್ಥಿತಿಗೆ ತರುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದರು. ಅವೊತ್ತು ಮಂತ್ರಿಮಂಡಲದಲ್ಲಿದ್ದಂತಹ...

ಶ್ರೀ ಕೆ.ಹೆಚ್. ಪಾಟೀಲ್:- ಮಾನ್ಯ ವೀರೇಂದ್ರಪಾಟೀಲರು ಅಸ್ವಸ್ಥರಾಗಿದ್ದರೂ ಅವರು ಇಲ್ಲಿಯ ತನಕ ಕಾಂಗ್ರೆಸ್‌ನಲ್ಲಿಯೇ ಇದ್ದಾರೆ. ಅವರು ಕಾಂಗ್ರೆಸ್‌ನಿಂದ ಅಮಾನತುಗೊಂಡಿದ್ದರೂ ಸಹ ಕಾಂಗ್ರೆಸ್ ಪಕ್ಷದಲ್ಲೇ ಇದ್ದಾರೆ. ಶ್ರೀ ವೀರೇಂದ್ರಪಾಟೀಲರ ಬಗ್ಗೆ ಸಹಾನುಭೂತಿ ಇದ್ದವರು ನೀವು ಅವರಿಗೇ ಹೇಳಬಹುದಾಗಿತ್ತು. ಪಾರ್ಟಿ ಮೀಟಿಂಗ್ ಕರೆದು ನಿಮಗೆ ಬಹುಮತ ಇದೆಯೋ ಇಲ್ಲವೋ ಎನ್ನುವುದನ್ನು ತೋರಿಸಿ ಎಂದು ಹೇಳಬಹುದಾಗಿತ್ತು. ಉಳಿಯಬೇಕು ಎನ್ನುವುದು ನಿಮ್ಮ ಉದ್ದೇಶವಿತ್ತು. ನೀವು ಎರಡರಲ್ಲಿ ಯಾವುದಾದರೂ ಒಂದನ್ನು ಹೇಳಿ. ಇವತ್ತಿಗೂ ಸಹಿತ ವೀರೇಂದ್ರಪಾಟೀಲ್‌ರವರು ಕಾಂಗ್ರೆಸ್‌ನೊಳಗೆ ಇದ್ದಾರೆ. ಅವರು ಇವತ್ತು ಬಂದು ಬಹುಮತ ತೋರಿಸುವುದಕ್ಕೆ ಸರ್ವರೀತಿಯ ಸ್ವಾತಂತ್ರ್ಯವಿದೆ. ಮಾನ್ಯ ಬಂಗಾರಪ್ಪನವರು ಬೇಡ ನಾನು ನಾಯಕ ಆಗುತ್ತೇನೆಂದು ಹೇಳಿದ್ದರೆ, ಅವರಿಗೆ ಎಷ್ಟು ಓಟು ಬರುತ್ತಿತ್ತೊ ಎಂದು ನೋಡಬಹುದಾಗಿತ್ತು. ಅವರು ವಲ್ಲೆ ಅಂದರೂ, ಅವರನ್ನು ನೀವು ಬಿಡುವುದಿಲ್ಲ. ಅವರು ವಲ್ಲೆ ಅಂದರೆ ಅದೇಕೆ ನೀವು ಬರ್ರಿ, ನಾವು ಜಗಳ ಹಚ್ಚುತ್ತೇವೆ, ಕಾಂಗ್ರೆಸ್ ಪಕ್ಷವನ್ನು ಮುರಿಯೋಣ ಅಂದರೆ ಅದು ಹೇಗಾಗುತ್ತದೆ?

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಉಪಾಧ್ಯಕ್ಷಿಣಿಯವರೆ, ನನಗೆ ಆಶ್ಚರ್ಯವಾಗುತ್ತಿದೆ, ಹಿರಿಯರಾದ ಮಾನ್ಯ ಕೆ.ಹೆಚ್. ಪಾಟೀಲ್‌ರವರು ಈ ರೀತಿ ಮಾತನಾಡುತ್ತಾರೆಂದು ನಾನು ನಿರೀಕ್ಷೆ ಮಾಡಿರಲಿಲ್ಲ. ನಾನು ಹೇಳಿದ್ದು ಏನೆಂದರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಂಬಿಕೆ ಇದ್ದವರಿಗೆ ಇದು ಸರಿಯಲ್ಲವೆನ್ನುವ ಮಾತನ್ನು ಹೇಳಿದ್ದು ತಪ್ಪೆ? ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಂಬಿಕೆ ಇದ್ದವರಿಗೆ ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಿದ್ದು ಸರಿ ಎನಿಸುತ್ತದೆಯೆ? ವೀರೇಂದ್ರಪಾಟೀಲರಿಗೆ ಬಹುಮತ ಇದೆಯೊ ಇಲ್ಲವೊ ಎನ್ನುವುದರ ಬಗ್ಗೆ ಸದನದಲ್ಲಿ ಚರ್ಚೆ ಮಾಡಬೇಕಾಗಿತ್ತು. ರಾಜ್ಯದ ಮುಖ್ಯಮಂತ್ರಿಗಳು ನನಗೆ ಬಹುಮತವಿದೆಯೆಂದು ಅನೇಕ ಬಾರಿ ಹೇಳಿದಾಗ ರಾಜ್ಯಪಾಲರು ಸಂವಿಧಾನದ ಒಂದು ಚೌಕಟ್ಟಿನೊಳಗೆ ಕೆಲಸ ಮಾಡುವುದಾದರೆ ವೀರೇಂದ್ರಪಾಟೀಲರಿಗೆ ಸದನದಲ್ಲಿ ಬಹುಮತ ಸಾಬೀತು ಮಾಡಲಿಕ್ಕೆ ಅವಕಾಶ ಕೊಡದೇ ಇರುವಂತಹ ಅನ್ಯಾಯ ಮಾಡಿದರು ಎಂದು ಹೇಳಿದರೆ ತಪ್ಪೇನು? ಅನ್ಯಾಯ ಮಾಡಿದರು ಎಂದು ಹೇಳುತ್ತಿದ್ದೇನೆ.

2.30 ಪಿ.ಎಂ.

ರಾಷ್ಟ್ರಪತಿ ಆಳ್ವಿಕೆಯನ್ನು ಹೇರುವ ಅಗತ್ಯವಿರಲಿಲ್ಲ. ಈ ಮಾತನ್ನು ನಾನು ಹೇಳುತ್ತಿದ್ದೇನೆ. ಏಕೆಂದರೆ, ಶ್ರೀ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳು ಆಗಿದ್ದಂಥ ಸಂದರ್ಭದಲ್ಲಿ ಮಾಡಿದಂಥ ಒಳ್ಳೆಯ ಕೆಲಸಗಳನ್ನು ನಾವು ಶ್ಲಾಘನೆ ಮಾಡಿದ್ದೇವೆ. ತಪ್ಪಾಗಿದ್ದರೆ ತಪ್ಪು ಎಂದು ಹೇಳಿದ್ದೇವೆ. ಅಲ್ಲಿ ಯಾರು ಮುಖ್ಯಮಂತ್ರಿಗಳಾಗಿರಬೇಕು, ಯಾರು ನಿಮ್ಮ ನಾಯಕರಾಗಿರಬೇಕು ಎಂದು ನಾವು ತೀರ್ಮಾನ ಮಾಡುವಂಥಾದ್ದಲ್ಲ. ನಿಮಗೆ ಸ್ವಾತಂತ್ರ್ಯ ಇದೆ. ಆದರೆ ಶ್ರೀ ವೀರೇಂದ್ರ ಪಾಟೀಲರ ಆರೋಗ್ಯ ಸರಿಯಾಗಿ ಇಲ್ಲದೇ ಇರುವಂಥ ಸಂದರ್ಭವನ್ನು ಉಪಯೋಗ ಮಾಡಿಕೊಂಡು ಈ ರೀತಿ

ಮುಖ್ಯಮಂತ್ರಿಗಳ ಬದಲಾವಣೆ ಮಾಡುವುದರಿಂದ ಅವರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಆಗಬಹುದು ಎಂಬ ಸಾಮಾನ್ಯ ಸಂಗತಿಯನ್ನು ತಿಳಿದುಕೊಳ್ಳದೆ ಈ ರೀತಿ ಕುತಂತ್ರದಿಂದ ಅವರನ್ನು ಕೆಳಗಿಳಿಸಿದಂಥ ಪ್ರಯತ್ನ ಏನು ಈ ರಾಜ್ಯದಲ್ಲಿ ನಡೆಯಿತು, ಇದು ಸರಿಯಲ್ಲ, ಕಾಂಗ್ರೆಸ್ಸಿನ ನೀತಿ, ಸಿದ್ಧಾಂತ, ತತ್ವದ ಬಗ್ಗೆ ಏನು ಮಾತನಾಡುತ್ತೀರಿ ಅದಕ್ಕೆ ನೀವೇ ತಿಲಾಂಜಲಿ ಇಡುತ್ತಿದ್ದೀರಿ ಎಂಬ ಮಾತನ್ನು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಎರಡನೆಯದು, ಇವತ್ತು ಸನ್ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾರೆ. ಅವರಿಗಿರುವ ಬಹುಮತ ಸಾಬೀತಾಗುತ್ತದೆ ಮತ್ತು ನೀವು ಅದರ ಜೊತೆಯಲ್ಲಿದ್ದೀರಿ. ತಾತ್ಕಾಲಿಕವಾಗಿ ಕರ್ನಾಟಕ ರಾಜ್ಯದಲ್ಲಿದ್ದಂಥ ಒಂದು ರಾಜಕೀಯ ಅಸ್ಥಿರತೆ ವಾತಾವರಣ ಇವತ್ತು ಕಡಿಮೆಯಾಗಿದೆ. ಪ್ರಶ್ನೆ ಇರುವಂಥಾದ್ದು ಏನೆಂದರೆ, ರಾಜ್ಯದ ಜನತೆ ಈ ರೀತಿ ವಿಶ್ವಾಸ ಇಟ್ಟು ಅಧಿಕಾರಕ್ಕೆ ತಂದಾಗ, ಒಬ್ಬರಿಗೆ ಆರೋಗ್ಯ ಸರಿಯಿಲ್ಲದಾಕ್ಷಣ ಅಥವಾ ಆರೋಗ್ಯ ಸರಿಯಿಲ್ಲದೆ ಇನ್ನು ಒಂದೆರಡು ವಾರದಲ್ಲಿ ಚೇತರಿಸಿಕೊಳ್ಳುತ್ತೇನೆ ಎಂದು ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಂಥ ಒಬ್ಬ ಮುಖ್ಯಮಂತ್ರಿ ಹೇಳಿರಬೇಕಾದರೆ, ಇಂಥ ಸಂದರ್ಭದಲ್ಲೇ ಈ ರೀತಿ ಅವರ ಕಾಲೆಳೆಯುವಂಥ ಅಗತ್ಯವೇನಿತ್ತು? ನನಗೆ ಆಶ್ಚರ್ಯ ಆಗಿರುವಂಥಾದ್ದು, ಈ ಸದನದಲ್ಲಿ ಹಿಂದೆ ಮಂತ್ರಿಗಳಾಗಿದ್ದಂಥವರು, ಇವತ್ತು ಮಾನ್ಯ ಬಂಗಾರಪ್ಪನವರ ನಾಯಕತ್ವದಲ್ಲಿ ಮಂತ್ರಿಯಾಗಿರುವಂಥ ಶ್ರೀ ಅಜೀಜ್ ಸೇಠ್ ಅವರು ಹೇಳಿದ ಮಾತನ್ನು ಇಲ್ಲಿ ನಾನು ಉಲ್ಲೇಖ ಮಾಡಬೇಕಾಗುತ್ತದೆ.

ಇದು ಪತ್ರಿಕೆಯಲ್ಲಿ ಬಂದಿದೆ. "ರಾಜ್ಯದಲ್ಲಿ ಕೋಮು ಗಲಭೆಗಳ ಹಿಂದೆ ಕೆಲವು ಕಾಂಗ್ರೆಸ್ ವ್ಯಕ್ತಿಗಳಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರ ಹೇಳಿಕೆಯನ್ನು ನಿರಾಕರಿಸಿದ ಅವರು ಗೃಹಖಾತೆಯನ್ನು ಹೊಂದಿದ್ದ ಅವರಿಗೆ ಈ ವಿಷಯ ಸ್ಪಷ್ಟವಾಗಿ ಗೊತ್ತಿದ್ದರೂ ಏಕೆ ಅವರನ್ನು ಬಂಧಿಸಲಿಲ್ಲ, ಅವರು ಮುಖ್ಯಮಂತ್ರಿಯಾಗಿರಲು ಹಾಗೂ ಕಾಂಗ್ರೆಸ್ಸಿನವರಾಗಿರಲು ಅನರ್ಹರಾಗಿದ್ದಾರೆ ಎನ್ನುವುದಕ್ಕೆ ಇದೇ ಸಾಕ್ಷಿ" ಎಂದು ಸನ್ಮಾನ್ಯ ಅಜೀಜ್ ಸೇಠ್ ಅವರು ಹೇಳಿದ್ದಾರೆ. ಯಾವ ಸಂಧರ್ಭದಲ್ಲಿ ಶ್ರೀ ವೀರೇಂದ್ರ ಪಾಟೀಲರ ಆರೋಗ್ಯ ಸರಿಯಿರಲಿಲ್ಲ, ಆಗ ಜಾತಿ ಗಲಭೆಗಳು ಪ್ರಾರಂಭವಾಯಿತು ಎನ್ನುವ ವಾತಾವರಣ ನಿರ್ಮಾಣ ಆಯಿತೋ, ಆಗ ನಾವು ಸ್ಪಷ್ಟವಾಗಿ ಹೇಳಿದ್ದೆವು. ಕೆಲವು ಭಿನ್ನಮತೀಯ ಕಾಂಗ್ರೆಸ್ ಮುಖಂಡರೇ ಈ ರಾಜ್ಯದಲ್ಲಿ ಅಶಾಂತಿ ವಾತಾವರಣ ಇದೆ. ಲಾ ಅಂಡ್ ಆರ್ಡರ್ ಸಿಚ್ಯುಯೇಶನ್ ಸರಿಯಿಲ್ಲ, ಎನ್ನುವ ಅಪಾದನೆ ಮುಖ್ಯಮಂತ್ರಿಗಳ ಮೇಲೆ ತಂದು, ಅವರ ಆರೋಗ್ಯ ಸರಿಯಿಲ್ಲದೇ ಇರುವ ಸಂದರ್ಭದಲ್ಲೇ ಅವರ ಕಾಲನ್ನು ಎಳೆದು ಅವರನ್ನು ಇಳಿಸಬೇಕು ಎಂದು ಕುತಂತ್ರ ಮಾಡುವ ಅಗತ್ಯ ಇರಲಿಲ್ಲ. ಏಕೆಂದರೆ, ಇವತ್ತು ನಿಮಗೆ ಬಹುಮತ ಇದ್ದಾಗ ನಿಮ್ಮ ಆರೋಗ್ಯ ಸರಿ ಇಲ್ಲದೇ ಇರುವ ಸಂದರ್ಭದಲ್ಲಿ ಬೇರೆ ಒಬ್ಬ ಉಪ ಮುಖ್ಯಮಂತ್ರಿಯನ್ನು ಮಾಡಬಹುದಿತ್ತು. ಬೇರೆಯವರಿಗೆ ಜವಾಬ್ದಾರಿ ಕೊಟ್ಟು ನಿಮ್ಮ ಆರೋಗ್ಯ ಸುಧಾರಿಸುವವರೆಗೆ ನಾವು ಕೆಲಸ ಮಾಡುತ್ತೇವೆ ಎಂದು ಜಾಯಿಂಟ್ ರೆಸ್ಪಾನ್ಸಿಬಿಲಿಟಿ ತೆಗೆದುಕೊಳ್ಳಬೇಕಾಗಿದ್ದಂಥ ಇತರೇ ಸಚಿವರು ಅವತ್ತು ಮಂತ್ರಿ ಮಂಡಲದಲ್ಲಿ ಇದ್ದಂಥವರೇನೇ, ಇವತ್ತು ಶ್ರೀ ವೀರೇಂದ್ರ ಪಾಟೀಲರ ಬಗ್ಗೆ ಹೇಳುತ್ತಾ ಅವರು ಕಾಂಗ್ರೆಸ್ಸಿನಲ್ಲೇ ಇರುವುದಕ್ಕೆ ಅನರ್ಹರಾಗಿದ್ದಾರೆ ಎಂದು ಹೇಳಿದ್ದಾರೆ. ಹೀಗೆ ಹೇಳಿದಂಥ ಶ್ರೀ ಅಜೀಜ್ ಸೇಠ್ ಅವರನ್ನು ಮತ್ತೆ ಮಂತ್ರಿಮಂಡಲದಲ್ಲಿ ತೆಗೆದುಕೊಂಡು ಸನ್ಮಾನ್ಯ ಸಭಾನಾಯಕರು, ಮಾನ್ಯ ಮುಖ್ಯಮಂತ್ರಿಯವರು ಶ್ರೀ ವೀರೇಂದ್ರ ಪಾಟೀಲರ ಆರೋಗ್ಯ ಸರಿಯಿರದೇ ಇದ್ದರೆ ನಾವು ಅವರ ವೆಚ್ಚವನ್ನು ಭರಿಸುತ್ತೇವೆ, ಅದೇ ಬಂಗಲೆಯಲ್ಲಿ ಅವರು ಮುಂದುವರಿಯಲಿ ಅವರು ನಮ್ಮ ನಾಯಕರು ಎಂದು ಹೇಳುವುದರಲ್ಲಿ ಮತ್ತು ಮಂತ್ರಿಮಂಡಲದಲ್ಲಿರುವಂಥ ಈ ಸದಸ್ಯರು ಈ ರೀತಿ ನೇರವಾಗಿ ವೀರೇಂದ್ರ ಪಾಟೀಲರ ಮೇಲೆ ಅಪಾದನೆ ಮಾಡುವುದಕ್ಕೆ ಒಂದಕ್ಕೊಂದು ತಾಳಮೇಳ ಇದೆಯೇ ಎನ್ನುವ ಪ್ರಶ್ನೆ ಈಗ ಇರುವಂಥಾದ್ದು. ಇವತ್ತು ಇಡೀ ರಾಜ್ಯದಲ್ಲಿ, ದೇಶದಲ್ಲಿ ಒಂದು ರಾಜಕೀಯ ಅಸ್ಥಿರತೆಯ ವಾತಾವರಣ ಇದೆ. ಎಲ್ಲಾ ಪಕ್ಷಗಳಲ್ಲೂ ಭಿನ್ನಾಭಿಪ್ರಾಯದ ಸಂಧರ್ಭಗಳು ಬರುತ್ತದೆ. ಈ ರೀತಿಯ ಸಂದರ್ಭಗಳು ಬಂದಾಗ ಇಲ್ಲಿ ಇರುವಂಥ ಯಾರಾದರೂ ಮಂತ್ರಿಮಂಡಲದ ಸದಸ್ಯರು, ಶಾಸಕರಾದ

ನಮ್ಮ ಕಾಂಗ್ರೆಸ್ ಸ್ನೇಹಿತರು ಮಾನವೀಯತೆ ದೃಷ್ಟಿಯಿಂದ ಅವರ ಆರೋಗ್ಯ ಸರಿಯಿಲ್ಲದೇ ಇರುವ ಸಂದರ್ಭದಲ್ಲಿ ಅವರನ್ನು ಪದಚ್ಯುತಗೊಳಿಸುವಂಥ ಪ್ರಯತ್ನ ಮಾಡಿದರೆ ಅವರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಆಗುತ್ತದೆ ಎನ್ನುವುದಾದರೂ ನೀವು ಗಮನಿಸಬೇಕಾಗಿತ್ತಲ್ಲ? ಇದನ್ನು ಮುಂದೆ ಅವತ್ತು ಈ ರೀತಿ ಕೇವಲ ಸ್ಥಾನಮಾನಕ್ಕೋಸ್ಕರ, ಕುರ್ಚಿಗೋಸ್ಕರ, ಅಧಿಕಾರಕ್ಕೋಸ್ಕರ ಏನು ಬೇಕಾದರೂ ಮಾಡಬಹುದು ಎಂಬ ವಾತಾವರಣ ಇವತ್ತು ಸ್ವತಂತ್ರ ಭಾರತದಲ್ಲಿ ಅಧಿಕಾರಕ್ಕೆ ಬಂದಂಥ ಕಾಂಗ್ರೆಸ್ಸಿನ ಮುಖಂಡರುಗಳಿಂದ ನಡೆದುಹೋಯಿತಲ್ಲ, ಇದರ ಬಗ್ಗೆ ರಾಜ್ಯದ ಜನತೆ ಜಿಗುಪ್ಸೆ ಪಡುತ್ತಿದ್ದಾರೆ. ಆ ಸಮಯದಲ್ಲಿ ಒಂದು ಕಡೆ ರಾಜಕೀಯ ಗೊಂದಲದ ವಾತಾವರಣ ಇದ್ದು, ಇನ್ನೊಂದು ಕಡೆ ಭೀಕರ ಬರಗಾಲದಿಂದ ಜನ ಸಾಯುವ ವಾತಾವರಣ ಇದ್ದಾಗ ನಾಯಕತ್ವದ ಬದಲಾವಣೆ ಬಗ್ಗೆ ತಾವು ವಿಶೇಷ ಗಮನ ಕೊಟ್ಟರೇ ಹೊರತು ಜನರ ಹಿತದ ಬಗ್ಗೆ ತಾವು ಯೋಚನೆ ಮಾಡುವಂಥ ಪ್ರಯತ್ನ ಮಾಡಲಿಲ್ಲ. ನಾನು ಇವತ್ತು ಕೇಂದ್ರ ಸರ್ಕಾರವನ್ನು ಸ್ಪಷ್ಟವಾಗಿ ಆರೋಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಅವತ್ತು ಕೊನೆ ಘಳಿಗೆಯಲ್ಲಿ ರಾಷ್ಟ್ರಪತಿ ಆಡಳಿತವನ್ನು ಹೇರದೇ ಇದ್ದಿದ್ದರೆ ಪರಸ್ಪರ ಯಾರು ನಾಯಕರಾಗಬೇಕು ಎನ್ನುವ ಗೊಂದಲದಲ್ಲಿ ಈ ನಿಮಿಷದವರೆಗೂ ನಿಮ್ಮದು ಯಾವುದೂ ತೀರ್ಮಾನವಾಗುತ್ತಿರಲಿಲ್ಲ.

ಒಂದು ದೃಷ್ಟಿಯಿಂದ ಕೇಂದ್ರಸರ್ಕಾರ ರಾಷ್ಟ್ರಪತಿ ಆಳ್ವಿಕೆಯನ್ನು ಹೇರಿಸಿ, ಇಲ್ಲಿದ್ದಂತಹ ಗುಂಪುಗಾರಿಕೆಯನ್ನು ತಪ್ಪಿಸಿ, ಹೇಗಾದರೂ ಮಾಡಿ, ಮತ್ತೆ ಚುನಾವಣೆಗೆ ಹೋಗುವಂಥ ವಿಶೇಷವಾದ ಸಂದರ್ಭ ಬಂದೀತು ಎಂಬತಕ್ಕಂಥ ಭಯದಿಂದ, ಒಬ್ಬ ನಾಯಕರನ್ನು ಆಯ್ಕೆ ಮಾಡಿಕೊಂಡರು. ಇವತ್ತು ಬಂಗಾರಪ್ಪನವರು ನಾಯಕರಾಗುತ್ತಿದ್ದಾರೆ, ಅವರಿಗೆ ಬಹುಮತ ಸಿಗುತ್ತದೆ, ಮುಖ್ಯಮಂತ್ರಿಗಳಾಗುತ್ತಿದ್ದಾರೆ, ನಾನು ಅವರನ್ನು ಸ್ವಾಗತ ಮಾಡುತ್ತೇನೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನ ಒಂದು ಸಾರಿ 5 ವರ್ಷಕ್ಕೆ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಕಳುಹಿಸಿಕೊಟ್ಟಮೇಲೆ, ನಮಗೆ ಮನಬಂದಂತೆ ಬದಲಾವಣೆ ಮಾಡಿಕೊಳ್ಳುವ ಪ್ರಯತ್ನವನ್ನು ಯಾವುದೇ ರಾಜಕೀಯ ಪಕ್ಷ ಮಾಡಬಾರದು. ಇಂತಹ ಒಂದು ವಿಚಿತ್ರವಾದ ಒಂದು ಸಂದರ್ಭ ಕರ್ನಾಟಕ ರಾಜ್ಯದಲ್ಲಿ ನಡೆಯಿತು. ಕರ್ನಾಟಕ ರಾಜ್ಯದಲ್ಲಿ ಶಾಂತಿ ವಾತಾವರಣ ಇದ್ದುದು, ಕೋಮುಗಲಭೆಯ ವಾತಾವರಣ ಆಯಿತು. ಈ ವಾತಾವರಣವನ್ನು ಸೃಷ್ಟಿ ಮಾಡುವುದಕ್ಕೆ ಹಾಗೂ ಕೇವಲ ಕುರ್ಚಿಗೋಸ್ಕರ, ಕಾಂಗ್ರೆಸ್ಸಿನ ಹಿರಿಯ ಮುಖಂಡರು ಮಾಡಬಾರದಿತ್ತು ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಸ್ವತಃ ಅಜೀಜ್ ಸೇಠ್‌ರವರು ಹೇಳಿದ್ದಾರೆ, ರಾಜ್ಯದಲ್ಲಿ ಗಲಭೆ ವಾತಾವರಣ ಇದೆಯೆಂದು ಹೇಳಿದ್ದಾರೆ.

"ರಾಜ್ಯದಲ್ಲಿ ಕೋಮುಗಲಭೆಗಳ ಹಿಂದೆ ಕೆಲವು ಕಾಂಗ್ರೆಸ್‌ನ ವ್ಯಕ್ತಿಗಳು ಇದ್ದಾರೆ ಎಂಬ ಮಾಜಿ ಮುಖ್ಯಮಂತ್ರಿಗಳ ಹೇಳಿಕೆಯನ್ನು ನಿರಾಕರಿಸಿದ ಅವರು, ಗೃಹಖಾತೆಯನ್ನೂ ಹೊಂದಿದ್ದ ಅವರಿಗೆ ಈ ವಿಷಯ ಸ್ಪಷ್ಟವಾಗಿ ಗೊತ್ತಿದ್ದೂ, ಏಕೆ ಅವರನ್ನು ಬಂಧಿಸಲಿಲ್ಲ" ಎಂದು ಹೇಳಿದ್ದಾರೆ. ಅಂದರೆ ಏನರ್ಥ? ಈ ರಾಜ್ಯದಲ್ಲಿ ಗೊಂದಲದ ವಾತಾವರಣ, ಗಲಭೆಯ ವಾತಾವರಣ ಉಂಟಾಗಬೇಕಾದರೆ, ನನ್ನನ್ನು ಪದಚ್ಯುತಗೊಳಿಸುವುದಕ್ಕೋಸ್ಕರ ಕಾಂಗ್ರೆಸ್ಸಿನ ಮುಖಂಡರು ಮಾಡಿದ್ದಾರೆಂದು ರಾಜ್ಯದ ಮಾಜಿ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈ ರೀತಿಯ ಹೇಯ ಕೃತ್ಯಕ್ಕೆ ಜನರನ್ನು ಗೊಂದಲದ ವಾತಾವರಣಕ್ಕೆ ತಳ್ಳುವಂಥ ಪ್ರಯತ್ನ ಆಗಿದೆ ಎಂದು ಹೇಳುವುದಾದರೆ ಹಾಗೂ ಈ ರಾಜ್ಯದ ಮುಖ್ಯಮಂತ್ರಿಗಳೇ ಈ ಮಾತನ್ನು ಹೇಳುವುದಾದರೆ, ಬಹುಶಃ ಚುನಾಯಿತ ಪ್ರತಿನಿಧಿಗಳು ಈ ಪ್ರಜಾಪ್ರಭುತ್ವವನ್ನು ಉಳಿಸುವುದಕ್ಕೆ ಕೆಲಸ ಮಾಡುತ್ತಿದ್ದಾರೆಯೋ, ಅವರಿಗೆ ಜನರ ಹಿತದ ಬಗ್ಗೆ ಏನಾದರೂ ಕಳಕಳಿ ಇದೆಯೇ ಎಂಬ ಪ್ರಶ್ನೆ ಬರುತ್ತದೆ. ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಒಬ್ಬ ಮಾಜಿ ಮುಖ್ಯಮಂತ್ರಿಗಳಿಗೆ, ನೀವು ಅದೇ ಬಂಗಲೆಯಲ್ಲಿ ಮುಂದುವರಿಯಬಹುದು, ನಿಮ್ಮ ಮೆಡಿಕಲ್ ಖರ್ಚನ್ನು ನಾವು ಕೊಡುತ್ತೇವೆ ಎಂದು ಹೇಳಿದಂಥ ಮಾತು, ಅಪಮಾನದ ಸಂಗತಿ ಎಂದು ನಾನು ಭಾವಿಸುತ್ತೇನೆ. ಕಾರಣ ಏನೆಂದರೆ, ಸನ್ಮಾನ್ಯ ಅಧ್ಯಕ್ಷರು ಹೇಳಿದಂತೆ, ಶಾಸಕರಿಗೆ ಆರೋಗ್ಯ ಕೆಟ್ಟಾಗ, ಅವರಿಗೆ ಬೇಕಾದ ಅನುಕೂಲದ

ವ್ಯವಸ್ಥೆ ಇದೆ, ಸರ್ಕಾರ ಆ ವ್ಯವಸ್ಥೆಯನ್ನು ಮಾಡಿದೆ. ಈ ರೀತಿ ಇದ್ದಕ್ಕಿದ್ದ ಹಾಗೆ ಮಾಜಿ ಮುಖ್ಯಮಂತ್ರಿಗಳಾದ ವೀರೇಂದ್ರಪಾಟೀಲರ ಬಗ್ಗೆ ನಾಟಕದ ಕಣ್ಣೀರು ಹಾಕುವವರು ನಾವಲ್ಲ. ಮುಂದೆ ಲೋಕಸಭಾ ಚುನಾವಣೆಗಳು ಬರಬಹುದು, ವಾತಾವರಣ ಏನೋ ಆಗಬಹುದು. ಇವತ್ತು ಈ ರಾಜ್ಯದ ಒಬ್ಬ ವೀರಶೈವ ಸಮಾಜದ ಮುಖಂಡರನ್ನು ಪದಚ್ಯುತಗೊಳಿಸುವ ಸಂದರ್ಭ ಏನಿದೆ, ಇದರಿಂದ ಈ ರಾಜ್ಯದ ವೀರಶೈವ ಜನ ಆಕ್ರೋಶಗೊಂಡಿದ್ದಾರೆ. ಹೇಗಾದರೂ ಮಾಡಿ, ಸುತ್ತಿ ಬಳಸಿ, ವೀರೇಂದ್ರ ಪಾಟೀಲರ ಮನಸ್ಸನ್ನು ಒಲಿಸಿ, ಮತ್ತೊಮ್ಮೆ ರಾಜಕೀಯ ಕ್ಷೇತ್ರದಲ್ಲಿ ತಮ್ಮ ಸ್ಥಾನಮಾನವನ್ನು ಭದ್ರಮಾಡಿಕೊಳ್ಳುವುದಕ್ಕೋಸ್ಕರ ಈ ಪ್ರಯತ್ನ ನಡೆಯುತ್ತಿದೆಯೇ ಹೊರತು ಯಾವುದೇ ಕಳಕಳಿ ಇದ್ದರೆ, ಈ ರೀತಿ ವೀರೇಂದ್ರ ಪಾಟೀಲರನ್ನು ಅಪಮಾನಗೊಳಿಸುವ ಮಟ್ಟಕ್ಕೆ ತಾವು ಹೋಗುತ್ತಾ ಇರಲಿಲ್ಲ, ಈ ಮಾತನ್ನು ಹೇಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ..

ಶ್ರೀ ಕೆ.ಹೆಚ್. ಪಾಟೀಲ್:- ಮಾನ್ಯ ವೀರೇಂದ್ರಪಾಟೀಲರು ವೀರಶೈವರು ಎಂದು ತೆಗೆಯಲಿಲ್ಲ. ವೀರೇಂದ್ರಪಾಟೀಲರ ಮುಖ್ಯಮಂತ್ರಿ ಪದವಿ ತೆಗೆಯುವ ಬಗ್ಗೆ. ದೊಡ್ಡ ದೊಡ್ಡ ಪಕ್ಷಗಳ ಅನೇಕ ಜನ ನಾಯಕರು ಹಾಗೂ ಕೆಳಗಿನವರೆಗೆ ಎಲ್ಲರೂ ಹೇಳಿದ್ದಾರೆ. ಈ ರೀತಿಯಾದರೆ ಸರ್ಕಾರ ಹೇಗೆ ನಡೆಯುತ್ತದೆ ಎಂದು ಹೇಳಿದ್ದಾರೆ. ಇಷ್ಟಾದರೂ ಸಹಿತ ತೆಗೆಯಲಿಲ್ಲ, ಮಾನ್ಯ ರಾಜೀವ್ ಗಾಂಧಿಯವರು ಇಲ್ಲಿ ಬಂದು, ಸ್ವತಃ ನೋಡಿದರು. ನೀವು ಪೆರಲೈಸ್ಡ್ ಕಂಡೀಷನ್‌ನಲ್ಲಿರುವುದರಿಂದ ಅನಿವಾರ್ಯವಾಗಿ ಪಾಟೀಲರೇ, ನೀವು ರಾಜೀನಾಮೆ ಕೊಡಿ, ಮತ್ತೆ ನೆಟ್ಟಗಾದ ಮೇಲೆ ನೋಡೋಣ ಎಂದು ನನ್ನ ಎದುರಿಗೇ ಹೇಳಿಕಳುಹಿಸಿದರು. ಈ ರೀತಿ ರಾಜೀನಾಮೆ ಕೊಡಿ ಎಂದು ಹೇಳಿದರೆ ಏನು ಮಹಾಅತಪ್ಪಾಗುತ್ತದೆ. ಇದಕ್ಕೆ ಸಮಾಜ ಏಕೆ ತರುತ್ತೀರಿ. ವೀರೇಂದ್ರಪಾಟೀಲರು ವೀರಶೈವ ಸಮಾಜದವರೆಲ್ಲರನ್ನೂ ಮಂತ್ರಿಮಂಡಲದಲ್ಲಿ ಮಂತ್ರಿಗಳನ್ನಾಗಿ ಮಾಡಿದ್ದಾರೆಯೇ? ಶ್ರೀಮತಿ ನಾಗರತ್ನಮ್ಮನವರು ವೀರಶೈವ ಸಮಾಜದವರಲ್ಲವೇ ಅವರನ್ನು ಮಂತ್ರಿಗಳನ್ನಾಗಿ ಮಾಡಬೇಕೆಂದು ಒಂದೇ ಸಮನೆ ರಾಜೀವ್‌ಗಾಂಧಿಯವರು ಹೇಳಿದರೂ ಮಾಡಲಿಲ್ಲ. ಮಾನ್ಯ ಬಿ.ಎಂ.ಪಾಟೀಲರು ವೀರಶೈವ ಸಮಾಜದವರಲ್ಲವೇ? ಅನೇಕ ಜನ ಇವರನ್ನು ಮಂತ್ರಿಯನ್ನಾಗಿ ತೆಗೆದುಕೊಳ್ಳಿ ಎಂದು ಹೇಳಿದರೂ ತೆಗೆದುಕೊಳ್ಳಲಿಲ್ಲ. ಕೊನೆಗೆ ಅವರು ಸತ್ತುಹೋದರು. ಇದಕ್ಕೆ ನೀವು ಏನು ಹೇಳುತ್ತೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಇಲ್ಲಿ ಯಾರು ಮಂತ್ರಿಗಳಾಗಿರಬೇಕು ಎಂಬ ಬಗ್ಗೆ ನಾನು ಚಿಂತೆ ಮಾಡುತ್ತಾ ಇಲ್ಲ. ನಾನು ಮಾತನಾಡುತ್ತಿರುವ ಸಂಗತಿ ಏನೆಂದರೆ, ಇವತ್ತು ವೀರೇಂದ್ರಪಾಟೀಲರನ್ನು ಪದಚ್ಯುತಗೊಳಿಸುವುದಕ್ಕೆ ನೀವು ಆರಿಸಿಕೊಂಡಂಥ ಸಂದರ್ಭ ಏನಿದೆ ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಂಬಿಕೆ ಇರುವಂಥ ಯಾವುದೇ ವ್ಯಕ್ತಿಯೂ ಈ ಸಂದರ್ಭವನ್ನು ಉಪಯೋಗ ಮಾಡುತ್ತಾ ಇರಲಿಲ್ಲ. ಅವರಿಗೆ ಆರೋಗ್ಯ ಸರಿ ಇಲ್ಲದಿದ್ದರೆ, ಆರೋಗ್ಯ ಸುಧಾರಿಸುವವರೆಗೆ ಅವಕಾಶ ಮಾಡಿಕೊಟ್ಟು ಬೇರೆಯವರು ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಇರುವಂತಹ ಮಂತ್ರಿಗಳು ಕೆಲಸ ಮಾಡಬಹುದಾಗಿತ್ತು. ಪ್ರಶ್ನೆ ಇರುವಂತಹುದು ಏನೆಂದರೆ, ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾದ ಕ್ಷಣಕ್ಕೆ ಅವತ್ತು, ಆ ಸಂದರ್ಭದಲ್ಲಿ ಸಹ ರಾಜ್ಯದಲ್ಲಿ ಆದಂಥ ಅನ್ಯಾಯದ ಬಗ್ಗೆ ಹೋರಾಟ ಮಾಡಿದವರು ನಾವು. ಸ್ಪಷ್ಟವಾಗಿ ಈ ಸದನದಲ್ಲಿ ಧರಣಿ ಕುಳಿತು ಜನತೆಯ ಬಗ್ಗೆ ಹೋರಾಟ ಮಾಡಿದವರು. ವೀರೇಂದ್ರ ಪಾಟೀಲರು ಇದ್ದರೆ ಏನು ಆಕಾಶ ಇಳಿಸಿ ತರುತ್ತಿದ್ದರು ಎಂಬ ಮಾತನ್ನು ಹೇಳುವುದಕ್ಕೆ ನಾವು ಹೊರಟಿಲ್ಲ. ನಾವು ಹೇಳುವುದಕ್ಕೆ ಹೊರಟಿರುವುದು, ಕರ್ನಾಟಕ ರಾಜ್ಯದಲ್ಲಿ ವಾತಾವರಣ ತಿಳಿಯಾಗಿರುವಂತಹ ಸಂದರ್ಭದಲ್ಲಿ ರಾಜಕೀಯ ಅಸ್ಥಿರತೆಯ ವಾತಾವರಣ ತಿಳಿ ಆಗುವ ಸಂದರ್ಭದಲ್ಲಿ, ಒಂದು ಆರ್ಥಿಕ ದಿವಾಳಿತನದಲ್ಲಿದ್ದ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿರುವ ಸಂದರ್ಭದಲ್ಲಿ ವಿರೋಧ ಪಕ್ಷದಲ್ಲಿ ಕುಳಿತಿದ್ದ ಅನೇಕ ಬೇರೆ ಬೇರೆ ರಾಜಕೀಯ ಪಕ್ಷಗಳ ಮುಖಂಡರು ನೀವು ಒಳ್ಳೆಯ ಕೆಲಸ ಮಾಡುತ್ತಿದ್ದೀರಿ, ನಿಮ್ಮ ಜೊತೆಯಲ್ಲಿ ನಾವೂ ಇದ್ದೇವೆ, ಕೆಲಸ ಮಾಡಿ ಎಂದು ಹೇಳುತ್ತಿದ್ದ ಸಂದರ್ಭದಲ್ಲಿ, ಅವರ ಆರೋಗ್ಯ ಸರಿ ಇಲ್ಲದಿರುವ ಸಂದರ್ಭವನ್ನು ಉಪಯೋಗ ಮಾಡಿಕೊಂಡು ಅವರ ಕಾಲೆಳೆಯುವುದಕ್ಕೆ ಮಾಡಿದಂಥ ಕುತಂತ್ರ

ಏನಿದೆ ಇದನ್ನು ಈ ರಾಜ್ಯದ ಜನತೆ ಮರೆಯುವುದಿಲ್ಲ, ಕ್ಷಮಿಸುವುದಿಲ್ಲ. ಜಾತಿ ಪ್ರಶ್ನೆ ಅಲ್ಲ ನಾನು ಹೇಳುವುದಕ್ಕೆ ಹೊರಟಿರುವುದು. ನಾಯಕನ ಆಯ್ಕೆ ಮಾಡುವ ಸಂದರ್ಭದಲ್ಲಿ ಯಾರು ಮುಖಂಡರಿದ್ದರು, ಏನೆಲ್ಲಾ ಮಾತನಾಡಿದಿರೀ? ಇನ್ನೊಬ್ಬ ನಾಯಕನ ಆಯ್ಕೆ ಆದಮೇಲೆ, ವಾತಾವರಣ ತಿಳಿ ಆದಮೇಲೆ ಈ ರಾಜ್ಯದಲ್ಲಿರುವ ದೊಡ್ಡ ಸಮಾಜ ಜಿಗುಪ್ಸೆ ಹೊಂದಿದ್ದಾರೆ, ಬೇಸರ ಹೊಂದಿದ್ದಾರೆ, ನಿಮ್ಮ ನಡವಳಿಕೆಯಿಂದ ಈ ರೀತಿ ಆಗಿದೆ ಎಂದು, ಅವರ ಸಿಂಪಥಿ ತೆಗೆದುಕೊಳ್ಳುವುದಕ್ಕೋಸ್ಕರ, ನಾಳೆ ಲೋಕಸಭಾ ಚುನಾವಣೆ ನಡೆದರೆ, ವೀರೇಂದ್ರ ಪಾಟೀಲರು ಇಲ್ಲದೇ ಹೋದರೆ ನಿಮ್ಮ ಅಡ್ರೆಸ್ ಇರುವುದಿಲ್ಲ ಎಂಬ ಕಾರಣಕ್ಕೋಸ್ಕರ ನೀವು ಅವರ ಬಗ್ಗೆ ಈಗ ಒಳ್ಳೆಯ ಮಾತನಾಡುತ್ತಿದ್ದೀರಿ ಎಂದು ನಾವು ಭಾವಿಸಬೇಕೇನೋ?

ಶ್ರೀ ಕೆ.ಹೆಚ್. ಪಾಟೀಲ್:- ಯಡಿಯೂರಪ್ಪನವರೇ...

ಶ್ರೀ ಬಿ.ಎಸ್. ಯಡಿಯೂರಪ್ಪ:- ಒಂದು ನಿಮಿಷ ತಾಳಿ ಸ್ವಾಮಿ, ನಾನು ಈಲ್ಡ್ ಆಗಿಲ್ಲ, ನಾನು ಈಲ್ಡ್ ಆಗಿಲ್ಲ.

(ಗೊಂದಲ)

ಶ್ರೀ ಕೆ.ಹೆಚ್. ಪಾಟೀಲ್:- ನಮಗೆ ಸಿಗುವುದಿಲ್ಲ, ನಿಮಗೆ ಸಿಗುವುದಿಲ್ಲ ಎಂಬುದು ಅಲ್ಲ. ಯಡಿಯೂರಪ್ಪನವರೇ, ನಾವು ನಮ್ಮ ಪಕ್ಷದವರನ್ನೇ ಆರಿಸಿದ್ದೇವೆ. ನೀವು ಸಪೋರ್ಟ್ ವಿಥ್‌ಡ್ರಾ ಮಾಡಿ ಎರಡನೇ ಪಕ್ಷದವರಿಗೆ ಅವಕಾಶ ಮಾಡಿಕೊಡುತ್ತಿದ್ದೀರಲ್ಲ ಅದಕ್ಕೆ ಏನು ಹೇಳುತ್ತೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಅಲ್ಲಿ ವಿಥ್‌ಡ್ರಾ ಮಾಡಿದರು. ನಾವು ಒಂದು ತತ್ವ, ಒಂದು ನಿಷ್ಠೆ, ಒಂದು ಧರ್ಮದ ಆಧಾರದಮೇಲೆ ರಾಜಕಾರಣ ಕಟ್ಟುತ್ತಿರುವುದು. ಸ್ವಾರ್ಥ ರಾಜಕಾರಣ, ಅನುಕೂಲ ಸಿಂಧು ರಾಜಕಾರಣ ಮಾಡಲಿಲ್ಲ. ಇವತ್ತು ಮಂತ್ರಿಮಂಡಲ ಅನೌನ್ಸ್ ಮಾಡಿದರು. ಸನ್ಮಾನ್ಯ ಕೆ.ಹೆಚ್. ರಂಗನಾಥ್‌ರವರು ಇಲ್ಲಿಲ್ಲ. ನಾನು ಬಹಳ ದಿನದಿಂದ ಅವರ ಬಗ್ಗೆ ಗೌರವ ಇಟ್ಟುಕೊಂಡಿರುವವನು. ಇವತ್ತು ಸಮಾಜದಲ್ಲಿ ಬದಲಾವಣೆಗೆ ಕೆಲಸ ಮಾಡುತ್ತಿದ್ದ ಕೆ.ಹೆಚ್.ರಂಗನಾಥ್‌ರವರು ಮೊದಲನೇ ಸಾಲಿನಲ್ಲಿ ಇರುತ್ತಾರೆ ಎಂದು ನಾವು ಭಾವಿಸಿದ್ದೆವು. ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಸುಧಾರಣೆ ಮಾಡಿದ ರಾಜಶೇಖರ ಮೂರ್ತಿಯವರು ಮೊದಲನೇ ಸಾಲಿನಲ್ಲಿ ಮಂತ್ರಿಗಳಾಗಿರುತ್ತಾರೆ ಎಂದು ನಾವು ಭಾವಿಸಿದ್ದೆವು.

ಉಪಾಧ್ಯಕ್ಷರು:- ಯಡಿಯೂರಪ್ಪನವರೇ, ತಾವು ದಯವಿಟ್ಟು ಈಗ ಸಭೆಯ ಮುಂದಿರುವ ವಿಶ್ವಾಸ ಮತದ ಬಗ್ಗೆ ತಮ್ಮ ಮಾತನ್ನು ಮುಂದುವರಿಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಉಪಾಧ್ಯಕ್ಷರೇ, ನಾನು ಬೇರೆ ಏನೂ ಮಾತನಾಡುತ್ತಿಲ್ಲ. ನಾನು ಮಾತನಾಡುವುದಕ್ಕೆ ಹೊರಟಿರುವುದು ಕಾಂಗ್ರೆಸ್ ಸಂಸ್ಕೃತಿ ಏನಿದೆ, ಯಾವರೀತಿ ಬರಬರುತ್ತಾ ಅಧಿಕಾರಕ್ಕೋಸ್ಕರ ಮಾಡಬಾರದ್ದನ್ನು ಮಾಡುವುದಕ್ಕೆ ಸಿದ್ಧರಾಗಿದ್ದಾರೆ, ಕುರ್ಚಿಗೋಸ್ಕರ ರಾಜಕಾರಣ ನಡೆಸುತ್ತಿದ್ದಾರೆ. ಇದು ಸರಿಯಲ್ಲ. ಈ ಒಂದು ಪದ್ಧತಿಯನ್ನು ಕೈಬಿಡಬೇಕೆಂದು ಹೇಳುವುದಕ್ಕೆ ಹೊರಟಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ತಾವು ಈಲ್ಡ್ ಆಗುವುದಾದರೆ ಒಂದು ಮಾತನ್ನು ಹೇಳುತ್ತೇನೆ. ಸನ್ಮಾನ್ಯ ಉಪಾಧ್ಯಕ್ಷರೇ, ಸನ್ಮಾನ್ಯ ಯಡಿಯೂರಪ್ಪನವರಿಗೆ ವಿಶ್ವಾಸ ಮತದ ಮೇಲೆ ಮಾತನಾಡುವುದಕ್ಕೆ ಪೂರ್ತಿ ಅಧಿಕಾರ ಇದೆ, ಮಾತನಾಡಬಹುದು. ಆದರೆ ಕಾಂಗ್ರೆಸ್ ಪಕ್ಷದಲ್ಲಿ ಯಾರು ನಾಯಕರಾಗಬೇಕು, ನಾಯಕರಾದಮೇಲೆ ಯಾರು ಮುಖ್ಯಮಂತ್ರಿಯಾಗಬೇಕು, ಮುಖ್ಯಮಂತ್ರಿಯಾದಮೇಲೆ ಯಾರು ಮಂತ್ರಿಗಳಾಗಬೇಕು, ಅದನ್ನು ಹೇಳುವುದಕ್ಕಲ್ಲ. ಬಿ.ಜೆ.ಪಿ. ಮುಖಂಡರಾದ ಸನ್ಮಾನ್ಯ ಯಡಿಯೂರಪ್ಪನವರು ಹೇಳಿದವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದ್ದರೆ, ಸಚಿವರನ್ನಾಗಿ ಮಾಡಿದ್ದರೆ ಅದು ಸರಿಯಾದ ಸಂಸ್ಕೃತಿ, ಇಲ್ಲದಿದ್ದರೆ ಅದು ಸರಿಯಾದ ಸಂಸ್ಕೃತಿ ಅಲ್ಲ ಎಂದು ಹೇಳುತ್ತಿದ್ದಾರೆ. ಆದುದರಿಂದ ಪಾಪ, ಇವರ ಮಾತು ಕೇಳಿ

ವಿ.ಪಿ.ಸಿಂಗ್‌ರವರು ಪ್ರಧಾನಿಯಾಗಿ, ಪ್ರಧಾನಿ ಪಟ್ಟದಿಂದ ಇಳಿಯಬೇಕಾದ ಸಂದರ್ಭ ಬಂದಿದೆ. ಆ ಪರಿಸ್ಥಿತಿ ನಮಗೆ ಬಾರದಿರಲಿ ಎಂದು ಶ್ರೀ ರಾಮಚಂದ್ರನಲ್ಲಿ ನಾವು ಪ್ರಾರ್ಥನೆ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಮಂತ್ರಿಮಂಡಲದಲ್ಲಿ ಯಾರಿರಬೇಕು ಎಂಬುದರ ಬಗ್ಗೆ ಚಿಂತೆ ಮಾಡುತ್ತಿಲ್ಲ. ಸನ್ಮಾನ್ಯ ವೀರಪ್ಪಮೊಯಿಲಿಯವರಿಗೆ ಮಂತ್ರಿಸ್ಥಾನ ಇಲ್ಲದಿದ್ದರೆ ಅವರು ಮಾತನಾಡುವ ವೈಖರಿಯೇ ಬೇರೆ ಆಗುತ್ತಿತ್ತು. ಇದು ನನಗೆ ಗೊತ್ತಿದೆ. ಮೊಯಿಲಿಯವರಿಗೆ ಆ ಒಂದು ಸ್ಥಾನ ಸಿಗದಿದ್ದರೆ ಅವರು ಏನು ಮಾತನಾಡುತ್ತಿದ್ದರು, ಮುಂದೆ ಬರುವ ದಿವಸಗಳಲ್ಲಿ ಏನಾಗುತ್ತದೆ ಅದೂ ಗೊತ್ತಿದೆ. ಯಾರು ಮಂತ್ರಿಯಾಗಿ ಇರಬೇಕೆಂದು ನಾನು ಚಿಂತೆ ಮಾಡುತ್ತಿಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ:- ತಾವು ಹೇಳುತ್ತಿದ್ದೀರಲ್ಲ, ನಾವು ಈ ಸ್ಥಾನದಲ್ಲಿದ್ದು, ತಾವು ಆ ಸ್ಥಾನದಲ್ಲಿರುವುದರಿಂದ, ಅಸೂಯೆಯಿಂದ, ತಮಗೆ ತಡೆಯಲಿಕ್ಕೆ ಬಾರದೆ, ಈ ತರಹ ಮಾತನಾಡುತ್ತಿದ್ದೀರಿ ಎಂದು ಹೇಳಬಹುದೇ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನನಗೆ ನೋವಾಗುತ್ತಿರತಕ್ಕಂಥ ವಿಷಯ ಏನು ಎಂದರೆ,....

ಶ್ರೀ ಎಂ. ವೀರಪ್ಪಮೊಯಿಲಿ:- ನೋವಲ್ಲ, ನೋವಲ್ಲ...

ಶ್ರೀ ಬಿ.ಎಸ್. ಯಡಿಯೂರಪ್ಪ:- ಇಡೀ ದೇಶದಲ್ಲಿ ನಿಮ್ಮ ಕಾಂಗ್ರೆಸ್ ನಡವಳಿಕೆಯಿಂದ ಕಾಂಗ್ರೆಸ್ ನಿರ್ನಾಮ ಆಗುತ್ತಿದ್ದ ಕಾಲದಲ್ಲಿ ಕರ್ನಾಟಕದಲ್ಲಿ ಅಲ್ಪಸ್ವಲ್ಪ ಇದ್ದ ಬೆಂಬಲವನ್ನೂ ಹಾಳು ಮಾಡುವುದಕ್ಕೆ ನೀವೆಲ್ಲಾ ಕಾರಣಕರ್ತರಾದಿರಲ್ಲ ಎಂಬ ನೋವಿನಿಂದ ಈ ಮಾತನ್ನು ಹೇಳುವುದಕ್ಕೆ ಹೊರಟಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಯಡಿಯೂರಪ್ಪನವರು ಚೆನ್ನಾಗಿ ಮಾತನಾಡುತ್ತಿದ್ದಾರೆ. ಅವರು ಯಾವಾಗಲೂ ಕೂಡ ಒಂದು ತತ್ವ, ಸಿದ್ಧಾಂತ ಮತ್ತು ಆಧ್ಯಾತ್ಮಿಕತೆಯನ್ನು ಇಟ್ಟುಕೊಂಡಿದ್ದರು. ಆದರೆ ಅವರು ಈಗ ಆ ಒಂದು ಹಂತದಿಂದ ಏತಕ್ಕೆ ಸ್ವಲ್ಪ ಕೆಳಗೆ ಇಳಿದರೂ ನನಗಂತೂ ಅರ್ಥವಾಗುತ್ತಿಲ್ಲ. ಈಗ ಅವರು ಜಾತಿಯನ್ನು ಬೆಳೆಸಿದ್ದಾರೆ. ಜನಗಳನ್ನು ಪ್ರಚೋದನೆ ಮಾಡುವುದಕ್ಕೆ ನೋಡುತ್ತಿದ್ದಾರೆ. ಬಹುಶಃ ನಮ್ಮ ಕಾಂಗ್ರೆಸ್ ಸಂಸ್ಕೃತಿ ಜಾತ್ಯಾತೀತದಿಂದ ಕೂಡಿದೆ. ಈಗ ನಮ್ಮ ಸಂಸ್ಕೃತಿಯನ್ನು ನೀವು ಇಂಜೆಕ್ಟ್ ಮಾಡಿ ನಮ್ಮ ಮನಸ್ಸನ್ನು ಕದಡಲಿಕ್ಕೆ ಪ್ರಯತ್ನ ಮಾಡಿದರೆ ಆ ಬಗ್ಗೆ ಏನಾದರೂ ತಾವು ಆಲೋಚನೆ ಮಾಡಿದ್ದರೆ ಅದು ನಡೆಯುವುದಿಲ್ಲ ಎನ್ನುವುದನ್ನು ತಾವು ದಯಮಾಡಿ ತಿಳಿದುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಸ್ವಾಮಿ, ಇವತ್ತು ನಮ್ಮ ಜನರಲ್ಲಿ ಈ ಧರ್ಮದ ಬಗ್ಗೆ ಗೌರವ ಇತ್ತು, ಜನಗಳಲ್ಲಿ ವಿಶ್ವಾಸ ಇತ್ತು. ಅದನ್ನು ತಾವು ಹಾಳು ಮಾಡಲಿಕ್ಕೆ ಹೊರಟು ಕೇವಲ ಓಟಿಗಾಗಿ ಅನೇಕ ಕುತಂತ್ರದ ರಾಜಕಾರಣ ಈ ದೇಶದಲ್ಲಿ ನಡೆಯುತ್ತಿದೆ. ಅದು ಜನತೆಗೆ ಗೊತ್ತಿದೆ. ಜನರು ತಮಗೆ ತಕ್ಕ ಪಾಠ ಕಲಿಸತಕ್ಕಂಥ ಕಾಲ ಬಹಳ ಹತ್ತಿರದಲ್ಲಿಯೇ ಇದೆ. ಆ ವಿಷಯ ಚರ್ಚೆಗೆ ಬಂದಾಗ ನಾನು ಆ ಬಗ್ಗೆ ಮಾತನಾಡುತ್ತೇನೆ...

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ:- ಒಂದು ನಿಮಿಷ ತಾವು ಈಲ್ಡ್ ಆಗುವುದಾದರೆ..

ಶ್ರೀ ಬಿ.ಎಸ್. ಯಡಿಯೂರಪ್ಪ:- ಇಲ್ಲ, ನಾನು ಈಲ್ಡ್ ಆಗಿಲ್ಲ.

(ಗೊಂದಲ)

ಶ್ರೀ ಎಸ್.ಎಚ್.ಕೌಜಲಗಿ:- ಮಾನ್ಯ ಕೆ.ಎಚ್.ಪಾಟೀಲ್‌ರವರಿಗೆ ಹೆಚ್ಚು ಮತ ಬಿದ್ದಿತ್ತು ಎಂದು ನಾವು ಪತ್ರಿಕೆಗಳಲ್ಲಿ ನೋಡಿದ್ದೇವೆ. ಆದರೆ ಅವರನ್ನು ಏತಕ್ಕೆ ಮುಖ್ಯಮಂತ್ರಿಗಳನ್ನಾಗಿ ಮಾಡಲಿಲ್ಲ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಸ್ವಾಮಿ, ನಾನು ಈಗ ಇಷ್ಟೇ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ವೀರಪ್ಪಮೊಯಿಲಿಯವರು ಹೇಳಿದಂತೆ ಯಾರು ಮುಖ್ಯಮಂತ್ರಿಗಳಾಗಬೇಕು, ಯಾರು ಮಂತ್ರಿಗಳಾಗಬೇಕು ಎಂದು ನಾನು ಹೇಳಬೇಕಾಗಿಲ್ಲ. ಆದರೆ ನಾನು ಹೇಳಲು ಹೊರಟಿರುವುದೇನೆಂದರೆ, ನೀವು ಯಾರನ್ನು ಒಬ್ಬ ನಾಯಕರು ಎಂದು ಆರಿಸಿಕೊಂಡಿರಿ, ಅದೂ ಮಾಜಿ ಮುಖ್ಯಮಂತ್ರಿಗಳನ್ನು ಪದಚ್ಯುತಗೊಳಿಸತಕ್ಕಂಥ ಸಂದರ್ಭದಲ್ಲಿ ನಡೆದುಕೊಂಡಂತಹ ರೀತಿ ಏನಿದೆ ಅದಕ್ಕಾಗಿ ಈ ನಾಡಿನ ಜನರು ಯಾವುದೇ ಸಂದರ್ಭದಲ್ಲೂ ತಮ್ಮನ್ನು ಕ್ಷಮಿಸುವುದಿಲ್ಲ. ಇವತ್ತು ನಿಮಗೆ ಬಹುಮತ ಇರಬಹುದು. ಆದರೆ ಅದರ ಆಧಾರದ ಮೇಲೆ ಮಾಜಿ ಮುಖ್ಯಮಂತ್ರಿ ಶ್ರೀ ವೀರೇಂದ್ರಪಾಟೀಲರನ್ನು ಪದಚ್ಯುತಿಗೊಳಿಸಲು ನಡೆದುಕೊಂಡಂತಹ ನಡವಳಿಕೆಯನ್ನು ನೋಡಿಕೊಂಡು ಅದರ ಆಧಾರದ ಮೇಲೆ ನೀವೇನಾದರೂ ಚುನಾವಣೆಗೆ ಹೋದರೆ ಜನ ನಿಮಗೆ ತಕ್ಕ ಪಾಠ ಕಲಿಸುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಒಂದು ನಿಮಿಷ ಈಲ್ಡ್ ಆಗುವುದಾದರೆ....

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಈಲ್ಡ್ ಆಗುವುದಿಲ್ಲ...

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ:- ಒಂದು ನಿಮಿಷ ತಾವು ಈಲ್ಡ್ ಆಗುವುದಾದರೆ...

ಶ್ರೀ ಬಿ.ಎಸ್. ಯಡಿಯೂರಪ್ಪ:- ಇಲ್ಲ ನಾನು ಈಲ್ಡ್ ಆಗಿಲ್ಲ. ತಾವೇನು ದೊಡ್ಡ ದೊಡ್ಡ ಮಾತುಗಳನ್ನು ಹೇಳಿದಿರಿ, ಆ ಬಗ್ಗೆ ನಿಮ್ಮ ಬಗ್ಗೆ ನನಗೆ ಗೌರವ ಇದೆ. ಆದರೆ ತಾವೇನು ಇಂದು ರಾಜೀನಾಮೆ ಕೊಟ್ಟಿದ್ದೀರಿ ಎಂದು ನಾವು ಪತ್ರಿಕೆಗಳಲ್ಲಿ ನೋಡಿದ್ದೇವೆ, ಅದರಂತೆ ತಾವು ತಮ್ಮ ರಾಜೀನಾಮೆ ಪತ್ರವನ್ನು ಮುಖ್ಯಮಂತ್ರಿಗಳಿಗೆ ಕೊಟ್ಟು ಆ ರಾಜೀನಾಮೆಯನ್ನು ಒಪ್ಪಿಸಿಕೊಂಡು ಹೊರಗಡೆ ಬಂದರೆ ಆಗ ನಾವು ತಮ್ಮನ್ನು ಒಪ್ಪಿಕೊಳ್ಳುತ್ತೇವೆ. ತಮ್ಮ ರಾಜೀನಾಮೆ ಗುಲ್ಲು ಏನು ಪತ್ರಿಕೆಗಳಲ್ಲಿ ಬಂದಿದೆ ಅದನ್ನು ಮುಖ್ಯಮಂತ್ರಿಗಳಿಂದ ಒಪ್ಪಿಸಿಕೊಂಡು ತಾವು ಹೊರಗೆ ಬನ್ನಿ. ಆಗ ತಾವು ಮಾತನಾಡಿದ್ದಕ್ಕೆ ಗೌರವ ಬರುತ್ತದೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಹಿಂದೆ ಇದ್ದ ಗೊಂದಲ ವಾತಾವರಣ ತಪ್ಪಿ ಕೊನೆಯ ಪಕ್ಷ ಶ್ರೀ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿ ಆಯ್ಕೆಗೊಂಡಿರತಕ್ಕಂಥ ಈ ಸಂಧರ್ಭದಲ್ಲಿ ಇನ್ನಾದರೂ ಜನಗಳ ಮನಸ್ಸಿನಲ್ಲಿ ಇರತಕ್ಕಂಥ ಭಾವನೆಯನ್ನು ಅರ್ಥ ಮಾಡಿಕೊಂಡು, ರಾಜ್ಯದಲ್ಲಿ ಭೀಕರ ಬರಗಾಲ ಇರುವಂಥ ಸಂದರ್ಭದಲ್ಲಿ ಜನರ ಸಮಸ್ಯೆಗಳನ್ನು ಬಗೆಹರಿಸಲು ಗಮನ ಕೊಡದೆ ಕೇವಲ ನಾಯಕರಿಗಾಗಿ, ಮಂತ್ರಿಗಳಿಗಾಗಿ, ಛೇರ್ಮನ್‌ಗಿರಿಗಳಿಗಾಗಿ ಬಡಿದಾಡಿ ರಾಜ್ಯದ ಜನತೆಯ ಆಸೆ ಆಕಾಂಕ್ಷೆಗಳಿಗೆ ತಿಲಾಂಜಲಿ ಆಗದಂತೆ ಇನ್ನು ಮುಂದಾದರೂ ಒಳ್ಳೆಯ ಕೆಲಸಗಳನ್ನು ಮಾಡುವಂತಹ ಪ್ರಯತ್ನ ಮಾಡಿ. ಅದಿಲ್ಲದಿದ್ದರೆ, ಇವತ್ತು ಜನ ನಿರೀಕ್ಷೆ ಮಾಡುತ್ತಿರುವಂಥಾದ್ದು ಏನೆಂದರೆ, ಮುಖ್ಯಮಂತ್ರಿಗಳನ್ನು ಕೆಳಗೆ ಇಳಿಸತಕ್ಕಂಥ ರೀತಿ ಇದೆಯಲ್ಲ ಅದೇ ಒಂದು ಇಶ್ಯು ಮೇಲೆ ನೀವು ರಾಜೀನಾಮೆ ಕೊಟ್ಟು ಚುನಾವಣೆಗೆ ಹೋದರೆ ಈ ರಾಜ್ಯದ ಜನ ತಮಗೆ ಸರಿಯಾದ ಪಾಠ ಕಲಿಸತಕ್ಕಂಥ ಕಾಲ ಬಹಳ ದೂರ ಇಲ್ಲ ಎಂದು ಹೇಳಿ ಇವತ್ತು ನಾನು ಈ ನಿರ್ಣಯವನ್ನು ಸಂಪೂರ್ಣವಾಗಿ ವಿರೋಧ ಮಾಡಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಚ್. ಬನ್ನಿಕೋಡ್:- ಮಾನ್ಯ ಅಧ್ಯಕ್ಷರೇ....

ಶ್ರೀ ಸಿ. ಬೈರೇಗೌಡ:- ಮಾನ್ಯ ಉಪಾಧ್ಯಕ್ಷಣಿಯವರೇ ಒಂದು ಆರ್ಡರ್‌ನಲ್ಲಿ ಕರೆಯಬೇಕಾಗಿತ್ತು..

ಉಪಾಧ್ಯಕ್ಷರು:- ನಾನು ಮಿಸ್ ಮಾಡಿದೆ ನೆಕ್ಸ್ಟ್ ಕರೆಯುತ್ತೇವೆ.

† ಶ್ರೀ ಬಿ.ಎಚ್. ಬನ್ನಿಕೋಡ್: (ಹಿರೇಕೆರೂರ್):- ಮಾನ್ಯ ಅಧ್ಯಕ್ಷರೇ, ಮಾನ್ಯ ಬಂಗಾರಪ್ಪನವರು ಕರ್ನಾಟಕ ರಾಜ್ಯದ ನೂತನ ಮುಖ್ಯಮಂತ್ರಿಗಳಾಗಿ ಹಾಗೂ ಅವರ ಸಚಿವ

ಸಂಪುಟವನ್ನು ರಚನೆ ಮಾಡಿ ಈ ಸದನದ ಎದುರಿಗೆ ಸದನದ ವಿಶ್ವಾಸ ಮತ ಯಾಚನೆಯನ್ನು ರಾಜ್ಯಪಾಲರ ಸೂಚನೆಗೆ ಅನುಸಾರವಾಗಿ ಇವತ್ತು ತಂದಿದ್ದಾರೆ. ಈಗಾಗಲೇ ಹಿರಿಯ ಸದಸ್ಯರು ಈ ವಿಚಾರದಲ್ಲಿ ಸಾಕಷ್ಟು ಚರ್ಚೆ ಮಾಡಿದ್ದಾರೆ. ಈ ಸದನದ ಸದಸ್ಯರ ಹಾಗೂ ರಾಜ್ಯದ ಜನತೆಯ ಮನಸ್ಸಿನಲ್ಲಿರತಕ್ಕಂಥ, ಅವರ ಅಂತರಾಳದಲ್ಲಿರತಕ್ಕಂಥ ಸಮಸ್ಯೆಗಳನ್ನು ನಿವಾರಣೆ ಮಾಡಲು ವಿವರವಾದ ವಿಷಯಗಳನ್ನು ಇಲ್ಲಿ ಮಂಡನೆ ಮಾಡಿದ್ದಾರೆ. ನೂತನ ಮುಖ್ಯಮಂತ್ರಿಗಳಾಗಿರುವ ಸನ್ಮಾನ್ಯ ಬಂಗಾರಪ್ಪನವರು ನನ್ನ ಹಿರೇಕೆರೂರು ತಾಲ್ಲೂಕಿಗೆ ಹೊಂದಿಕೊಂಡಂತೆ ಇರುವ ಸೊರಬ ಕ್ಷೇತ್ರದವರು. ಅವರು ಅನೇಕ ರೀತಿಯಿಂದ ನನಗೆ ವೈಯುಕ್ತಿಕವಾಗಿ ಗೊತ್ತು. ಅವರು ಜನತೆಯ ಅಭಿವೃದ್ಧಿಗಾಗಿ ಆ ಕ್ಷೇತ್ರದ ಅಭಿವೃದ್ಧಿಗಾಗಿ ಹಾಗೂ ರಾಜಕೀಯವಾಗಿ ಅವರ ಮತ್ತು ನಮ್ಮ ಒಂದು ಸಂಪರ್ಕ ಚೆನ್ನಾಗಿ ಇದೆ. ಅವರ ಸ್ನೇಹ ಸಂಪರ್ಕ ನನಗೆ ಅತಿ ಸಮೀಪದಿಂದ ಇತ್ತು. ಅವರು ಈ ರಾಜ್ಯದ ಮುಖ್ಯಮಂತ್ರಿಗಳಾಗಬೇಕೆಂದು ಅನೇಕ ದಶಕಗಳಿಂದ ಗುರಿಯನ್ನು ಇಟ್ಟುಕೊಂಡಿದ್ದರು. ಆ ಒಂದು ಗುರಿಯನ್ನು ಇಟ್ಟುಕೊಂಡ ದಿಸೆಯಲ್ಲಿ ಅವರು ತಮ್ಮದೇ ಆದ ಒಂದು ಗುಂಪು ಮತ್ತು ರಾಜಕೀಯ ನಿಲುವನ್ನು ಕಟ್ಟಿಕೊಂಡು ಅನೇಕಸಾರಿ ಪರಿಸ್ಥಿತಿಗನುಗುಣವಾಗಿ ರಾಜಕೀಯ ಬದಲಾವಣೆಗಳನ್ನು ಮಾಡುತ್ತಾ ಬಂದಿದ್ದರೂ ಸಹಿತ ಯಾವ ತಮ್ಮ ಒಂದು ರಾಜಕೀಯ ಗುಂಪನ್ನು ಕಟ್ಟಿಕೊಂಡಿದ್ದರೋ, ತಮ್ಮ ರಾಜಕೀಯ ವಿಚಾರಗಳಿಗೆ ಸ್ಪಂದಿಸುವಂಥಾ ಸ್ನೇಹಿತರನ್ನು, ತಮ್ಮ ವಿಚಾರಗಳಿಗೆ ಸ್ಪಂದಿಸತಕ್ಕಂಥ ರಾಜಕಾರಣಿಗಳನ್ನು ಕಟ್ಟಿಕೊಂಡಿದ್ದರೋ ಅಂಥವುಗಳನ್ನು ದಶಕಗಳಿಂದ ಬೆಳೆಸುತ್ತಾ ಬಂದು ಇವತ್ತು ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಈ ಒಂದು ಪರ್ವಕಾಲವನ್ನು ಸದುಪಯೋಗಪಡಿಸಿಕೊಂಡಿದ್ದಾರೆ.

ಸನ್ಮಾನ್ಯ ಬಂಗಾರಪ್ಪನವರು ಇವತ್ತು ವಿಶ್ವಾಸ ಮತವನ್ನು ಯಾಚನೆ ಮಾಡಿದ್ದಾರೆ. ಹಿಂದೆ ಸದನದ ನಾಯಕರಾಗಿ, ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಈ ಸದನದ ಹಾಗು ಈ ರಾಜ್ಯದ ಒಂದು ಅಭಿವೃದ್ಧಿಗಾಗಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀಮಾನ್ ವೀರೇಂದ್ರಪಾಟೀಲರು ಶ್ರಮಿಸಿದರು. ರಾಜ್ಯದ ಹಣಕಾಸಿನ ಸಂಪನ್ಮೂಲಗಳನ್ನು ಕ್ರೋಢೀಕರಿಸತಕ್ಕಂಥ ವಿಚಾರದಲ್ಲಿ, ಅವರ ಸಮೀಪವರ್ತಿಯಾಗಿದ್ದ ಅರ್ಥ ಮಂತ್ರಿಗಳಾಗಿದ್ದ ಶ್ರೀಮಾನ್ ರಾಜಶೇಖರ ಮೂರ್ತಿಯವರು ಶ್ರಮಿಸಿ ಈ ರಾಜ್ಯದ ಹಣಕಾಸಿನ ಒಂದು ತೊಂದರೆಯನ್ನು ನಿವಾರಿಸಿ ಈ ರಾಜ್ಯದ ಆರ್ಥಿಕ ಸ್ಥಿತಿಯನ್ನು ಸುಧಾರಣೆ ಮಾಡಿದ್ದಾರೆ ಎನ್ನುವ ವಿಶ್ವಾಸ ಈ ರಾಜ್ಯದ ಜನತೆಯಲ್ಲಿ ಬೆಳೆದ ತಕ್ಷಣ, ಅದು ಜನರ ಮನದಲ್ಲಿ ಮೂಡಿದಮರುಕ್ಷಣದಲ್ಲಿ, ಮಾಜಿ ಮುಖ್ಯಮಂತ್ರಿಗಳಾದಂಥ ವೀರೇಂದ್ರಪಾಟೀಲರ ಒಂದು ಸರ್ಕಾರ, ಅವರ ಕೀರ್ತಿ ಈ ರಾಜ್ಯದ ಜನತೆಯ ಮನದಾಳದಲ್ಲಿ ಮನ ಮುಟ್ಟುತ್ತಿದ್ದುದು ಇಲ್ಲಿ ವೈಯುಕ್ತಿಕವಾಗಿ ರಾಜಕೀಯ ವರ್ಚಸ್ಸನ್ನು ಬೆಳೆಸಿಕೊಂಡಿರತಕ್ಕಂಥ ಈ ರಾಜ್ಯದ ರಾಜಕಾರಣಿಗಳಿಗೆ, ರಾಜಕೀಯ ಮುಖಂಡರುಗಳಿಗೆ ಅಸಹನೀಯವಾಯಿತು. ಇಂಥಾ ಅನೇಕ ಪ್ರಸಂಗಗಳು ಬೇರೆ ರಾಜ್ಯಗಳಲ್ಲಿ ಉದ್ಭವಿಸಿದ್ದರೂ ಏನು ಮಾಡಲಿಲ್ಲ. ವೀರೇಂದ್ರಪಾಟೀಲರೇನು ತುಂಬಾ ಅನಾರೋಗ್ಯದಿಂದ ಬಳಲುತ್ತಿರಲಿಲ್ಲ. ಅವರ ಆರೋಗ್ಯ ಅಷ್ಟೊಂದು ಹದಗೆಟ್ಟಿರಲಿಲ್ಲ. ಬೇರೆ ರಾಜ್ಯದಲ್ಲಿ ಅಂದರೆ, ತಮಿಳುನಾಡಿನಲ್ಲಿ ಎಂ.ಜಿ.ಆರ್. ಅವರು ವರ್ಷಾನುಗಟ್ಟಲೆ ರಾಜ್ಯದಲ್ಲಿ ಇಲ್ಲದೇ ಇದ್ದಂಥ ಪರಿಸ್ಥಿತಿ ಇತ್ತು. ಅವರು ತಮ್ಮ ಆರೋಗ್ಯದ ಸುಧಾರಣೆಗಾಗಿ ಮತ್ತು ಉಪಚಾರಕ್ಕಾಗಿ ರಾಜ್ಯದ ಹೊರಗೆ ಇದ್ದರೂ ಸಹಿತ ಅವರು ಮುಖ್ಯಮಂತ್ರಿಗಳಾಗಿ ಮುಂದುವರಿಯಲಿಕ್ಕೆ ಅವಕಾಶವನ್ನು ಕೊಟ್ಟಿರತಕ್ಕಂಥಾದದ್ದನ್ನು ಈ ರಾಷ್ಟ್ರದ ಜನತೆ, ಈ ರಾಜ್ಯದ ಜನತೆ ಮರೆತಿಲ್ಲ. ನೆಪ ಮಾತ್ರಕ್ಕೆ ವೀರೇಂದ್ರಪಾಟೀಲರ ಆರೋಗ್ಯ ಸರಿಯಿಲ್ಲವೆಂದು ಹೇಳಿ ಅದನ್ನೇ ದೊಡ್ಡ ಅಪಪ್ರಚಾರ ಮಾಡಿದ್ದಾರೆ. ಮೊದಲಿನಿಂದಲೂ ಅಂದರೆ ಈ ಸದನದಲ್ಲಿ ಬಂದಾಗಲಿನಿಂದ, ಈ ಕಡೆಯವರಾದ ನಾವುಗಳೂ ಸಹಾ ನಿಮ್ಮ ಪಕ್ಷಕ್ಕೆ ಆನೆಯ ರೀತಿ ಬಲ ಇದೆ, ನಿಮಗೆ ವೀರೇಂದ್ರಪಾಟೀಲರು ನಾಯಕರಾಗಿದ್ದಾರೆ, ಅವರು ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದರೆ, ನೀವು ಮೊಸಳೆ ಕಣ್ಣೀರು ಸುರಿಸಬೇಡಿ, ಸುಮ್ಮನೆ ಅವರಿಗೆ ನಿಮ್ಮ ಬೆಂಬಲ ಎಂದು ಹೇಳಬೇಡಿ, ಅಂತರಾತ್ಮದಲ್ಲಿ ಅವರಿಗೆ

ನೀವು ಬೆಂಬಲ ಕೊಟ್ಟು ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಅವಕಾಶ ಕೊಡಿಯೆಂದು ನಾವು ಪದೇ ಪದೇ ಹೇಳಿದ್ದೇವೆ.

ಆ ರೀತಿ ಹೇಳಿ ಬಹಳ ದಿನ ಆಗಿಲ್ಲ. ಆದರೆ ಸ್ವಲ್ಪ ದಿನದಲ್ಲೇ ಒಂದು ರಾಜಕೀಯ ದುರ್ಲಾಭ ಪಡೆಯಲಿಕ್ಕೆ, ಈ ರಾಜ್ಯದ ಜನತೆಯ ಮುಂದೆ ಸನ್ಮಾನ್ಯ ವೀರೇಂದ್ರಪಾಟೀಲರನ್ನು ಚುನಾವಣೆ ಕಾಲಕ್ಕೆ ಮುಂದಿಟ್ಟು, ಅವರನ್ನು ರಾಜ್ಯದ ನಾಯಕರನ್ನಾಗಿ ಮಾಡುತ್ತಿದ್ದೇವೆ, ಮುಖ್ಯ ಮಂತ್ರಿಗಳನ್ನಾಗಿ ಮಾಡುತ್ತಿದ್ದೇವೆಂದು ಜನತೆಯ ಮುಂದೆ ಹೇಳಿ ಮತ ಯಾಚನೆ ಮಾಡಿ ಪ್ರಚಂಡ ಬಹುಮತದಿಂದ ಆನೆಯ ಬಲವನ್ನು ಹೊಂದಿದಂಥ ಪಕ್ಷ ಅಧಿಕಾರ ಗ್ರಹಣ ಮಾಡಿದಂಥ ಕೆಲವೇ ದಿನಗಳಲ್ಲಿ ಸಕಾರಣವಿಲ್ಲದೆ ಅವರಿಗೆ ಆರೋಗ್ಯ ಸರಿಯಿಲ್ಲವೆಂದು ಹೇಳಿ ಅವರ ಮನ ನೋಯಿಸಿ, ಈ ರಾಜ್ಯದ ಜನತೆಯ ಮನವನ್ನು ನೋಯಿಸಿ ಅವರನ್ನು ಅಧಿಕಾರದಿಂದ ಇಳಿಸಿದಿರಿ. ಯಾರು ಅವರ ಮೇಲೆ ವಿಶ್ವಾಸ ಇದೆಯೆಂದು ಹೇಳುತ್ತಿದ್ದರೋ ಅವರೇ ಅವರನ್ನು ಕೆಳಗೆ ಇಳಿಸಿದಂಥ ಜನ ಪುನಃ ಮಾನ್ಯ ಬಂಗಾರಪ್ಪನವರನ್ನು ಇವತ್ತು ಸದನದಲ್ಲಿ ಅದೇ ರೀತಿ ಹೊಗಳುತ್ತಿದ್ದಾರೆ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ. ಈ ರಾಜಕೀಯದ ಹೊರನೋಟದ ಬೆಂಬಲ ನಿಜವಾಗಿ ಪ್ರಯೋಜನ ಇಲ್ಲ. ಕೆಲವರು ನಿಜವಾದ ಬೆಂಬಲ ಕೊಡುವವರೂ ಇದ್ದಾರೆ. ತಮ್ಮ ಅಂತರಾಳದಿಂದ ಬೆಂಬಲ ಕೊಡುವವರೂ ಇದ್ದಾರೆ, ಆತ್ಮೀಯವಾಗಿ ಸ್ವಾಗತ ಮಾಡುವವರೂ ಇದ್ದಾರೆ. ಆದರೆ ಈ ಹೊರನೋಟದ ಬೆಂಬಲವನ್ನು ಏನು ಈ ಜನರು ಕೊಡುತ್ತಿದ್ದಾರೆ ಅದು ಪ್ರಯೋಜನವಿಲ್ಲ. ಮಾನ್ಯ ವೀರೇಂದ್ರಪಾಟೀಲರಿಗೆ ಯಾವ ರೀತಿಯಲ್ಲಿ ಬೆಂಬಲ ಕೊಟ್ಟು ಅವರನ್ನು ಅನಾರೋಗ್ಯ ಸ್ಥಿತಿಯಲ್ಲಿ ಮತ್ತಷ್ಟು ಮಾನಸಿಕವಾಗಿ ಅವರಿಗೆ ತೊಂದರೆಯನ್ನು ಕೊಟ್ಟಂಥ ಜನರು ಯಾರಿದ್ದಾರೆ ಅದೇ ಜನರು ಇವೊತ್ತು ಪುನಃ ಮಾನ್ಯ ಬಂಗಾರಪ್ಪನವರಿಗೆ ಆನೆ ಬಲದ ಬೆಂಬಲವನ್ನು ಕೊಡುತ್ತಾ ಇದ್ದೇವೆ ಎಂದು ಏನು ಹೇಳುತ್ತಾ ಇದ್ದಾರೆ, ಇದರಲ್ಲಿ ಯಾವುದೇ ರೀತಿಯ ಹುರುಳಿಲ್ಲ. ಪರಿಸ್ಥಿತಿಯ ದುರ್ಲಾಭ ಪಡೆದು ಜನತೆಯ ಮನಸ್ಸನ್ನು ವಂಚಿಸಿ, ಈ ರಾಜ್ಯದ ಜನತೆ ಯಾರು ನಾಯಕರಾಗಿ ಇರಬೇಕೆಂದು ಬಯಸಿದ್ದರೋ ಅವರನ್ನು ರಾಜಕೀಯ ಕುತಂತ್ರದಿಂದ ಕೆಳಗೆ ಇಳಿಸಿ ರಾಜ್ಯದ ಜನತೆಯ ಮುಂದೆ ಮತ್ತೆ ಇವರನ್ನು ನಾಯಕರನ್ನಾಗಿ ಮಾಡಿಕೊಂಡಿದ್ದನ್ನು ಜನತೆಯು ನೋಡುತ್ತಾ ಇದ್ದಾರೆ. ಜನತೆ ಈ ರಾಜಕೀಯ ಪರ್ವಕಾಲವನ್ನು ಕೂಲಂಕುಷವಾಗಿ ವೀಕ್ಷಣೆ ಮಾಡುತ್ತಾ ಇದ್ದಾರೆ. ಇದರ ಜೊತೆಗೆ ಮಾನ್ಯ ವೀರೇಂದ್ರ ಪಾಟೀಲರನ್ನು ತಮ್ಮ ನಾಯಕ ಎಂದು ಹೇಳಿಕೊಂಡಿದ್ದರು. ಅವರ ಬಗ್ಗೆ ಇಲ್ಲಿಯವರೆಗೆ ಅಂದರೆ ಕೆಲವು ವಾರಗಳ ಹಿಂದೆ ಆಡಿದ ಮಾತುಗಳನ್ನು ಕೇಳಿದ್ದೇವೆ. ಅವರನ್ನು ಜಾತ್ಯಾತೀತ ವ್ಯಕ್ತಿ, ರಾಷ್ಟ್ರನಿಷ್ಠೆವುಳ್ಳಂಥ ವ್ಯಕ್ತಿ, ಪ್ರಾಮಾಣಿಕ ವ್ಯಕ್ತಿ, ನಮ್ಮ ಏಕೈಕ ನಾಯಕ ಎಂದು ಇದೇ ಜನರು ಹೊಗಳಿದ್ದರು. ಅದೇ ಮಂತ್ರಿಮಂಡಲದಲ್ಲಿದ್ದಂಥ ಆರ್ಥಿಕ ಮಂತ್ರಿಗಳು ಮತ್ತು ಶಿಕ್ಷಣ ಮಂತ್ರಿಗಳು ನ್ಯಾಯಯುತವಾಗಿ, ನಿಷ್ಠೆಯಿಂದ ಕೆಲಸ ಮಾಡುತ್ತಾ ಇದ್ದರು, ಅವರ ಜೊತೆಗೆ ಇನ್ನೂ ಕೆಲವರು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಾ ಇದ್ದರು ಅಂಥ ಒಂದು ಸರಕಾರವು ಸರಿಯಾಗಿಲ್ಲ, ಈ ಸರಕಾರವು ಜನತೆಯ ಆಶೋತ್ತರಗಳಿಗೆ ಸ್ಪಂದಿಸುತ್ತಾ ಇಲ್ಲ ಎಂದು ಕಾರಣ ಹೇಳುವುದು ಸರಿಯಲ್ಲ. ಇದು ರಾಜಕೀಯ ತಂತ್ರವೇ ವಿನಃ ಇದು ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ತಂದಂಥ ವಿಚಾರವೇನು ಅಲ್ಲ. ನಮ್ಮ ಸ್ನೇಹಿತರು ಹೇಳಿದಂತೆ, ಮಾನ್ಯ ವೀರೇಂದ್ರಪಾಟೀಲರನ್ನು ಯಾರು ಹೊಗಳಿದ್ದರೋ ಅದೇ ಜನರು ಇಂದು ಟೀಕೆ ಮಾಡುತ್ತಿದ್ದಾರೆ, ಹೀಗೆ ಟೀಕೆ ಮಾಡಿ ಅವರನ್ನು ಕೆಳಗಿಳಿಸಿದ್ದಾರೆ. ಅದೇ ಜನರು ಇವೊತ್ತು ಬಂಗಾರಪ್ಪನವರಿಗೆ ತಮ್ಮ ಬೆಂಬಲವನ್ನು ವ್ಯಕ್ತಮಾಡಿ ಮುಖ್ಯಮಂತ್ರಿಗಳನ್ನಾಗಿ ಮಾಡುತ್ತೇವೆ ಎನ್ನುತ್ತಿದ್ದಾರೆ. ರಾಜಕೀಯದಲ್ಲಿ ನಿಷ್ಠೆ ಎನ್ನುವ ಮಾತು ಸಮಯಾನುಸಾರವಾಗಿ, ತಮ್ಮ ವೈಯುಕ್ತಿಕ ಲಾಭಕ್ಕಾಗಿ ಮಾತ್ರ ಇರಕೂಡದು. ಈ ಮಾತನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ.

ರಾಜಕೀಯ ನಿಷ್ಠೆಯು ರಾಜ್ಯದ ಜನತೆಯ ಹಿತದೃಷ್ಟಿಯಿಂದ ಇರಬೇಕು, ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ಇರಬೇಕು. ಈ ವಿಚಾರಗಳನ್ನು ನಾವು ಈ ಸದನದಲ್ಲಿ ಮರೆಯುವಂತಿಲ್ಲ. ಅಂಥ ವಿವೇಚನೆ ಮಾಡತಕ್ಕಂಥ ಒಂದು ಕಾಲ ಈಗ ಬಂದಿದೆ. ಸಮಯದ

ನೀವು ಬೆಂಬಲ ಕೊಟ್ಟು ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಅವಕಾಶ ಕೊಡಿಯೆಂದು ನಾವು ಪದೇ ಪದೇ ಹೇಳಿದ್ದೇವೆ.

ಆ ರೀತಿ ಹೇಳಿ ಬಹಳ ದಿನ ಆಗಿಲ್ಲ. ಆದರೆ ಸ್ವಲ್ಪ ದಿನದಲ್ಲೇ ಒಂದು ರಾಜಕೀಯ ದುರ್ಲಾಭ ಪಡೆಯಲಿಕ್ಕೆ, ಈ ರಾಜ್ಯದ ಜನತೆಯ ಮುಂದೆ ಸನ್ಮಾನ್ಯ ವೀರೇಂದ್ರಪಾಟೀಲರನ್ನು ಚುನಾವಣೆ ಕಾಲಕ್ಕೆ ಮುಂದಿಟ್ಟು, ಅವರನ್ನು ರಾಜ್ಯದ ನಾಯಕರನ್ನಾಗಿ ಮಾಡುತ್ತಿದ್ದೇವೆ, ಮುಖ್ಯ ಮಂತ್ರಿಗಳನ್ನಾಗಿ ಮಾಡುತ್ತಿದ್ದೇವೆಂದು ಜನತೆಯ ಮುಂದೆ ಹೇಳಿ ಮತ ಯಾಚನೆ ಮಾಡಿ ಪ್ರಚಂಡ ಬಹುಮತದಿಂದ ಆನೆಯ ಬಲವನ್ನು ಹೊಂದಿದಂಥ ಪಕ್ಷ ಅಧಿಕಾರ ಗ್ರಹಣ ಮಾಡಿದಂಥ ಕೆಲವೇ ದಿನಗಳಲ್ಲಿ ಸಕಾರಣವಿಲ್ಲದೆ ಅವರಿಗೆ ಆರೋಗ್ಯ ಸರಿಯಿಲ್ಲವೆಂದು ಹೇಳಿ ಅವರ ಮನ ನೋಯಿಸಿ, ಈ ರಾಜ್ಯದ ಜನತೆಯ ಮನವನ್ನು ನೋಯಿಸಿ ಅವರನ್ನು ಅಧಿಕಾರದಿಂದ ಇಳಿಸಿದಿರಿ. ಯಾರು ಅವರ ಮೇಲೆ ವಿಶ್ವಾಸ ಇದೆಯೆಂದು ಹೇಳುತ್ತಿದ್ದರೋ ಅವರೇ ಅವರನ್ನು ಕೆಳಗೆ ಇಳಿಸಿದಂಥ ಜನ ಪುನಃ ಮಾನ್ಯ ಬಂಗಾರಪ್ಪನವರನ್ನು ಇವತ್ತು ಸದನದಲ್ಲಿ ಅದೇ ರೀತಿ ಹೊಗಳುತ್ತಿದ್ದಾರೆ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ. ಈ ರಾಜಕೀಯದ ಹೊರನೋಟದ ಬೆಂಬಲ ನಿಜವಾಗಿ ಪ್ರಯೋಜನ ಇಲ್ಲ. ಕೆಲವರು ನಿಜವಾದ ಬೆಂಬಲ ಕೊಡುವವರೂ ಇದ್ದಾರೆ. ತಮ್ಮ ಅಂತರಾಳದಿಂದ ಬೆಂಬಲ ಕೊಡುವವರೂ ಇದ್ದಾರೆ, ಆತ್ಮೀಯವಾಗಿ ಸ್ವಾಗತ ಮಾಡುವವರೂ ಇದ್ದಾರೆ. ಆದರೆ ಈ ಹೊರನೋಟದ ಬೆಂಬಲವನ್ನು ಏನು ಈ ಜನರು ಕೊಡುತ್ತಿದ್ದಾರೆ ಅದು ಪ್ರಯೋಜನವಿಲ್ಲ. ಮಾನ್ಯ ವೀರೇಂದ್ರಪಾಟೀಲರಿಗೆ ಯಾವ ರೀತಿಯಲ್ಲಿ ಬೆಂಬಲ ಕೊಟ್ಟು ಅವರನ್ನು ಅನಾರೋಗ್ಯ ಸ್ಥಿತಿಯಲ್ಲಿ ಮತ್ತಷ್ಟು ಮಾನಸಿಕವಾಗಿ ಅವರಿಗೆ ತೊಂದರೆಯನ್ನು ಕೊಟ್ಟಂಥ ಜನರು ಯಾರಿದ್ದಾರೆ ಅದೇ ಜನರು ಇವೊತ್ತು ಪುನಃ ಮಾನ್ಯ ಬಂಗಾರಪ್ಪನವರಿಗೆ ಆನೆ ಬಲದ ಬೆಂಬಲವನ್ನು ಕೊಡುತ್ತಾ ಇದ್ದೇವೆ ಎಂದು ಏನು ಹೇಳುತ್ತಾ ಇದ್ದಾರೆ, ಇದರಲ್ಲಿ ಯಾವುದೇ ರೀತಿಯ ಹುರುಳಿಲ್ಲ. ಪರಿಸ್ಥಿತಿಯ ದುರ್ಲಾಭ ಪಡೆದು ಜನತೆಯ ಮನಸ್ಸನ್ನು ವಂಚಿಸಿ, ಈ ರಾಜ್ಯದ ಜನತೆ ಯಾರು ನಾಯಕರಾಗಿ ಇರಬೇಕೆಂದು ಬಯಸಿದ್ದರೋ ಅವರನ್ನು ರಾಜಕೀಯ ಕುತಂತ್ರದಿಂದ ಕೆಳಗೆ ಇಳಿಸಿ ರಾಜ್ಯದ ಜನತೆಯ ಮುಂದೆ ಮತ್ತೆ ಇವರನ್ನು ನಾಯಕರನ್ನಾಗಿ ಮಾಡಿಕೊಂಡಿದ್ದನ್ನು ಜನತೆಯು ನೋಡುತ್ತಾ ಇದ್ದಾರೆ. ಜನತೆ ಈ ರಾಜಕೀಯ ಪರ್ವಕಾಲವನ್ನು ಕೂಲಂಕುಷವಾಗಿ ವೀಕ್ಷಣೆ ಮಾಡುತ್ತಾ ಇದ್ದಾರೆ. ಇದರ ಜೊತೆಗೆ ಮಾನ್ಯ ವೀರೇಂದ್ರ ಪಾಟೀಲರನ್ನು ತಮ್ಮ ನಾಯಕ ಎಂದು ಹೇಳಿಕೊಂಡಿದ್ದರು. ಅವರ ಬಗ್ಗೆ ಇಲ್ಲಿಯವರೆಗೆ ಅಂದರೆ ಕೆಲವು ವಾರಗಳ ಹಿಂದೆ ಆಡಿದ ಮಾತುಗಳನ್ನು ಕೇಳಿದ್ದೇವೆ. ಅವರನ್ನು ಜಾತ್ಯಾತೀತ ವ್ಯಕ್ತಿ, ರಾಷ್ಟ್ರನಿಷ್ಠೆವುಳ್ಳಂಥ ವ್ಯಕ್ತಿ, ಪ್ರಾಮಾಣಿಕ ವ್ಯಕ್ತಿ, ನಮ್ಮ ಏಕೈಕ ನಾಯಕ ಎಂದು ಇದೇ ಜನರು ಹೊಗಳಿದ್ದರು. ಅದೇ ಮಂತ್ರಿಮಂಡಲದಲ್ಲಿದ್ದಂಥ ಆರ್ಥಿಕ ಮಂತ್ರಿಗಳು ಮತ್ತು ಶಿಕ್ಷಣ ಮಂತ್ರಿಗಳು ನ್ಯಾಯಯುತವಾಗಿ, ನಿಷ್ಠೆಯಿಂದ ಕೆಲಸ ಮಾಡುತ್ತಾ ಇದ್ದರು, ಅವರ ಜೊತೆಗೆ ಇನ್ನೂ ಕೆಲವರು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಾ ಇದ್ದರು ಅಂಥ ಒಂದು ಸರಕಾರವು ಸರಿಯಾಗಿಲ್ಲ, ಈ ಸರಕಾರವು ಜನತೆಯ ಆಶೋತ್ತರಗಳಿಗೆ ಸ್ಪಂದಿಸುತ್ತಾ ಇಲ್ಲ ಎಂದು ಕಾರಣ ಹೇಳುವುದು ಸರಿಯಲ್ಲ. ಇದು ರಾಜಕೀಯ ತಂತ್ರವೇ ವಿನಃ ಇದು ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ತಂದಂಥ ವಿಚಾರವೇನು ಅಲ್ಲ. ನಮ್ಮ ಸ್ನೇಹಿತರು ಹೇಳಿದಂತೆ, ಮಾನ್ಯ ವೀರೇಂದ್ರಪಾಟೀಲರನ್ನು ಯಾರು ಹೊಗಳಿದ್ದರೋ ಅದೇ ಜನರು ಇಂದು ಟೀಕೆ ಮಾಡುತ್ತಿದ್ದಾರೆ, ಹೀಗೆ ಟೀಕೆ ಮಾಡಿ ಅವರನ್ನು ಕೆಳಗಿಳಿಸಿದ್ದಾರೆ. ಅದೇ ಜನರು ಇವೊತ್ತು ಬಂಗಾರಪ್ಪನವರಿಗೆ ತಮ್ಮ ಬೆಂಬಲವನ್ನು ವ್ಯಕ್ತಮಾಡಿ ಮುಖ್ಯಮಂತ್ರಿಗಳನ್ನಾಗಿ ಮಾಡುತ್ತೇವೆ ಎನ್ನುತ್ತಿದ್ದಾರೆ. ರಾಜಕೀಯದಲ್ಲಿ ನಿಷ್ಠೆ ಎನ್ನುವ ಮಾತು ಸಮಯಾನುಸಾರವಾಗಿ, ತಮ್ಮ ವೈಯುಕ್ತಿಕ ಲಾಭಕ್ಕಾಗಿ ಮಾತ್ರ ಇರಕೂಡದು. ಈ ಮಾತನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ.

ರಾಜಕೀಯ ನಿಷ್ಠೆಯು ರಾಜ್ಯದ ಜನತೆಯ ಹಿತದೃಷ್ಟಿಯಿಂದ ಇರಬೇಕು, ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ಇರಬೇಕು. ಈ ವಿಚಾರಗಳನ್ನು ನಾವು ಈ ಸದನದಲ್ಲಿ ಮರೆಯುವಂತಿಲ್ಲ. ಅಂಥ ವಿವೇಚನೆ ಮಾಡತಕ್ಕಂಥ ಒಂದು ಕಾಲ ಈಗ ಬಂದಿದೆ. ಸಮಯದ

ಮಾಡಿಕೊಂಡು ಹೋಗಲಿ ಎಂದು ಅವರಿಗೆ ಬೆಂಬಲ ಸೂಚಿಸುತ್ತೇನೆ. ಈಗಿರುವ ಪರಿಸ್ಥಿತಿ ನೋಡಿದರೆ ಮುಂದಕ್ಕೆ ಇವರಿಗೆ ನಮ್ಮ ಬೆಂಬಲ ಇಲ್ಲವೆಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ: (ವೇಮಗಲ್):- ಸನ್ಮಾನ್ಯ ಉಪಾಧ್ಯಕ್ಷಣಿಯವರೆ, ಈ ದಿವಸ ಮಾನ್ಯ ಮುಖ್ಯಮಂತ್ರಿಗಳು ತಮಗೆ ಈ ಸಭೆ ವಿಶ್ವಾಸವನ್ನು ವ್ಯಕ್ತಪಡಿಸಬೇಕು ಎನ್ನತಕ್ಕಂಥ ನಿರ್ಣಯವನ್ನು ಈ ಸಭೆಯ ಒಪ್ಪಿಗೆಗಾಗಿ ಮಂಡಿಸಿದ್ದಾರೆ. ಈ ರೀತಿಯಾದ ನಿರ್ಣಯ ಈ ಸಭೆ ಮುಂದೆ ಬರುತ್ತಿರುವುದು ಇದು ಪ್ರಥಮವೇನಲ್ಲ ಅಥವಾ ಒಂದೇ ಪಕ್ಷದ ಸರ್ಕಾರ ಇದ್ದಾಗ ನಾಯಕರ ಬದಲಾವಣೆಯಾಗುತ್ತಿರುವುದು ಸಹ ಪ್ರಥಮವೇನಲ್ಲ. ಈ ಹಿಂದೆ ನಮ್ಮ ಪಕ್ಷದ ಸರ್ಕಾರವಿದ್ದಾಗಲೂ ಸಹ ನಾಯಕರ ಬದಲಾವಣೆಯಾಗಿದೆ. ಈಗಲೂ ನಾಯಕರ ಬದಲಾವಣೆ ಮಾಡಿಕೊಂಡಿದ್ದಾರೆ. ಅಂದರೆ ಪ್ರಾಜಪ್ರಭುತ್ವದ ಯಾರಿಗೆ ಬಹುಮತ ಇರುತ್ತದೋ ಅವರಿಗೆ ಸರ್ಕಾರವನ್ನು ನಡೆಸತಕ್ಕಂಥ ಅಧಿಕಾರ ರಾಜ್ಯಾಂಗದತ್ತವಾಗಿ ಜನತೆಯ ಅಭೀಪ್ಸದಂತೆ ದೊರೆಯುತ್ತದೆ. ಅಂಥ ಪಕ್ಷದವರು ತಮ್ಮ ನಾಯಕನನ್ನು ಬದಲಾವಣೆ ಮಾಡಿಕೊಳ್ಳತಕ್ಕಂಥದ್ದು ಕೂಡಾ ಆ ಪಕ್ಷಕ್ಕೆ ಬಿಟ್ಟಿರತಕ್ಕಂಥ ವಿಚಾರ. ಆದಕ್ಕೆ ಈ ಪಕ್ಷ ಆ ಪಕ್ಷ ಎನ್ನತಕ್ಕಂಥ ವ್ಯತ್ಯಾಸ, ಭೇದಭಾವನೆ ಏನು ಇಲ್ಲ. ಅದೇ ರೀತಿಯಲ್ಲಿ ಇವತ್ತಿನ ದಿವಸ ಪಕ್ಷದ ನಾಯಕತ್ವ ಈ ರಾಜ್ಯದಲ್ಲಿ ಬದಲಾವಣೆ ಆಗಿದೆ. ನಾನೇ ಆಗಲೇ ಹೇಳಿದಹಾಗೆ ನಮ್ಮ ಸರ್ಕಾರ ಇದ್ದಾಗಲೂ ಪಕ್ಷದ ನಾಯಕತ್ವದ ಬದಲಾವಣೆ ಆಗಿತ್ತು. ಅವತ್ತು ನಾಯಕತ್ವ ಬದಲಾವಣೆ ಆಗತಕ್ಕಂಥಾದ್ದಕ್ಕೆ ಕಾರಣ ಏನಿತ್ತು, ಮತ್ತು ಇವತ್ತು ಯಾವ ಕಾರಣಕ್ಕೋಸ್ಕರ ನಾಯಕತ್ವ ಬದಲಾವಣೆ ಆಗಿದೆ ಎನ್ನತಕ್ಕಂಥದ್ದು ಇವತ್ತಿನ ದಿವಸ ಪ್ರಾಮುಖ್ಯವಾದಂಥ ವಿಚಾರ. ಇವತ್ತು ಸರ್ಕಾರದ ಅಂಕಿ ಅಂಶಗಳ ಮೂಲಕ ಗೊತ್ತಾಗಿದೆ. ಈ ರಾಜ್ಯದಲ್ಲಿ ಆರ್ಥಿಕ ಪರಿಸ್ಥಿತಿ ಎಷ್ಟು ದುಸ್ಥಿತಿಗೆ ಇಳಿದಿತ್ತು ಎನ್ನತಕ್ಕಂಥಾದ್ದನ್ನು ಸರ್ಕಾರದ ಅಂಕಿ ಅಂಶಗಳೇ ಇವತ್ತಿನ ದಿವಸ ಹೊರಗಡೆ ಹೇಳುತ್ತಿದೆ. ಅವತ್ತಿನ ದಿವಸ ನಾಯಕತ್ವ ಬದಲಾವಣೆ ಆಗಬೇಕು ಎನ್ನತಕ್ಕಂಥದ್ದರಲ್ಲಿ ಪ್ರಮುಖ ಪಾತ್ರವನ್ನು ವಹಿಸಿರತಕ್ಕಂಥವರಲ್ಲಿ ನಾನೂ ಸಹಾ ಒಬ್ಬ. ಅದಕ್ಕೆ ಕಾರಣವನ್ನು ನಾವು ಕೊಟ್ಟಿದ್ದೇವೆ. ಅಂದು ಇದ್ದಂಥ ಸರ್ಕಾರವನ್ನು ನಡೆಸತಕ್ಕಂಥ ರೀತಿ, ಅಂದು ಇದ್ದಂಥ ಆರ್ಥಿಕ ಪರಿಸ್ಥಿತಿ, ಅಂದು ಇದ್ದಂಥ ಲಂಚಗುಳಿತನ ಅದನ್ನೇ ನಾವು ಒಂದು ಇಸ್ಯೂ ಅಂದರೆ ಪ್ರಧಾನವಾಗಿ ಬೆಟ್ಟು ಮಾಡಿ ತೋರಿಸುತ್ತಿದ್ದೆವು. ಅನೇಕ ಆರೋಪಗಳನ್ನು ಕೂಡ ನಾವು ಮಾಡಿದ್ದೇವೆ. ಯಾವ ಆರೋಪಗಳ ಬಗ್ಗೆ ವಿಚಾರಣೆ ನಡೆದಿದೆ, ಆ ಆರೋಪಗಳು ಇವತ್ತಿನ ದಿವಸ ನಿಜ ಎಂದು ಸಾಬೀತಾಗಿದೆ. ನಾನು ಪ್ರಥಮವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ಆರೋಪವನ್ನು ಮಾಡಿದತಕ್ಕಂಥವನು ನಾನು. ಅಂದಿನ ಮುಖ್ಯಮಂತ್ರಿಗಳಿಗೆ, ಒಂದು ದಿವಸಕ್ಕೆ ಒಂದು ಕೋಟಿ ರೂಪಾಯಿ ಹಣ ಎಕ್ಸೈಜ್ ಬಾಬಿನಲ್ಲಿ ಹೋಗುತ್ತಿದೆ, ಇದನ್ನು ತಡೆಗಟ್ಟಬೇಕು ಎಂದು ಸವಾಲನ್ನು ಎಸೆದಿರತಕ್ಕಂಥವನು ನಾನು. ಅದು ಇವತ್ತಿನ ದಿವಸ ಸಾಬೀತಾಗಿದೆ. ಒಂದು ಕೋಟಿ ರೂಪಾಯಿಗಿಂತ ಹೆಚ್ಚಿನ ಹಣ ಪ್ರತಿ ದಿವಸ ಸೋರುತ್ತಿತ್ತು ಎನ್ನತಕ್ಕಂಥ ವಿಚಾರ ಇವತ್ತಿನ ದಿವಸ ಸಾಬೀತಾಗಿದೆ. ನಾನು ಅದಕ್ಕೆ ಬಜೆಟ್ ಮೇಲೆ ಮಾಡಿದಂಥ ಭಾಷಣದಲ್ಲಿ ಸರ್ಕಾರಕ್ಕೆ ಅಭಿನಂದನೆಗಳನ್ನು ಕೂಡಾ ಸಲ್ಲಿಸಿದ್ದೇನೆ. ಇದು ಅಂಕಿ ಅಂಶಗಳ ಮೂಲಕ ವಾಸ್ತವಾಂಶ ಎನಿಸಿದೆ. ಕುರುಡನಿಗೂ ಕೂಡಾ ಕಾಣತಕ್ಕಂಥ ಅಂಕಿ ಅಂಶಗಳು, ವಾಸ್ತವಾಂಶ ಇದು. ಆದೇ ರೀತಿಯಲ್ಲಿ ಅನೇಕ ಭೂ ಹಗರಣಗಳು ನಡೆದಿರತಕ್ಕಂಥದ್ದು ಈ ರಾಜ್ಯದ ಜನತೆಗೆ, ಈ ದೇಶದ ಜನತೆಗೆ ಗೊತ್ತಿದೆ. ಅದರ ವಿಚಾರದಲ್ಲಿ ವಿಚಾರಣೆ ಕೂಡಾ ಆಗಿದೆ. ನಾವು ಮಾಡಿರತಕ್ಕಂಥ ಆರೋಪ ಮಾಡಿದ್ದಂಥ ಆರೋಪ ನಿಜ ಎಂದು ವಿಚಾರಣೆ ಮೂಲಕ ಸಾಬೀತು ಆಗಿದೆ. ಅಂದರೆ ನಾವು ನಾಯಕತ್ವವನ್ನು ಬದಲಾವಣೆ ಮಾಡಬೇಕು, ಬದಲಾವಣೆ ಆಗಬೇಕು ಎಂದು ಹೇಳಿದಾಗ ಅದಕ್ಕೆ ಒಂದು ತಾತ್ವಿಕವಾದಂಥ ಹಿನ್ನೆಲೆ ಇತ್ತು. ಅದಕ್ಕೆ ಸಕಾರಣ ಕೂಡಾ ಇತ್ತು. ರಾಜ್ಯದ ಜನತೆಯ ದೃಷ್ಟಿಯಿಂದ ನಾಯಕತ್ವ ಬದಲಾವಣೆ ಆಗಬೇಕು ಎಂದು ನಾವು ಹೇಳಿದ್ದೆವು. ಆದರೆ ಇವತ್ತಿನ ದಿವಸ ನಾಯಕತ್ವದ ಬದಲಾವಣೆಗೆ ಏನು ಕಾರಣ? ಇವತ್ತಿನ ದಿವಸ ಸರ್ಕಾರ ಅಂಕಿ ಅಂಶಗಳನ್ನು ಕೊಡಬೇಕು. ಎಕ್ಸೈಜ್ ಬಾಬಿನಲ್ಲಿ ಸರ್ಕಾರದ ಅಂಕಿ ಅಂಶಗಳ ಪ್ರಕಾರ ಈ ಒಂದು

ವರ್ಷದ ಅವಧಿಯಲ್ಲಿ ಕೇವಲ ಸಾರಾಯಿ ಬಾಬು ಒಂದರಲ್ಲಿ 314 ಕೋಟಿ ರೂಪಾಯಿಗಳಷ್ಟು ಹಣ ಸರ್ಕಾರಕ್ಕೆ ಹೆಚ್ಚಾಗಿ ಬಂತಲ್ಲ, ಅದು ನಿಮಗೆ ತಪ್ಪೇ? ಸರ್ಕಾರದ ಬೊಕ್ಕಸವನ್ನು ತುಂಬಿಸಿದ್ದು ಇವತ್ತಿನ ದಿವಸ ಒಂದು ಅಪರಾಧವೇ? ಅದಕ್ಕೋಸ್ಕರ ನೀವು ನಾಯಕತ್ವವನ್ನು ಬದಲಾವಣೆ ಮಾಡಿದ್ದೀರಾ? ಅದೇ ರೀತಿಯಲ್ಲಿ ಇವತ್ತು ಅನೇಕ ಭೂ ಹಗರಣಗಳು ನಡೆದಿವೆ. ಅವರು ಯಾರಿಗೂ ಕೂಡಾ ಅವಕಾಶ ಕೊಟ್ಟಿಲ್ಲ. ಮತ್ತೆ ಹಗರಣಗಳು ನಡೆಯುವುದಕ್ಕೆ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್ ಪ್ರಕಾರ ಯಾವ ರೀತಿ ಎಕ್ಸೆಂಪ್‌ಷನ್ ಕೊಡುತ್ತಿದ್ದರು, ಅದಕ್ಕೂ ಕುಡಾ ಅವಕಾಶ ಕೊಟ್ಟಿಲ್ಲ. ಈ ವಿಷಯವನ್ನು ಹೆಮ್ಮೆಯಿಂದ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಅದನ್ನು ಮಾಡದೇ ಇರುವುದು ತಪ್ಪೇ? ಅದಕ್ಕೋಸ್ಕರ ತಾವು ನಾಯಕತ್ವವನ್ನು ಬದಲಾವಣೆ ಮಾಡುತ್ತಿದ್ದೀರಾ? ಇದು ಜನತೆಗೆ ಗೊತ್ತಾಗಬೇಕು, ದೇಶಕ್ಕೆ ಗೊತ್ತಾಗಬೇಕಾಗಿದೆ. ಇದು ರಾಜ್ಯದ ಜನತೆಗೆ ಗೊತ್ತಾಗಬೇಕಾಗಿದೆ. ನಾಯಕತ್ವ ಬದಲಾವಣೆ ಮಾಡಬೇಕಾಗಿದ್ದರೆ ಇರತಕ್ಕಂಥ ಕಾರಣಗಳು ಎನ್ನುವುದು ಇವತ್ತಿನ ದಿವಸ ಗೊತ್ತಾಗಬೇಕಾಗಿದೆ. ಆದ್ದರಿಂದ ಅದು ತಪ್ಪು ಎಂದು ಹೇಳುವುದಾದರೆ ನಾನು ಅದಕ್ಕೆ ವಿರೋಧ ಮಾಡುವವನಲ್ಲ. ಅದು ಸರಿಯಲ್ಲ ಎಂದು ಹೇಳತಕ್ಕವನು ನಾನಲ್ಲ. ಆದರೆ ನಿಜಾಂಶವನ್ನು......

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಉಪಾಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್.

ಉಪಾಧ್ಯಕ್ಷರು:- ಮಾನ್ಯ ಕಾಗೋಡು ತಿಮ್ಮಪ್ಪನವರ ಪಾಯಿಂಟ್ ಆಫ್ ಆರ್ಡರ್ ಇದೆ. ಅದನ್ನು ಕೇಳೋಣ.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಬೈರೇಗೌಡರು ಹಿರಿಯ ಸದಸ್ಯರು. ಅವರು ಮಾತನಾಡುತ್ತಾ ಅರ್ಬನ್ ಸೀಲಿಂಗ್ ಆಕ್ಟ್, ವಗೈರೆಗಳನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ನಾವು ಇಲ್ಲಿ ಏನು ಪ್ರಸ್ತಾಪ ಮಾಡುತ್ತಿದ್ದೇವೆ ಎಂದರೆ, ವಿಶ್ವಾಸ ಮತವನ್ನು ಕೇಳತಕ್ಕ ನಿರ್ಣಯದ ಮೇಲೆ ಚರ್ಚೆ ಮಾಡುತ್ತಿದ್ದೇವೆ. ಇದರ ಬಗ್ಗೆ ಸೀಮಿತವಾಗಿ ಚರ್ಚೆ ಮಾಡಬೇಕೇ ವಿನಹ ಅರ್ಬನ್ ಸೀಲಿಂಗ್ ಆಕ್ಟ್, ಸೇಕೆಂಡ್ಸ್, ಎಕ್ಸೈಜ್ ಇವುಗಳ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ. ಈ ಚರ್ಚೆ ಇತಿಮಿತಿಯಲ್ಲಿ ಅದು ಬರುತ್ತದೆಯೋ ಅಥವಾ ಇಲ್ಲವೇ ಎಂಬುದು. ಆದ್ದರಿಂದ ದಯವಿಟ್ಟು ಚರ್ಚೆಯನ್ನು ಇದಕ್ಕೆ ಸೀಮಿತಗೊಳಿಸಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ರಾಮನಾಥ ರೈ:- ಇದನ್ನು ಅವರು ಬಜೆಟ್ ಭಾಷಣದಲ್ಲಿ ಹೇಳಬಹುದು..

ಉಪಾಧ್ಯಕ್ಷರು:- ಬೈರೇಗೌಡರೆ, ತಾವು ಈ ವಿಷಯಕ್ಕೆ ಚರ್ಚೆಯನ್ನು ಸೀಮಿತ ಮಾಡಿ ಮುಗಿಸಿ.

ಶ್ರೀ ಸಿ. ಬೈರೇಗೌಡ:- ವಿಶ್ವಾಸ ಮತವನ್ನು ವ್ಯಕ್ತಪಡಿಸಬೇಕಾಗಿದ್ದರೆ ಅಥವಾ ಇಲ್ಲ ಎಂದು ಹೇಳಬೇಕಾಗಿದ್ದರೆ ಅದಕ್ಕೆ ಕಾರಣವನ್ನು ಹೇಳಬೇಕಾಗುತ್ತದೆ. ವಿಶ್ವಾಸಮತದ ಬಗ್ಗೆ ಬೆಂಬಲ ಇದೆ ಅಥವಾ ಇಲ್ಲವೆಂದು ಹೇಳುವುದಾದರೆ ಒಂದೇ ನಿಮಿಷದಲ್ಲಿ ಹೇಳಬಹುದು. ವಿಶ್ವಾಸ ಮತದ ಪರ ಇದ್ದವರು ಕೈ ಎತ್ತಿ ಪರ ಇಲ್ಲದಿರುವವರು ಕುಳಿತುಕೊಳ್ಳಿ ಎಂದು ಹೇಳಬಹುದು. ಆಗ ನಾವು ಹೊರಗಡೆ ಹೋಗಬಹುದಾಗಿತ್ತು ಚರ್ಚೆಯೇ ಅನಾವಶ್ಯಕ. ಮಾನ್ಯ ತಿಮ್ಮಪ್ಪನವರಿಗೆ ಈಗ ನಾನು ಅ ಆ ಇ ಈ ಕಲಿಸಿ ಕೊಡಬೇಕಾಗಿಲ್ಲ. ಮಾನ್ಯ ತಿಮ್ಮಪ್ಪನವರ ಹತ್ತಿರ ನಾನು ಕಲಿತಿದ್ದೇನೆ, ಅವರೂ ಸಹ ನನ್ನ ಹತ್ತಿರ ಕಲಿತಿದ್ದಾರೆ. ಆದ್ದರಿಂದ ಆ ವಿಚಾರದಲ್ಲಿ ಅವರು ಮಾತನಾಡುವುದು ಬೇಡ ಇವತ್ತಿನ ದಿವಸ ರಾಜ್ಯದ ಜನತೆಗೆ ಇದು ಗೊತ್ತಾಗಬೇಕಾಗಿದೆ. ಈ ರಾಜ್ಯದ ಹಿತವನ್ನು ಕಾಪಾಡಿದ್ದು ಈ ರಾಜ್ಯದ ಬೊಕ್ಕಸವನ್ನು ತುಂಬಿಸಿದ್ದು ಒಂದು ದೊಡ್ಡ ಅಪರಾಧ ಆಗಿದೆ. ಈ ವಿಚಾರ ನಡೆದಾಗ ನಾನು ಈ ದೇಶದಲ್ಲಿ ಇರಲಿಲ್ಲ. ಚೈನಾ ದೇಶಕ್ಕೆ ಹೋಗಬೇಕಾದ ಅವಕಾಶ ಒದಗಿ ಬಂದಿತ್ತು ಅಲ್ಲಿಂದ ನಾನು ಬಂದಮೇಲೆ ಪತ್ರಿಕೆಗಳಲ್ಲಿ ಈ ವಿಷಯ ಓದಿದೆ, ಆಶ್ಚರ್ಯ ಆಯಿತು. ಆಶ್ಚರ್ಯವಾದ ವಿಚಾರಗಳು ಆಶ್ಚರ್ಯವಾದ ಸಂಗತಿಗಳು ನಡೆಯುತ್ತಾ ಇವೆ. ನಾನು ಪತ್ರಿಕೆಗಳನ್ನು ಓದಿದೆ. ಈ ರಾಜ್ಯದಲ್ಲಿ ಎಕ್ಸೈಜ್ ದೊರೆಗಳು ಏನು ಇದ್ದಾರೆ, ಅವರ ಪ್ರಭುತ್ವ, ಅವರ ಆಡಳಿತ, ಅವರ ಸರ್ಕಾರ ಬರತಕ್ಕ ಪ್ರಯತ್ನ ಅವರು ಸರ್ವೇಸಾಮಾನ್ಯವಾಗಿ ನೇರವಾಗಿ ಮಾಡಿದ್ದಾರೆ ಎನ್ನತಕ್ಕಂಥ ವಿಚಾರವನ್ನು ನಾನು ಪತ್ರಿಕೆಗಳಲ್ಲಿ ಓದಿ ತಿಳಿದುಕೊಂಡೆ. ಅದು ನಡೆಯಿತೊ ಅಥವಾ ಇಲ್ಲವೊ

ಎನ್ನುವುದು ನನಗಂತು ಗೊತ್ತಿಲ್ಲ. ಆದರೆ ಅದು ನಿಜ ಇರಬಹುದು ಎನ್ನತಕ್ಕ ಅನುಮಾನ ಇವತ್ತಿನ ದಿವಸ ನನಗೆ ಬರುತ್ತಿದೆ. ಕಾರಣ ಏನು ಅಂದರೆ, ಇವೊತ್ತು ರಾಜ್ಯದಲ್ಲಿ ಎಂತಹ ಪರಿಸ್ಥಿತಿ ಇದೆ. ಅನೇಕ ಜಿಲ್ಲೆಗಳಲ್ಲಿ ಬರಗಾಲ ಇದೆ. ಮಳೆ ಇಲ್ಲದ ಜನ ಪರಿತಪಿಸುತ್ತಿದ್ದಾರೆ. ಅಂತಹ ವಿಚಾರಗಳನ್ನು ಬಿಟ್ಟು ನಿನ್ನೆ ದಿವಸ ನಡೆದಂತಹ ಮಂತ್ರಿಮಂಡಲ ಸಭೆಯಲ್ಲಿ ಒಂದು ವಿಚಾರ ಚರ್ಚೆ ಆಗಿದೆ ಎಂದು ಪತ್ರಿಕೆಗಳಲ್ಲಿ ಬಂದಿದೆ. ಅದನ್ನು ನಾನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವೊತ್ತಿನ ದಿವಸ ಡೆಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಬಂದಿರತಕ್ಕ ವಿಚಾರ ಇದು.

"Cabinet concern over raids by Lok Ayukta: Informed sources indicated that the Cabinet also discussed abolition of Upa Lok Ayukta and clipping the powers and jurisdiction of Lok Ayukta to ensure that it should be used to tar the reputation of certain officers and wreck their carrers."

ಈ ವಿಚಾರ ಇವೊತ್ತಿನ ದಿವಸ ಪತ್ರಿಕೆಯಲ್ಲಿ ಬಂದಿದೆ. ಇದು ಇವೊತ್ತಿನ ದಿವಸ ನನ್ನನ್ನು ಚಿಂತೆಗೆ ಈಡು ಮಾಡಿರತಕ್ಕದ್ದು. ಈ ರಾಜ್ಯದಲ್ಲಿನ ಅಧಿಕಾರಿಗಳಲ್ಲಿ ನಾನು ಎಲ್ಲರು ಭ್ರಷ್ಟರು ಎಂದು ಹೇಳುವುದಿಲ್ಲ. ಆದರೆ ಭ್ರಷ್ಟ ಅಧಿಕಾರಿಗಳು ಇಲ್ಲ ಎಂದು ಹೇಳುತ್ತಿದ್ದೀರಾ?

(ಗೊಂದಲ)

ಶ್ರೀ. ಕಾಗೋಡು ತಿಮ್ಮಪ್ಪ:- ಮಾನ್ಯ ಅಧ್ಯಕ್ಷರೆ...

ಶ್ರೀ ಸಿ. ಬೈರೇಗೌಡ:- ನಾನು ಮಾತನಾಡಿದ ಮೇಲೆ ತಮಗೆ ಮಾತನಾಡುವುದಕ್ಕೆ ಅವಕಾಶ ಇದೆ..

ಉಪಾಧ್ಯಕ್ಷರು:- ವಿಶ್ವಾಸ ಮತದ ನಿರ್ಣಯದ ಮೇಲೆ ಸೀಮಿತವಾದಂತಹ ವಿಚಾರದಲ್ಲಿ ಮಾತನಾಡಿ..

(ಗೊಂದಲ)

ಶ್ರೀ ಸಿ. ಬೈರೇಗೌಡ:- ವಿಶ್ವಾಸ ಮತದ ಮೇಲೆ ಮಾತನಾಡುತ್ತಿದ್ದೇನೆ. ಯಾರು ಭ್ರಷ್ಟ ಅಧಿಕಾರಿಗಳು ಇದ್ದಾರೆ, ಭ್ರಷ್ಟ ಅಧಿಕಾರಿಗಳು ಇಲ್ಲ ಎಂದು ಹೇಳುತ್ತಿದ್ದೀರಾ?

(ಗೊಂದಲ)

ಉಪಾಧ್ಯಕ್ಷರು:- ಕ್ಯಾಬಿನೆಟ್ ಮೀಟಿಂಗ್ ವಿಷಯ ಏಕೆ, ಈಗ ವಿಶ್ವಾಸ, ಮತದ ಮೇಲೆ ಮಾತನಾಡಿ..

(ಗೊಂದಲ)

ಶ್ರೀ ಸಿ. ಬೈರೇಗೌಡ:- ಮಾನ್ಯ ಉಪಾಧ್ಯಕ್ಷಿಣಿಯವರೆ, ಇಂತಹ ವಿಚಾರವನ್ನು ಮಂತ್ರಿಮಂಡಲದ ಸಭೆಯಲ್ಲಿ ಚರ್ಚೆ ಮಾಡಿದ್ದಾರಲ್ಲ ಅವರ ಮೇಲೆ ವಿಶ್ವಾಸ ಇದೆ ಎಂದು ಹೇಳಬೇಕಾದರೆ, ಈ ವಿಚಾರ ಅಲ್ಲದೆ ಮತ್ತೆ ಯಾವ ವಿಚಾರವನ್ನು ನಾವು ಹೇಳಬೇಕಾಗುತ್ತದೆ. ಏನು ನಡೆಯುತ್ತಿದೆ ಎನ್ನುವುದನ್ನು ಹೇಳಬೇಕೋ ಬೇಡವೊ? ನಾನು ಬೇರೆ ವಿಚಾರವನ್ನು ಹೇಳುತ್ತಿಲ್ಲ. ಯಾರದಾದರೂ ಖಾಸಗಿ ವ್ಯವಹಾರವನ್ನು ಹೇಳುತ್ತಿಲ್ಲ. ಆದರೆ ಮಂತ್ರಿಮಂಡಲದ ಸಭೆಯಲ್ಲಿ ಏನು ನಡೆಯಿತು ಎನ್ನತಕ್ಕದ್ದು ಇವತ್ತಿನ ದಿವಸ ಪತ್ರಿಕೆಯಲ್ಲಿ ವರದಿಯಾಗಿದೆ. ಆ ವಿಚಾರ ನಾನು ಇವತ್ತು ಪ್ರಸ್ತಾಪ ಮಾಡಿದೆ. ಇದು ಮಂತ್ರಿಮಂಡಲಕ್ಕೆ ಸಂಬಂಧಪಟ್ಟ ವಿಚಾರ ಅಲ್ಲದೆ ಬೇರೆ ವಿಚಾರ ಅಲ್ಲ.

(ಗೊಂದಲ)

ಶ್ರೀ ಸಿ. ಬೈರೇಗೌಡ:- ಇವತ್ತಿನ ದಿವಸ ರಾಜ್ಯದಲ್ಲಿ ಯಾರ್‍ಯಾರು ಭ್ರಷ್ಟ ಅಧಿಕಾರಿಗಳು ಇದ್ದಾರೆ, ಅವರನ್ನು ರಕ್ಷಣೆ ಮಾಡತಕ್ಕ ಕೆಲಸ ಮಾಡುತ್ತಿದ್ದಾರೆ. ಅದಕ್ಕೆ ಕಾರಣ ಏನು ಎನ್ನತಕ್ಕದ್ದನ್ನು ಕೇಳಬೇಕಾಗುತ್ತದೆ. ಅನೇಕ ಭ್ರಷ್ಟ ಹಿರಿಯ ಅಧಿಕಾರಿಗಳ ಮೇಲೆ ಕಳೆದ ಒಂದು ವರ್ಷದಿಂದ ಕ್ರಮ

ತೆಗೆದುಕೊಂಡಿದ್ದಾರೆ. ಕೋಟಿ ಕೋಟಿ ಗಟ್ಟಲೆ ಆಸ್ತಿಯನ್ನು ಮಾಡಿದ್ದಾರೆ. ಇವರಿಗೆ ಎಲ್ಲಿಂದ ಬಂತು? ಕೋಟಿ ಕೋಟಿ ಗಟ್ಟಲೆ ಆಸ್ತಿ ಮಾಡಿರತಕ್ಕ ಅಧಿಕಾರಿಗಳು ಏನು ಇದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಂಡಿರತಕ್ಕದ್ದು ತಪ್ಪೆ? ಅವರ ಅಧಿಕಾರವನ್ನು ಮೊಟಕುಗೊಳಿಸಬೇಕೆಂದು ಲೋಕಯುಕ್ತದ ಅಧಿಕಾರವನ್ನು ಮೊಟಕುಗೊಳಿಸತಕ್ಕ ವಿಚಾರ ಇವತ್ತಿನ ದಿವಸ ಮಂತ್ರಿಮಂಡಲದ ಸಭೆಯಲ್ಲಿ ಪ್ರಸ್ತಾಪ ಆಗುತ್ತಿದೆ.

(ಗೊಂದಲ)

ಶ್ರೀ ಅಜೀಜ್ ಸೇಠ್:- ಮೋಷನ್ ಇರುವುದು ಒಂದೇ ಒಂದು ಲೈನ್. ಅದರ ಮೇಲೆ ಈ ರೀತಿ ಚರ್ಚೆ ಮಾಡುವುದನ್ನು ನಾನು ನನ್ನ 30 ವರ್ಷಗಳ ಪಾರ್ಲಿಮೆಂಟರಿ ಲೈಫ್‌ನಲ್ಲಿ ನೋಡಿಲ್ಲ. ಇದರಲ್ಲಿ ಹೊಸದಾಗಿ ಅವರಿಗೆ ಏನು ಕಾಣುತ್ತದೆ? ಏಕೆ ಇದೆಲ್ಲ ಚರ್ಚೆ ಮಾಡುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ಚರ್ಚೆ ಮಾಡುವುದಕ್ಕೆ ಬೇರೆ ರೀತಿ ವಿಧಾನ ಇದೆ. ಮೋಷನ್ ಒಂದು ಲೈನ್ ಇದೆ. ಕಾನ್‌ಫಿಡೆನ್ಸ್ ಇದೆಯೋ ಇಲ್ಲವೋ ಎಂದು ಹೇಳಿದರೆ ಸಾಕು.

ಶ್ರೀ ಸಿ. ಬೈರೇಗೌಡ:- ಕಳೆದ 30 ವರ್ಷಗಳಿಂದಲು ಇಂತಹ ಘಟನೆ ನಡೆದಿರಲಿಲ್ಲ. ಭ್ರಷ್ಟ ಅಧಿಕಾರಿಗಳನ್ನು ರಕ್ಷಣೆ ಮಾಡತಕ್ಕ ಪರಿಸ್ಥಿತಿ ಬಂದಿರಲಿಲ್ಲ.

ಮಾನ್ಯ ಒಬ್ಬ ಸದಸ್ಯರು:- ಆ ಕಡೆ ಕುಳಿತಿರತಕ್ಕ ರಾಜಕಾರಣಿಗಳು ಪಕ್ಷಕ್ಕೆ ದ್ರೋಹ ಮಾಡಿಲ್ಲವೆಂದು ಹೇಳಿದ್ದಾರೆ. ಎಲ್ಲರೂ ದ್ರೋಹ ಮಾಡಿದ್ದಾರೆ.

(ಭಾರಿ ಗೊಂದಲ)

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ನಾಯಕತ್ವದ ಬದಲಾವಣೆಯಲ್ಲಿ, ಯಾವ್ಯಾವ ಶಕ್ತಿಗಳ ಕೈವಾಡ ಇತ್ತು, ಅಂತಹ ಒಂದು ಶಂಕೆ ಏನಿದೆ ಅದು ಈ ರೀತಿಯಾಗಿ ಮಂತ್ರಿಮಂಡಲ ಈ ಲೋಕಯುಕ್ತದ ಬಗ್ಗೆ ಚರ್ಚೆ ಮಾಡತಕ್ಕ ವಿಚಾರದಲ್ಲಿ ಸಾಬೀತು ಆಗುತ್ತದೆ. ಎಕ್ಸೈಜ್ ದೊರೆಗಳ ಹಾವಳಿಯನ್ನು ಸಾಬೀತುಪಡಿಸಬೇಕಾಗುತ್ತದೆ ಎಂದು ಆಗಲೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅದಕ್ಕೆ ನಾವೇನು ಸಾಬೀತು ಪಡಿಸಬೇಕಾಗಿಲ್ಲ. ಇವತ್ತಿನ ದಿವಸ ಅವರು ಮಾಡಿರತಕ್ಕ ಕೆಲಸವೇ ಸಾಬೀತು ಪಡಿಸುತ್ತದೆ. ಇವತ್ತು ಭ್ರಷ್ಟ ಅಧಿಕಾರಿಗಳನ್ನು ರಕ್ಷಣೆ ಮಾಡತಕ್ಕ ಕೆಲಸಕ್ಕೆ ಈ ಮಂತ್ರಿಮಂಡಲ ಪ್ರಯತ್ನ ಪಡುತ್ತಿದೆ. ಅವರು ಮಾಡಿರತಕ್ಕ ಕೆಲಸದಿಂದಲೆ ಸಾಬೀತು ಆಗುತ್ತದೆ. ನಾವೇನೂ ಅದನ್ನು ಕೇಳಬೇಕಾಗಿಲ್ಲ. ಇದಕ್ಕೆ ನೇರವಾದ ಉತ್ತರವನ್ನು ಮಂತ್ರಿಗಳು ಕೊಡಬೇಕು. ಲೋಕಯುಕ್ತದ ಅಧಿಕಾರವನ್ನು ಮೊಟಕು ಮಾಡುವ ಪ್ರಯತ್ನ ಏನು ನಡೆಯುತ್ತದೆ ಅದು ಕೈಬಿಡುವುದು ಅತಿ ಅವಶ್ಯಕವಾಗಿದೆ. ಇದನ್ನು ಮಾಡಬಾರದಾಗಿತ್ತು. ಹೊಸ ಸರ್ಕಾರ ಹೊಸದಾಗಿ ನಾಯಕರಾಗಿ ಬಂದಮೇಲೆ ದಕ್ಷತೆಯನ್ನು ಹೆಚ್ಚಿಸುವುದಕ್ಕೆ ಪ್ರಯತ್ನ ಪಡಬೇಕಾಗಿತ್ತು. ಭ್ರಷ್ಟಾಚಾರವನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಪಡಬೇಕಾಗಿತ್ತು. ಆಗ ನಾನು ಸಂತೋಷ ಪಡುತ್ತಿದ್ದೆ. ಅದನ್ನು ಬಿಟ್ಟು ಇವತ್ತಿನ ದಿವಸ ಈ ಭ್ರಷ್ಟತೆಗೆ ಅವಕಾಶ ಮಾಡಿಕೊಡತಕ್ಕಂಥಾದ್ದಕ್ಕೆ ಅವರಿಗೆ ರಕ್ಷಣೆ ಕೊಡತಕ್ಕ ಕೆಲಸವನ್ನು ಇವತ್ತಿನ ದಿವಸ ಪ್ರಥಮವಾಗಿ ನೀವು ಮಾಡುವುದಕ್ಕೆ ಹೊರಟಿದ್ದೀರಿ. ಯಾವ ದಿಕ್ಕಿನಲ್ಲಿ ನೀವು ಹೋಗುತ್ತಿದ್ದೀರಿ. ಯಾವ ದಿಕ್ಕಿನಲ್ಲಿ ಸರ್ಕಾರ ಹೋಗುತ್ತಿದೆ ಅನ್ನತಕ್ಕದ್ದು ಇವತ್ತು ತೋರಿಸುತ್ತಿದೆ. ಈ ದಿಕ್ಕನ್ನು ಬದಲಾಯಿಸಿಕೊಳ್ಳಬೇಕಾಗಿರತಕ್ಕದ್ದು ರಾಜ್ಯದ ಜನತೆಯ ಹಿತದೃಷ್ಟಿಯಿಂದ ಅವಶ್ಯಕವಿದೆ. ಹಿಂದಿನ ಪರಂಪರೆಯನ್ನು ಮುರಿದು ಯಾವ ದಾರಿಯಲ್ಲಿ ಸರ್ಕಾರ ಹೋಗುತ್ತಿತ್ತು ಅದನ್ನು ಮುರಿದು ಬೇರೆ ಹೊಸ ದಾರಿಯನ್ನು ಹುಡುಕಬೇಕಾಗಿದೆ. ಆ ಕೆಲಸವನ್ನು ನೀವು ಮಂತ್ರಿಮಂಡಲದಲ್ಲಿ ಮಾಡುವುದಾದರೆ ನಾನು ನಿಮಗೆ ಹೌದು ಎಂದು ವಿಶ್ವಾಸ ಮತಕ್ಕೆ ನಾನು ಬೆಂಬಲವನ್ನು ಸೂಚಿಸುವುದಕ್ಕೆ ತಯಾರಾಗಿದ್ದೇನೆ. ಆದರೆ ಇವತ್ತಂತೂ ಅದಕ್ಕೆ ನಾನು ತಯಾರಿಲ್ಲ. ಕಾರಣವೇನೆಂದರೆ, ನೀವು ಮೊದಲು ಹೆಜ್ಜೆ ಇಟ್ಟಿರತಕ್ಕದ್ದು ತಪ್ಪು ಹೆಜ್ಜೆಯಾಗಿದೆ. ಮೊದಲ ತಪ್ಪು ಹೆಜ್ಜೆಯನ್ನು ಇವತ್ತಿನ ದಿವಸ ಮಂತ್ರಿಮಂಡಲ ಇಡುತ್ತಿದೆ. ಆದುದರಿಂದ ಇವತ್ತಿನ ದಿವಸ ಈ ವಿಶ್ವಾಸ ಮತಕ್ಕೆ ನಾನು ನನ್ನ ವಿರೋಧವನ್ನು ಸೂಚಿಸುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೆ,

ಒಂದು ಮಾತನ್ನು ಹೇಳದೆ ಇದ್ದರೆ ನಾನು ಕರ್ತವ್ಯಚ್ಯುತಿಯನ್ನು ಮಾಡಿದಂತಾಗುತ್ತದೆ. ಈ ಹತ್ತು ತಿಂಗಳ ಕಾಲದ ಶ್ರೀಮಾನ್ ವೀರೇಂದ್ರ ಪಾಟೀಲರ ನೇತೃತ್ವದ ಸರ್ಕಾರ ಏನಿತ್ತು, ಈ ವರ್ಗಾವರ್ಗಿ ವಿಚಾರದಲ್ಲಿ ಬಿಟ್ಟರೆ ಉಳಿದಂತೆ ಅಂತಹ ಸರ್ಕಾರ ಹಿಂದೆ ಇರಲಿಲ್ಲ. ಈ ಹತ್ತು ತಿಂಗಳು ನಡೆದಂತಹ ಸರ್ಕಾರ ಕರ್ನಾಟಕ ರಾಜ್ಯದಲ್ಲಿ ಹಿಂದೆ ಇರಲಿಲ್ಲ. ಅದನ್ನು ನಾನು ಧೈರ್ಯವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮುಂದೆಯೂ ಕೂಡ ಇಂತಹ ಸರ್ಕಾರ ಬರುತ್ತದೆ ಎನ್ನುವಂತಹ ನಂಬಿಕೆ ನನಗೆ ಇಲ್ಲ. ಅಂತಹ ಒಂದು ಪರಿಸ್ಥಿತಿಗೆ ತಂದಿಟ್ಟಂಥ ನಾಯಕತ್ವವನ್ನು ಇವತ್ತಿನ ದಿವಸ ನೀವು ಬದಲಾವಣೆ ಮಾಡಿದ್ದೀರಿ. ಇದಕ್ಕಾಗಿ ಜನತೆ ನಿಮ್ಮನ್ನು ಕ್ಷಮಿಸುವುದಿಲ್ಲ ಎಂದು ಹೇಳುತ್ತೇನೆ. ಮಾನ್ಯ ಬಂಗಾರಪ್ಪನವರು ಮೊದಲಿನಿಂದಲೂ ಕೂಡ ನನಗೆ ವೈಯುಕ್ತಿಕವಾಗಿ ಆತ್ಮೀಯ ಸ್ನೇಹಿತರು. ಕಾರಣ ಏನೆಂದರೆ, ಅವರು ಈ ಕಡೆಯಿಂದ, ಈ ಬಾಗಿಲಿನಿಂದ ಬಂದು ಸದನವನ್ನು ಸೇರಿರತಕ್ಕವರು. ನಾನು ಅವರೂ ಒಟ್ಟಿಗೆ ಪಕ್ಕಪಕ್ಕದಲ್ಲಿ ಕುಳಿತಿದ್ದವರು. ಇವತ್ತು ಅವರು ಮುಖ್ಯಮಂತ್ರಿಗಳಾಗಿರುವುದು ವೈಯುಕ್ತಿಕವಾಗಿ ನನಗೆ ಬಹಳ ಸಂತೋಷ. ಆದರೆ ಇವತ್ತಿನ ದಿವಸ ಅವರು ಹೋಗುತ್ತಿರುವ ದಾರಿ ಹಾಗೂ ಇಟ್ಟಿರತಕ್ಕ ಹೆಜ್ಜೆ ಸಮರ್ಪಕವಾದ ಹೆಜ್ಜೆ ಅಲ್ಲ. ಆದ್ದರಿಂದ ಈ ವಿಶ್ವಾಸ ನಿರ್ಣಯವನ್ನು ವಿರೋಧಿಸಿ, ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ.ಜಿ.ಆರ್. ಸಿಂಧ್ಯ: (ಕನಕಪುರ):- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಬಂಗಾರಪ್ಪನವರು ಸಂವಿಧಾನದ ಪ್ರಕಾರವಾಗಿ ರಾಜ್ಯಪಾಲರಿಂದ ನಿರ್ವಾಚಿತರಾಗಿ ಮುಖ್ಯಮಂತ್ರಿಗಳಾಗಿ ಸಚಿವ ಸಂಪುಟವನ್ನು ರಚನೆ ಮಾಡಿ ರಾಜ್ಯಪಾಲರ ಆದೇಶದಂತೆ ಈ ಸದನದ ಒಪ್ಪಿಗೆಯನ್ನು ಪಡೆಯಲಿಕ್ಕೆ ಇವತ್ತು ಒಂದು ನಿರ್ಣಯವನ್ನು ನಮ್ಮ ಮುಂದೆ ಮಂಡಿಸಿದ್ದಾರೆ. ಬಹಳ ವಿಚಿತ್ರವಾದ ಸನ್ನಿವೇಶದಲ್ಲಿ ಮಾನ್ಯ ಬಂಗಾರಪ್ಪನವರು ಈ ಸದನದ ನಾಯಕತ್ವವನ್ನು ಮತ್ತು ರಾಜ್ಯದ ಮುಖಂಡತ್ವವನ್ನು ವಹಿಸಿಕೊಂಡಿದ್ದಾರೆ. ಈಗ ನಮಗೂ ಸಹಿತ ಈ ಕಡೆ ಸದನದಲ್ಲಿ....

ಒಬ್ಬ ಮಾನ್ಯ ಸದಸ್ಯರು:- ವಿಚಿತ್ರ ಏನು?....

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾನು ಇನ್ನು ಮಾತನಾಡಿಲ್ಲ ಈ ರೀತಿಯಾದರೆ ಮಾನ್ಯ ಸಭಾನಾಯಕರು ಹೇಳಬೇಕಾಗುತ್ತದೆ. ನಾನೇನು ಮಾತೇ ಆಡಿಲ್ಲ. ಆಗಲೇ ಆ ಕಡೆಯಲ್ಲಿ ತುತ್ತೂರಿ ಊದುತ್ತಿದ್ದಾರೆ. ನಾನು ಮಾಡನಾಡುವುದು ಬೇಡವೆಂದರೆ ಬೇಡ. ನಾನು ಏನು ಹೇಳಿದ್ದೇನೆಂದು ಅವರು ಈ ರೀತಿ ಕಿರುಚಾಡುತ್ತಾರೆ. ನಮಗೂ ಇದಕ್ಕಿಂತ ನಾಲ್ಕರಷ್ಟು ಕೂಗುವಷ್ಟು ಶಕ್ತಿ ಇದೆ. ಅದು ಬೇಡ ಎಂದು ಇದ್ದೇವೆ. ನೀವು ಬೇಡವೆಂದರೆ ನಾನು ಮಾತನಾಡುವುದಿಲ್ಲ.

(ಗೊಂದಲ)

SRI H. EKANTHAIAH:- This is very bad

ಶ್ರೀ ಪಿ.ಜಿ.ಆರ್. ಸಿಂಧ್ಯ:- ಈ ವಿಚಿತ್ರವಾದ ಸನ್ನಿವೇಶ ಏಕೆ ಬಂತು ಎನ್ನುವುದನ್ನು I am going to say that.

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಸಭಾಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರಿಗೆ ಮಾತನಾಡತಕ್ಕಂತ ಹಕ್ಕು ಇದೆ. ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸತಕ್ಕಂತ ಸಂದರ್ಭ ಹೌದು ಎನ್ನುವಂತಹ ಮಾತನ್ನು ನಾವೆಲ್ಲ ಮಾನ್ಯ ಮಾಡಿರಬೇಕಾದರೆ, ತಾವು ಹೇಳುವುದು ಅವಶ್ಯಕತೆ ಇದೆ. ತಾವು ದಯಮಾಡಿ ಹೇಳಿ, ಸುಮಾರಾಗಿ ಈ ವಿಚಾರದಲ್ಲಿ ಸ್ವಲ್ಪ ಕುತೂಹಲವಿದೆ. ಅದು ಹೇಗೆಂದರೆ, ನೀವು ಹೇಳಿದ ಹಾಗೆ ಸನ್ನಿವೇಶ ಸ್ವಲ್ಪ ವಿಚಿತ್ರವಾಗಿದೆ. ಇದೊಂದು ವಿಚಿತ್ರ ಸನ್ನಿವೇಶ ಎಂದ ಕೂಡಲೆ, ಅವು ಯಾವುವು ಏನೇನು ನೆನಪಿಗೆ ತಂದುಕೊಂಡು ಮಾತನಾಡುತ್ತಿದ್ದಾರೆ..

(ಗೊಂದಲ)

ಶ್ರೀ ಎಸ್. ಬಂಗಾರಪ್ಪ:- ಕೌಜಲಗಿಯವರೇ ಶ್ರೀಮಾನ್ ಸಿಂಧ್ಯ ಅವರನ್ನು ಮಾತನಾಡಲು ಬಿಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಈಗ ನನ್ನ ಭಾಷಣಕ್ಕೆ ಅಡ್ಡ ಬರಲಿಕ್ಕೆ ಹಕ್ಕು ಇರತಕ್ಕಂಥಾದ್ದು ಉಪಾಧ್ಯಕ್ಷಿಣಿಯವರೊಬ್ಬರಿಗೆ ಮಾತ್ರ, ಬೇರೆ ಯಾರಿಗೂ ಸಹಿತ ಇಲ್ಲ. ಅಥವಾ ಯಾರಾದರೂ ಅಡ್ಡಿ ಬರುತ್ತೇವೆ ಎನ್ನುವ ಒಂದು ಕಲ್ಪನೆಯಲ್ಲಿದ್ದರೆ ಅದಕ್ಕೆಲ್ಲ ಹೆದರತಕ್ಕವನು ನಾನಲ್ಲ.

(ಗೊಂದಲ)

ಉಪಾಧ್ಯಕ್ಷಣಿಯವರು :- ನೀವು ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಈ ಸದನಕ್ಕೆ ಏನಾದರು ಆರ್ಡರ್ ಇದೆಯೋ, ತಾವು ದಯವಿಟ್ಟು ಕ್ಲಾರಿಫೈ ಮಾಡಿ. ಆರ್ಡರ್ ಇದ್ದರೆ ಆರ್ಡರ್ ಪ್ರಕಾರ ನಡೆದುಕೊಳ್ಳೋಣ. ಇಲ್ಲದೇ ಹೋದರೆ ಮಾತನಾಡುವುದು ಬೇಡ ಅಂದರೆ ನಾವು ಎದ್ದುಹೋಗುತ್ತೇವೆ. ಮಾತನಾಡುವುದು ಬೇಡ ಎಂದು ನೀವು ನಿರ್ಣಯಮಾಡಿ.

(ಗೊಂದಲ)

ಉಪಾಧ್ಯಕ್ಷಣಿಯವರು:- ನೀವು ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನಾನು ಹೇಗೆ ಮಾತನಾಡಲಿ, ನಾನು ಏನು ಮಾತನಾಡುತ್ತಿದ್ದೇನೆಂದು ನನಗೆ ಕೇಳಿಸುತ್ತಿಲ್ಲ. ಅಷ್ಟೊಂದು ಗಲಾಟೆಯಾಗುತ್ತಿದೆ. ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ವಿಚಿತ್ರವಾದ ಸನ್ನಿವೇಶ ಎಂದು ಏತಕ್ಕೆ ಹೇಳಿದೆ ಅಂದರೆ, ನಮ್ಮ ದೇಶದಲ್ಲಿ ಇವೊತ್ತು ಬಹಳ ಗಂಭೀರವಾದ ಪರಿಸ್ಥಿತಿ ಬಂದಿದೆ. ನಾವು ನಿಷ್ಠೆಗಳ ಬಗ್ಗೆ, ಮೌಲ್ಯಗಳ ಬಗ್ಗೆ ಪ್ರಜಾತಂತ್ರದ ಬಗ್ಗೆ, ಸಂವಿಧಾನದ ಬಗ್ಗೆ ಮಾತನಾಡತಕ್ಕ ಈ ಸಂದರ್ಭದಲ್ಲಿ ದೇಶವನ್ನು ವಿಭಜನೆ ಮಾಡತಕ್ಕಂಥ ಶಕ್ತಿಗಳು ಇವೊತ್ತು ಬಹಳ ದೊಡ್ಡ ಪ್ರಮಾಣದಲ್ಲಿ ಈ ದೇಶಕ್ಕೆ ಬೆಂಕಿ ಇಟ್ಟಿದ್ದಾರೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:- ತಾವು ಓಟ್ ಆಫ್ ಕಾನ್ಫಿಡೆನ್ಸ್ ತೆಗೆದುಕೊಳ್ಳಬೇಕೆಂದು ಇದ್ದೀರೋ ಹೇಗೆ. ಮಾನ್ಯ ಉಪಾಧ್ಯಕ್ಷಣಿಯವರು ಮಾತನಾಡಿ ಅಂದರೆ ಈ ಗಲಾಟೆಯಲ್ಲಿ ನಾನು ಹೇಗೆ ಮಾತನಾಡಲಿಕ್ಕೆ ಆಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನೀವು ಮಾತನಾಡಿ, ನೀವು ಮಾತನಾಡುವುದನ್ನು ಕೇಳಬೇಕೆಂದು ನಾವು ಬಹಳ ಶಾಂತ ರೀತಿಯಿಂದ ಕುಳಿತುಕೊಂಡಿದ್ದೇವೆ. ಆದರೆ ನೀವು ದೆಲ್ಲಿಯ ಗಲಾಟೆ ತಲೆಗೆ ಹಾಕಿಕೊಳ್ಳಬೇಡಿ. ಇಲ್ಲಿಯದನ್ನು ಮಾತ್ರ ಮಾತನಾಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಖರ್ಗೆಯವರೆ ನಾವು ಡೆಲ್ಲಿ ಗಲಾಟೆ ತಲೆಗೆ ಹಾಕಿಕೊಂಡಿಲ್ಲ. ಆದರೆ ದೆಲ್ಲಿಯಲ್ಲಿ ಏನು ಗಲಾಟೆ ಆಗುತ್ತಿದೆ ಅದರ ಬಗ್ಗೆ ನಾನು ಹೇಳುತ್ತಿದ್ದೆ.

(ಗೊಂದಲ)

ಉಪಾಧ್ಯಕ್ಷಣಿಯವರು:- ನೀವು ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಬಂಗಾರಪ್ಪನವರು ಮಾತನಾಡುತ್ತಾ ಯಾವುದೇ ಒಂದು ಪಕ್ಷಕ್ಕೆ ಬಹುಮತ ಬರಬೇಕು, ಎಂದು ಹೇಳಿದರು ಬಹುಶಃ ಕೇಂದ್ರಸರ್ಕಾರದ ಇವೊತ್ತಿನ ಪರಿಸ್ಥಿತಿ ಅವರ ಗಮನದಲ್ಲಿತ್ತು, ಆ ಹಿನ್ನೆಲೆಯಲ್ಲಿ ಅವರು ಮಾತನಾಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಅವರು ಜನರಲ್ ಆಗಿ ಹೇಳಿದ್ದಾರೆ. ಯಾವುದೇ ಒಂದು ಪಕ್ಷಕ್ಕೆ ಬಹುಮತ ಇರಬೇಕು. ಬಹುಮತ ಬಂದರೆ ಮಾತ್ರ ಪ್ರಜಾಪ್ರಭುತ್ವದಲ್ಲಿ ಭದ್ರವಾದ ಸರ್ಕಾರವನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಹೇಳಿದರು. ಆ ಮಾತನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಇವೊತ್ತು ಕೇಂದ್ರಸರ್ಕಾರವಾಗಲಿ, ರಾಜ್ಯಸರ್ಕಾರವಾಗಲಿ, ಒಂದು ಸ್ಟೇಬಲ್ ಗೌರ್ನಮೆಂಟ್ ಎನ್ನತಕ್ಕದ್ದು ಬೇಕು. ಏಕೆಂದರೆ, ನಮ್ಮ ಪ್ರಜಾಪ್ರಭುತ್ವದ ವ್ಯವಸ್ಥೆ ಹೇಗಿದೆ ಎಂದರೆ, ನಮ್ಮಲ್ಲಿ

ಪಕ್ಷಗಳಲ್ಲಿ ಭಿನ್ನಾಭಿಪ್ರಾಯಗಳಿವೆ. ಪಕ್ಷದ ಒಳಗಡೆ ಗುಂಪಿನ ಭಿನ್ನಾಭಿಪ್ರಾಯಗಳಿವೆ. ಜಾತಿಗಳ ಆಧಾರದ ಮೇಲೆ ಒಡಕುಗಳಿವೆ. ಅದೇ ರೀತಿ ಈಗ ಯಾವ ಮಟ್ಟದಲ್ಲಿ ಪರಿಸ್ಥಿತಿ ಇದೆ ಎನ್ನುವುದು ತಮಗೆ ಗೊತ್ತಿದೆ. ಈಗ ತಾವು ಹಿಂದುಳಿದ ವರ್ಗಗಳ ಕೋಮಿನವರು. ಬಹುಶಃ ಕರ್ನಾಟಕ ರಾಜ್ಯಕ್ಕೆ 47 ವರ್ಷಗಳ ಕಾಲದಲ್ಲಿ ಮೊದಲನೆಯ ಒಬ್ಬ ಹಿಂದುಳಿದ ವರ್ಗದವರು ಮುಖ್ಯಮಂತ್ರಿಗಳಾಗಿದ್ದೀರಿ. ಮಾನ್ಯ ಅರಸು ಅವರು ಹಿಂದುಳಿದ ವರ್ಗದವರಲ್ಲ, ಅರಸು ಅವರು ಹಿಂದುಳಿದ ವರ್ಗಕ್ಕೆ ಸಹಾಯ ಮಾಡಿದಂಥ ಒಬ್ಬ ಕ್ಷತ್ರಿಯ. ಬಂಗಾರಪ್ಪನವರು ಹಿಂದುಳಿದ ವರ್ಗದ ಜಾತಿಗೆ ಸೇರಿದವರು. ಆದರೆ ನಿಮಗೆ ನಾನು ಬೆಂಬಲವನ್ನು ಕೊಡಲಿಕ್ಕೆ ಆಗುವುದಿಲ್ಲ. ಏತಕ್ಕೆ ಎಂದು ಹೇಳುತ್ತೇನೆ.

(ಗೊಂದಲ)

ಶ್ರೀ ಎನ್.ಜಿ.ನಾಯಕ್:- ದಯವಿಟ್ಟು ತಮ್ಮ ವಿಚಾರ ತಾವು ನೋಡಿಕೊಳ್ಳಿ ನಮ್ಮ ನಾಯಕರ ಬಗ್ಗೆ ಏಕೆ ಹೇಳುತ್ತೀರಿ.

ಶ್ರೀ ಎಸ್. ಬಂಗಾರಪ್ಪ:- ಬೆಂಬಲ ಏತಕ್ಕೆ ಕೊಡಲಿಕ್ಕೆ ಆಗುವುದಿಲ್ಲ ಎಂದು ಹೇಳುವ ಬದಲು, ಬೆಂಬಲ ಏತಕ್ಕೆ ಕೊಡುತ್ತೀರಿ ಎನ್ನತಕ್ಕದ್ದರ ಬಗ್ಗೆ ಹೇಳಿದರೆ ಮಜಾ ಇರತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅದರ ಬಗ್ಗೆ ಯೋಚನೆ ಮಾಡುತ್ತೇನೆ.

ಶ್ರೀ ಅಜೀಜ್ ಸೇಠ್:- ದೇವರು ಒಳ್ಳೆಯ ಬುದ್ಧಿ ಕೊಡಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ದೇವರು ನನಗೆ ಯಾವಾಗಲೂ ಒಳ್ಳೆಯ ಬುದ್ಧಿ ಕೊಟ್ಟಿದ್ದಾನೆ. ಅದಕ್ಕೆ ನಾನು ಒಂದೇ ಕಡೆ ಇದ್ದೇನೆ.

ಉಪಾಧ್ಯಕ್ಷಿಣಿಯವರು: ದೇವರು ಎಲ್ಲರಿಗೂ ಒಳ್ಳೆಯ ಬುದ್ಧಿ ಕೊಡಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಉಪಾಧ್ಯಕ್ಷಿಣಿಯವರೆ, ಎಲ್ಲರಿಗೂ ಒಳ್ಳೆಯ ಬುದ್ಧಿ ಕೊಡಲಿ ಎಂದು ನಾನು ದೇವರನ್ನು ಕೇಳಿಕೊಳ್ಳುತ್ತಿದ್ದೇನೆ. ಈಗ ದೇಶವನ್ನೇನು ಒಡೆಯುತ್ತಿದ್ದಾರೆ. ಅವರಿಗೆ ಮೊದಲು ರಾಮು ಬುದ್ಧಿ ಕೊಡಲಿ ಎಂದು ಹೇಳುತ್ತಿದ್ದೇನೆ. ಈಗ ಭದ್ರ ಸರ್ಕಾರ ಎಂದು ಹೇಳಿದರು. ಪಕ್ಷಗಳಲ್ಲಿ, ಪ್ರತಿಯೊಂದರಲ್ಲೂ ಗುಂಪುಗಳು ಇವೆ. ಗುಂಪುಗಳು ಇಲ್ಲ ಅಂದರೆ ನಾವು ಯಾರು ಒಪ್ಪಲಿಕ್ಕಾಗುವುದಿಲ್ಲ; ಅದು ಅಷಾಢಭೂತಿತನ. ಅಧಿಕಾರಿಗಳಲ್ಲಿ ಸಹಿತ ಅದೇರೀತಿ ಇದೆ. ಜಾತಿಗಳ ಆಧಾರದ ಮೇಲೆ ಗುಂಪು ಇದೆ. ಹಣ ಎಷ್ಟು ಮಾಡಿದ್ದಾರೆಂಬುವುದರ ಮೇಲೆ ಇದೆ. ನೀವು ಈ ಕಡೆ ಕುಳಿತುಕೊಂಡಿದ್ದಾಗ ಅಧಿಕಾರಿಗಳೇ ನಿಮಗೆ ಇನ್‌ಫರ್‌ಮೇಷನ್ ಕೊಡುತ್ತಿದ್ದರು. ನಮಗೂ ಅವರೇ ಕೊಡುತ್ತಿದ್ದಾರೆ. ತಾವು ಯಾರಿಗಾದರು ಒಬ್ಬರಿಗೆ ಏನಾದರು ಮಾಡಬೇಕು ಎಂದರೆ ಇನ್ನೊಬ್ಬ ಗುಂಪಿನವರು ಹೊರಟು ಬಂದು ಅವರು ಹಾಗೆ, ಹೀಗೆ ಎಂದು ಹೇಳುತ್ತಾರೆ. ಇವೆಲ್ಲವು ಸಾಮಾನ್ಯವಾಗಿ ನಡೆಯತಕ್ಕಂಥಾದ್ದು. 3.30. ಪಿ.ಎಂ. 179 ಜನ ಶಾಸಕರು ಏನಿದ್ದೀರಿ. ನಾವು ಮಾಡಿದ ತಪ್ಪಿನಿಂದಾಗಿ ನೀವು ಗೆದ್ದು ಬಂದಿದ್ದೀರಿ. ಇಲ್ಲಿ ದೊಡ್ಡ ದೊಡ್ಡ ಭಾಷಣಗಳನ್ನು ಮಾಡುತ್ತೀರಿ. ನಾನು ಈಗ ಮಾತನಾಡುವುದಕ್ಕೆ ಹೋಗುವುದಿಲ್ಲ. ಮಾರ್ಚಿಯಲ್ಲಿ ನಾನು ಮಾತನಾಡುತ್ತೇನೆ. ಈ ಕಡೆಯ ಕೆಲವು ಮಾನ್ಯ ಸದಸ್ಯರು 400 ಕೋಟಿ ಬಂತು, 600 ಕೋಟಿ ಬಂತು, ದಕ್ಷತೆ ಬಂತು, ಪ್ರಾಮಾಣಿಕತೆ ಬಂತು, ನಿಷ್ಠೆ ಬಂತು ಎಂದು ಹೇಳಿದ್ದಾರೆ. ಇದನ್ನೆಲ್ಲಾ ನಾವು ಮಾರ್ಚಿಯಲ್ಲಿ ಮಾತನಾಡೋಣ. ಮಾನ್ಯ ರಾಜಶೇಖರ ಮೂರ್ತಿಯವರು ಈ ಸದನದ ಗೌರವಾನ್ವಿತ ಹಿರಿಯ ಸದಸ್ಯರು. ಅವರು ಮಾಡಿದ ಭಾಷಣದ ಪ್ರತಿಯನ್ನೂ ನಾನು ಇಟ್ಟುಕೊಂಡಿದ್ದೇನೆ. ಮಾನ್ಯ ಸಭಾನಾಯಕರು ಮಾಡಿದಂಥ ಭಾಷಣದ ಪ್ರತಿಯನ್ನೂ ನಾವು ಮಾರ್ಚಿ ತಿಂಗಳಲ್ಲಿ ನಿಮ್ಮ ಮುಂದೆ ಹಿಡಿಯಬೇಕಾಗುತ್ತದೆ. ಏಕೆಂದರೆ, ಈಗ ನೀವು ಏನು ಹೇಳುತ್ತಿದ್ದೀರೆಂದರೆ, ಇದು ಕಾಂಗ್ರೆಸ್ ಪಕ್ಷದ ಅಂತರಿಕ ವ್ಯವಹಾರ, ಇದರಲ್ಲಿ ಕೈ ಹಾಕುವುದಕ್ಕೆ ನೀವು ಯಾರು ಎನ್ನತಕ್ಕ ಮಾತನ್ನು ನೀವು ಹೇಳಿರುತ್ತೀರಿ. ಆಪತ್ತಿನ ಹಣಕಾಸಿನ ಪರಿಸ್ಥಿತಿಯ ಬಗ್ಗೆ, ರಾಜ್ಯ ಸರ್ಕಾರದ ಭದ್ರತೆಯ ಬಗ್ಗೆ ನಾನು ಇವತ್ತು ಮಾತನಾಡುವುದಕ್ಕೆ ಹೋಗುವುದಿಲ್ಲ. ನೀವು ಏನು ಮಾಡಿದಿರಿ ಎಂದು ನಮ್ಮನ್ನು ನೀವು ಕೇಳಬಹುದು. ನಾವಾದರೂ ಕೊನೆಯಪಕ್ಷ 6 ವರ್ಷಗಳ ಕಾಲವಾದರು

ಸರ್ಕಾರವನ್ನು ನಡೆಸಿದೆವು. ಆದರೆ ನಿಮಗೆ ಕೇವಲ 6 ತಿಂಗಳಲ್ಲೇ ಈ ಸ್ಥಿತಿ ಬಂತಲ್ಲಾ. ದಯವಿಟ್ಟು ಇದನ್ನು ತಾವು ಯೋಚನೆ ಮಾಡಿ...

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:- ಇದು ಬಹಳ ಗಂಭೀರವಾದ ಪರಿಸ್ಥಿತಿ...

ಶ್ರೀ ಎನ್.ಜಿ. ನಾಯಕ್:- ನಿಮ್ಮಂಥವರು ಸಪ್ಪೋರ್ಟ್ ಮಾಡಿದ್ದರಿಂದ ನಮ್ಮದು 6 ತಿಂಗಳಿಗೇ ಹೋದದ್ದು...

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:- 1989ರ ನವೆಂಬರ್‌ನಲ್ಲಿ 179 ಜನ ಶಾಸಕರು ಗೆದ್ದುಬಂದಾಗ ನಿಮ್ಮಲ್ಲಿ ಎಷ್ಟೊಂದು ಗರ್ವ ಇತ್ತು. ಅದು ನಿಮಗೆ ಇರಬೇಕು. ಅದು ಅಹಂಕಾರ ಎಂದು ನಾನು ಹೇಳುತ್ತಿಲ್ಲ. ನಿಮಗೆ ಗರ್ವ ಇರಬೇಕು. ನಮ್ಮ ಪಕ್ಷ ಗೆದ್ದಿದೆ, ನಾವು ರಾಜ್ಯಕ್ಕೆ ಒಳ್ಳೆಯದನ್ನು ಮಾಡುತ್ತೇವೆ, ಒಳ್ಳೆಯ ಸರ್ಕಾರವನ್ನು ಕೊಡುತ್ತೇವೆ, ಅವರಿಗಿಂತ ಒಳ್ಳೆಯ ಸರ್ಕಾರವನ್ನು ಕೊಡುತ್ತೇವೆ ಎನ್ನತಕ್ಕ ಗರ್ವ ಸಹಜವಾಗಿ ಗೆದ್ದುಬಂದ ಎಲ್ಲ ಪಕ್ಷದ ಸದಸ್ಯರಲ್ಲೂ ಇದ್ದೇ ಇರುತ್ತದೆ. ನಾವು ಅವರಿಗಿಂತ ಒಳ್ಳೆಯ ಕೆಲಸವನ್ನು ಮಾಡಬೇಕೆಂದಿರುತ್ತೀರಿ. ಆದರೆ ಇವತ್ತು ಯಾವ ಸ್ಥಿತಿಯಲ್ಲಿದ್ದೀರೆಂಬುದನ್ನು ಹೇಳುತ್ತೇನೆ. ಇವತ್ತು ಅಕ್ಟೋಬರ್ 25ನೇ ತಾರೀಖು. ಕಳೆದ ಸೆಪ್ಟೆಂಬರ್ 24ನೇ ತಾರೀಖಿನಿಂದ ಅಂದರೆ 31 ದಿವಸದಲ್ಲಿ ಈ ನಿಮ್ಮ ಸರ್ಕಾರದಿಂದ ಏನಾಗಿದೆ ಎಂಬುದನ್ನು ದಯವಿಟ್ಟು ತಾವು ಯೋಚನೆ ಮಾಡಿನೋಡಿ. ಮಾನ್ಯ ವೀರೇಂದ್ರ ಪಾಟೀಲರಿಗೆ ಅವತ್ತು ಲಕ್ವ ಹೊಡೆದಂದಿನಿಂದ ಇವತ್ತಿನವರೆಗೂ ಸರ್ಕಾರ ಯಾವ ದಿಕ್ಕಿನಲ್ಲಿ ಕೆಲಸ ಮಾಡಿದೆ, ಯಾವ ಯಾವ ಅಧಿಕಾರಿಗಳು ಏನೇನು ಮಾಡಿದ್ದಾರೆಂಬುದನ್ನು ಯೋಚನೆ ಮಾಡಿನೋಡಿ. ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ತಿಳಿದುಕೊಳ್ಳಬೇಕು. ನಿಮಗೆ ತೊಂದರೆಯನ್ನು ಕೊಡತಕ್ಕ ಶಕ್ತಿ ನಮಗಿಲ್ಲ. ನಿಮಗೆ ತೊಂದರೆ ಬರತಕ್ಕದ್ದು ಎಲ್ಲಿಂದ ಎಂದರೆ, ಯಾರು ಮಾನ್ಯ ವೀರೇಂದ್ರ ಪಾಟೀಲರನ್ನು ಅಲ್ಲಿ ಕೂಡಿಸಿ ಅವರಿಗೆ ದುರ್ಬುದ್ಧಿಯನ್ನು ಹೇಳಿ ಇವತ್ತು ಈ ಸ್ಥಿತಿಗೆ ತಂದರೋ ಅದೇ ಜನರು ನಿಮ್ಮನ್ನು ಮತ್ತೆ ಕೆಳಗಿಳಿಸುತ್ತಾರೆ ಎಂಬುದನ್ನು ನೀವು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಪ್ರತಿಯೊಂದು ಪಕ್ಷಕ್ಕೂ ಒಂದೊಂದು ಸಂಸ್ಕೃತಿ ಇದೆ. ಈಗ ನಾನು ನಿಮ್ಮ ಪಕ್ಷದ ಆಂತರಿಕ ವ್ಯವಹಾರಗಳ ಬಗ್ಗೆ ಚರ್ಚೆಮಾಡುವುದಕ್ಕೆ ಹೋಗುವುದಿಲ್ಲ. ಅದು ನನ್ನ ಧರ್ಮವಲ್ಲ. ನಾನು ರಾಜಕೀಯ ಮೌಲ್ಯಗಳ ಬಗ್ಗೆ ಮಾತನಾಡುವುದಕ್ಕೆ ಈಗ ಹೋಗುವುದಿಲ್ಲ. ಅಷ್ಟೇ ಅಲ್ಲ, ನಾನು ಕಾಂಗ್ರೆಸ್ ಪಕ್ಷದ ಅಧ್ಯಕ್ಷರ ಬಗ್ಗೆಯೂ ಏನನ್ನೂ ಹೇಳುತ್ತಿಲ್ಲ. ಅವತ್ತು ರಾಜ್ಯದಲ್ಲಿ, ದೇಶದಲ್ಲಿ ಕಾನೂನು ಪರಿಸ್ಥಿತಿ ಏನಿತ್ತು? ಇವತ್ತು ಇಡೀ ದೇಶವೇ ಹತ್ತಿಕೊಂಡು ಉರಿಯುತ್ತಿದೆ. ನಿಮ್ಮ ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ಚನ್ನಪಟ್ಟಣಕ್ಕೆ ಹೋಗಬೇಕೆಂಬ ಸಂದರ್ಭದಲ್ಲಿ ದೇಶದಲ್ಲಿ ಏನು ಪರಿಸ್ಥಿತಿ ಇತ್ತು, ಅದಕ್ಕೆ ಏನು ಕಾರಣ ಎಂಬುದನ್ನು ಅನಂತರ ಚರ್ಚೆಮಾಡೋಣ. ಕಾನೂನು ಪರಿಸ್ಥಿತಿಯ ಬಗ್ಗೆ ಚರ್ಚೆಮಾಡುವಾಗ ಕೋಮು ಶಕ್ತಿಗಳ ದಳ್ಳುರಿ ಏನಿದೆ ಅದನ್ನು ನಾವು ಚರ್ಚೆಮಾಡೋಣ. ಇದಕ್ಕೆ ರಾಜಕೀಯ ಧೃಡೀಕರಣ ಏನು ಆಗಬೇಕೆಂಬ ಬಗ್ಗೆ ನಾವು ಮಾತನಾಡೋಣ. ಆದರೆ ಕಾಂಗ್ರೆಸ್ ಅಧ್ಯಕ್ಷರಾದ ರಾಜೀವ್ ಗಾಂಧಿಯವರು ನಮ್ಮ ರಾಜ್ಯಕ್ಕೆ ಬರುವುದಕ್ಕೆ 15 ದಿವಸಗಳ ಹಿಂದೆ ಕಾಂಗ್ರೆಸ್ ಪಕ್ಷದ ಒಬ್ಬ ವರಿಷ್ಠರು ನಿಮ್ಮ ಸರ್ಕಾರದ ಬಗ್ಗೆ ಪತ್ರಿಕೆಗಳಲ್ಲಿ ಏನು ಹೇಳಿದರು, ಅದಾದನಂತರ ಈ ಕೋಮು ಗಲಭೆ ರಾಮನಗರ, ಚನ್ನಪಟ್ಟಣ, ತುಮಕೂರು, ದಾವಣಗೆರೆಗಳಲ್ಲಿ ಆಗುವುದಕ್ಕೆ ಕಾರಣ ಏನು? ಈ ಸರ್ಕಾರವನ್ನು ಕಿತ್ತುಹಾಕುವುದಕ್ಕೆ ದೆಹಲಿಯಲ್ಲಿ ಪಿತೂರಿ ನಡೆದಿದೆ. ಚನ್ನಪಟ್ಟಣದಲ್ಲಿ 17 ಜನರು ತಮ್ಮ ಪ್ರಾಣಗಳನ್ನು ಕಳೆದುಕೊಂಡಿದ್ದಾರೆ. ಕೋಟ್ಯಾಂತರ ರೂಪಾಯಿಗಳ ಆಸ್ತಿ ನಷ್ಟವಾಗಿದೆ. ಇದರ ಬಗ್ಗೆ ನಾವು ಯಾರೂ ಕೂಡಾ ಮಾತನಾಡಬಾರದೆ? ನಾವು ಯಾರು ಕೂಡ ಕೇಳಬಾರದೆ? ದಯವಿಟ್ಟು ಹೇಳಿ. ಇವತ್ತು ನನಗೆ ಬಂದಿರತಕ್ಕ ಸುದ್ದಿ ಏನೆಂದರೆ, ಇವತ್ತು ಕೆಲವು ಮುಖಂಡರು, ಈ ಸರ್ಕಾರದ ಬಗ್ಗೆ ಟೀಕೆಯನ್ನು ಮಾಡತಕ್ಕ ಜನರು ಈ ಕೋಮು ಗಲಭೆ ಆದಮೇಲೆ,

ರಾಜ್ಯಪಾಲರ ಆಡಳಿತ ಈ ರಾಜ್ಯದಲ್ಲಿ ಬಂದ ತಕ್ಷಣವೇ ಹೈಕೋರ್ಟಿನಲ್ಲಿ ಆಂಟಿಸಿಪೇಟರಿ ಬೇಲನ್ನು ತೆಗೆದುಕೊಂಡಿದ್ದಾರೆ. ಅವರು ಏತಕ್ಕೆ ಆಂಟಿಸಿಪೇಟರಿ ಬೇಲನ್ನು ತೆಗೆದುಕೊಂಡರು?

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಅಧ್ಯಕ್ಷಣಿಯವರೇ, ಒಂದು ವಿಚಾರವನ್ನು ಈ ಸಂದರ್ಭದಲ್ಲಿ ಭಾಷಣಕಾರರ ಗಮನಕ್ಕೆ ತಂದರೆ ಅದು ಅನುಚಿತವಲ್ಲವೆಂದು ಭಾವಿಸುತ್ತೇನೆ. ಅದು ಕೋಮು ಗಲಭೆಗೆ ಸಂಬಂಧಪಟ್ಟ ತೀರ್ಮಾನ. ಸದನದ ಕಾರ್ಯಕಲಾಪಗಳ ಸಮಿತಿಯಲ್ಲಿ ಒಂದು ತೀರ್ಮಾನವಾಗಿದೆ. ಮುಂದೆಯೂ ಕೂಡ ಆ ವಿಚಾರ ಒಂದು ನಿರ್ಣಯದ ರೀತಿಯಲ್ಲಿ ಬರುತ್ತಿದೆ. ಆ ವಿಶ್ವಾಸ ಮತವನ್ನು ಕೇಳತಕ್ಕಂಥ ನಿರ್ಣಯ ಮುಗಿದ ಮೇಲೆ ಈ ವಿಚಾರ ಬರುವುದಿದೆ. ತಾವು ಇರಲಿಲ್ಲ, ಆದ್ದರಿಂದ ತಮಗೆ ಗೊತ್ತಿಲ್ಲ ತಮಗೆ ಗೊತ್ತಿಲ್ಲದಿದ್ದರೆ ತಾವು ತಮ್ಮ ನಾಯಕರಿಂದ ತಿಳಿದುಕೊಳ್ಳುವುದು ಬಹಳ ಒಳ್ಳೆಯದು. ಏಕೆಂದರೆ, ಕೋಮು ಗಲಭೆ ವಿಚಾರದಲ್ಲಿ ಚರ್ಚೆ ಮಾಡುವುದಕ್ಕೆ ಸರ್ಕಾರ ಸಿದ್ಧವಿಲ್ಲವೆಂದಲ್ಲ. ಕೆಲವು ಬೇರೆ ಕಾರಣಗಳಿಂದ ತತ್‌ಕ್ಷಣ ಹೇಳಬಾರದೆನ್ನುವ ತೀರ್ಮಾನಕ್ಕೆ ಎಲ್ಲ ರಾಜಕೀಯ ಪಕ್ಷಗಳು ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿ ಸಭೆ ನಡೆದಾಗ ಒಪ್ಪಿಗೆ ಕೊಟ್ಟಿದೆ. ಆದ್ದರಿಂದ ಕೋಮು ಗಲಭೆಯ ವಿಚಾರದಲ್ಲಿ ಮುಂದೆ ನಾವು ಏನು ಮಾಡಬೇಕಾಗಿದೆ ಆ ಕಾರ್ಯಕ್ರಮವನ್ನು ಬಿಟ್ಟು ಬೇರೆ ಯಾವ ಚರ್ಚೆಯು ಈಗ ಬೇಡ. ಮುಂದೆ ಸಂದರ್ಭ ಬಂದಾಗ ನಾವು ಮಾತನಾಡಿ ಬೇಕಾದ ಸಲಹೆಗಳನ್ನು ಕೂಡ ಕೊಡತಕ್ಕಂಥ ಸಂದರ್ಭವಿದೆ. ಅದಕ್ಕೆ ವಿವರಗಳನ್ನೂ ನಾವು ಕೂಡ ಸರ್ಕಾರದ ಪತಿಯಿಂದ ಏನು ನಡೆಯಿತು ಎನ್ನುವುದನ್ನು ಹೇಳುತ್ತೇನೆ. ಚರ್ಚೆಯಾದ ಮೇಲೆ ಉತ್ತರವನ್ನು ಕೊಡಲಿಕ್ಕೆ ನಾನು ಸಿದ್ಧವಾಗಿದ್ದೇನೆ. ಈಗಲೂ ಕೂಡ ಸಿದ್ಧವಾಗಿದ್ದೇನೆ ಎನ್ನುವ ಮಾತನ್ನು ನಾನು ಹೇಳಿದ್ದೇನೆ. ಆದರೆ ಬೇರೆ ಕೆಲವು ಕಾರಣಗಳಿಂದ ಈಗ ಅದು ಬೇಡ ಎನ್ನತಕ್ಕಂಥ ದೃಷ್ಟಿಯಿಂದ ನಿಲ್ಲಿಸಲಾಗಿದೆ. ಆದ್ದರಿಂದ ದಯವಿಟ್ಟು ತಾವು ಅದನ್ನು ಇಲ್ಲಿಗೆ ನಿಲ್ಲಿಸಿ. ಸಾರ್ವಜನಿಕ ಹಿತದೃಷ್ಟಿಯಿಂದ ಬಹಳ ಒಳ್ಳೆಯದು ಎನ್ನತಕ್ಕಂಥ ವಿಚಾರವನ್ನು ಮಾತ್ರ ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ನಡೆದ ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್‌ನಲ್ಲಿ ನಾನು ಭಾಗವಹಿಸಲಿಕ್ಕೆ ಸಾಧ್ಯವಾಗಲಿಲ್ಲ. ಆದರೆ ಅಲ್ಲಿ ಆಗಿರತಕ್ಕಂಥ ತೀರ್ಮಾನಕ್ಕೆ ನಾನು ಬದ್ಧನಾಗಿರುತ್ತೇನೆ. ನಾನು ಅದರ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ. ಏತಕ್ಕೆಂದರೆ ನಾನು ಸಂಪೂರ್ಣವಾಗಿ ಅದರಲ್ಲಿ ನಂಬಿಕೆ ಇಟ್ಟುಕೊಂಡಿರುತ್ತೇನೆ. ಯಾವುದೇ ವರ್ಗದ ಜನಗಳನ್ನು ಎತ್ತಿಕಟ್ಟಿ ಅಥವಾ ಅವರನ್ನು ತುಳಿದು ನಮಗೆ ಶಕ್ತಿ ಇದೆ ಎಂದು ತೋರಿಸಿ ಅವರನ್ನು ತುಳಿತಕ್ಕೆ ಒಳಗು ಮಾಡಬೇಕೆಂದಿಲ್ಲ ಅಥವಾ ಕೋಮು ಗಲಭೆಗೆ ಮತ್ತಷ್ಟು ಬೆಂಕಿಪುಳ್ಳೆಯನ್ನು ಹಚ್ಚಬೇಕೆಂದು ನನಗಂತು ಇಲ್ಲ. ನಾನು ಸರ್ಕಾರ ದೊಟ್ಟಿಗೆ ಸಂಪೂರ್ಣವಾಗಿ ಸಹಾಯ ಮಾಡತಕ್ಕಂಥವನು. ಆದರೆ ಪ್ರಶ್ನೆ ಏನಿದೆ. ನಾನು ಅದರ ಬಗ್ಗೆ I am not going into the details who is responsible what it is ಎನ್ನುವ ಬಗ್ಗೆ ಹೇಳುವುದಿಲ್ಲ. ಸ್ವಲ್ಪ ಡಿಟೇಲ್ಸ್ ಹೇಳಬೇಕಾಗುತ್ತದೆ. ಅದನ್ನು ನಂತರ ತಿಳಿಸುತ್ತೇನೆ. ಇವತ್ತು ಮುಖ್ಯವಾಗಿ ಈ ರೀತಿಯ ಒಂದು ವಾತಾವರಣ ನಿರ್ಮಾಣವಾಗಿದ್ದು ಆ ನಿರ್ಮಾಣಕ್ಕೆ ನೀವು ಹೊಣೆಗಾರರಾಗಿದ್ದೀರಿ. ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾದ ಮಾನ್ಯ ರಾಜೀವ್‌ಗಾಂಧಿಯವರು ಚನ್ನಪಟ್ಟಣ ಮತ್ತು ರಾಮನಗರಕ್ಕೆ ಹೋಗಲಿಕ್ಕೆ ಮುಂಚೆ ಮಾನ್ಯ ಪುಟ್ಟಸ್ವಾಮಿ ಗೌಡರು ಏತಕ್ಕೆ ಹೋಗಲಿಲ್ಲ. ನೀವು ಏತಕ್ಕೆ ಹೋಗಲಿಲ್ಲ? ಹಾಗಾದರೆ ಮುಖ್ಯಮಂತ್ರಿಗಳೊಬ್ಬರದೇ ಜವಾಬ್ದಾರಿಯೇ? ಸಚಿವ ಸಂಪುಟದಲ್ಲಿ ತಾವು ಅನೇಕ ದಿವಸಗಳ ಕಾಲ ಬರದೆಹೋದರೆ ನಿಮ್ಮ ಸಹೋದ್ಯೋಗಿಗಳ ಪರವಾಗಿ ಡಿಫೈನ್ ಮಾಡಿಕೊಳ್ಳುವುದಿಲ್ಲವೇ? ತಾವು ಸಚಿವ ಸಂಪುಟದಲ್ಲಿ ಇದ್ದವರು, ಆಗ ಮಾನ್ಯ ರಾಜೀವ್‌ಗಾಂಧಿಯವರು ಏನು ಹೇಳಿಕೆಯನ್ನು ಕೊಟ್ಟರು ಅದನ್ನು ಹೇಳಿ.

ಶ್ರೀ ಕೆ.ಹೆಚ್. ಪಾಟೀಲ್:- ನಾವು ಹೋಗಿನೋಡಿ, ರಿಪೋರ್ಟನ್ನು ಒಂದು ದಿವಸ ಮುಂಚೆಯೇ ಸಬ್‌ಮಿಟ್ ಮಾಡಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ರಾಜೀವ್‌ಗಾಂಧಿಯವರಿಗೆ ತಾವು ರಿಪೋರ್ಟ್‌ನ್ನು ಸಬ್‌ಮಿಟ್ ಮಾಡಿದ್ದೀರಿ. ಅವರನ್ನು ಕರೆಸಿಕೊಂಡಿದ್ದೀರಿ, ಅದೆಲ್ಲ ಒಳ್ಳೆಯದನ್ನೇ ಮಾಡಿದ್ದೀರಿ. ಆ ಅಂಶವನ್ನು ಇವತ್ತು ಇಲ್ಲಿ ಹೇಳಲಿಕ್ಕೆ ಹೊರಟಿರತಕ್ಕಂಥಾದ್ದು, ಇವತ್ತು ಆ ಪರಿಸ್ಥಿತಿ ಇಲ್ಲಿ ಉದ್ಭವವಾಗಬೇಕಾದರೆ ತಾವೆಲ್ಲರೂ ಸಹಭಾಗಿಗಳಾಗಿದ್ದೀರಿ. ನಾನು ಆರು ವರ್ಷಗಳ ಕಾಲ ಒಂದು ಮಂತ್ರಿಮಂಡಲದಲ್ಲಿ ಕೆಲಸ ಮಾಡಿ ಆ ಸರ್ಕಾರ ಮಾಡಿದಂಥ ಎಲ್ಲ ತಪ್ಪು ಸರಿಗಳಿಗೆ ನಾನು ಹೊಣೆಗಾರನಾಗಿರುತ್ತೇನೆ. ಇದು ನನ್ನ ಜವಾಬ್ದಾರಿ ಅಲ್ಲ ಎನ್ನುವುದು ನಿಮ್ಮ ಒಂದು ನೈತಿಕ ಜವಾಬ್ದಾರಿ ಏನು ಇದೆ ಆದರಿಂದ ತಪ್ಪಿಸಿಕೊಳ್ಳತಕ್ಕಂಥ ಮಾತಾಗುತ್ತದೆ ಎನ್ನುವುದು ಒಂದು. ಎರಡನೆಯದು ನಿಜ, ನಿಮ್ಮ ಶಾಸಕಾಂಗ ಪಕ್ಷದ ನಾಯಕತ್ವವನ್ನು ಬದಲಾವಣೆ ಮಾಡತಕ್ಕಂಥದ್ದು ನಿಮ್ಮ ಹಕ್ಕು. ಆವತ್ತು ನಾವು ನಮ್ಮ ನಾಯಕರು ಮಾನ್ಯ ರಾಜ್ಯಪಾಲರನ್ನು ಭೇಟಿಮಾಡಿದ್ದೆವು. ಅಸೆಂಬ್ಲಿ ವಿಚಾರದಲ್ಲಿ ನಾವು ಏನು ಹೇಳಲಿಲ್ಲ. ಅದಕ್ಕೋಸ್ಕರ ನಾನು ಈ ಮಾತನ್ನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ರಾಜ್ಯಪಾಲರಿಗೆ ನಾವು ಏನು ಹೇಳಿದೆವು ಎಂದರೆ, ರಾಜ್ಯದಲ್ಲಿ ಕಾನೂನು ಪರಿಸ್ಥಿತಿ ಬಹಳ ಹದಗೆಟ್ಟಿದೆ, ಮುಖ್ಯ ಮಂತ್ರಿಗಳ ಆರೋಗ್ಯ ಚೆನ್ನಾಗಿಲ್ಲ ಎಂದು ನಾವು ತಿಳಿದುಕೊಂಡಿದ್ದೇವೆ. ಆ ದೃಷ್ಟಿಯಿಂದ ರಾಜ್ಯ ಸರ್ಕಾರ ಸಂವಿಧಾನಾತ್ಮಕವಾಗಿ ಕೆಲಸ ಮಾಡಬೇಕಾದರೆ ಸಂವಿಧಾನದ ಮೌಲ್ಯಗಳನ್ನು ಎತ್ತಿ ಹಿಡಿಯತಕ್ಕ ಜವಾಬ್ದಾರಿ ತಮ್ಮದಾಗಿರುವುದರಿಂದ ಅದನ್ನು ಮಾಡಬೇಕೆಂದು ಬರೆದುಕೊಟ್ಟಿದ್ದೇವೆ. ನೀವು ಏನು ಬೇಕಾದರೂ ಬೀದಿಯಲ್ಲಿ ಹೇಳಬಹುದು. ಆದರೆ ನಾವು ಬರೆದುಕೊಟ್ಟಿರುವುದನ್ನು ತಿಳಿದುಕೊಳ್ಳಬಹುದು. ಅದಾದನಂತರ ಕೆಲವು ಈವೆಂಟ್ಸ್ ಆಗಿವೆ. ಮಾನ್ಯ ರಾಜ್ಯಪಾಲರಿಗೆ ಕೊಟ್ಟಿರುವ ಮನವಿಯ ಪ್ರತಿ ನಮ್ಮ ಕಡೆ ಇದೆ. ಇದನ್ನು ಬೇಕಾದರೆ ಸದನದ ಮುಂದೆ ಇಡುತ್ತೇನೆ. ಅದಾದನಂತರ ಮಾನ್ಯ ರಾಮಕೃಷ್ಣ ಹೆಗಡೆಯವರು ಪತ್ರಿಕಾ ಹೇಳಿಕೆ ಕೊಟ್ಟು ಅಸೆಂಬ್ಲಿಯನ್ನು ಡಿಸಾಲ್ವ್ ಮಾಡಬೇಕೆಂದು ಹೇಳಿದ್ದಾರೆ. ಪ್ರೊ: ನಂಜುಂಡಸ್ವಾಮಿಯವರು ಕೂಡ ಹೇಳಿದ್ದಾರೆ. ಅಸೆಂಬ್ಲಿ ಡಿಸಾಲ್ವ್ ಆಗುತ್ತದೆಂಬ ಭಯದಿಂದಲೇ ಮಾನ್ಯ ಬಂಗಾರಪ್ಪನವರು ಮುಖ್ಯ ಮಂತ್ರಿಗಳಾಗಿರುವುದು.

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯ:- ನೀವು ಹಾಗೆ ಅಂದರೆ ಏನಾಯಿತು? ನಿಮಗೆ ಮಾನ ಮರ್ಯಾದೆ ಇದೆಯೆ? ನಿಮಗೆ ಎಲ್ಲಿದೆ ಮಾನ ಮರ್ಯಾದೆ?

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ:- ಅವರು ಗವರ್ನರ್‌ರವರ ಹತ್ತಿರ ಹೋಗಿ ನಾವು ಅಸೆಂಬ್ಲಿ ಡಿಸಾಲ್ವ್ ಮಾಡಿ ಎಂದು ಹೇಳಲಿಲ್ಲವೆಂದು ಹೇಳಿಕೆ ಕೊಟ್ಟಿದ್ದಾರೆ. 9ನೇ ತಾರೀಖು ಮಾನ್ಯ ದೇಶಪಾಂಡೆಯವರು, ಜೀವರಾಜ ಆಳ್ವ ಅವರು, ಸಿದ್ದರಾಮಯ್ಯನವರು ಕೂಡಿ ಅಸೆಂಬ್ಲಿಯನ್ನು ಡಿಸಾಲ್ವ್ ಮಾಡಿ ಎಂದು ಸಹಿ ಮಾಡಿಕೊಟ್ಟಿರುವ ದಾಖಲೆ ನಮ್ಮ ಕಡೆ ಇದೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅದು ಪತ್ರಿಕಾ ವರದಿ. I am sorry, I have not said it.

ಒಬ್ಬ ಮಾನ್ಯ ಸದಸ್ಯರು:- ಸಿಂಧ್ಯ ಅವರು ಇಷ್ಟೊಂದು ಸುಳ್ಳು ಹೇಳಬಾರದು.

SRI M. VEERAPPA MOILY:- You are a signatory.

ಶ್ರೀ ಡಿ.ಬಿ. ಚಂದ್ರೇಗೌಡ:- ಏಕೆ ಹೀಗೆ ಕೂಗಿದರು ಎಂದು ತಿಳಿಯಿತೆ?

ಶ್ರೀ ವಾಟಾಳ್ ನಾಗರಾಜ್:- ಇತ್ತೀಚಿನ ವರ್ಷಗಳಲ್ಲಿ ಈ ರೀತಿ ಕೂಗಿದ್ದು ಎಂದೂ ಕೇಳಿರಲಿಲ್ಲ. ಬಹಳ ಜೋರಾಗಿ ಕೂಗುತ್ತಿದ್ದಾರೆ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಸಿಂಧ್ಯರವರು ಮಾತನಾಡತಕ್ಕ ಸಂದರ್ಭದಲ್ಲಿ ನಮ್ಮ ಕಡೆ ಸದಸ್ಯರಿಗೆ ಉತ್ತರಿಸುತ್ತಾ ನಿಮಗೆ ಮಾನ ಮರ್ಯಾದೆ ಇದೆಯೇ ಎಂದು ಕೇಳಿದರು. ಅವರು ಬಹಳ ಮಾತನಾಡುತ್ತಿದ್ದಾರೆ. ನಮ್ಮನ್ನು ಕುರಿತು ಮಾನ ಮರ್ಯಾದೆ ಇದೆಯೇ ಎಂದೂ ಕೇಳುವುದಕ್ಕೆ ಇವರು ಯಾರು? ದಯವಿಟ್ಟು ಆ ಮಾತನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಯಾವ ಸ್ಥಿತಿಯಲ್ಲಿ ಇವರು ನಾಯಕತ್ವವನ್ನು ಬದಲಾವಣೆ ಮಾಡಿದ್ದು? ಅದು ಅವರ ಆಂತರಿಕ ವಿಷಯ ಇರಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ:- ತಾವು ಪತ್ರಿಕೆ ಓದಿದಿರಿ, ತಮ್ಮ ಕಡೆ ಸದಸ್ಯರು ಹರ್ಷೋದ್ಗಾರ ಮಾಡಿದರು. ಅಗತ್ಯ ಬಿತ್ತು ಎಂದರೆ, ನಾವು ಮಾನ್ಯ ರಾಜ್ಯಪಾಲರಿಗೆ ಏನು ಬರೆದಿದ್ದೇವೆ ಎಂಬುದನ್ನು ತಮ್ಮ ಮುಂದಿಡುತ್ತೇವೆ. To put the records straight. Shall I quote, whatever we have submitted to the Constitutional Head? We have told him 'you take action according to the provisions of the law'. In accordance with the provisions of the law you take action. ನೀವು ಕ್ರಮ ತೆಗೆದುಕೊಳ್ಳಿ ಎಂದು ಸಹ ಹೇಳಿದ್ದೇವೆ. ಇಲ್ಲಿ ಪ್ರಶ್ನೆ ಏನೆಂದರೆ, ರಾಜೀನಾಮೆ ಕೇಳಿಲ್ಲ, ಕೇಳಿದ್ದರೆ ಅಪರಾಧ ಏನೂ ಅಲ್ಲ. ರಾಜೀನಾಮೆ ಕೇಳುವುದು ನಮ್ಮ ಹಕ್ಕು.

ಶ್ರೀ ಎಂ. ವೀರಪ್ಪ ಮೊಯಿಲಿ:- ಆ ಪ್ರಾಮಾಣಿಕತೆ ಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ:- ರಾಜೀನಾಮೆ ಕೇಳುವುದಕ್ಕೆ ನಮಗೇನು ಭಯವೆ?

SRI P.G..R. SINDHIA:- We have not signed. What is that?

ಶ್ರೀ ಎಂ. ವೀರಪ್ಪ ಮೊಯ್ಲಿ:- ಆ ಪ್ರಾಮಾಣಿಕತೆ ಇದ್ದರೆ ನಾವು ಯಾರೂ ಪ್ರಶ್ನೆ ಮಾಡುವುದಿಲ್ಲ. ಆದರೆ ತಾವು ಕೇಳಿಲ್ಲ ಎಂದು ಹೇಳಿದಿರಿ. 9ನೇ ತಾರೀಖು ತಮ್ಮ ಅಧ್ಯಕ್ಷರಾದ ಸನ್ಮಾನ್ಯ ಜೆ.ಹೆಚ್. ಪಟೇಲರು ಹೇಳಿಕೆ ಕೊಟ್ಟಿದ್ದಾರೆ. ಜೆ.ಹೆಚ್. ಪಟೇಲರಿಗೆ ಅಂತಹ ಹೇಳಿಕೆ ಕೊಡುವುದಕ್ಕೆ ತಾವು ಅಧಿಕಾರ ಕೊಟ್ಟಿಲ್ಲ ಎಂದರೆ ಆ ವಿಷಯ ಬೇರೆ. ನಿಮ್ಮ ಒಳಗೇ ಏನಾದರೂ ವಿಚಾರ ಭೇದ ಇದ್ದರೆ ಅದನ್ನು ನಾವು ಪ್ರಶ್ನೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಸನ್ಮಾನ್ಯ ಜೆ.ಹೆಚ್. ಪಟೇಲರು ಹೇಳಿಕೆ ಕೊಟ್ಟಿದ್ದಾರೆ, ಅದರಲ್ಲಿ ತಮ್ಮ ಹೆಸರು ಕೂಡಾ ಬಂದಿದೆ. ಆ ಪತ್ರಿಕಾ ಹೇಳಿಕೆಯನ್ನು ಬರವಣಿಗೆಯಲ್ಲಿ ಕೊಟ್ಟಿದ್ದಾರೋ, ಒರಲ್ ಕೊಟ್ಟಿದ್ದಾರೊ ಅಥವಾ ಮೆಮೊರ್‍ಯಾಂಡಮ್ ರೂಪದಲ್ಲಿ ಕೊಟ್ಟಿದ್ದಾರೋ ಅದು ನಮಗೆ ಗೊತ್ತಿಲ್ಲ. ಆದರೆ ಒಟ್ಟು ಸಾರಾಂಶ ಎಂದರೆ, ಜೆ.ಹೆಚ್.ಪಟೇಲರ ನೇತೃತ್ವದಲ್ಲಿ, ಸಿಂಧ್ಯಾ ಅವರೂ ಕೂಡಾ ರಾಜ್ಯಪಾಲರನ್ನು ಭೇಟಿಯಾಗಿ ವಿಧಾನಸಭೆ ವಿಸರ್ಜಿಸಬೇಕೆಂದು ಹೇಳಿರುವುದು ಪತ್ರಿಕೆಗಳಲ್ಲಿ ಬಂದಿದೆ. ಆ ಹೇಳಿಕೆಗೆ ತಾವು ಬದ್ಧರಲ್ಲ ಎಂದು ಹೇಳುವುದಾದರೆ ಹೇಳಿ. ಅದಕ್ಕೆ ನಮ್ಮ ಆಕ್ಷೇಪಣೆ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ಪ್ರತೀ ಸಲ ತಾವು ಇಂತಹ ವ್ಯಾಖ್ಯಾನ ಮಾಡುತ್ತಾ ಬಂದಿದ್ದೀರಿ. ನಿಮ್ಮ ರಾಜೀನಾಮೆ ಕೇಳುವುದಕ್ಕೆ ನಮಗೆ ಹೆದರಿಕೆಯೇ? ನಾವು ನಿಮ್ಮ ಆಶ್ರಯದಲ್ಲಿದ್ದೇವೆಯೇ? ರಾಜೀನಾಮೆ ಕೇಳುವುದು ನಮ್ಮ ಹಕ್ಕು. ಅದನ್ನು ನಾವು ಕೇಳಿದ್ದೇವೆ. ಆದರೆ ಪ್ರಶ್ನೆ ಏನೆಂದರೆ, ಇವರು ರಾಜ್ಯಪಾಲರಿಗೆ ಬರೆದಿರತಕ್ಕ ಪತ್ರದಲ್ಲಿ ಅದು ಇಲ್ಲ ಎಂದು ಹೇಳಿದರು. ಇದನ್ನು ಏಕೆ ಹೇಳಬಾರದು?

ಶ್ರೀ ಎಂ. ವೀರಪ್ಪ ಮೊಯಿಲಿ:- ಒಂದು ಕಡೆ ವೀರೇಂದ್ರ ಪಾಟೀಲರನ್ನು ಮುಖ್ಯಮಂತ್ರಿ ಸ್ಥಾನದಿಂದ ತೆಗೆಯಬೇಡಿ ಎಂದು ಹೇಳುವುದು. ಮತ್ತೊಂದು ಕಡೆ ವಿಧಾನಸಭೆಯನ್ನು ವಿಸರ್ಜನೆ ಮಾಡಿ ಎಂದು ಹೇಳುವುದು. ಈ ದ್ವಂದ್ವ ತಮಗೆ ಏಕೆ ಬಂತು? ಡಿಕ್ಷನರಿಯಲ್ಲಿ ಈ ಪ್ರಾಮಾಣಿಕತೆಗೆ ಏನು ವ್ಯಾಖ್ಯಾನ ಎಂದು ನನಗೆ ಅರ್ಥವಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಈ ಶಬ್ದಕೋಶದಲ್ಲಿ ಪ್ರಾಮಾಣಿಕತೆ ಎಂದರೆ ವೀರಪ್ಪ ಮೊಯಿಲಿ ಎಂದು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಉಪಾಧ್ಯಕ್ಷಿಣಿಯವರೇ, ನಾನು ಏನು ಹೇಳಿದ್ದು ಎಂದರೆ, ಈಗ ವಿಸರ್ಜನೆ ಬಗ್ಗೆ ಕೇಳಿಲ್ಲ ಎಂದರೆ ತಪ್ಪಾಗುತ್ತದೆ. ಮಾನ್ಯ ಹೆಗಡೆಯವರು ಪತ್ರಿಕಾ ಹೇಳಿಕೆ ಕೊಟ್ಟಿಲ್ಲವೇ? ನಮ್ಮ ನಾಯಕರು ಅವರು. ನಮ್ಮ ಪಾರ್ಟಿ ಅಧ್ಯಕ್ಷರೂ ಹೇಳಿದ್ದಾರೆ. ವಿರೋಧ ಪಕ್ಷದ ನಾಯಕರೂ ಹೇಳಿದ್ದಾರೆ. ನಾವು ಅಪ್ರಮಾಣಿಕರು ಎನ್ನುವ ಭಾವನೆ, ಇವರು ಮಾಡಿದ್ದನ್ನೆಲ್ಲಾ ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆನ್ನುವ ಭಾವನೆ ಸದನದಲ್ಲಿ ಯಾರಿಗೂ ಬರುವುದು ಬೇಡ, ಪತ್ರಿಕೆಗಳವರಿದ್ದಾರೆ. ಅವರಿಗೂ ಆ ಭಾವನೆ ಬರತಕ್ಕದ್ದು ಅಗತ್ಯ ಇಲ್ಲ. ಹೌದು, ನಾವು ಮುಖ್ಯಮಂತ್ರಿಗಳು ರಾಜೀನಾಮೆ ಕೊಡಬೇಕೆಂದು ಹೇಳಿದ್ದೇವೆ. ಅಸೆಂಬ್ಲಿ ಡಿಸಾಲ್ವ್ ಆಗಬೇಕೆಂದೂ ಹೇಳಿದ್ದೇವೆ. ಯಾವ ಸಂದರ್ಭದಲ್ಲಿ?

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ:- ಅವರು ವಿಧಾನಸಭೆ ವಿಸರ್ಜನೆ ಮಾಡಿ ಎಂದು ಹೇಳಿದ್ದಾರೆ, ವೀರೇಂದ್ರ ಪಾಟೀಲರ ರಾಜೀನಾಮೆಯನ್ನು ಕೇಳಿದ್ದಾರೆ. ಇಂತಹ ಒಂದು ತಿಕ್ಕಾಟ ಬಂದಾಗ ಬೆಡ್ ರೂಮ್‌ನಲ್ಲಿ ಕುಳಿತುಕೊಂಡು ಸರ್ಕಾರ ರಚನೆ ಮಾಡಿ ಎಂದು ಕೂಡಾ ಹೇಳಿದ್ದಾರೆ. ಅದು ಬೇಡ ಎಂದು ನಾವು ಹೇಳಿದ್ದು.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:- ಇವತ್ತೂ ಕೂಡಾ ನಾವು ಮಾಡುತ್ತೇವೆ. ಬಂಗಾರಪ್ಪನವರು ನಮ್ಮ ಕಡೆ ಇದ್ದರು. ಅವರಿಗೂ ನಾವು ಸಪೋರ್ಟ್ ಮಾಡಿದ್ದೇವೆ. ನಾಳೆ ವೀರಪ್ಪ ಮೊಯಿಲಿಯವರು ಬಂದರು ಅವರಿಗೂ ಕೂಡಾ ನಾವು ಸಪೋರ್ಟ್ ಮಾಡುತ್ತೇವೆ. ರಾಮ ಜನ್ಮಭೂಮಿ ವಿಷಯದಲ್ಲೂ ಕೂಡಾ..

ಶ್ರೀ ಅಜೀಜ್ ಸೇಟ್:- ಒಂದು ಕಡೆ ಡಿಸಾಲ್ವ್, ಒಂದು ಕಡೆ ರಾಜೀನಾಮೆ, ಒಂದು ಕಡೆ ವೀರೇಂದ್ರ ಪಾಟೀಲರಿಗೆ ಸಪೋರ್ಟ್ ಮಾಡುತ್ತೇವೆ ಎಂದು ಹೇಳಿದರು. ಮೂರು ಪದಗಳನ್ನು, ಮೂರು ಭಾಷೆಯಲ್ಲಿ, ಮೂರು ದಾರಿಯಲ್ಲಿ ಹೇಳಿದ್ದೀರಿ. ನಿಮಗೆ ಏನಾದರೂ ಇದೆಯೇ ಮಾನ ಮರ್ಯಾದೆ? ನಿಮಗೆ ಏನಾದರು ಮಾನ ಮರ್ಯಾದಿ ಇದೆಯೇ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನನ್ನದೊಂದು ಕ್ರಿಯಾಲೋಪ ಇದೆ. ಮಾನ್ಯ ಸಿಂಧ್ಯಾ ಅವರಿಗೆ ಮಾನ ಮರ್ಯಾದಿ ಇದೆಯೇ ಎಂದು ಮಂತ್ರಿಗಳು ಕೇಳಿದರು. ಹೀಗೆ ಅವರು ಹೇಳಬಹುದೇ? ಯಾರಿಗೆ ಇಲ್ಲಿ ಮಾನ ಮರ್ಯಾದಿ ಇದೆ ಎಂದು ಇಲ್ಲಿ ತೀರ್ಮಾನ ಮಾಡೋಣವೇ? ಇಲ್ಲಿ ಬಾಯಿಗೆ ಬಂದಹಾಗೆ ಮಾತನಾಡಬಹುದೇ?

ಶ್ರಿ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಅಜೀಜ್ ಸೇಟ್ ಅವರು ನನ್ನ ಬಗ್ಗೆ ಒಂದು ಅಭಿಮಾನದಿಂದ ಆ ಮಾತನ್ನು ಹೇಳಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ಹೌದೇ?

ಶ್ರೀ ವಾಟಾಳ್ ನಾಗರಾಜ್:- ಇಬ್ಬರಿಗೂ ಮಾನ ಮರ್ಯಾದೆ ಇಲ್ಲ ಬಿಡಿ.

ಶ್ರಿ ಪಿ.ಜಿ.ಆರ್. ಸಿಂಧ್ಯ:- ಅಜೀಜ್ ಸೇಠ್ ಅವರು ಅಭಿಮಾನದಿಂದ, ಅವರ ಮನೆ ಮಗ ಎನ್ನುವ ದೃಷ್ಟಿಯಿಂದ ಹೇಳಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ಮಾನ ಮರ್ಯಾದೆ ಪಕ್ಷಾಂತರಿಗಳಿಗೆ ಇದೆಯೋ ಅಥವಾ ಬೇರೆಯವರಿಗೆ ಇದೆಯೋ ಎನ್ನುವುದನ್ನು ಇಡೀ ದೇಶದ ಜನರು ತೀರ್ಮಾನ ಮಾಡುತ್ತಾರೆ. ಏಕೆಂದರೆ, ನಾನು ಒಂದೇ ಪಕ್ಷದಲ್ಲಿ ಇದ್ದೇನೆ. ಸೋಶಿಯಲಿಸ್ಟ್ ಪಾರ್ಟಿಯಿಂದ ಹಿಡಿದು ಇಲ್ಲಿಯವರೆಗೆ ಅವರಿಗೆ ನಾಲ್ಕು ಪಕ್ಷಗಳು ಆಗಿವೆ. ಆದ್ದರಿಂದ ಈಗ ಅವೆಲ್ಲ ಬೇಡ.

ಶ್ರೀ ಅಜೀಜ್ ಸೇಠ್:- ಇವರಹಾಗೆ ಅಜೀಜ್ ಸೇಠ್ ಯಾವುದೇ ಒಂದು ಹಗ್ಗ ಹಿಡಕೊಂಡು ಹೋದವನಲ್ಲ. ಜನರು ವಿಶ್ವಾಸ, ಪ್ರೀತಿಯಿಂದ ಅಜೀಜ್ ಸೇಟ್‌ಗೆ ಓಟು ಕೊಟ್ಟಿದ್ದಾರೆಯೇ ವಿನಃ ನಿಮ್ಮ ಹಾಗೆ ಒಬ್ಬರ ಕೈ ಹಿಡಿದುಕೊಂಡು ಹೋಗುತ್ತಾ ಇಲ್ಲ.

ಶ್ರಿ ಪಿ.ಜಿ.ಆರ್. ಸಿಂಧ್ಯ:- ನೀವು ಯಾರ ಕೈಯ್ಯನ್ನು ಹಿಡಕೊಂಡು ಹೋಗುತ್ತಿದ್ದೇನೆಂದಿರಲ್ಲ ಅವರಿಗೆ ಮಣ್ಣು ಮುಕ್ಕಿಸಿ ನಾನು ಗೆದ್ದು ಬಂದಿದ್ದೇನೆ. ಏನ್ರಿ ಯಾರ ಆಶ್ರಯದಲ್ಲಿ ಹೋಗಿದ್ದೇನೆ ನಾನು? ಯಾವ್ದೋನು ಹೇಳುತ್ತಿದ್ದ ಅವನನ್ನು ಸೋಲಿಸಿ ಬಂದಿದ್ದೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಅಜೀಜ್ ಸೇಠ್ ಅವರು "ಮಂತ್ರಿಗಳ ಪಕ್ಷ" ಅವರು ಯಾವಾಗಲು ಮಂತ್ರಿ ಆಗುವ ಪಕ್ಷವೇ.

ಉಪಾಧ್ಯಕ್ಷರು:- ಸಿಂಧ್ಯ ಅವರೇ ತಮ್ಮ ಭಾಷಣ ಮುಂದುವರಿಸಿ.

ಶ್ರಿ ಪಿ.ಜಿ.ಆರ್. ಸಿಂಧ್ಯ:- ಮುಖ್ಯಮಂತ್ರಿಗಳಾದ ಬಂಗಾರಪ್ಪನವರು ತಮ್ಮ ಸೌಜನ್ಯತೆಯನ್ನು ತೋರಿದ್ದಾರೆ. ವೀರೇಂದ್ರಪಾಟೀಲರನ್ನು ಭೇಟಿಯಾಗಿ ಆರೋಗ್ಯವನ್ನು ವಿಚಾರಿಸಿ, ಸರ್ಕಾರಿ ಬಂಗಲೆಯಲ್ಲೇ ಇರಿ, ತಮ್ಮ ಔಷಧೋಪಚಾರದ ಖರ್ಚನ್ನು ನಾವು ಭರಿಸುತ್ತೇವೆಂದು ಹೇಳಿದ್ದಾರೆ. ಕಾಲಗರ್ಭದಲ್ಲಿ ಏನೇನು ಅಡಕವಾಗಿರುತ್ತದೆ ಎನ್ನುವುದನ್ನು ಇವತ್ತು ಹೇಳುವುದಕ್ಕಾಗುವುದಿಲ್ಲ. ವೀರೇಂದ್ರಪಾಟೀಲರನ್ನು ನಾನಾಗಲೀ, ಆಳ್ವಾರವರಾಗಲೀ ಭೇಟಿ ಮಾಡಿದರೆ ಅದಕ್ಕೆ ಬೇರೆ ಅರ್ಥ ಬರುತ್ತದೆ. ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಕಾಲಗರ್ಭದಲ್ಲಿ ವೀರೇಂದ್ರ ಪಾಟೀಲರು ಏನು ಹೇಳುತ್ತಾರೆಂದು ಈ ರಾಜ್ಯದ ಜನತೆ ಕಾಯುತ್ತಿದೆ. ಅವರು ಈ ಮನೆಯ ಸದಸ್ಯರಾಗಿದ್ದು ಅವರು ಏನು ಹೇಳಬೇಕೆಂಬುದನ್ನು ಅವರು ಇಲ್ಲಿ ಹೇಳುತ್ತಾರೆ. ರಾಜ್ಯದ ಕನ್ನಡಿಗರಿಗೆ ಇವತ್ತು ಆಗಿರತಕ್ಕ, ಅವರ ಸ್ವಾಭಿಮಾನಕ್ಕೆ ಆಗಿರತಕ್ಕ ಅವಮಾನದ ಬಗ್ಗೆ ನಾವು ಇಲ್ಲಿ ವಿಚಾರ ಮಾಡಬೇಕಾಗಿದೆ. ಕಾಂಗ್ರೆಸ್ ಪಕ್ಷದವರು ತಾವು ಹೇಳಿ. ಬಂಗಾರಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾರೆ. ನಾಳೆ ದಿವಸ 24 ಗಂಟೆಯಲ್ಲಿ ಮುಖ್ಯಮಂತ್ರಿಗಳ ಸ್ಥಾನಕ್ಕೆ ರಾಜೀನಾಮೆ ಕೊಡಿ ಎಂದರೆ, ಮುಖ್ಯಮಂತ್ರಿ ಸ್ಥಾನಕ್ಕೆ ಗೌರವ ಇಲ್ಲವೇ? ಮುಖ್ಯಮಂತ್ರಿಗಳು ಎಂದರೆ ಒಂದು ಪಕ್ಷದ ಸೊತ್ತಾ? ಇದು ಇಡೀ ರಾಜ್ಯದ ಜನತೆಗೆ ಆಗಿರತಕ್ಕ ಅವಮಾನ ಎಂದು ಹೇಳುತ್ತೇನೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:- ದೇವೀಲಾಲರನ್ನು ಏನು ಮಾಡಿದಿರಿ?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:- ಚೌತಾಲಾ ಅವರ ರಾಜೀನಾಮೆ ಏಕೆ ಕೇಳಿದಿರಿ?

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅದು ಆಯಿತು. ಇದು ಹೇಳಿದರೆ ಅವರಿಗೆ ಸಿಟ್ಟು ಬರುತ್ತದೆ. ಈಗ ಮುಖ್ಯ ಮಂತ್ರಿಗಳೇ ಒಂದು ವಿಷಯ ಹೇಳಿದರು. ಮಾನ್ಯ ಬಸವಲಿಂಗಪ್ಪನವರು ಹೇಳಿದರು ಎಂದು ಕಾಣುತ್ತದೆ. ವೀರೇಂದ್ರ ಪಾಟೀಲರೂ ಇನ್ನು ಕಾಂಗ್ರೆಸ್ ಪಕ್ಷದಲ್ಲೇ ಇದ್ದಾರೆಂದು ಹೇಳಿದರು. ಅವರನ್ನು ಕಾಂಗ್ರೆಸ್ ಪಕ್ಷದಿಂದ ಸಸ್ಪೆಂಡ್ ಮಾಡಿದ್ದಾರೆ. ಯಾವ ಕಾರಣಕ್ಕೆ ಸಸ್ಪೆಂಡ್ ಮಾಡಿದ್ದಾರೆ? ಇದನ್ನೆಲ್ಲ ತಿಳಿದುಕೊಳ್ಳುವುದು ಬೇಡವೆ?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:- ಅದನ್ನು ಕೇಳುವುದಕ್ಕೆ ನೀವ್ಯಾರು? It is none of your business.

ಶ್ರಿ ಕೆ.ಹೆಚ್. ಪಾಟೀಲ್:- ನಮ್ಮ ಶಾಸಕಾಂಗದ ಕಾನ್‌ಸ್ಟಿಟ್ಯೂಷನ್ ನನಗೆ ಗೊತ್ತಿದೆ. ಯಾವುದೇ ವೇಳೆಯಲ್ಲಿ ಶಾಸಕ ಪಕ್ಷದ ನಾಯಕರಿಗೆ ತನ್ನ ಸ್ಥಾನ ತೆರವು ಮಾಡಬೇಕೆಂದು ಹೈಕಮಾಂಡ್ ಸೂಚನೆ ಕೊಟ್ಟಾಗ ಅದನ್ನು ಬಿಡಬೇಕಾಗುತ್ತದೆ. ಅದರ ಪ್ರಕಾರ ಅವರು ಹೇಳಿ ಹೋದರು. ಆ ನಂತರ ನನಗೂ ಹೇಳಿ ಕಳುಹಿಸಿದರು. ನಾನು ಈ ಬಗ್ಗೆ ವೀರೇಂದ್ರಪಾಟೀಲರಿಗೆ ಹೇಳಿದ್ದೇನೆ. 10ನೇ ತಾರೀಖು ಮೀಟಿಂಗ್ ಇದೆ, ತಾವು ಮೀಟಿಂಗ್ ಮಾಡಿ ಎಂದು ಹೇಳಿದರು. ಆ ನಂತರ ಈ ಬಗ್ಗೆ ವೀರೇಂದ್ರ ಪಾಟೀಲರಿಗೆ ಹೇಳಿದಾಗ ನನಗೆ ಅವರು ಏನೂ ಹೇಳಿಲ್ಲ ಎಂದು ಹೇಳಿದರು. ಅವರು ನನ್ನಿಂದ ಹೇಳಿಕಳಿಸಿದ್ದಾರೆ, ತಾವು ನಾಯಕತ್ವ ಬಿಡುವುದು ಒಳ್ಳೆಯದು ಎಂದು ನಾನು ಹೇಳಿದೆ. ಆ ನಂತರ ಅವರಿಗೆ ಬೇಕಾದ ಕೆಲವರ ಮೂಲಕ ಹೇಳಿಸಲಾಯಿತು. ಆದರೂ ಅವರು ಕೇಳಲಿಲ್ಲ. ಅದಾದಮೇಲೆ ಪಕ್ಷದ ಸಭೆಯಲ್ಲಿ ಅವರ ಮೇಲೆ ಅವಿಶ್ವಾಸ ನಿರ್ಣಯ ತಂದು ತೆಗೆದದ್ದಾಯಿತು. ಇದರಲ್ಲಿ ಏನು ತಪ್ಪು ಇದೆ? ಆದರೆ ವೀರೇಂದ್ರ ಪಾಟೀಲರು ಇವತ್ತಿಗೂ ಸಹಿತ ಕಾಂಗ್ರೆಸ್‌ನಲ್ಲಿದ್ದಾರೆ. ಅವರು ಮೀಟಿಂಗ್‌ಗೆ ಬಂದು ಬಂಗಾರಪ್ಪ ಬೇಕಾಗಿಲ್ಲ ನಾನು ಲೀಡರ್ ಇದ್ದೇನೆಂದು ಹೇಳಿದ್ದರೆ ಸ್ವಾಗತ ಇತ್ತು. ಅವರಿಗೆ ಶಕ್ತಿ ಇದ್ದರೆ ಹೇಳಬೇಕಾಗಿತ್ತು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಉಪಾಧ್ಯಕ್ಷಿಣಿಯವರೆ, ಕಾಂಗ್ರೆಸ್ ಪಕ್ಷದ ಸಂವಿಧಾನ ಅಥವಾ ಕಾಂಗ್ರೆಸ್ ಪಕ್ಷದ ರೀತಿನೀತಿ ನನಗೆ ಸದ್ಯಕ್ಕೆ ಅವಶ್ಯಕತೆ ಇಲ್ಲ. ಮುಂದೆ ಕಾಂಗ್ರೆಸ್ ಸೇರುವ ಪ್ರಶ್ನೆಯೇ ಇಲ್ಲ. ಇವತ್ತು ಅದರ ರೀತಿ ನೀತಿಯ ಬಗ್ಗೆ ಮಾತನಾಡಬೇಕಾದರೆ ಸದನದ ಹೊರಗಡೆ ಮಾತನಾಡಬೇಕಾಗುತ್ತದೆ. ಸದನದಲ್ಲಿ ಏತಕ್ಕೆ ಮಾತನಾಡಬೇಕು. ಆದರೆ ತಾವು ವಿಚಿತ್ರವಾದ ಸನ್ನಿವೇಶದಲ್ಲಿ ಮುಖ್ಯಮಂತ್ರಿಗಳಾಗಿದ್ದೀರಿ. ಈ ಸನ್ನಿವೇಶ ಒಂದು ಕಡೆ ಅಸೆಂಬ್ಲಿ ಡಿಸಾಲ್ವ್ ಆಗುತ್ತದೆನ್ನುವ ಥ್ರೆಟ್.

ಶ್ರೀ ಕೆ.ಹೆಚ್. ಪಾಟೀಲ್:- ವೀರೇಂದ್ರ ಪಾಟೀಲರು ನನಗೆ ಸಭೆ ಹಾಜರಾಗುವುದಕ್ಕೆ ಆಗುವುದಿಲ್ಲವೆಂದು ಅಧ್ಯಕ್ಷರಿಗೆ ಪತ್ರ ಬರೆದ ಮೇಲೆ He is not in a position to attend the meeting. How can he attend the Government functions? He is one with us. He is a Congressman as long as he enjoys the Congress confidence. ನೀವು ಹೀಗೆ ಮಾಡಿ ಅವರನ್ನು ಕಾಂಗ್ರೆಸ್‌ನಿಂದ ತೆಗೆಯುವುದಕ್ಕೆ ಹಚ್ಚುತ್ತಿದ್ದೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಉಪಾಧ್ಯಕ್ಷಿಣಿಯವರೆ, ಸಭಾನಾಯಕರು ಇನ್ನೊಂದು ಮಾತು ಹೇಳಿದರು. ರಾಜ್ಯಪಾಲರು ಏನೊಂದು ನನಗೆ ವಿಶ್ವಾಸ ಮತ ಕೇಳಲಿಕ್ಕೆ ಇವತ್ತು ಕೋರಿದ್ದಾರೆ. ಇದು ಜಗತ್ತಿಗೆ ಗೊತ್ತಿರತಕ್ಕ ವಿಚಾರ. ವಿಶ್ವಾಸ ಮತಕ್ಕೆ ನಮ್ಮ ಪಕ್ಷದಲ್ಲಿ ಬಹುಮತವಿದೆ. ರಾಜ್ಯಪಾಲರು 15 ದಿವಸಗಳೊಳಗೆ ಅದನ್ನು ಸಾಬೀತು ಮಾಡಬೇಕೆಂದು ಆದೇಶ ಕೊಟ್ಟಿರುವುದರಿಂದ ಈ ಸದನವನ್ನು ಕರೆದು ವಿಶ್ವಾಸ ಮತದ ನಿರ್ಣಯ ಮಂಡಿಸಿದ್ದೇನೆ ಎನ್ನುವ ಮಾತನ್ನು ಹೇಳಿದ್ದಾರೆ. ನಾನೂ ಒಬ್ಬ ಈ ಸದನದ ಸದಸ್ಯನಾಗಿರುವುದರಿಂದ ನಾನು ಹೇಳಬೇಕಾಗುತ್ತದೆ. ಈ ನಿರ್ಣಯಕ್ಕೆ ಬೆಂಬಲ ಕೊಡುವುದಕ್ಕೆ ಆಗುವುದಿಲ್ಲವೆಂದು ನಾನು ಹೇಳಬೇಕಾಗುತ್ತದೆ. ನಮ್ಮ ದೇಶದಲ್ಲಿರತಕ್ಕ ಪಕ್ಷಾಂತರ ನಿಷೇಧ ಮಸೂದೆಯ ದುರುಪಯೋಗ ಇದು. ಆತ್ಮಸಾಕ್ಷಿಯಾಗಿ ಇವತ್ತು.....

ಶ್ರೀ ಕೆ.ಹೆಚ್. ಪಾಟೀಲ್:- ಪಕ್ಷಾಂತರ ನಿಷೇಧ ಕಾನೂನು ಯಾವಾಗ ಬರುತ್ತದೆ? ಈ ಅಸೆಂಬ್ಲಿಯೊಳಗೆ ಬರುತ್ತದೆ? ಇದಕ್ಕಿಂತ ಮೊದಲೇ ಶಾಸಕಾಂಗ ಪಕ್ಷದ ಸಭೆಯನ್ನು ಕರೆದಿದ್ದೇವೆ. ಶಾಸಕಾಂಗ ಸಭೆಯಲ್ಲಿ ಬಂಗಾರಪ್ಪನವರು ಬೇಡ ಇನ್ನೊಬ್ಬರು ಆಗಬೇಕೆಂದು ಒಬ್ಬರೂ ಹೇಳಲಿಲ್ಲ. ಎಲ್ಲರೂ unanimously agreed. ಪಕ್ಷಾಂತರ ನಿಷೇಧ ಮಸೂದೆ ಬರುವುದು ಈ ಸದನದೊಳಗೆ, ಆದರೆ ನಿನ್ನೆ ಕೂಡಿದಂತಹ ಮೀಟಿಂಗ್‌ನೊಳಗೆ ಇವತ್ತು ಮುಂಜಾನೆ ಕೂಡಿದಂತಹ ಮೀಟಿಂಗ್‌ನೊಳಗೆ ಯಾರೂ ಕೂಡ ಬಂಗಾರಪ್ಪನವರು ಬೇಡವೆಂದು ಹೇಳಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಕೆ.ಹೆಚ್.ಪಾಟೀಲ್‌ರವರು ಈ ಸದನದ ಹಿರಿಯ ಸದಸ್ಯರು ಮಂತ್ರಿಮಂಡಲದಲ್ಲಿ ಅತ್ಯಂತ ಹಿರಿಯ ಸದಸ್ಯರು ಮಾನ್ಯ ಪಾಟೀಲ್‌ರವರು ನನ್ನ ಬಾಯಿ ಮುಚ್ಚಿಸಬಹುದು. ಆದರೆ,

SRI AZEEZ SAIT::- Who are you?

SRI P.G.R. SINDHIA:- I am an MLA. I am also elected like you.

ಶ್ರಿ ಅಜೀಜ್ ಸೇಠ್:- ನಮ್ಮ ಪಕ್ಷದ ಬಗ್ಗೆ ನೀವು ಏತಕ್ಕೆ ಮಾತನಾಡುತ್ತೀರಿ?

ಶ್ರೀ ಎಂ.ಎಲ್. ಉಸ್ತಾದ್:- ನಮ್ಮ ಪಕ್ಷದ ಬಗ್ಗೆ ಮಾತನಾಡುವುದಕ್ಕೆ ನೀವು ಯಾರು? ನಮ್ಮ ಪಕ್ಷದ ಬಗ್ಗೆ ಮಾತನಾಡುವುದಕ್ಕೆ who are you?

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಉಪಾಧ್ಯಕ್ಷಿಣಿಯವರೆ, ಅವರು Who are you ಎಂದು ಕೇಳುತ್ತಿದ್ದಾರೆ ನಾನು ಯಾರೆಂದು ಹೇಳುತ್ತೇನೆ.

ಉಪಾಧ್ಯಕ್ಷರು:- ಬೇಡ ತಾವು ಮುಂದುವರಿಸಿ.

ಶ್ರೀ ಎಂ.ವಿ. ವೆಂಕಟಪ್ಪ:- ನಾನು ಕ್ರಿಯಾಲೋಪ ಎತ್ತುತ್ತೇನೆ.

SRI M. VEERAPPA MOILY: It is a Point of order.

ಶ್ರೀ ಎಂ.ವಿ. ವೆಂಕಟಪ್ಪ:- ಮಾನ್ಯ ಉಪಾಧ್ಯಕ್ಷಿಣೀಯವರೆ, ಒಂದು ನಿಮಿಷ. ನಿನ್ನೆ ಸಭೆಯ ಕಾರ್ಯಕಲಾಪ ಸಮಿತಿಯಲ್ಲಿ ಈ ವಿಷಯದ ಬಗ್ಗೆ ಎರಡು ಗಂಟೆ ಕಾಲವನ್ನು ಮಂಜೂರು ಮಾಡಿರುವುದು ತಮಗೆ ಗೊತ್ತಿದೆ. ಇದು 11.50ಕ್ಕೆ ಶುರುವಾಗಿ ಸುಮಾರು 4ಗಂಟೆಗಳ ಕಾಲ ನಡೆದಿದೆ. ಇದರ ಬಗ್ಗೆ ಇನ್ನು ಎಷ್ಟು ಸಮಯ ತೆಗೆದುಕೊಳ್ಳುತ್ತೀರಿ? ಇದನ್ನು ಆದಷ್ಟು ಬೇಗ ಮುಗಿಸುವುದು ಒಳ್ಳೆಯದು.

ಶ್ರೀ ಎಂ. ವೀರಪ್ಪ ಮೊಯಿಲಿ :- ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ. ಸನ್ಮಾನ್ಯ ಅಧ್ಯಕ್ಷಿಣಿಯವರೇ ನಾನು ಮಾತನಾಡಲಿಕ್ಕೆ ಅಡ್ಡಿ ಬರುತ್ತಿಲ್ಲ. ಆದರೆ ಈ ಸದನದಲ್ಲಿ ನಾನು ಕೆಲವು ವಿಚಾರಗಳನ್ನು ತಮ್ಮ ಅವಗಾಹನೆಗೆ ತರಬೇಕಾಗುತ್ತದೆ. ಏಕೆಂದರೆ, ಕೆಲವು ಪರಂಪರೆಗಳಿಂದ ನಾವು ದೂರ ಹೋಗುತ್ತಿದ್ದೇವೆ ಎನ್ನುವ ಅನುಮಾನ ಬರುವ ಕಾರಣದಿಂದ ಇದನ್ನು ತಮ್ಮ ಅವಗಾಹನೆಗೆ ತರಬೇಕೆಂದು ಇಚ್ಛೆಪಡುತ್ತೇನೆ. ತಾವು ಇದನ್ನು ಅವಗಾನಿಸಬೇಕು. ಇದು ಬರೀ ಸನ್ಮಾನ್ಯ ಹಿರಿಯ ಸದಸ್ಯರಾದಂಥ ಶ್ರಿ ಸಿಂಧ್ಯಾರವರಿಗೆ ಅಷ್ಟೇ ಅನ್ವಯವಾಗುವುದಿಲ್ಲ. ನಾವು ಏನು ಮಾಡುತ್ತಿದ್ದೇವೆ ಎಂದರೆ, ಬಹುಶಃ ನೂರಕ್ಕೆ ಎಪ್ಪತ್ತೈದರಷ್ಟು ಪಾಲು ಪಕ್ಷದ ಒಂದು ಆಂತರಿಕ ವಿಚಾರಕ್ಕೆ ಸಂಬಂಧಪಟ್ಟಂತೆ ಇಲ್ಲಿ ಚರ್ಚೆ ನಡೆದಿದೆ. ಬಹುಶಃ ಇದಕ್ಕೆ ಸಂಬಂಧಪಟ್ಟಂತಹ ಕೆಲವು ಕನ್‌ವೆನ್‌ಶನ್‌ಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. We are going too far on these matters. Afterall, well established conventions will have to be maintained in this House. ಇಲ್ಲದಿದ್ದರೆ ಏನಾಗುತ್ತದೆ ಎಂದರೆ, ಮುಂದೆ ಕೂಡ ನಾವು ಇದನ್ನೇ ಮಾಡುವುದಕ್ಕೆ ಹೋಗುತ್ತೇವೆ. I am quoting Parliamentary Procedure in India, III Edition by Sri Mukherjee, Page-188 wherein it is observed thus;

"No reference may be made to what happens in Party Meetings." ಇವತ್ತು ಅದೇ ನಡೆದಿದೆ. I am not referring to your speech. However, generally it applies to everyone ಲೋಕಸಭೆ ಡಿಬೇಟ್‌ನಲ್ಲಿ ಆ ವಿಚಾರ ಬಂದಾಗ, on 30th March, 1950, the Speaker has ruled that 'there should be no reference as to what happened in the Party Meetings'. ಆದ್ದರಿಂದ ಈ ಪ್ಯಾರಾ ಮ್ಯಾಟರ್‌ನ್ನು ದಯವಿಟ್ಟು ಇಟ್ಟುಕೊಂಡು ಮುಂದೆ ಚರ್ಚೆಯನ್ನು ಬೆಳೆಸುವುದು ಒಳ್ಳೆಯದು. ಆದ್ದರಿಂದ ವಿಷಯಕ್ಕೆ ಸೀಮಿತವಾಗಿ ತಾವು ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಪಕ್ಷದಲ್ಲಿ ಏನು ನಡೆಯಿತು, ಪಕ್ಷದ ಒಳಗಡೆ ಏನು ನಡೆಯಿತು ಪಕ್ಷದ ನಾಯಕರು ಏನು ಹೇಳಿದರು ಎಂದು ಇದನ್ನೆಲ್ಲ ಇಲ್ಲಿ ತಂದರೆ ಬಹುಶಃ ಇದಕ್ಕೆ ಕಾನೂನಿನಲ್ಲಿ, ಮತ್ತು ಪರಂಪರೆಯಲ್ಲಿ ಅವಕಾಶ ಇಲ್ಲವೆಂದು ತಮ್ಮ ಗಮನಕ್ಕೆ ನಾನು ತರುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ:- ಇಬ್ಬರು ಮಂತ್ರಿಗಳು ಇಲ್ಲಿ ವಿಭಿನ್ನವಾದ ಅಭಿಪ್ರಾಯಗಳನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ. ಮಾನ್ಯ ಶ್ರೀ ಕೆ.ಎಚ್. ಪಾಟೀಲರು ಅವರ ಪಕ್ಷದಲ್ಲಿ ಏನೇನು ನಡೆಯಿತು

ಎಂಬುದನ್ನು ವಿವರವಾಗಿ ಹೇಳಿದ್ದಾರೆ. ಪ್ರತಿಯೊಂದನ್ನು ಕೂಡ ಅವರೇ ಹೇಳಿರತಕ್ಕದ್ದು. ಇದನ್ನು ಮಾಡಬಾರದು ಎಂದು ಶ್ರೀ ವೀರಪ್ಪ ಮೊಯಿಲಿಯವರು ಹೇಳುತ್ತಾರೆ. ಮೊದಲು ನೀವು ಅವರಿಗೆ ಹೇಳಿ. ಆಮೇಲೆ ನಮಗೆ ಹೇಳಿ. ನೀವೇ ಮೊದಲು ಹಾಗೆ ಹೇಳುವುದಕ್ಕೆ ಅವಕಾಶ ಕೊಟ್ಟು ಈಗ ನಮಗೆ ಪಾಠ ಹೇಳುವುದಕ್ಕೆ ಬಂದರೆ ನಿಮ್ಮ ಪಾಠವನ್ನು ಯಾರು ಕೇಳುತ್ತಾರೆ? ಮೊದಲು ಅವರಿಗೆ ಪಾಠ ಮಾಡಿ.

ಉಪಾಧ್ಯಕ್ಷರು:- ಶ್ರೀ ಸಿಂಧ್ಯರವರೇ, ಮೊದಲು ಮುಗಿಸಿಬಿಡಿ. ನಾಲ್ಕು ಗಂಟೆಗೆ ಮುಗಿಸಿಬಿಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಉಪಾಧ್ಯಕ್ಷಿಣಿಯವರೆ, ನಾನು ಬಹಳ ಕಡಿಮೆ ಮಾತನಾಡಿದ್ದೇನೆ. ಹೆಚ್ಚಿಗೆ ಸಮಯವನ್ನು ಬೇರೆಯವರೇ ತೆಗೆದುಕೊಂಡಿದ್ದಾರೆ. ನಾನು ಈಗ ಪ್ರಾರಂಭ ಮಾಡಬೇಕೆಂದು ಇದ್ದೇನೆ.

ಉಪಾಧ್ಯಕ್ಷರು:- ಇನ್ನು ಐದು ನಿಮಿಷಗಳಲ್ಲಿ ಮುಗಿಸಿಬಿಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ನೀವು ಹೇಳಿದ ಮೇಲೆ ಮುಗಿಸಿಬಿಡುತ್ತೇನೆ. ನಾನು ಕಾಂಗ್ರೆಸ್ ಪಕ್ಷದ ಆಂತರಿಕೆ ವಿಚಾರದಲ್ಲಿ ಮಾತನಾಡುವುದಕ್ಕೆ ಹೋಗುತ್ತಿಲ್ಲ. ತಾವು ಏನು ಸಂವಿಧಾನದ ಮತ್ತು ಪ್ರಜಾತಂತ್ರದ ಮೌಲ್ಯಗಳನ್ನು ಎತ್ತಿಹಿಡಿಯುವ ದೃಷ್ಟಿಯಿಂದ ಇವತ್ತು ಆ ಸಚಿವ ಸ್ಥಾನದಲ್ಲಿ ಕುಳಿತು ಹೇಳುತ್ತಿದ್ದೀರಿ, ಅದನ್ನು ನಾನು ಸಹಿತ ಪಾಲಿಸುವುದಕ್ಕೆ ಬಯಸುತ್ತೇನೆ. ಆದರೆ ಮುಖ್ಯಮಂತ್ರಿ ಸ್ಥಾನ ಇದೆಯಲ್ಲ, ಇದು ಕೇವಲ ಪಕ್ಷದ ಆಸ್ತಿಯಲ್ಲ. ಮುಖ್ಯಮಂತ್ರಿ ಸ್ಥಾನ ಇಡೀ ಕರ್ನಾಟಕ ಜನತೆಯ ಆಸ್ತಿ. ಆ ಕುರ್ಚಿಯಲ್ಲಿ ಯಾರು ಕುಳಿತುಕೊಳ್ಳುತ್ತಾರೆ ಅವರು ಸಂವಿಧಾನದ ಪ್ರಕಾರ ನಾನು ರಾಗ, ದ್ವೇಷ, ಮತ್ತೊಂದು ಮಗದೊಂದು ಏನು ಇಲ್ಲದೆ ನಡೆದುಕೊಂಡು ಹೋಗುತ್ತೇನೆ ಎಂದು ಪ್ರಮಾಣವನ್ನು ತೆಗೆದುಕೊಳ್ಳುತ್ತಾರೆ. ಆದ್ದರಿಂದ ಇವತ್ತು ಇಂಡಿಯಾ ದೇಶದ ಇತಿಹಾಸದಲ್ಲಿ ಜನರು ಹೇಳುತ್ತಿದ್ದಾರೆ. ಇವತ್ತು ನೀವು ನಮಗೆ ಬಾಯಿ ಮುಚ್ಚಿಸಬಹುದು. ಇವತ್ತು ಪತ್ರಿಕೆಗಳಲ್ಲಿ ಬಂದಿದೆ. ಪ್ರಜಾವಾಣಿಯಂಥ ಜವಾಬ್ದಾರಿಯುತ ಪತ್ರಿಕೆಯಲ್ಲಿ ಬಂದಿದೆ. ಶ್ರೀ ವೀರೇಂದ್ರ ಪಾಟೀಲರ ಗುಂಪಿನ ವಿಧಾನಸಭಾ ಸದಸ್ಯರು ಸಹಿತ ಪಕ್ಷಾಂತರ ಮಸೂದೆಯ ಭಯದಿಂದ ಎಲ್ಲಿ ನಮ್ಮ ಸದಸ್ಯತ್ವ ಹೊರಟು ಹೋಗುತ್ತದೋ ಎನ್ನುವ ಕಾರಣದಿಂದ ವಿಧಾನಸಭೆಗೆ ಬಂದು ಶ್ರೀ ಬಂಗಾರಪ್ಪನವರಿಗೆ ಬೆಂಬಲ ಕೊಡುವುದಕ್ಕೆ ಹೊರಟಿದ್ದಾರೆ ಎನ್ನುವಂಥ ಮಾತು ಇದೆ. ಆದ್ದರಿಂದ ಕೊನೆಯದಾಗಿ ನಾನು ಹೇಳುವುದು ಇಷ್ಟೇ. ನಮ್ಮ ದೇಶದ ಪ್ರಜಾತಂತ್ರದ 42 ವರ್ಷಗಳ ಇತಿಹಾಸದಲ್ಲಿ ಇಂತಹ ಒಬ್ಬ ಮುಖ್ಯಮಂತ್ರಿಗಳಿಗೆ ಈ ರೀತಿಯಾಗಿದೆ. ನಾನು ಮಾನ್ಯ ವೀರೇಂದ್ರ ಪಾಟೀಲರ ಕೈಕೆಳಗೂ ಕೆಲಸ ಮಾಡಿದ್ದೇನೆ. ಅವರು ಇದೇ ಸದನದಲ್ಲಿ ಸಭಾನಾಯಕರಾಗಿ ಕುಳಿತಿರತಕ್ಕಂಥ ಸಂದರ್ಭದಲ್ಲಿ, ಕುಲದೀಪ್‌ಸಿಂಗ್ ವರದಿ ಬಗ್ಗೆ ಮಾತನಾಡುವಾಗ ನಾನು ಕಟುವಾಗಿ ಟೀಕೆ ಮಾಡಿದ್ದೇನೆ. ನಾಗರತ್ನಮ್ಮನವರು ಆಗ ನನ್ನನ್ನು ಸ್ವಲ್ಪ ಬೈಯ್ದರು. ಅವರಿಗೆ ಬೈಯ್ಯುವುದಕ್ಕೆ ಹಕ್ಕಿದೆ. ಏಕೆ ನಿಮ್ಮ ಬಾಯಿ ಸ್ವಲ್ಪ ಕೆಟ್ಟುಹೋಯಿತು ಎಂದು ಹೇಳಿದರು. ವೀರೇಂದ್ರ ಪಾಟೀಲರು ಮತ್ತು ರಾಜಶೇಖರಮೂರ್ತಿಗಳು ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಅವರು ಅಧಿಕಾರದಿಂದ ಇಳಿಯುವವರೆಗೂ ಒಂದು ದಿವಸವೂ ಅವರ ಹತ್ತಿರ ನಾನು ಯಾವ ಕೆಲಸಕ್ಕೂ ಹೋಗಲಿಲ್ಲ. ಆದರೆ, ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾದ ಮೇಲೆ, ದಕ್ಷಿಣ ಭಾರತದಲ್ಲೇ ಒಬ್ಬ ಒಳ್ಳೆಯ ಆಡಳಿತಗಾರ ಎಂಬ ಮಾತು ಇತ್ತು. ಇದು ನಿಮ್ಮ ಪಕ್ಷಕ್ಕೆ ಒಂದು ಅಸೆಟ್ ಆಗುತ್ತಿತ್ತು. ಇವತ್ತು ಲೋಕಸಭಾ ಚುನಾವಣೆ ಆಗಬಹುದು ಎಂದು ಹೇಳಿ ಮತ್ತೆ ಅವರಿಗೆ ಅಸಮಾಧಾನ ಮಾಡಬಾರದು ಎಂದು ಹೇಳಿ ಬೆಣ್ಣೆ ಹೊಡೆಯತಕ್ಕ ಮಾತುಗಳು ಈಗ ಕೇಳಿ ಬರುತ್ತಿವೆ. ಇವತ್ತು ನಮ್ಮ ಮುಂದೆ ಇಷ್ಟೇ ಇರುವುದು. ನಾನಾದರೂ ಮಾನ್ಯಮುಖ್ಯಮಂತ್ರಿಗಳನ್ನು ಕೇಳುತ್ತೇನೆ. ನೀವು ಏನು ವಿಚಿತ್ರವಾದ ಸನ್ನಿವೇಶದಲ್ಲಿ ಮುಖ್ಯಮಂತ್ರಿಗಳಾಗಿದ್ದೀರಿ, 1991ನೇ ಇಸವಿಯಲ್ಲೂ ನೀವು ಈ ಸದನದಲ್ಲಿ ಮತ್ತೆ ಆ ಸ್ಥಾನಕ್ಕೆ ಬನ್ನಿ ಎಂದು ಆಸೆ ವ್ಯಕ್ತ ಮಾಡುತ್ತೇನೆ. ಜೊತೆಗೆ ಆ ಸನ್ನಿವೇಶದಲ್ಲಿ ತಾವು ಏನು ಮುಖ್ಯಮಂತ್ರಿಗಳಾಗಿದ್ದೀರಿ. ಆವತ್ತು ಕೋಮು ಗಲಭೆಗಳು ಈ ರಾಜ್ಯದಲ್ಲಿ ನಡೆಯಿತು, ಅದರ ಬಗ್ಗೆ ಪೋಲೀಸ್ ವರದಿಗಳು ಹೇಳುತ್ತವೆ. ಪೋಲೀಸ್ ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟ್‌ನವರು ಕೊಟ್ಟಿರತಕ್ಕ

ವರದಿ ಇದೆ. ಈ ಒಂದು ರಾಜ್ಯದ ಒಬ್ಬ ಮುಖಂಡರು, ಈ ಗಲಭೆಗೆ ಕಾರಣ ಎಂಬ ಮಾತನ್ನು ಪೋಲೀಸ್ ವರದಿಯಲ್ಲಿ ಕೊಟ್ಟಿದ್ದಾರೆ. ಅದನ್ನು ಈ ಸದನದಲ್ಲಿ ಇವತ್ತಲ್ಲ, ನಾಳೆ ಮಂಡಿಸಬೇಕು. ಈಗ ತಾವು ಏನು ಮಾತುಗಳನ್ನು ಹೇಳಿದ್ದೀರಿ, ಈ ರಾಜ್ಯಕ್ಕೆ ಒಳ್ಳೆಯ ಸರ್ಕಾರ ಕೊಡಬೇಕು, ಕೃಷಿಗೆ, ವಿದ್ಯುತ್‌ಗೆ ಮತ್ತು ರಾಜ್ಯದ ಪ್ರಗತಿಗಾಗಿ ದುಡಿಯಬೇಕೆಂದು ಹೇಳಿದ್ದೀರಿ. ಒಳ್ಳೆಯ ಆಡಳಿತವನ್ನು ಕೊಡಬೇಕೆಂದು ಹೊರಟಿದ್ದೀರಿ, ಅದಕ್ಕೆ ಇದು ಉಪಯೋಗವಾಗುತ್ತದೆಂದು ನಾನು ತಿಳಿದಿದ್ದೇನೆ. ಇವತ್ತು ಅಕ್ರಮವಾಗಿ, ಸಂವಿಧಾನದಲ್ಲಿರತಕ್ಕ ಪಕ್ಷಾಂತರ ನಿಷೇಧ ಮಸೂದೆಯನ್ನು ದುರುಪಯೋಗ ಮಾಡಿಕೊಂಡು, ಅಸೆಂಬ್ಲಿಯನ್ನು ಡಿಸಾಲ್ವ್ ಮಾಡಬಹುದು ಎಂಬ ಭಯದಿಂದ, ರಾಜ್ಯಪಾಲರ ಒಂದು ಕೃಪಾಕಟಾಕ್ಷದಿಂದ ಇವತ್ತು ನೀವು ಅಧಿಕಾರದಲ್ಲಿ ಬಂದು ಕುಳಿತಿದ್ದೀರಿ. ನೀವು ವಿ.ಪಿ.ಸಿಂಗ್ ಬಗ್ಗೆ ಏಕೆ ಮಾತನಾಡುತ್ತಿರಿ, ಅವರಿಗೆ ಬೆಂಬಲ ಇದ್ದರೆ ಇರುತ್ತಾರೆ, ಇಲ್ಲದೇ ಹೋದರೆ 7ನೇ ತಾರೀಖು ಹೋಗುತ್ತಾರೆ. ಅವರ ಬಗ್ಗೆ ಏಕೆ ಮಾತನಾಡುತ್ತೀರಿ.

ಉಪಾಧ್ಯಕ್ಷರು:- ತಾವು ಮುಗಿಸಿ, ಇನ್ನೂ ಇಬ್ಬರು ಸದಸ್ಯರು ಮಾತನಾಡುವವರು ಇದ್ದಾರೆ, ತಾವು 4-15ಕ್ಕೆ ಮುಗಿಸಿ......

ಶ್ರೀ ಪಿ.ಜಿ.ಆರ್. ಸಿಂಧ್ಯ:- ತಾವು ಮುಗಿಸಬೇಕೆಂದು ಹೇಳಿರುವುದರಿಂದ ಇವತ್ತು ಈ ಒಂದು ಆರ್ಟಿಫಿಷಿಯಲ್ ಸಪೋರ್ಟ್ ತೆಗೆದುಕೊಂಡು ಅಧಿಕಾರಕ್ಕೆ ಬಂದಿದ್ದೀರಿ. ಬಹಳಷ್ಟು ಜನ ಹೇಳಿದರು, ನನ್ನ ಮಿತ್ರರಾದ ಡಾ॥ ಆಳ್ವರವರೂ ಹೇಳಿದರು. ಆತ್ಮಸಾಕ್ಷಿಯಾಗಿ ನಿಮಗೆ ಓಟು ಹಾಕಬೇಕೆಂದರೆ ನಿಮಗೆ 12-13 ಓಟುಗಳ ಮೇಲೆ ಬರುವುದಿಲ್ಲ, ನನಗೆ ಗೊತ್ತಿದೆ. ಈ ಕಡೆ ನೀವು ಇದ್ದಾಗ ಮತ್ತು ಈ ಕಡೆಯಿಂದ ಆ ಕಡೆಗೆ ಹೋದಾಗ 12 ಜನ ಮಾತ್ರ ಬಂದರು. ಈಗಲೂ ಅಷ್ಟೇ ಜನ ಬರುವುದು, ಇದರಲ್ಲಿ ಏನೂ ಸಂಶಯ ಇಲ್ಲ. ನನಗೆ ಗೊತ್ತಿದೆ.

ಶ್ರೀ ಸಿ. ಬೈರೇಗೌಡ:- ಇದು ಡಾ॥ ಆಳ್ವರವರಿಗೆ ಒಬ್ಬರಿಗೆ ಗೊತ್ತಿರುವುದಕ್ಕೆ ಏನು ಕಾರಣ ನಿಮಗೆ ಗೊತ್ತಿಲ್ಲವೇ. ಏಕೆ ಅವರ ಹೆಸರನ್ನು ಹೇಳುತ್ತೀರಿ..

ಶ್ರೀ ಪಿ.ಜಿ.ಆರ್. ಸಿಂಧ್ಯ:- ನನಗೂ ಗೊತ್ತಿದೆ. ಆದ್ದರಿಂದ ನಾನು ಇಷ್ಟೆ ಹೇಳತಕ್ಕಂಥಾದ್ದು. ರಾಜ್ಯಪಾಲರ ಒಂದು ಆದೇಶ ಏನಿದೆ, ಸಂವಿಧಾನಬದ್ಧವಾಗಿ ತಾವು ಇವತ್ತು ಈ ಸದನದ ಬಹುಮತವನ್ನು ಈ ರಾಜ್ಯದ ಜನತೆಗೆ ತೋರಿಸಬೇಕೆಂದು ಹೊರಟಿದ್ದೀರಾ, ಈ ಒಂದು ಆರ್ಟಿಫಿಷಿಯಲ್ ಸಪೋರ್ಟ್ ತೆಗೆದುಕೊಂಡು ನೀವು ಮುಖ್ಯಮಂತ್ರಿಗಳಾಗಿ, ನಿಮಗೆ ನಿಮ್ಮ ಪಕ್ಷದ ಎಲ್ಲ ಸದಸ್ಯರುಗಳೂ ಆತ್ಮಪೂರ್ವಕವಾಗಿ ಬೆಂಬಲ ಕೊಡುವುದಕ್ಕೆ ಭಗವಂತ ಪ್ರೇರಣೆ ಕೊಡಲಿ ಎಂದು ಹೇಳಿ ನಾನು ಈ ಸಂದರ್ಭದಲ್ಲಿ ಶ್ರೀರಾಮನಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ:- ನಿಮ್ಮ ಬೆಂಬಲ ಬೇಡುತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಸರಿ, ಹಾಗಾದರೆ ನಾವು ಕೊಡುವುದು ಇಲ್ಲ ಇಂಡಿಯಾ ದೇಶದ ಇತಿಹಾಸದಲ್ಲಿ ಇಂತಹ ಮುಖ್ಯಮಂತ್ರಿಗಳನ್ನು ಇಳಿಸತಕ್ಕಂಥ ರೀತಿ ಏನಿದೆ ಇದನ್ನು ನಾನು ಅತ್ಯಂತ ಉಗ್ರವಾಗಿ ಖಂಡಿಸಿ, ಈ ನಿರ್ಣಯವನ್ನು ವಿರೋಧ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

(ಗೊಂದಲ)

ಉಪಾಧ್ಯಕ್ಷರು:- ಖಮರುಲ್ ಇಸ್ಲಾಂ

(ಗೊಂದಲ)

SRI D.B. CHANDRE GOWDA: I would seek your indulgence in these matters. There is a limit for all these things. ಕುಳಿತುಕೊಳ್ಳುವುದು, ಬಾಯಿಗೆ ಬಂದಹಾಗೆ ಮಾತನಾಡುವುದು, ಇದೇನು ನಾವು ಸದನ ನಡೆಸುತ್ತಿದ್ದೇವೆಯೇ? This is too much. What is this going on?

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ: ಏನು ಇದು ಶಾಸನಸಭೆಯೇ?

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ; ಯಾವುದಕ್ಕೂ ಒಂದು ನಿಯಮ ಇದೆ. ಹೇಳುವುದಕ್ಕೂ ಒಂದು ನಿಯಮ ಇದೆ. ಚೇರ್ ಪರ್ಮಿಷನ್ ತೆಗೆದುಕೊಂಡು ಹೇಳಿ. ಕುಳಿತುಕೊಂಡು ಬಾಯಿಗೆ ಬಂದಹಾಗೆ ಮಾತನಾಡುವುದೇ?

(ಗೊಂದಲ)

ಶ್ರೀ ಆರ್.ಎಲ್ ಜಾಲಪ್ಪ: ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ಪ್ರಾರ್ಥನೆ ಸಲ್ಲಿಸುತ್ತಿದ್ದೇನೆ. ನಿಮಗೆ ಹೇಗಿದ್ದರೂ ಮೆಜಾರಿಟಿ ಬರುತ್ತದೆ, ಅದು ಅನ್‌ಡಿಸ್ಪ್ಯೂಟಬಲ್. ತಾವು ಮುಖ್ಯಮಂತ್ರಿಗಳಾಗಿದ್ದೀರಿ. ಬೇಗ ಮಿನಿಸ್ಟ್ರಿ ಎಕ್ಸ್‌ಪ್ಯಾನ್‌ಷನ್ ಮಾಡಿಬಿಟ್ಟರೆ ಈ ಸದನದಲ್ಲಿ ಸ್ವಲ್ಪ ಕಾಮ್ ಆಗಿ ನಾವು ಡಿಸ್ಕಸ್ ಮಾಡಬಹುದು. ಆ ಕೆಲಸವನ್ನು ಬೇಗ ಮುಗಿಸಿಬಿಟ್ಟರೆ ನಾವು ಸಮಾಧಾನದಿಂದ ಮಾತನಾಡಬಹುದು.

(ಗೊಂದಲ)

SRI QUMARUL ISLAM:(GULBARGA): Sir, Sri S. Bangarappa the Hon.Chief Minister has moved a Motion before this House seeking its confidence in the Council of Ministers headed by him. In a way, he has asked me and my Party to give vote of confidence in him. We have all heard the speeches of other hon.Members like Dr. Jeevaraja Alva, Sri D.B. Chandregowda, the Hon.Leader of the Opposition and sri P.G.R. Sindia etc. In a Democratic set up, there are Parties and a mojority Party or group will rule the State or the Country, as the case may be. At the end of the speech, Sri Sindia felt that it is an 'artificial support' to Sri S.Bangarappa by the members of his Party. To-day only, I read in the news papers that Mr. V.P.Singh, the Hon.Prime Minister has convened the session of the Parliament and has appealed to the Members of Parliament to vote according to their conscience and thus express the confidence in the Council of Ministers headed by Sri V.P.Singh. That is the culture of our Janata Dal which is ruling at the Centre. This is the culture of the Congress which is now ruling in our State. When Sri Veerendra Patil became the Chief Minister, my Party supported him thinking that he was a very good administrator. Once he proclaimed on the Floor of this House that the election manifesto of the KPCC(I) alone is Quran, Gita and Bible for him and he assured to fulfill the promises made in it. However, during his 10 months regime we saw maximum and worst communal riots in Ramnagaram, Channapatna, Hosadurga, Davangere, Tumkur, Kolar etc., We cannot forget that. It is on record. Once the former Chief Minister Sri Veerendra Patil answered to the question of Sri Mallikarjun M. Kharge in respect of atrocities on Harijans. He replied that there were 346 cases of

atrocities on Harijans. While speaking on Demands for Grants pertaining to the Home Department, I had cautioned that the law and order situation is deteriorating. Don't think that Ram Janmabhumi Babri Masjid issue is simple. To-day you are seeing as to what is happening at the Centre. The Government at the Centre has to prove now that they are enjoying the majority. It is not an easy issue. Our country is democratic and secular. Our country can be integrated and united as long as there are democractic and secular norms. If you just forget that and fight for Chairs and fight for Chief Minsitership, our Country will not remain united. For me, for all of us and for every citizen, the secular norm of the country is primary thing. Nobody talked in this House about Ramanagaram riots. During the Bhagalpur issue, though Sri Rajiv Gandhi was the leader of the Congress Party and Prime Minister of our country, he did not chamge the Chief Minister.

(INTERRUPTION)

SRI QUMARUL ISLAM: At that time, the Chief Minister was not changed and we know what the consequential result was. When the Meerut was burning, the change did not come. But, here on 7th, the President of the Congress Party announced the change in the CLP Leadership. I, as a Member of the Muslim League demanded the resignation of the then Chief Minister Sri Veerendra Patil. I told that he has lost the control over the law and order situation. The innocent Muslims who are living in village were being burnt alive. Hundreads of people were going to these areas, a new strategy was adopted in Channapatna riots. Two persons were killed in firing. About 13 people were simply burnt alive in their huts. Is it not new tactics? What the Government was doing? I am sorry, Sri Veerendra Patil was ill....

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಉಪಾಧ್ಯಕ್ಷಿಣಿಯುವರೇ, ಮಾನ್ಯ ಸದಸ್ಯರು ನಿನ್ನೆ ನಡೆದ ಬಿಜಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್‌ಗೆ ಬಂದಿರಲಿಲ್ಲ. ಮಾನ್ಯ ಸದಸ್ಯರಾದ ನಾಗರಾಜ್‌ರವರು ಮತ್ತು ವಿರೋಧಪಕ್ಷದ ನಾಯಕರು ಇದ್ದರು. ಈ ವಿಷಯ ತಮಗೆ ಗೊತ್ತಿದೆ. ನಿನ್ನೆ ಕೂಡ ಕೆಲವು ಕಡೆ ಗಲಭೆಗಳು ಆಗಿವೆ. ಇನ್ನು ಗಲಭೆಗಳು ಏಳತಕ್ಕಂಥ ಪರಿಸ್ಥಿತಿ ಇದೆ. ನಿನ್ನೆ ನಮಗೂ ಸಹ ನೋವಾಯಿತು. ತಾವು ಸಹ ಆ ಒಂದು ನೋವಿನಿಂದಲೇ ಮಾತನಾಡುತ್ತಿದ್ದೀರಿ. ತಮ್ಮ ಮನಸ್ಸಿನ ಆಂತರಿಕ ನೋವು ನಮಗೆ ಅರ್ಥವಾಗುತ್ತದೆ. ಆದರೆ ನಮ್ಮ ಮುಂದೆ ಇರುವ ಪ್ರಶ್ನೆ ಏನು? ಇವತ್ತು ಎಲ್ಲಾ ವರ್ಗದ ಜನರು ಸಮಾಧಾನವಾಗಿ ಶಾಂತಿಯಾಗಿ ನೆಮ್ಮದಿಯಿಂದ ಇರಬೇಕೆನ್ನುವ ಒಂದು ಪ್ರಯತ್ನವನ್ನು ಜವಾಬ್ದಾರಿ ಸ್ಥಾನದಲ್ಲಿ ಇರತಕ್ಕ ನಾವು ಮಾಡಬೇಕಾಗುತ್ತದೆ. ಇಲ್ಲಿ ನಾವು ಏನಾದರೂ ಸ್ವಲ್ಪ ಹೆಚ್ಚು ಕಡಿಮೆ ಮಾತನಾಡುವುದಾದರೆ ಅದರ ಪರಿಣಾಮವನ್ನು ಜನರು ಅನುಭವಿಸಬೇಕಾಗುತ್ತದೆ. ಆ ಒಂದು ಪರಿಸ್ಥಿತಿ ನಿರ್ಮಾಣಕ್ಕೆ ನಾವು ಕಾರಣೀಭೂತರಾಗುವುದು ಬೇಡ ಎನ್ನುವ ಒಂದು ಉದ್ದೇಶದಿಂದ ನಿನ್ನೆ ಮಾನ್ಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದಂತಹ ಒಂದು ಸಭೆಯಲ್ಲಿ ಈ ವಿಚಾರವನ್ನು ಚರ್ಚಿಸಿದ್ದೇವೆ. ಇವತ್ತು ನಮ್ಮ ಕಾರ್ಯಕ್ರಮ ಮುಗಿದ ಮೇಲೆ ಮತ್ತೆ 19ನೇ ತಾರೀಖಿಗೆ ಸೇರೋಣ. ಆಗ ಇದರ ವಿಚಾರ ವಿಮರ್ಶೆ, ವಿಶ್ಲೇಷಣೆ ಮಾಡೋಣ ಒಂದು

ದಿವಸ ಅಲ್ಲ ಎರಡು ದಿವಸ ಆದರೂ ಚರ್ಚೆ ಮಾಡೋಣ. ಅದಕ್ಕೆ ನಮ್ಮ ನಾಯಕರೂ ಸಹ ಒಪ್ಪಿದ್ದಾರೆ. ಆದ್ದರಿಂದ ದಯಮಾಡಿ ತಾವು ಈಗ ಈ ವಿಷಯವನ್ನು ಎತ್ತಿದರೆ ಮತ್ತೊಬ್ಬರು, ಮಗದೊಬ್ಬರು ಎತ್ತುತ್ತಾರೆ, ಇದಕ್ಕೆ ಕೊನೆ ಇರುವುದಿಲ್ಲ. ಆದ್ದರಿಂದ ಈ ದಿವಸ ಸೀಮಿತವಾದಂಥ ನಮ್ಮ ಅಧಿವೇಶನದ ವಿಚಾರಕ್ಕೆ ನಮ್ಮ ವಿಚಾರಗಳನ್ನು ಸೀಮಿತಗೊಳಿಸಬೇಕೆಂದು ನಾನು ಮಾನ್ಯ ಅಧ್ಯಕ್ಷಿಣಿಯವರ ಪರವಾಗಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

SRI QUMARUL ISLAM: I have understood what you have said. However, I was just expressing my feelings, I must justify whether I have confidence in the Council of Ministers headed by Sri S.Bangarappa. For me, Sri Bangarappa or Veerendra Patil or Azeez Sait, does not make any difference. The group which is enjoying majority will elect its leader and he will be the Chief Minister of the State and sit on the first chair in this House. But, for me, people of Karnataka are more important in general and more particularly, the minorities, dalits and backward classes of the State. I am representing the people of Gulbarga but my Party and I also represent the minorities, the scheduled castes and the backward classes of this State. Therefore I want the Hon'ble Chief Minister that he should not just give lip sympathy and emotional assurances in the name of Quran, Bible and Geetha because such assurances have been unimplemented. The K.P.C.C.(I) Manifesto has assured in the name of Bible and Geetha but whatever assurances are given there they have not been implemented by the previous Chief Minister. That is why I am saying that I want a simple assurance from the Hon'ble Chief Minister that his Government, which is there in majority in Karnataka, will take strong steps to solve the problems of these people by providing the education and improving their economic status. As long as the Chief Minister tries to solve these problems of the minorities, I as a Legislator and a Muslim Leader, extend my support to him. As soon as this Government deviates from this, I will be the first man to criticise and stop giving my support.

With these few words, I support the Hon'ble Chief Minister. Thank you.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಇವತ್ತಿನ ಸಭೆ ಈ ಪರಿಸ್ಥಿತಿಯಲ್ಲಿ ಸೇರುತ್ತದೆಂದು ನಾವ್ಯಾರೂ ಕನಸಿನಲ್ಲಿ ಕಂಡಿರಲಿಲ್ಲ. ಈ ಪ್ರಸಂಗ ಬರುತ್ತದೆಂದು ಸಹಾ ನಮಗೆ ಅನಿಸಿರಲಿಲ್ಲ. ಇದಕ್ಕೆ ಕಾರಣಕರ್ತರು ನೀವೇ. ಅದರಲ್ಲಿ ಸಂಶಯ ಇಲ್ಲ. ನಾವು ಅದಕ್ಕೆ ಕಾರಣರಲ್ಲ. ಆದ್ದರಿಂದ ಒಂದು, ಯಾರು ಮುಖ್ಯಮಂತ್ರಿಗಳಾಗುತ್ತಾರೆಂಬ ಬಗ್ಗೆ ನಮಗೆ ಚಿಂತೆ ಇಲ್ಲ. ನಿಮಗೆ ಬಹುಮತ ಇರುವುದರಿಂದ ಯಾರು ಬೇಕಾದರೂ ಮುಖ್ಯಮಂತ್ರಿಯಾಗಬಹುದು. ಇವತ್ತು ತಾಂತ್ರಿಕವಾಗಿ ಈ ಸಭೆಯಲ್ಲಿ ಬಹುಮತವನ್ನು ಅಥವಾ ನಿಮ್ಮ ವಿಶ್ವಾಸವನ್ನು ವ್ಯಕ್ತಪಡಿಸತಕ್ಕಂಥಾದ್ದು. ಹೊರಗಡೆ ನಿಮಗೆ ಬಹುಮತ ದೊರಕಿದೆ ಎಂಬುದರಲ್ಲಿ ಅನುಮಾನ ಇಲ್ಲ. ಬಹುಮತವನ್ನು ದೊರಕಿಸಿಕೊಂಡಿದ್ದೀರಿ. ಮಾನ್ಯ ಬಂಗಾರಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾರೆ. ಅವರು ಆಗಬಾರದೆಂದು ನಾನು ಹೇಳಿದರೂ ಅದು ನಿಲ್ಲುವ ಪ್ರಶ್ನೆಯಿಲ್ಲ. ನಮ್ಮ ಮತಗಳಿಂದೇನು ಅವರು ಮುಖ್ಯಮಂತ್ರಿಗಳಾಗಬೇಕಾದಂಥ ಪ್ರಸಂಗ ಇಲ್ಲ. ಈಗಾಗಲೆ ಮುಖ್ಯಮಂತ್ರಿಗಳಾಗುವುದಕ್ಕೆ ಕಾನೂನು ಅವರಿಗೆ ಬಲ ಕೊಟ್ಟಿದೆ. ಪಕ್ಷಾಂತರ ಮಸೂದೆ

ಇರುವುದರಿಂದ ಯಾರೂ ಅಲ್ಲಾಡುವ ಹಾಗೇ ಇಲ್ಲ. ಆ ರೀತಿ ಮಸೂದೆ ಇಲ್ಲದೆ ಇದ್ದಿದ್ದರೆ ಪರಿಸ್ಥಿತಿ ಏನಾಗುತ್ತಿತ್ತು ಎಂಬುದರ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿರುವುದು ನನಗೆ ಸಂತೋಷ. ಅವರಿಗೆ ಬಹುಮತ ಇದೆ. ಮುಖ್ಯಮಂತ್ರಿಗಳಾಗಿದ್ದಾರೆ. ಅವರು ಏಕೆ ಆಗುತ್ತಾರೆಂದು ನಾನು ಕೇಳುವುದಿಲ್ಲ. ಅದರಲ್ಲಿ ನನಗೆ ಸಂತೋಷವೇ. ನಾನು ದುಃಖ ಪಡತಕ್ಕ ಮನುಷ್ಯನಲ್ಲ. ಅವರ ಆಡಳಿತವೂ ನಡೆಯಲಿ ಎಷ್ಟು ದಿವಸ ಅವರ ಆಡಳಿತ ನಡೆಯುತ್ತಿದೆ ಎಷ್ಟರಮಟ್ಟಿಗೆ ನೀವು ಅವರಿಗೆ ಬೆಂಬಲ ಕೊಡುತ್ತೀರೆಂದು ನೋಡೋಣ. ಒಂದು, ಈ ಸಭೆಯನ್ನು ಕರೆದದ್ದೇ ಸರಿಯಲ್ಲವೆಂದು ನನ್ನ ವಾದ. ಈ ಸಭೆಯನ್ನು ರಾಜ್ಯಪಾಲರು ಕರೆಯಲೇಬಾರದಾಗಿತ್ತು. ಸಭೆಯನ್ನು ಯಾರಿಗೆ ಕರೆಯಿರಿ ಎಂದು ಹೇಳಬೇಕಾಗಿತ್ತು. ಅಂದರೆ, ಮಾನ್ಯ ವೀರೇಂದ್ರ ಪಾಟೀಲರಿಗೆ ಸಭೆ ಕರೆಯಿರಿ ಎಂದು ಹೇಳಬೇಕಾಗಿತ್ತು. ನಾನು ಮತ್ತು ಮಾನ್ಯ ಬಂಗಾರಪ್ಪನವರು ಒಟ್ಟಿಗೆ ಕೆಲಸ ಮಾಡಿದ್ದೇವೆ. ಮಾನ್ಯ ನಂಜೇಗೌಡರು ಬಂಗಾರಪ್ಪನವರು ಮತ್ತು ನಾನು ಇಲ್ಲಿಯೇ ಕುಳಿತುಕೊಂಡು ದೊಡ್ಡ ಗದ್ದಲ ಮಾಡಿದ್ದೇವೆ. ಪಾರ್ಲಿಮೆಂಟ್ ಮುಂದೆ ಹೋಗಿ ಕಪ್ಪು ಬಾವುಟ ಹಿಡಿದಿದ್ದೇವೆ. ಮಾನ್ಯರುಗಳನ್ನೇ ಕೇಳಿ, ಆ ಕುರಿತು ಈಗ ನಾನು ಹೆಚ್ಚು ಮಾತನಾಡಲು ಹೋಗುವುದಿಲ್ಲ. ಮಾನ್ಯ ಬಂಗಾರಪ್ಪನವರಿಗೆ ನಿಮ್ಮ ವಿಶ್ವಾಸ ಮತವನ್ನು ರುಜುವಾತು ಪಡಿಸಿ ಎಂದು ಹೇಳತಕ್ಕಂಥ ಪರಿಸ್ಥಿತಿಯು ಬಂತಲ್ಲ? ಅದರ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ರಾಜ್ಯಪಾಲರು ಯಾರಿಗೆ ಸಭೆ ಕರೆಯಿರಿ ಎಂದು ಹೇಳಬೇಕಾಗಿತ್ತು? ಇವೊತ್ತು ರಾಷ್ಟ್ರದಲ್ಲಿ ಏನಾಗಿದೆ? ರಾಷ್ಟ್ರಪತಿಯವರು ಯಾರನ್ನು ಕರೆಯುತ್ತಾ ಇದ್ದಾರೆ? ವಿ.ಪಿ.ಸಿಂಗ್‌ರವರನ್ನು ನವೆಂಬರ್ 7ನೇ ತಾರೀಖಿನಂದು ನಿಮ್ಮ ವಿಶ್ವಾಸ ಮತವನ್ನು ವ್ಯಕ್ತಪಡಿಸಿ ಎಂದು ಕೇಳುತ್ತಾ ಇದ್ದಾರೆ. ಅದೇ ರೀತಿಯಲ್ಲಿ ಇಲ್ಲಿ ವೀರೇಂದ್ರಪಾಟೀಲರನ್ನು ಕರೆದಿದ್ದರೆ ಅದಕ್ಕೆ ಒಂದು ಬೆಲೆ ಬರುತ್ತಾ ಇತ್ತು. ಆ ರೀತಿ ಇವರು ಕೇಳಲಿಲ್ಲ. ಇವೊತ್ತು ಅದನ್ನು ಬಿಟ್ಟು ರಾಜ್ಯಪಾಲರು ಏನು ಹೇಳುತ್ತಾ ಇದ್ದಾರೆ? ಹೆಜ್ಜೆ ಹೆಜ್ಜೆಗೂ ನಿಮ್ಮ ಶಾಸಕಾಂಗ ಪಕ್ಷ ಅಕ್ರಮ ಎಂದು ಹೇಳುತ್ತಾ ಇದ್ದಾರೆ. ನೀವು ಪಕ್ಷದಿಂದ ನಾಯಕರನ್ನು ಹೊರಗಡೆ ಹಾಕಿದರೂ ಆ ನಾಯಕತ್ವಕ್ಕೆ ಬಹುಮತ ಇದ್ದರೆ ಆ ನಾಯಕತ್ವವನ್ನು ಮಾಡುತ್ತೇನೆ ಎಂದು ಹೇಳಿದ್ದಾರೆ. ಯಾರೋ ಡೆಲ್ಲಿಯ ಕಾಂಗ್ರೆಸ್ ಅಧ್ಯಕ್ಷರು ಇಲ್ಲಿಗೆ ಬಂದು ಮುಖ್ಯಮಂತ್ರಿಗಳ ಪದವಿಯನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥಾದ್ದನ್ನು ನಮ್ಮ ಸಂವಿಧಾನದ ರಕ್ಷಣೆ ಮಾಡತಕ್ಕಂಥ ರಾಜ್ಯಪಾಲರು ಹೇಳಿರತಕ್ಕಂಥ ಮಾತುಗಳು. ಈ ಮಾತುಗಳನ್ನು ಹಿಂದು ಮುಂದು ಮಾಡಿ ಹೇಳತಕ್ಕಂಥಾದ್ದು ಇಲ್ಲ. ವೀರೇಂದ್ರ ಪಾಟೀಲ್‌ರವರು 11 ತಿಂಗಳ ಕಾಲ ಈ ರಾಜ್ಯದಲ್ಲಿ ರಾಜ್ಯಭಾರ ಮಾಡಿದರು. ಈ ಸಭೆಯಲ್ಲಿ ವೀರೇಂದ್ರ ಪಾಟೀಲರನ್ನು ಹೊಗಳಿ, ಗುಣಗಾನ ಮಾಡಿ ಅವರ ಕಾಲಿನಿಂದ ತಲೆಯವರೆಗೂ ಪಾದಪೂಜೆ ಮಾಡಿ, ತಲೆ ಮುಟ್ಟಿ ಎಲ್ಲವನ್ನು ಮಾಡಿದ್ದೂ ಉಂಟು. ಅದರಲ್ಲಿ ಬೇರೆ ಮಾತಿಲ್ಲ. ಇದು ಸತ್ಯ, ಇದರಲ್ಲಿ ಎರಡನೇ ಮಾತಿಲ್ಲ. ಈ ಪರಿಸ್ಥಿತಿಯು ಈಗ ಕಾಲಭೂತವಾಯಿತು. ಇದೇ ಪರಿಸ್ಥಿತಿಯು ಮಾನ್ಯ ಬಂಗಾರಪ್ಪನವರಿಗೂ ಬರುತ್ತದೆ, ಅದು ಬಾರದೇ ಇರಲಿ ಎಂದು ನಾನು ಅಪೇಕ್ಷಿಸುತ್ತೇನೆ. ಈ ಪರಿಸ್ಥಿತಿಯು ಬಹಳ ದೂರ ಹೋಗುತ್ತದೆ ಎನ್ನುವ ಪ್ರಶ್ನೆಯೇ ಇಲ್ಲ.

ರಾಜ್ಯದಲ್ಲಿ ಅಶಾಂತಿ ವಾತಾವರಣ ಮೂಡಿತ್ತು, ರಾಮನಗರ, ಚೆನ್ನಪಟ್ಟಣ ಮತ್ತು ದಾವಣಗೆರೆ ಮತ್ತಿತರ ಕಡೆಗಳಲ್ಲಿ ದೊಡ್ಡ ಗದ್ದಲ ಆಯಿತು, ಪ್ರಾಣ ಹಾನಿಯಾಯಿತು, ಹಿಂಸೆ ಆಯಿತು. ಇದನ್ನು ಗಮನದಲ್ಲಿಟ್ಟುಕೊಂಡು ಇವರ ಪಕ್ಷದ ಅಧ್ಯಕ್ಷರು ಚನ್ನಪಟ್ಟಣಕ್ಕೆ ದಿಢೀರ್ ಬಂದರು. ವೀರೇಂದ್ರ ಪಾಟೀಲರನ್ನು ಅವರ ಮನೆಯಲ್ಲಿ ಹೋಗಿ ಭೇಟಿ ಮಾಡಿದರು. ಅವರೊಂದಿಗೆ ಕುಶಲ ಸಂಭಾಷಣೆ ನಡೆಸಿದರು. ವಿಮಾನ ನಿಲ್ದಾಣಕ್ಕೆ ಹೋದವರು ಇವರನ್ನು ಕಿತ್ತು ಹಾಕಿದ್ದೇನೆ ಎಂದು ಹೇಳಿದರು. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರತಕ್ಕಂತ ಯಾರಿಗಾದರೂ ಇದು ಸರಿ ಕಾಣುತ್ತದೆಯೇ ಎಂಬುದು ಪ್ರಶ್ನೆ?

ಶ್ರೀ ಎಸ್. ಚಿಕ್ಕೇಗೌಡ:- ಮಾನ್ಯ ಉಪಾಧ್ಯಕ್ಷಿಣಿಯವರೇ, ನಾನು ಕ್ರಿಯಾಲೋಪವನ್ನು ಎತ್ತಿದ್ದೇನೆ. ಈಗ ನಮ್ಮ ಸಂಸದೀಯ ವ್ಯವಹಾರಗಳ ಮಂತ್ರಿಗಳವರು ಲೋಕಸಭೆಯಲ್ಲಿ, ಮತ್ತಿತರ

ಕಡೆಗಳಲ್ಲಿ ಸದನದಲ್ಲಿ ನಡೆದಂಥ ವ್ಯವಹಾರಗಳ ಬಗ್ಗೆ ಪಕ್ಷದ ಆಂತರಿಕ ವಿಚಾರದಲ್ಲಿ ಪ್ರಸ್ತಾಪ ಮಾಡಬಾರದು ಎಂದು ಹೇಳಿದ್ದನ್ನು ತಮ್ಮ ಗಮನಕ್ಕೆ ಮತ್ತು ಸಭೆ ಗಮನಕ್ಕೆ ತಂದಿದ್ದಾರೆ. ಆದರೆ ಇವರಿಗೆ ತಮ್ಮ ಭಾಷಣದಲ್ಲಿ ಅದನ್ನೆಲ್ಲಾ ಪ್ರಸ್ತಾಪ ಮಾಡುವ ಅವಶ್ಯಕತೆ ಏಕೆ ಬಂತು? ಕಾಂಗ್ರೆಸ್ ಅಧ್ಯಕ್ಷರು ದಿಢೀರ್ ಬಂದರು ಹಾಗೆ ಮಾಡಿದರು ಎಂದು ಇವರೇಕೆ ಹೇಳಬೇಕು? ಅಲ್ಲಿ ಚೌಟಾಲರವರನ್ನು ತೆಗೆದರು, ದೇವೀಲಾಲ್‌ರವರನ್ನು ತೆಗದರು ಎಲ್ಲಾ ಆಯಿತು, ಇವರು ಆಗ ಏತಕ್ಕೆ ಮಾತನಾಡಲಿಲ್ಲ? ಇವರು ಹೋಗಿ ರಾಜ್ಯಪಾಲರ ಹತ್ತಿರ ಡಿಸಲ್ಯೂಶನ್ ಮಾಡಿ ಎಂದು ಹೇಳಿದರು. ಸಂವಿಧಾನಬದ್ಧವಾಗಿ ರಾಜ್ಯಪಾಲರು ಮಾಡಿರತಕ್ಕಂಥಾದ್ದನ್ನು ಪ್ರಶ್ನೆ ಮಾಡತಕ್ಕಂಥ ವೇದಿಕೆಯಲ್ಲಿ ಪ್ರಶ್ನಿಸಲಿ? ಅದನ್ನು ಬಿಟ್ಟು ವೀರೇಂದ್ರ ಪಾಟೀಲರನ್ನು ಕರೆಯಬೇಕಾಗಿತ್ತು ಅಂದರೆ ಅದಕ್ಕೆ ಏನರ್ಥ ಬರುತ್ತದೆ? ದಯಮಾಡಿ ಮಾನ್ಯ ಸದಸ್ಯರು ವಿಷಯದ ಚೌಕಟ್ಟಿನಲ್ಲಿ ಮಾತನಾಡಲು ತಾವು ಆದೇಶ ಕೊಡಬೇಕು ಮತ್ತು ಇದರ ಬಗ್ಗೆ ಒಂದು ರೂಲಿಂಗ್ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ನಾನು ಆ ಚೌಕಟ್ಟನ್ನು ಬಿಟ್ಟು ಮಾತನಾಡುತ್ತಾ ಇಲ್ಲ. ಮಾನ್ಯ ರಾಜ್ಯಪಾಲರು ಹೇಳಿದ ಮಾತನ್ನು ಈ ಸಭೆಯಲ್ಲಿ ತಿಳಿಸುತ್ತಾ ಇದ್ದೇನೆ. ನಾನು ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ಎಂದು ಹೇಳುತ್ತಾ ಇದ್ದೇನೆಯೇ ವಿನಹ ಮಾನ್ಯ ರಾಜೀವ್ ಗಾಂಧೀಜಿಯವರು ಎಂದು ಹೇಳುತ್ತಾ ಇಲ್ಲ.

ವೀರೇಂದ್ರ ಪಾಟೀಲರು ಆಡಳಿತದಲ್ಲಿದ್ದರು, ಕಾನೂನು ಕುಸಿದು ಬಿತ್ತು, ಅಶಾಂತಿ ವಾತಾವರಣ ಬಂತು ಎಂದು ಹೇಳಿದರು. ಆದರೆ ಇವತ್ತಿನ ಪರಿಸ್ಥಿತಿ ಏನಾಗಿದೆ? ಅವರು ಇಂದು ಅನಾರೋಗ್ಯವಾಗಿದ್ದಾರೆ. ಪಾರ್ಶ್ವವಾಯುವಾಗಿದೆ, ಅವರಿಂದ ಸರ್ಕಾರದ ಆಡಳಿತ ನಡೆಸುವುದ ಕ್ಕಾಗುವುದಿಲ್ಲವೆಂದು ಹೇಳುತ್ತಿದ್ದೀರಿ. ಆರೋಗ್ಯವಂತರೂ, ಯೋಗಾಭ್ಯಾಸ ಮಾಡಿ, ನವ ಯುವಕರಂತೆ ಕಾಣುವ ಬಂಗಾರಪ್ಪನವರು ಬಂದ ಮೇಲೂ ಈ ರಾಜ್ಯದಲ್ಲಿ ಗೋಲಿಬಾರ್ ನಿಂತಿಲ್ಲ. ಕಾನೂನು ಸ್ಥಿತಿ ಹದಗೆಟ್ಟಿದೆ. ಎಲ್ಲೆಲ್ಲೂ ಗಂಭೀರ ವಾತಾವರಣ ನಿರ್ಮಾಣವಾಗಿದೆ. ಇವರು ಬಂದ ಮೇಲೆ ಬದಲಾವಣೆ ಏನಾಯಿತು. ಒಂದು ಕಡೆ ವೀರೇಂದ್ರ ಪಾಟೀಲರಿಗೆ ಅನಾರೋಗ್ಯ ಎಂದು ಹೇಳಿದಿರಿ. ಮತ್ತೊಂದು ಕಡೆ ತಮಿಳುನಾಡಿನಲ್ಲಿ ಎರಡೂವರೆ ವರ್ಷ ಕಾಲ ತಲೆ, ಕೈ, ಕಾಲು ಸರಿ ಇಲ್ಲದಿದ್ದ ಮುಖ್ಯಮಂತ್ರಿ ಆಡಳಿತ ನಡೆಸಿದ್ದಕ್ಕೂ ನಿಮ್ಮ ಸರ್ಕಾರದವರು ಬೆಂಬಲ ಕೊಟ್ಟಿರಿ. ಆಂಧ್ರದ ಚೆನ್ನಾರೆಡ್ಡಿಯವರಿಗೆ ಬೆಂಬಲ ಕೊಟ್ಟಿರಿ. ನಿಮಗೆ ಬೇಕಾದವರಿಗೆಲ್ಲಾ ಭಾರತ ರತ್ನ ಪ್ರಶಸ್ತಿ ಕೊಟ್ಟಿರಿ. ಎಂ.ಜಿ.ಆರ್.ಗೆ ಬೆಂಬಲ ಕೊಟ್ಟಿರಿ. ಆದರೆ, ಅದೇ ವೀರೇಂದ್ರಪಾಟೀಲರನ್ನು ಅಮಾನವೀಯವಾಗಿ ಬಹಳ ಸಣ್ಣತನದಲ್ಲಿ ಅವಿವೇಕದಿಂದ ಅನೀತಿಯುತದಿಂದ ಪ್ರಜಾಸತ್ತೆಯನ್ನು ಕೊಲೆ ಮಾಡುವ ರೀತಿಯಲ್ಲಿ ತೆಗೆದುಹಾಕಿದ ನೀತಿ ಇದೆಯಲ್ಲಾ ಇದು ನಿಜವಾಗಲೂ ಎಲ್ಲರೂ ನಾಚಿಕೆ ಪಡುವಂತಾದ್ದು. ರಾಜೀವ್‌ಗಾಂಧಿಯವರಾಗಲಿ, ಬೇರೆ ಯಾರೇ ಆಗಿರಲಿ ಆ ಕೆಲಸ ಮಾಡಬಾರದಿತ್ತು. ಈ ನಮ್ಮ ರಾಜ್ಯಕ್ಕೆ ಮುಖ್ಯಮಂತ್ರಿ ರಾಜೀವ್‌ಗಾಂಧಿಯವರೋ, ವೀರೇಂದ್ರ ಪಾಟೀಲರೋ ಅಥವಾ ಬಂಗಾರಪ್ಪನವರೋ?

(ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು.)

ಈ ರಾಜ್ಯಕ್ಕೆ ಬಂದು ಬದಲಾವಣೆ ಮಾಡಿ, ರಾಜ್ಯದ ವಾತಾವರಣ ಕೆಡಿಸಿ, ಪ್ರಜಾಪ್ರಭುತ್ವವನ್ನು ನಾಶಮಾಡುವಂತಹ ನೀತಿಗೆ ಹೋದದ್ದು ಇದೊಂದು ಪಿತೂರಿ. ದೆಹಲಿ ದರ್ಬಾರಿನಲ್ಲಿ ದೆಹಲಿ ದೊರೆಗಳ ಹತ್ತಿರ ಒಂದು ಪಿತೂರಿ ನಡೆಯಿತು. ಈ ಪಿತೂರಿಯ ಮೊದಲನೆ ಅಂಕ ಶ್ರೀ ಜಾಫರ್ ಷರೀಫ್ ಅವರು. ರಾಜ್ಯದಲ್ಲಿ ಈ ಪಿತೂರಿಯನ್ನು ಪ್ರಾರಂಭ ಮಾಡಿದವರು ಶ್ರೀ ಜಾಫರ್ ಷರೀಫ್ ಅವರು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಯಾರು ಈ ಸದನದ ಸದಸ್ಯರಲ್ಲ ಅಂಥವರ ಬಗ್ಗೆ ಪ್ರಸ್ತಾಪಿಸುವುದು ನಮ್ಮ ರೂಲ್ಸ್ ಆಫ್ ಪ್ರೊಸೀಜರ್ ಪ್ರಕಾರ ತಪ್ಪು. ಅದು ರೂಲ್ 310ರಲ್ಲಿ ಕ್ಲಿಯರಾಗಿದೆ. ನಾವು ಯಾರ ಬಗ್ಗೆ ಮಾತನಾಡಬಹುದು, ಯಾವ ಮಾತನ್ನು ಇಲ್ಲಿ ಹೇಳಬಹುದು ಅಥವಾ ಹೇಳಬಾರದು ಎನ್ನುವುದು ನಿಯಮ 310ರಲ್ಲಿ ಸ್ಪಷ್ಟವಾಗಿದೆ. ಆದರೆ, ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಹೆಸರು ತೆಗೆದುಕೊಂಡು ಸ್ಪಷ್ಟವಾಗಿ ಇಂತಹವರೇ ಕಾರಣಕರ್ತರು ಎಂದು ಹೇಳುತ್ತಿದ್ದಾರೆ. ಅದನ್ನು ದಯವಿಟ್ಟು ವಿಥ್‌ಡ್ರಾ ಮಾಡಿಕೊಳ್ಳಬೇಕೆಂದು ತಮ್ಮ ಮುಖಾಂತರ ಅವರನ್ನು ಕೇಳುತ್ತೇನೆ.

ಅಧ್ಯಕ್ಷರು:- ವಾಟಾಳ್ ನಾಗರಾಜ್‌ರವರೇ, ಅವರು ಹೇಳಿದ ರೂಲ್ 310ರ ಬಗ್ಗೆ ಏನು ಹೇಳುತ್ತೀರಿ?

ಶ್ರೀ ವಾಟಾಳ್ ನಾಗರಾಜ್:- ನಾನು ಹೇಳುತ್ತೇನೆ, ಇದರ ಬಗ್ಗೆ ಸರ್ಕಾರ ನ್ಯಾಯಾಂಗ ತನಿಖೆ ನಡೆಸುವುದಾದರೆ ಎಲ್ಲರೂ ಹೊರಗಡೆ ಬರುತ್ತಾರೆ. ಇದರ ಬಗ್ಗೆ ಸಮರ್ಪಕವಾದ ನ್ಯಾಯಾಂಗ ತನಿಖೆ ನಡೆಸಿ. ಈ ಪಿತೂರಿ ಹಿಂದೆ ಯಾರ್‍ಯಾರಿದ್ದಾರೆ? ಎನ್ನುವುದು ಹೊರಗೆ ಬರುತ್ತದೆ. ನಾನು ಹೇಳುತ್ತಿರುವುದು ಅವರೊಬ್ಬರನ್ನೇ ಅಲ್ಲ. ರಾಜ್ಯದ ಕೋಮುಗಲಭೆಗಳ ಹಿಂದೆ ರಾಜಕಾರಣಿಗಳಿದ್ದಾರೆ. ದಾವಣಗೆರೆಯಲ್ಲಿ ನಮ್ಮ ರಾಜ್ಯಪಾಲರ ಸಲಹೆಗಾರರು ಹೋಗಿದ್ದಾಗ ಏನು ಹೇಳಿದ್ದಾರೆ? ಇದರ ಹಿಂದೆ ರಾಜಕಾರಣಿಗಳು ಪಿತೂರಿ ನಡೆಸಿದ್ದಾರೆ ಎಂದು ಹೇಳಿದ್ದಾರೆ. ರಾಜಕಾರಣಿಗಳು ಅಂದರೆ ಇವರೊಬ್ಬರೇ ಅಲ್ಲ, ಇನ್ನೂ ಅನೇಕ ಜನ ರಾಜಕಾರಣಿಗಳು ಈ ಪಿತೂರಿಯ ಹಿಂದೆ ಇದ್ದಾರೆ.

ಅಧ್ಯಕ್ಷರು:- ರಾಜ್ಯಪಾಲರ ಸಲಹೆಗಾರರು ಯಾರಿಗೆ ವರದಿ ಕೊಟ್ಟರು.

ಶ್ರೀ ವಾಟಾಳ್ ನಾಗರಾಜ್:- ಶ್ರೀ ಹರ್ಲಂಕರ್‌ರವರು ದಾವಣಗೆರೆಗೆ ಹೋದಾಗ ದಾವಣಗೆರೆಯ ಜನ ಅವರ ಮುಂದೆ ಹೇಳಿರುವುದು ಕನ್ನಡಪ್ರಭದಲ್ಲಿ ನಾಲ್ಕು ಕಾಲಂಗಳಲ್ಲಿ ಬಂದಿದೆ. ತಾವು ಅದನ್ನು ನೋಡಬೇಕು. ನಾನು ಯಾರನ್ನೋ ಕುರಿತು ಯಾರ ಬಗ್ಗೆಯೋ ಆಕ್ಷೇಪಣೆ ಮಾಡಿ ಅವರ ಮೇಲೆ ಕಪ್ಪುಚುಕ್ಕೆ ಇಡಬೇಕೆಂಬ ಮನುಷ್ಯನಲ್ಲ. 11 ತಿಂಗಳ ಹಿಂದೆ ಶ್ರೀ ವೀರೇಂದ್ರ ಪಾಟೀಲರು ಅಧಿಕಾರಕ್ಕೆ ಬಂದಾಗಿನಿಂದಲೂ ಕೇಂದ್ರಕ್ಕೆ ಸೊಪ್ಪು ಹಾಕಲಿಲ್ಲ, ಕೇಂದ್ರಕ್ಕೆ ಗುಲಾಮರಂತೆ ನಡೆದುಕೊಳ್ಳಲಿಲ್ಲ, ಕೇಂದ್ರಕ್ಕೆ ಸೆಲ್ಯೂಟ್ ಹೊಡೆಯಲ್ಲಿಲ್ಲ. ಇದೇ ಅವರಿಗೆ ಮುಳುವಾದದ್ದು. ಇವತ್ತು ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವುದು ಕೇಂದ್ರವೋ? ಮಾನ್ಯ ಅಧ್ಯಕ್ಷರೆ, ನಾನು ಇವತ್ತು ಹೇಳುತ್ತಿದ್ದೇನೆ. ಈ ಸದನದಲ್ಲಿ ಮೊದಲಿನಿಂದಲೂ ನಾನಂತೂ ಯಾವತ್ತೂ ಬದಲಾವಣೆಯಾಗಿರ ತಕ್ಕವನಲ್ಲ. ಅಥವಾ ಯಾರಿಂದಲೂ ಕೃಪೆ ಮಾಡಿಕೊಂಡು, ಯಾವ ಪಕ್ಷದ ಬೆಂಬಲ ತೆಗೆದುಕೊಂಡು ಚುನಾವಣೆಗೆ ನಿಲ್ಲಬೇಕೆಂದು ಹೋದವನೂ ಅಲ್ಲ. ನನ್ನಿಂದ ನಾನು ಸ್ವಯಂ ನಿಂತು ಶಕ್ತಿಯಿಂದ ಗೆದ್ದಿರುವವನು. ಆದ್ದರಿಂದ ಯಾರ ಬೆಂಬಲ, ಯಾರ ವಿರುದ್ಧ ಹೇಳತಕ್ಕಂಥಾದ್ದಲ್ಲ. ನಾನು ಇವತ್ತು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಾನು ವೀರೇಂದ್ರ ಪಾಟೀಲರನ್ನು ಅನೇಕ ಬಾರಿ ಭೇಟಿ ಮಾಡಿದ್ದೇನೆ. ಅವರನ್ನು ನೋಡಿದ್ದೇನೆ. ಅವರ ಆರೋಗ್ಯವನ್ನು ನೋಡಿದ್ದೇನೆ. ಅವರಿಗಿಂತ ಆರೋಗ್ಯದಲ್ಲಿ ಕೆಟ್ಟಿದ್ದಂಥ ತಮಿಳುನಾಡಿನ ಮಾಜಿ ಮುಖ್ಯಮಂತ್ರಿಗಳು ಹಾಗೂ ಬೇರೆ ಬೇರೆ ರಾಜ್ಯಗಳಲ್ಲಿ ಅನಾರೋಗ್ಯವಾಗಿದ್ದಂಥ ಮುಖ್ಯಮಂತ್ರಿಗಳಿಗೂ ನಾವು ಅಧಿಕಾರವನ್ನು ನಡೆಸುವುದಕ್ಕೆ ಅವಕಾಶವನ್ನು ಕೊಟ್ಟಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಏತಕ್ಕೆ ಕೊಡಬಾರದು ಎಂದು ರಾಜ್ಯಪಾಲರೇ ಹೇಳಿದ್ದಾರೆ. ಇದನ್ನು ನಾನು ಹೇಳತಕ್ಕಂಥದ್ದು ಅಲ್ಲ. ಇದನ್ನು ರಾಜ್ಯಪಾಲರೇ ಹೇಳಿದ್ದಾರೆ. ಈ ಮಾತು ಬೇರೆ. ಇವತ್ತಿನ ಪರಿಸ್ಥಿತಿಯ ಬಗ್ಗೆ ಏನಾಗಿದೆ ಎಂದು ಹೇಳಿದರೆ, ಈ ಪಿತೂರಿಯ ಬಗ್ಗೆ ಒಂದು ಸಮಗ್ರವಾದಂಥ ನ್ಯಾಯಾಂಗ ತನಿಖೆಯನ್ನು ಈಗಿನ ಮುಖ್ಯಮಂತ್ರಿಗಳು ನಡೆಸುವುದಾದರೆ ಬಹುಶಃ ಅದರಲ್ಲಿ ಯಾವ ಯಾವ ಪಕ್ಷದವರು ಹೊರಗೆ ಬರುತ್ತಾರೆ ಎನ್ನತಕ್ಕಂಥದ್ದು ಗೊತ್ತಾಗುತ್ತದೆ. ನಾವು ಇದ್ದರೆ ನಾವು ಬರುತ್ತೇವೆ. ಬೇರೆಯವರು ಇದ್ದರೆ ಬೇರೆಯವರು ಬರುತ್ತಾರೆ. ಅದರ ಬಗ್ಗೆ ಚಿಂತೆ ಪಡಬೇಕಾಗಿಲ್ಲ. ಇವತ್ತು ಇವರು ಬಂದಮೇಲೆ ಏನಾದರೂ ನಿಂತಿದೆಯೇ? ಇವರು ಬಂದಮೇಲೆ ಕೋಲಾರದಲ್ಲಿ ಗೋಲಿಬಾರ್ ಆಗಿದೆ, ಚನ್ನರಾಯಪಟ್ಟಣದಲ್ಲಿ ಆಗಿದೆ, ರಾಮನಗರದಲ್ಲಿ

ಆಗಿದೆ. ಮುಳುಬಾಗಿಲಿನಲ್ಲಿ ಆಗಿದೆ.ಇಡೀ ರಾಜ್ಯದಲ್ಲೆಲ್ಲಾ ಹಬ್ಬಿದೆ. ಇದಕ್ಕೆ ಕಾರಣವನ್ನು ವೀರೇಂದ್ರ ಪಾಟೀಲರ ಒಬ್ಬರ ಮೇಲೆಯೇ ಗೂಬೆ ಕೂರಿಸಿ ಅವರನ್ನು ಹೊರಗೆ ಹಾಕತಕ್ಕಂಥ ತಂತ್ರ ಏನು ನಡೆದಿದೆಯಲ್ಲಾ ಆ ಸಂದರ್ಭ, ಅವರು ಖಾಯಿಲೆಯಿಂದ ಕೆಳಗೆ ಬಿದ್ದಂಥವರನ್ನು ನೋಡಿ ಈ ರೀತಿ ಮಾಡಿದ್ದಾರೆ. ಇದನ್ನೆಲ್ಲಾ ನೋಡಿದರೆ ನಮಗೆ ಹಿಂದಿನ ಪುರಾಣಗಳು ಜ್ಞಾಪಕಕ್ಕೆ ಬರುತ್ತವೆ. ರಾಮಾಯಣದಲ್ಲಿ ಸೀತೆಯನ್ನು ರಾವಣ ಹೊತ್ತುಕೊಂಡು ಹೋದ ಎನ್ನತಕ್ಕಂಥದ್ದು ಒಂದು ಕಥೆ. ಮಹಾಭಾರತದಲ್ಲಿ ದುಶ್ಯಾಸನ ದ್ರೌಪದಿಯ ಸೀರೆಯನ್ನು ಎಳೆದ ಎನ್ನತಕ್ಕಂಥ ಕಥೆಯನ್ನು ನಾವು ಕೇಳಿದ್ದೇವೆ. ಮತ್ತು ಕಿತ್ತೂರು ರಾಣಿ ಚನ್ನಮ್ಮನಿಗೆ ಕೈ ಕೊಟ್ಟಂಥ ಮಲ್ಲಪ್ಪಶೆಟ್ಟಿಯನ್ನು ನೋಡಿದ್ದೇವೆ. ಟಿಪ್ಪುಸುಲ್ತಾನನಿಗೆ ಕೈ ಕೊಟ್ಟಂಥ ** ನೋಡಿದ್ದೇನೆ. ಅವರೆಲ್ಲರನ್ನೂ ಮೀರಿಸಿದಂಥ ಕಾಂಗ್ರೆಸ್ ಅಧ್ಯಕ್ಷರು ಈ ವೀರೇಂದ್ರ ಪಾಟೀಲರಿಗೆ ಕೈ ಕೊಟ್ಟಿರುವುದನ್ನು ನೋಡಿದರೆ...

(ಈ ಸಂದರ್ಭದಲ್ಲಿ ಅನೇಕ ಕಾಂಗ್ರೆಸ್ ಸದಸ್ಯರುಗಳು ವಿರೋಧ ಪಕ್ಷದ ಸದಸ್ಯರುಗಳ ಸಾಲಿನತ್ತ ದಾವಿಸಿ ಬಂದರು. ಭಾರಿ ಗೊಂದಲ ಉಂಟಾಯಿತು.)

MR. SPEAKER: Order please. Order, Order.....

(ಗೊಂದಲ)

(ಈ ಸನ್ನಿವೇಶದಲ್ಲಿ ಸನ್ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನು ಬಿಟ್ಟು ತೆರಳಿದರು).

ಅಧ್ಯಕ್ಷರು:- ಈಗ ಸಭೆ 5 ನಿಮಿಷಗಳ ಕಾಲ ವಿರಮಿಸುವುದು.

(The House adjourned at 4.40pm to meet after five minures.)

(ಮತ್ತೆ ಸಭೆಯು 5 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು.)

ಅಧ್ಯಕ್ಷರು (ಶ್ರೀ ಎಸ್.ಎಂ. ಕೃಷ್ಣ) ಪೀಠವನ್ನು ಅಲಂಕರಿಸಿದರು.

ಶ್ರೀ ಎಂ.ವಿ.ವೆಂಕಟಪ್ಪ:- ಮಾನ್ಯ ಅಧ್ಯಕ್ಷರೇ, ಸದಸ್ಯರಾದ ವಾಟಾಳ್ ನಾಗರಾಜ್ ಅವರು ಮಾಜಿ ಪ್ರಧಾನಿ ಮತ್ತು ಒಂದು ಮಹಾನ್ ಸಂಸ್ಥೆಯಾದ ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷರನ್ನು *** ಎಂದು ಹೇಳಿದ್ದಾರೆ. ದಯಮಾಡಿ ಆ ಪದವನ್ನು ಕಡತದಿಂದ ತೆಗೆದುಹಾಕಬೇಕೆಂದು ಹೇಳುತ್ತೇನೆ.

MR. SPEAKER:- I have expunged all that. ಮಾನ್ಯ ವಾಟಾಳ್ ನಾಗರಾಜ್ ಅವರು ಕಾಂಗ್ರೆಸ್ ಅಧ್ಯಕ್ಷರ ಬಗ್ಗೆ ಏನು, ಇನ್‌ಸುನಿಯೇಟಿವ್ ರಿಮಾರ್ಕ್ಸ್ ಮಾಡಿದ್ದಾರೆ the whole portion is expunged. ಜೊತೆಗೆ ಮಾನ್ಯ ವಿರೋಧ ಪಕ್ಷದ ನಾಯಕರು ಈ ಬೆಳಿಗ್ಗೆ ಭಾಷಣ ಮಾಡತಕ್ಕ ಸಮಯದಲ್ಲಿ " ನಾಯಿನಿಷ್ಠೆ " ಎನ್ನುವ ಪದವನ್ನು ಉಪಯೋಗಿಸಿದ್ದಾರೆ. ಸಭೆಯಲ್ಲಿ ಶಬ್ದಗಳ ಬಳಕೆ ಇನ್ನೊಬ್ಬರ ಮನಸ್ಸನ್ನು ನೋಯಿಸದಂತೆ ಇರಬೇಕು. ಮತ್ತು ಶಬ್ದಗಳ ಬಳಕೆ, ಸದನದ ಘನತೆ-ಗೌರವಗಳಿಗೆ ಕಳಂಕ ತರದಂತಹ ರೀತಿಯಲ್ಲಿರಬೇಕು. ಮತ್ತು ಶಬ್ದಗಳ ಬಳಕೆ ಸದಸ್ಯರಿಗೆ ಸೇರಿರತಕ್ಕ ಜವಾಬ್ದಾರಿ. ನಾನು 1988ನೇ ಇಸವಿಯ ಒಂದನೇ ಫೆಬ್ರವರಿಯಲ್ಲಿ ಇದೇ ಸದನದಲ್ಲಿ ನಾಯಿಗೆ ಸಂಬಂಧಪಟ್ಟ ಹಾಗೆ ಏನು ನಡೆಯಿತು ಎಂಬುದನ್ನು ಹೇಳುತ್ತೇನೆ. ಆಗ ಶ್ರೀ ಆರ್.ವೆಂಕಟರಾಮಯ್ಯನವರು ಮಾನ್ಯ ಸದಸ್ಯರು ಮಾತನಾಡುವಾಗ ಪೋಲೀಸ್ ನಾಯಿಗಳು ಎಂದು ಹೇಳಿದ್ದಾರೆ. ಆ ಪದ ಅಷ್ಟು ಸಮಂಜಸವಾಗಿ ಕಾಣುವುದಿಲ್ಲ, ಅದನ್ನು ಕಡತದಿಂದ ತೆಗೆಸಿಹಾಕುವುದು ಒಳ್ಳೆಯದು ಎಂದು ಹೇಳಿದ್ದಾರೆ. ಶ್ರೀ ಆರ್.ಎಲ್.ಜಾಲಪ್ಪನವರ ಪೋಲೀಸರನ್ನು ನಾಯಿಗಳು ಎಂದು ಹೇಳಿದ್ದಾರೆ. ಅದನ್ನು ಕಡತದಿಂದ ತೆಗೆಸಿಹಾಕಿ ಎಂದು ಧ್ವನಿಗೂಡಿಸಿದ್ದಾರೆ. ಶ್ರೀ ಎಂ.ರಘುಪತಿಯವರು ಖಾಕಿ ನಾಯಿಗಳು ಎಂದು ಹೇಳಿದ್ದಾರೆ. ಆ ಪದಗಳನ್ನೂ ಕೂಡಾ ಕಡತದಿಂದ ತೆಗೆಸಿಹಾಕಿದ್ದೇನೆ ಎಂದು ಅಂದಿನ ಅಧ್ಯಕ್ಷರು ಅವರ ತೀರ್ಮಾನವನ್ನು ಕೊಟ್ಟಿದ್ದಾರೆ. ಹಾಗೇ ನಮ್ಮ ಕಾಮನ್ ವೆಲ್ತ್ ಪಾರ್ಲಿಮೆಂಟರಿ ಜರ್ನಲ್‌ನಲ್ಲೂ ಕೂಡಾ ಖಾಕಿ ಡಾಗ್ಸ್ ಎನ್ನುವುದು ಅನ್‌ಪಾರ್ಲಿಮೆಂಟರಿ ಎಂದು ಹೇಳಿದ್ದಾರೆ. General Association of Clerks of the Table in Common Wealth Parliament ವಾಲ್ಯೂಮ್ 32ರಲ್ಲಿ ಈ ರೀತಿ ಹೇಳಿದ್ದಾರೆ.

*** ಅಧ್ಯಕ್ಷರ ಅಪ್ಪಣೆಯ ಮೇರೆಗೆ ಈ ಪದವನ್ನು ಕಡತದಿಂದ ತೆಗೆದುಹಾಕಲಾಗಿದೆ

ಮತ್ತೆ ವಿವಿಧ ರಾಜ್ಯ ಹಾಗೂ ದೇಶಗಳಲ್ಲಿ dogs, lie dogs, certain expressions should not be used even for oneself, dogs part ಇದನ್ನೆಲ್ಲಾ ಉಪಯೋಗಿಸಬಾರದು ಎಂದು ನಮೂದಿಸಿದ್ದಾರೆ. ಆದ್ದರಿಂದ ಮಾನ್ಯ ಚಂದ್ರೇಗೌಡರು ಉಪಯೋಗಿಸಿದ ಪದ it is not in good taste ಎಂದು ಅವರನ್ನು ಕೇಳಿಕೊಂಡೆ. ಅವರು ಇನ್ನು ಮುಂದೆ ಉಪಯೋಗಿಸುವುದಿಲ್ಲ, ಈಗ ಉಪಯೋಗಿಸಿಬಿಟ್ಟಿದ್ದೇನೆ. ಆದ್ದರಿಂದ ಅದು ಕಡತದಲ್ಲಿ ಇರಲಿ ಎಂದು ಹೇಳಿದ್ದಾರೆ. ಆದರೆ ಅದು ಇರುವುದು ಸರಿಯಲ್ಲ ಎಂದು ನಾನು ಅದನ್ನು ಎಕ್ಸ್‌ಪಂಜ್ ಮಾಡಿದ್ದೇನೆ.

ಶ್ರೀ ಬಿ. ಸ್ವಾಮಿರಾವ್:- ಮಾನ್ಯ ಅಧ್ಯಕ್ಷರೆ, ವಿರೋಧಪಕ್ಷದ ಉಪನಾಯಕರು ಮಾತನಾಡತಕ್ಕ ಸಂದರ್ಭದಲ್ಲಿ ಬೆಣ್ಣೆ ಹೊಡೆಯತಕ್ಕಂಥಾದ್ದು ಎನ್ನುವ ಕೆಟ್ಟ ಶಬ್ದವನ್ನು ಹೇಳಿದ್ದಾರೆ. ಅದನ್ನು ಕೂಡ ಕಡತದಿಂದ ತೆಗೆಯಬೇಕೆಂದು ನಾನು ಹೇಳುತ್ತೇನೆ.''

ಶ್ರೀ ಎ. ಕೃಷ್ಣಪ್ಪ:- ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡುತ್ತಾ ಯಾವುದೇ ಜಸ್ಟಿಫಿಕೇಶನ್ ಇಲ್ಲದೆ, ಡಿಫೆನ್ಸ್ ಇಲ್ಲದೆ ಶ್ರೀಮಾನ್ ಜಾಫರ್‌ಷರೀಫ್‌ರವರ ವಿಷಯ ಪ್ರಸ್ತಾಪ ಮಾಡಿದ್ದರೆ ಅದನ್ನು ಕೂಡ ಕಡತದಿಂದ ತೆಗೆಯಬೇಕು.

ಅಧ್ಯಕ್ಷರು:- ಅದು ಸರಿ, ನಾನು ಈಗಾಗಲೇ ಈ ಮನೆಯ ಸದಸ್ಯರಲ್ಲದವರು, ಲೋಕಸಭಾಸದಸ್ಯರಾಗಲೀ ಅಥವಾ ಮತ್ತೊಬ್ಬರಾಗಲೀ ಅವರ ವಿಚಾರವನ್ನು ಪ್ರಸ್ತಾಪ ಮಾಡಿ ಅವರ ಮೇಲೆ ಇನ್ಸಿನಿಯೇಟಿವ್ ರಿಮಾರ್ಕ್ಸ್ ಮಾಡತಕ್ಕದ್ದು ಸರಿಯಲ್ಲವೆಂದು ಹೇಳಿದ್ದೇನೆ. ಮತ್ತೊಂದು ವಿಷಾದಕರ ಘಟನೆ ನಾನು ನೋಡಿದ್ದು ಅಂದರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡತಕ್ಕ ಕಾಲದಲ್ಲಿ, ಮುಖ್ಯಮಂತ್ರಿಗಳು ತಾವು ಮಾತನಾಡುತ್ತೀರಾ? ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ತಾವು ನಿರ್ಣಯದ ಚರ್ಚೆ ಮುಕ್ತಾಯ ಆಯಿತು ಅಂದರೆ ನಾನು ಐದು ನಿಮಿಷಗಳಲ್ಲಿ ಉತ್ತರವನ್ನು ಕೊಟ್ಟು ಮುಕ್ತಾಯ ಮಾಡತಕ್ಕ ಉದ್ದೇಶವನ್ನು ಇಟ್ಟುಕೊಂಡಿದ್ದೇನೆ. ಅದಕ್ಕೂ ಮೊದಲು ಈ ಘಟನೆಯ ವಿಚಾರದಲ್ಲಿ ತಾವೇನು ಪ್ರಸ್ತಾಪ ಮಾಡುವುದಕ್ಕೆ ಹೊರಟಿದ್ದೀರಿ, ಕ್ಷಮಿಸಬೇಕು, ನಾನು ತಮ್ಮ ಮಾತಿಗೆ ಅಡ್ಡಬಂದೆ. ಮಾನ್ಯ ಸದಸ್ಯರು ಮಾತನಾಡತಕ್ಕ ಸಂದರ್ಭದಲ್ಲಿ ಯಾರೇ ಇರಬಹುದು, ಅವರಿಗೆ ಮಾತನಾಡುವುದಕ್ಕೆ ಹಕ್ಕು ಇದೆ. ಅವರ ವಿಚಾರಗಳನ್ನು ಅಭಿವ್ಯಕ್ತಪಡಿಸುವುದಕ್ಕೆ ಕಾನೂನು ಇದೆ, ಚೌಕಟ್ಟು ಇದೆ. ಅದಕ್ಕೆ ನಾವು ಯಾರೂ ಅಡ್ಡ ಬರುವಹಾಗೆ ಇಲ್ಲ. ಅದು ಮಾನ್ಯ ಸದಸ್ಯರ ಹಕ್ಕು ಎನ್ನತಕ್ಕ ಈ ಮೂಲಭೂತ ಪ್ರಜ್ಞೆಯ ಹಿನ್ನೆಲೆಯಲ್ಲಿ ನಾವೆಲ್ಲರೂ ಕೆಲಸ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ವಿರೋಧಪಕ್ಷದ ನಾಯಕರ ಆದಿಯಾಗಿ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಾಗ ಕೆಲವು ಸಾರಿ ಕಟು ಟೀಕೆ, ಚುಚ್ಚು ಮಾತುಗಳನ್ನು ಸೇರಿಸಿ ಮಾತನಾಡತಕ್ಕ ಸಂದರ್ಭದಲ್ಲಿ ಕೂಡ ನಾವು ಅದನ್ನು ಕೇಳಿಕೊಂಡಿದ್ದೇವೆ, ತಿಳಿದುಕೊಂಡಿದ್ದೇವೆ. ಅದಕ್ಕೆ ಸೂಕ್ತವಾದ ಉತ್ತರವನ್ನು ಕೊಡುವುದಕ್ಕೆ ಕೂಡ ನಾವು ಸಿದ್ಧರಾಗಿದ್ದೇವೆ. ನಿಯಮಾವಳಿಗಳ ಚೌಕಟ್ಟಿನಲ್ಲಿ, ಕಾನೂನಿನ ಚೌಕಟ್ಟಿನಲ್ಲಿ ಸತ್‌ಸಂಪ್ರದಾಯದ ಚೌಕಟ್ಟಿನಲ್ಲಿ ಅದನ್ನು ಕೂಡ ನಾವೆಲ್ಲರೂ ಸೇರಿಮಾಡಬೇಕಾಗುತ್ತದೆ. ನಾನು ಈ ಸದನದ ನಾಯಕನಾಗಿ ತಮಗೆ ಆಶ್ವಾಸನೆಯನ್ನು ಕೊಡುತ್ತೇನೆ, ಯಾರೇ ಇರಬಹುದು ತಮಗೆ ಸಂಪೂರ್ಣ ಸಹಕಾರವನ್ನು ಎಲ್ಲ ಮೂಲೆಯಿಂದಲೂ ಕೊಡಿಸತಕ್ಕ ಜವಾಬ್ದಾರಿ ನಮ್ಮ ಮೇಲಿದೆ. ಯಾವುದೇ ಸಂದರ್ಭದಲ್ಲಾದರೂ ಕೂಡ ಅಷ್ಟೊಂದು ಸಹಕಾರವನ್ನು ತಮಗೆ ಕೊಡತಕ್ಕ ಸಂದರ್ಭದಲ್ಲಿ ನಾವೆಲ್ಲರೂ ಭಾಗಿಯಾಗಿರಬೇಕು ಎನ್ನುವ ಅಂಶ ಇದೆ. ನಾವು ಮಾತನಾಡತಕ್ಕ ಸಂದರ್ಭದಲ್ಲಿ, ವರ್ತನೆ ಇರತಕ್ಕ ಸಂದರ್ಭದಲ್ಲಿ ಚಿಂತನೆ ಇರತಕ್ಕ ಸಂದರ್ಭದಲ್ಲಿ ಆ ಚೌಕಟ್ಟಿನಲ್ಲಿಯೇ ಇರಬೇಕಾದ್ದು ಆದ್ಯಕರ್ತವ್ಯ. ಇದು ಪ್ರತಿಯೊಬ್ಬ ಮಾನ್ಯಸದಸ್ಯರ ಮೇಲೂ ಇದೆ. ಅದು ನಮ್ಮನ್ನು ಸೇರಿಸಿಕೊಂಡು ನಾನು ಮಾತನಾಡುತ್ತಿದ್ದೇನೆ. ಎಲ್ಲ ರಾಜಕೀಯ ಪಕ್ಷಗಳ ಸದಸ್ಯರ ಮೇಲೆ ಈ ವಿಚಾರ ಇದೆಯೆನ್ನುವ ಅಂಶವನ್ನು ನಾನು ಸದನದ ಗಮನಕ್ಕೆ ತರುತ್ತಿದ್ದೇನೆ.

ಈ ಸಂದರ್ಭದಲ್ಲಿ ಮಾತನಾಡಬೇಕಾದರೆ, ಕೆಲವೊಮ್ಮೆ ಅನ್‌ಪಾರ್ಲಿಮೆಂಟರಿ ಅಲ್ಲದಿದ್ದರೂ ಕೂಡ ಮನಸ್ಸಿಗೆ ನೋವಾದರೆ, ನಿಮ್ಮ ಮನಸ್ಸಿಗೆ ನೋವಾಗಿರಬೇಕು ನಾನು ಅದನ್ನು ಹಿಂದಕ್ಕೆ ತೆಗೆದುಕೊಂಡಿದ್ದೇನೆ ಎನ್ನುವ ಮಾತನ್ನು ಈ ಸದನದಲ್ಲಿ ಆಡಿರತಕ್ಕ ಸಂದರ್ಭಗಳು ಇವೆ. ಆದರಲ್ಲೂ ಮಾತನಾಡುವ ಸಂದರ್ಭದಲ್ಲಿ ಯಾವುದೇ ರಾಜಕೀಯ ಪಕ್ಷಗಳ ಮುಖಂಡರು ಇರಬಹುದು, ಅಧ್ಯಕ್ಷರು ಇರಬಹುದು, ಗೌರವಾನ್ವಿತ ವ್ಯಕ್ತಿ ಇರಬಹುದು ಅಥವಾ ಸಮಾಜಸೇವಕರಾಗಿರಬಹುದು, ಈ ದೇಶದಲ್ಲಿ ಸಮಾಜದಲ್ಲಿ ಅಥವಾ ಒಂದು ಪ್ರದೇಶದಲ್ಲಿ ಅವರು ದೊಡ್ಡ ವ್ಯಕ್ತಿ ಇದ್ದಾಗ ಅವರ ಬಗ್ಗೆ ಸಂಭೋಧನೆ ಮಾಡತಕ್ಕ ಸಂದರ್ಭದಲ್ಲಿ ಯಾವಾಗಲೂ ಗೌರವದ ಜೊತೆಯಲ್ಲಿಯೇ ಅವರು ಹಾಕಿಕೊಂಡಿರುವ ರಾಜಕೀಯ ರೀತಿನೀತಿ ಬಗ್ಗೆ ಟೀಕೆ ಮಾಡಲಿ, ಅದಕ್ಕೆ ಸ್ವಾಗತವಿದೆ. ನಾವು ಇಲ್ಲವೆಂಬ ಮಾತನ್ನು ಹೇಳುವುದಿಲ್ಲ. ಆದರಲ್ಲೂ ಕೂಡ ಹೆಸರನ್ನು ತೆಗೆದುಕೊಂಡು ಮಾತನಾಡತಕ್ಕಂಥ ಸಂದರ್ಭ ಬಂದಾಗಲಂತೂ ನಮ್ಮ ನಿಯಮಾವಳಿಗಳೇ ಅದಕ್ಕೆ ಅವಕಾಶ ಕೊಡುವುದಿಲ್ಲ, ಅದಕ್ಕೆ ಅವಕಾಶ ಇಲ್ಲ. ಅಂತಹ ವ್ಯಕ್ತಿ ಈ ಸದನದ ಸದಸ್ಯರು ಅಲ್ಲದೇ ಇರತಕ್ಕಂಥ ಸಂದರ್ಭದಲ್ಲಿ ಅವರ ಬಗ್ಗೆ ಮಾತನಾಡಲು ಅವಕಾಶ ಇಲ್ಲವೆಂಬ ಮಾತನ್ನು ಸಾರಿಸಾರಿ ನಮ್ಮ ಸದನದ ನಿಯಮಾವಳಿಗಳು ಹೇಳುತ್ತವೆ. ಏಕೆಂದರೆ, ಆ ವ್ಯಕ್ತಿಗಳು ಇಲ್ಲಿಗೆ ಬಂದು ತಮ್ಮ ವಿಚಾರಧಾರೆಯನ್ನು ಸಮರ್ಥನೆ ಮಾಡಲಿಕ್ಕೆ ಸದಾವಕಾಶ ಸಿಕ್ಕುವುದಿಲ್ಲ. ಆದಕ್ಕಾಗಿ ಈ ಕಾನೂನನ್ನು ನಾವು ಮಾಡಿಕೊಂಡಿದ್ದೇವೆ. ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರೂ, ಉಪನಾಯಕರೂ, ಡಾಕ್ಟರ್ ಆಳ್ವಾರವರು, ಶ್ರೀ ಬನ್ನಿಕೋಡ್‌ರವರು ಅಲ್ಲದೆ, ಜನತಾಪಕ್ಷದ ನಾಯಕರಾದ ಶ್ರೀಮಾನ್ ಬೈರೇಗೌಡರು ಮುಂತಾದವರು ಮಾತನಾಡಿದ್ದಾರೆ. ಕೆಲವೊಮ್ಮೆ ಮಾತನಾಡತಕ್ಕಂಥ ಸಂದರ್ಭದಲ್ಲಿ ನಮ್ಮ ಕಡೆಯಿಂದ, ನಾವು ಮಾತನಾಡಬೇಕಾದರೆ ಅವರ ಕಡೆಯಿಂದ ಅಡ್ಡಮಾತು ಬರುವುದು ಸಹಜವಾಗಿ ಇರತಕ್ಕಂಥ ವಿಚಾರ. ಇದರ ಬಗ್ಗೆ ಯಾರೂ ಕೂಡ ಇಲ್ಲಿ ವ್ಯತ್ಯಾಸಗೊಂಡಿಲ್ಲ ಎನ್ನತಕ್ಕಂಥ ಮಾತನ್ನು ಮೂಲಭೂತವಾಗಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾತನಾಡತಕ್ಕಂಥ ಸಂದರ್ಭದಲ್ಲಿ ಘನತೆವೆತ್ತ ವ್ಯಕ್ತಿಗಳ ಬಗ್ಗೆ ಮಾತನಾಡಬೇಕಾದರೆ ಹಗುರವಾಗಿ ಮಾತನಾಡಬಾರದು. ನಾನು ಹೇಳುತ್ತಿರುವುದು ಇವತ್ತು ಬರೇ ನಮ್ಮ ಪಕ್ಷದ ಅಧ್ಯಕ್ಷರನ್ನು ಕುರಿತು ಅವರು ಮಾತನಾಡಿದ್ದಾರೆ ಎನ್ನತಕ್ಕಂಥ ದೃಷ್ಟಿಯಿಂದ ಅಲ್ಲ. ಇವತ್ತು ಬೇರ ಪಕ್ಷದ ಅಧ್ಯಕ್ಷರು ಇರಬಹುದು. ಈಗ ಶ್ರೀ ವಿ.ಪಿ.ಸಿಂಗ್ ಅವರು ಪ್ರಧಾನ ಮಂತ್ರಿಗಳಾಗಿದ್ದಾರೆ. ಅಥವಾ ಅವರ ಪಕ್ಷದ ಅಧ್ಯಕ್ಷರು, ಮತ್ತೊಬ್ಬರು ಇದ್ದಾರೆ.

ನಿಜ ಹೇಳಬೇಕೆಂದರೆ, ಶ್ರೀ ಬೊಮ್ಮಾಯಿ ಅವರ ಹೆಸರನ್ನು ಹೇಳತಕ್ಕಂಥಾದ್ದು ಸರಿಯಲ್ಲ. ಆದರೆ ನಾನು ಅವರ ಮೇಲೆ ಆಪಾದನೆ ಮಾಡುತ್ತಿಲ್ಲ. ಅದಕ್ಕೋಸ್ಕರ ಹೇಳಿದರೆ ತಪ್ಪಾಗಲಾರದು. ಅವರು ಹಿಂದೆ ಮುಖ್ಯಮಂತ್ರಿಗಳಾಗಿದ್ದಂಥವರು, ಈ ಸದನದ ಸದಸ್ಯರಾದಂಥವರು. ನಾನು ಅವರಿಗೆ ಗೌರವ ಕೊಟ್ಟೇ ಮಾತನಾಡುತ್ತೇನೆ. ಮಾತನಾಡತಕ್ಕಂಥ ಸಂದರ್ಭದಲ್ಲಿ ಬೇರೆ ಅರ್ಥ ಬರುವಂತೆ ಸಮಾಜದಲ್ಲಿ ಸಂಪೂರ್ಣವಾಗಿ ತಪ್ಪು ತಿಳುವಳಿಕೆ ಬರುವಂತೆ, ಆ ವ್ಯಕ್ತಿ ಹಾಗಿಲ್ಲದಿದ್ದರೂ ಕೂಡ, ಅವರು ಹಾಗೆ ಇರಬಹುದು ಎಂಬ ಭಾವನೆ ಪತ್ರಿಕೆಗಳ ಮುಖಾಂತರ, ರೇಡಿಯೋ ಮುಖಾಂತರ ಅಥವಾ ಟಿ.ವಿ. ಮುಖಾಂತರ, ಸದನದ ಕಾರ್ಯಕಲಾಪಗಳ ವರದಿಯಲ್ಲಿ ಅಥವಾ ನ್ಯೂಸ್ ಬರತಕ್ಕಂಥ ಸಂದರ್ಭದಲ್ಲಿ ಬಂದರೆ ಅವರ ಬಗ್ಗೆ ಒಂದು ಅಭಿಪ್ರಾಯ ಜನತೆಯ ಮನಸ್ಸಿನಲ್ಲಿ ಮೂಡಿಬರುವುದಕ್ಕೆ ಅವಕಾಶವಾಗುತ್ತದೆ. ಅದನ್ನು ನಾವು ತಪ್ಪಿಸಬೇಕೆಂಬುದೇ ನನ್ನ ಮನವಿ. ನಮ್ಮೆಲ್ಲರ ಅಭಿಪ್ರಾಯ ಕೂಡ ಹೌದು. ಇವತ್ತು ನಾವು ಬರೇ ಒಂದು ಪಕ್ಷದವರೇ ಇಲ್ಲಿ ಕುಳಿತಿಲ್ಲ. ಇಲ್ಲಿ ಬೇರೆಬೇರೆ ಪಕ್ಷಗಳೂ ಇವೆ. ಮುಸ್ಲಿಂ ಲೀಗ್‌ನ ಸದಸ್ಯರು ಇದ್ದಾರೆ, ಎ.ಡಿ.ಎಂ.ಕೆ. ಸದಸ್ಯರು ಇದ್ದಾರೆ. ಎಂ.ಇ.ಎಸ್.ನವರು ಇದ್ದಾರೋ ಏನೋ ಗೊತ್ತಾಗಲಿಲ್ಲ. ಅದು ಏನೇ ಇರಬಹುದು. ಈ ಸದನದಲ್ಲಿ ನಾವೆಲ್ಲರೂ ಸೇರಿದ್ದೇವೆ. ಇವತ್ತು ನಾವೆಲ್ಲರೂ ಸೇರಿ ಕಣ್ಣಾರೆ ಕಂಡಿದ್ದೇವೆ, ಕೇಳಿದ್ದೇವೆ. ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜರದ್ದು ಮಾತನಾಡತಕ್ಕ ರೀತಿ, ಧಾಟಿ ಏನೇ ಇರಬಹುದು, ಅವರು ಕೈತಿರುವಿದಿದ್ದುದಕ್ಕೆ ಮತ್ತೊಂದಕ್ಕೆ ಬೇರೆ ಶಬ್ದಗಳನ್ನು ಬಳಕೆ ಮಾಡಿದ್ದಕ್ಕೆ ನಮ್ಮ ಆಕ್ಷೇಪಣೆ ಇಲ್ಲ. ಆದರೆ ನಮ್ಮ ಪಕ್ಷದ ಅಧ್ಯಕ್ಷರ ಬಗ್ಗೆ ಅವರು ಆಡಿರತಕ್ಕಂಥ ಮಾತು ಬಹಳ ಕಳಪಯ ಮಾತು, ಹೀನಾಯವಾಗಿರತಕ್ಕಂಥ ಮಾತು, ಕೆಳದರ್ಜೆಯ ಮಾತು. ಅವರು ಈ ರಾಷ್ಟ್ರದ

ಪ್ರಧಾನಮಂತ್ರಿಯಾಗಿದ್ದಂಥವರು, ಸಂದರ್ಭ ಬಂದರೆ ಮತ್ತೆ ಆಗತಕ್ಕಂತ ಶಕ್ತಿಯನ್ನು ಹೊಂದಿರತಕ್ಕಂಥವರು. ಅಂತಹವರ ಬಗ್ಗೆ ಒಂದು ಮಾತನ್ನು ಆಡಿದರೆ, ಇವತ್ತು ಮತ್ತೊಂದು ಪಕ್ಷದ ಅಧ್ಯಕ್ಷರ ಬಗ್ಗೆ ಒಂದು ಮಾತನ್ನು ಆಡಿದರೆ ಎಷ್ಟು ನೋವು ಅವರಿಗೆ ಆಗುತ್ತದೆಯೊ ಅಷ್ಟು ನೋವು ಈ ಕಡೆ ಕುಳಿತಿರತಕ್ಕಂಥ ಮಾನ್ಯ ಸದಸ್ಯರಿಗೆ ಆಗಿದೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ.

ನಿಜವಾಗಿ ಹೇಳಬೇಕೆಂದರೆ, ನಾವು ಯಾವುದೇ ವಿಚಾರ ಮಾತನಾಡಲಿಲ್ಲ. ಈ ಮಾತನ್ನು ನಾನು ಹೇಳುವಾಗ ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲಿ ಕುಳಿತಿರಬೇಕಾಗಿತ್ತು ಎಂಬುದು ನಮ್ಮೆಲ್ಲರ ಆಸೆ. ವಿರೋಧ ಪಕ್ಷ ಎಂಬುದು ಕಾರ್ಯಕಲಾಪಗಳ ದೃಷ್ಟಿಯಿಂದ ಈ ಸದನದ ಅವಿಭಾಜ್ಯ ಅಂಗ. ಜವಾಬ್ದಾರಿಯನ್ನು ನಾವು ಹೊತ್ತರು ಕೂಡ, ಸದನದ ಕಾರ್ಯಕಲಾಪಗಳು ಜನತೆಯ ಹಿತದೃಷ್ಟಿಯಿಂದ ಇಲ್ಲಿ ನಡೆಯಬೇಕು. ವ್ಯತ್ಯಾಸ ಇದ್ದರೆ ನಮ್ಮ ಗಮನಕ್ಕೆ ತರಬೇಕು ಎನ್ನತಕ್ಕಂಥ ಸದಿಚ್ಛೆಯಿಂದ ಅವರ ಟೀಕೆಟಿಪ್ಪಣಿಗಳನ್ನು ನಾವು ಸದಾಕಾಲ ಸ್ವಾಗತ ಮಾಡುತ್ತೇವೆ, ಶಾಂತಿಯಿಂದ ಗ್ರಹಿಸುತ್ತೇವೆ. ಅದಕ್ಕೆ ಉತ್ತರವನ್ನು ನಮ್ಮ ಶಕ್ತಿಸಾಮರ್ಥ್ಯದ ಚೌಕಟ್ಟಿನಲ್ಲಿ ನಮ್ಮ ಗಮನಕ್ಕೆ ಏನು ಬೀಳುತ್ತದೆ ಅದನ್ನು ತಮ್ಮ ಮುಖಾಂತರ ಸದನದ ಮುಂದ, ಅವರ ಮುಂದೆ ಇಡತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡುತ್ತೇವೆ. ಮಾನ್ಯ ವಾಟಾಳ್ ನಾಗರಾಜ್ ಅವರು ಮಾತನಾಡತಕ್ಕಂಥ ಸಂದರ್ಭದಲ್ಲಿ ನಮ್ಮ ಪಕ್ಷದ ಅಧ್ಯಕ್ಷರ ಬಗ್ಗೆ ಆಡಿರತಕ್ಕಂಥಾ ಮಾತುಗಳು ಮಾನ್ಯ ವಿರೋಧ ಪಕ್ಷದ ನಾಯಕರ ಮನಸ್ಸಿಗೆ ಹಿಡಿಸಿದೆ ಎಂದರೆ, ನಿಜ ಹೇಳಬೇಕೆಂದರೆ, ಮತ್ತೊಂದು ಸಾರಿ ಅವರು ಯೋಚನೆ ಮಾಡುವುದು ಒಳ್ಳೆಯದೆಂಬ ಮಾತನ್ನು ಅನಿವಾರ್ಯವಾಗಿ ನಾನು ಹೇಳಬೇಕಾಗಿದೆ. ಅವರ ಪಕ್ಷದ ಅಧ್ಯಕ್ಷರಿಗೆ ಈ ಮಾತನ್ನು ಹೇಳಿದರೆ ಏನಾಗುತ್ತದೆ ಎಂದು ನಾನು ಆಗಲೆ ಹೇಳಿದೆ.

ನಾನು ಆ ಪ್ರಶ್ನೆಯನ್ನು ಅಷ್ಟೇ ಇಡುತ್ತೇನೆ. ನಾನು ಆಡಿ ತೋರಿಸುವುದಕ್ಕೆ ಹೋಗುವುದಿಲ್ಲ. ನಾನು ಅವರ ಪಕ್ಷದ ಅಧ್ಯಕ್ಷರ ಬಗ್ಗೆ ಅಪಾರವಾದ ಗೌರವವನ್ನು ಇಟ್ಟುಕೊಂಡಿದ್ದೇನೆ. ಅದೇಪ್ರಕಾರವಾಗಿ ಯಾವುದೇ ಪಕ್ಷದ ಅಧ್ಯಕ್ಷರು ಇರಬಹುದು. ಸದಸ್ಯರು ಇರಬಹುದು. ಈ ರಾಷ್ಟ್ರದ ಒಬ್ಬ ಸಾಮಾನ್ಯ ವ್ಯಕ್ತಿ ಇದ್ದರೂ ಕೂಡ ಅವರಿಗೆ ಅದೇ ಗೌರವವನ್ನು ನಾವು ಕೊಡುತ್ತೇವೆ. ಇದು ನಮ್ಮ ಪಕ್ಷದ ಸಿದ್ಧಾಂತ ನಮ್ಮ ನೀತಿ. ಇದು ನಮ್ಮ ಪಕ್ಷದ ಅಧ್ಯಕ್ಷರ ನೀತಿ. ಈ ಮಾತನ್ನು ನಾನು ಸ್ಪಷ್ಟಪಡಿಸಬಯಸುತ್ತೇನೆ. ಇವತ್ತು ಒಬ್ಬ ಸಾಮಾನ್ಯ ಮನುಷ್ಯ ಎಂದು ಹೇಳಿ ನಾವು ಏಕವಚನದಲ್ಲಿ ಮಾತನಾಡುವುದಕ್ಕೆ ಆಗುವುದಿಲ್ಲ. ಆ ಹಕ್ಕು ನಮಗೆ ಇಲ್ಲ. ಇವತ್ತು ಅವನ ಮತ ನಾವು ಪಡೆಯುತ್ತೇವೆ. ಆದರೆ ಅವನಿಗೆ ಗೌರವ ಸಿಗದಿದ್ದರೆ ವ್ಯಥೆಪಡುತ್ತಾನೆ. ಆ ರೀತಿ ಆಗಬಾರದು. ಇದೇ ನಮ್ಮ ನೀತಿ. ಆ ಗೌರವ ಸಮಾಜದಲ್ಲಿ ಸಂದಾಯವಾಗಬೇಕೆಂಬುದೇ ನಮ್ಮ ಮೂಲ ವಿಚಾರ. ಈ ಮಾತನ್ನು ಈ ಸಂದರ್ಭದಲ್ಲಿ ಇಟ್ಟು ಹೇಳುತ್ತಿದ್ದೇನೆ. ರಾಜಕೀಯದಲ್ಲಿ ನಮ್ಮನಿಮ್ಮಲ್ಲಿ ತಂದು ಹಾಕುವಂಥ ಮಾತುಗಳನ್ನು ಬೇಕಾದಷ್ಟು ಆಡುತ್ತೇವೆ. ಆ ಪ್ರಶ್ನೆಗೆ ನಾನು ಅನಂತರ ಬರುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಆಡಿರತಕ್ಕ ಮಾತನ್ನು, ಇವತ್ತು ತಾವು ಕಡತದಿಂದ ತೆಗೆದುಹಾಕಿದ್ದೀರಿ. ನಾನು ತಮಗೆ ಅಭಿನಂದನೆ ಸಲ್ಲಿಸುತ್ತೇನೆ. ಈ ಸದನದ ಸತ್ಸಂಪ್ರದಾಯಗಳನ್ನು, ಘನತೆಯನ್ನು, ಎತ್ತರವನ್ನು ಮೇಲಕ್ಕೆ ಎತ್ತಿಹಿಡಿಯತಕ್ಕಂಥ ದೃಷ್ಟಿಯಿಂದ ತಾವು ಮಾಡಿದ್ದೀರಿ. ಇನ್ನು ಯಾವುದೇ ವಿಚಾರ ಅಲ್ಲವೆನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಸಂದರ್ಭದಲ್ಲಿ ನಾನು ಮತ್ತೆ ವಾಟಾಳ್ ನಾಗರಾಜ್‌ರವರು ಈ ರೀತಿ ಮಾತನಾಡಿದರು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಇದು ಸರಿಯಲ್ಲವೆಂದು ತಾವು ಹೇಳಿದಮೇಲೆ, ನಾನು ಮತ್ತೊಂದು ಸಾರಿ ಅದರ ಬಗ್ಗೆ ವ್ಯಾಖ್ಯಾನಕ್ಕೆ ಹೋಗುವುದಿಲ್ಲ. ಆದರೆ ಒಂದೊಂದು ಸಾರಿ ಸಹಜವಾಗಿ, ಮಾನ್ಯ ಸದಸ್ಯರು ತಡೆದುಕೊಳ್ಳಲಾರದೆ, ಅಲ್ಲಿರತಕ್ಕ ಮಾನ್ಯ ಸದಸ್ಯರ ಹತ್ತಿರ ಹೋಗಿರುವುದನ್ನು ಕೂಡ ನಾವು ನೋಡಿದ್ದೇವೆ. ಎಷ್ಟೋಸಾರಿ ಹಿಂದೆ ಇಂತಹ ಘಟನೆಗಳು ನಡೆದಿರತಕ್ಕದ್ದು ಇದೆ. ಆದರೆ, ಅವರು ತಮ್ಮ ಕೊಠಡಿಗೆ ಬಂದಾಗ, ಯಾವರೀತಿಯಲ್ಲಿ ವ್ಯಾಖ್ಯಾನ ಮಾಡುತ್ತಿದ್ದರು ಎಂದರೆ, ಹೊಡೆಯುವುದಕ್ಕೋಸ್ಕರವೇ ಹೋಗಿದ್ದರು ಎಂದು ವ್ಯಾಖ್ಯಾನ ಮಾಡುತ್ತಿದ್ದುದನ್ನು ನಾವು ಕೇಳಿದ್ದೇವೆ.

ನಾವು ಈ ಮಾತನ್ನು ಸ್ಪಷ್ಟವಾಗಿ ಅಲ್ಲಗಳೆದಿದ್ದೇವೆ, ಅಲ್ಲಗಳೆಯುತ್ತೇವೆ. ಆ ವಿಚಾರ, ಈ ಕಡೆಯಲ್ಲಿ ಕುಳಿತಿರತಕ್ಕಂಥ ಮಾನ್ಯ ಸದಸ್ಯರು ಯಾರೂ ಕೂಡಾ ಮಾಡಿಲ್ಲ. ಮಾಡತಕ್ಕಂಥ ವಿಚಾರ ಇಲ್ಲ.

ನಮ್ಮ ವಿಚಾರ ಯೋಚನೆ ಕೂಡ ಆ ಒಂದು ಬಾರಿಯಲ್ಲಿ ಇಲ್ಲ. ಆದರೆ ಆ ಸಂದರ್ಭದಲ್ಲಿ ಗಲಾಟೆಯಲ್ಲಿ ಕೇಳುತ್ತಿರಲಿಲ್ಲ. ಆ ಮಾತು ಒಳ್ಳೆಯದಲ್ಲ ಎಂದು ಹೇಳಬೇಕು ಎಂಬ ದೃಷ್ಟಿಯಿಂದ ಬಂದರೇ ವಿನಹ ಮತ್ತೆ ಯಾವುದೇ ಉದ್ದೇಶ ಅವರಲ್ಲಿ ಇರಲಿಲ್ಲ. ಆಗ ಆದರ ವ್ಯಾಖ್ಯಾನ ಏನಿತ್ತು ಅಂದರೆ, ಕೆಲವರು ಕಾಗದವನ್ನೂ ಹಿಡಿದುಕೊಂಡು ಬಂದಿದ್ದರು ಎಂದು ಇತ್ತು. ಹೌದು, ಕೆಲವು ಜನ ಕಾಗದವನ್ನು ಹಿಡಿದುಕೊಂಡೇ ಬಂದಿದ್ದರು. ನಾನೂ ಕೂಡ ಕೈಯಲ್ಲಿ ಕಾಗದವನ್ನು ಹಿಡಿದುಕೊಂಡೇ ಹೋಗಿದ್ದೆ. ನನ್ನ ಕೈಯಲ್ಲಿ ಕಾಗದ ಇತ್ತು. ಹಾಗೆಂದ ತಕ್ಷಣ ಕಾಗದದಿಂದಲೇ ಹೊಡೆಯುವುದಕ್ಕೆ ಹೋಗಿದ್ದರು ಎಂದು ವ್ಯಾಖ್ಯಾನ ಮಾಡುವುದು ಎಂದೂ ಕೂಡ ಸಲ್ಲದು. ಆ ಒಂದು ಅಭಿಪ್ರಾಯದಿಂದ ನಮ್ಮ ಸದಸ್ಯರು ಯಾರು ಹೋಗಿಲ್ಲ. ಆ ರೀತಿ ಏನಾದರು ಹೋಗಿದ್ದರೆ ಅದು ಸರಿಯಲ್ಲ ಎಂಬ ಅಭಿಪ್ರಾಯವನ್ನು ಇಟ್ಟೇ ನಾನು ಮಾತನಾಡುತ್ತಿದ್ದೇನೆ. ಆ ದೃಷ್ಟಿಯಿಂದ ನಾವು ಯಾರೂ ಹೋಗಿಲ್ಲ. ಒಂದುವೇಳೆ ಹೋಗಿದ್ದರೆ, ಆ ರೀತಿ ಹೋಗುವುದೂ ಸರಿಯಲ್ಲ. ಮುಂದೆ ಅಂತಹ ಸಂದರ್ಭ ಬಂದರೆ, ನಮ್ಮ ಕಡೆಯಿಂದ ಆ ರೀತಿ ಆಗದಹಾಗೆ ನಾವು ನೋಡಿಕೊಳ್ಳುತ್ತೇವೆ. ಆದರೆ, ಅವರೂ ಕೂಡ ಆ ರೀತಿಯಾಗದ ಹಾಗೆ ನೋಡಿಕೊಳ್ಳತಕ್ಕಂಥ ಜವಾಬ್ದಾರಿ ಇದೆ. ಈ ಸಂದರ್ಭದಲ್ಲಿ ನಾವಿಬ್ಬರೂ ಜಂಟಿಯಾಗಿ ಒಟ್ಟಿಗೆ ಹೋಗಬೇಕೆಂದು ಹೇಳುತ್ತೇನೆ. ತಾವು ಮಾತುಕತೆಗಾಗಿ ನಮ್ಮನ್ನು ಕರೆಯಿಸಿದಿರಿ, ಅವರನ್ನೂ ಕರೆಸಿದಿರಿ. ನಮ್ಮ ಸಂಸದೀಯ ವ್ಯವಹಾರಗಳ ಸಚಿವರೂ ಬಂದಿದ್ದರು. ತಾವು ಹೇಳಿಕಳುಹಿಸಿದ ಮೇಲೆ ನಾನೂ ಕೂಡ ಅಲ್ಲಿ ಬಂದಿದ್ದೆನು. ನಮ್ಮ ಪಕ್ಷದ ಕೆಲವು ಮಾನ್ಯ ಸದಸ್ಯರೂ ಕೂಡ ಬಂದಿದ್ದರು. ಒಂದು ಸಾರಿ ಒಂದು ವಿಚಾರ ಬಂದಕೂಡಲೇ ತಮ್ಮ ಕೊಠಡಿಯಲ್ಲಿ ಕುಳಿತುಕೊಂಡು, ಯಾವಾಗಲೂ ಅಭಿಪ್ರಾಯವನ್ನು ವಿನಿಮಯ ಮಾಡಿಕೊಳ್ಳುವ ಸಹಜವಾದ ಪದ್ಧತಿಯನ್ನು ನಾವು ಅನುಸರಿಸಿಕೊಂಡು ಬಂದಿದ್ದೇವೆ. ಇದೇನೂ ದೊಡ್ಡ ವಿಚಾರ ಅಲ್ಲ. ಇದಕ್ಕಿಂತಲೂ ದೊಡ್ಡ ಘಟನೆಗಳು ನಡೆದಾಗ ನಾವು ಸರಿಪಡಿಸಿಕೊಂಡಿದ್ದೇವೆ. ಆದರೆ ಈ ವಿಚಾರದ ಬಗ್ಗೆ ಮಾತುಕತೆಗೆ ಕುಳಿತುಕೊಂಡಾಗ, ನಿಮ್ಮವರು ಹಾಗೆ ಬರಬಹುದೇ ಎನ್ನತಕ್ಕಂತಹ ಮಾತನ್ನು ಅವರು ಹೇಳಿದರು. ಅಲ್ಲಿ ಏನು ನಡೆಯಿತು ಎನ್ನುವುದನ್ನು ಈ ಸದನಕ್ಕೆ ಹೇಳಿದರೆ, ಈ ದೇಶದ ಜನ ತಿಳಿದುಕೊಳ್ಳಲಿ ಎನ್ನುವುದು ನನ್ನ ಆಸೆ. ನಿಮ್ಮವರು ಹಾಗೆ ನುಗ್ಗಿ ಬರಬಹುದೆ ಎಂದು ಅವರು ಹೇಳಿದರು. ನಾನು ಹೇಳಿದೆ, ನಮ್ಮವರು ಯಾವುದೇ ವಿಚಾರದಿಂದ ಬಂದಿದ್ದಲ್ಲ. ಅವರಿಗೆ ಗಲಾಟೆಯಲ್ಲಿ ಕೇಳಲಿಲ್ಲ. ಮೊದಲು ಆ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳಿ ಎಂದು ಹೇಳುವುದಕ್ಕೋಸ್ಕರ ನಮ್ಮ ಸದಸ್ಯರು ಅಲ್ಲಿಗೆ ಬಂದಿರುವುದು ನಿಜ, ಇಲ್ಲ ಎನ್ನುವುದಲ್ಲ. ಅದನ್ನೇ ಈ ಸದನದಲ್ಲಿ ಕುಳಿತುಕೊಂಡು ಅಧ್ಯಕ್ಷರಿಗೆ ಹೇಳತಕ್ಕಂಥ ಕರ್ತವ್ಯವಿತ್ತು. ಆದರೂ ಕೂಡ ಅವರು ಆ ಸಂದರ್ಭದಲ್ಲಿ ಬಂದುಬಿಟ್ಟಿದ್ದರು. ಅದನ್ನು ತಾವು ಯಾವ ರೀತಿ ನಿಯಂತ್ರಣಗೊಳಿಸುತ್ತೀರೋ, ಅದು ತಮಗೆ ಬಿಟ್ಟಿದ್ದು. ಆದರೆ, ನಾವು ನಮ್ಮ ಸದಸ್ಯರಿಗೆ ವಿನಂತಿ ಮಾಡಿದ್ದೇವೆ. ಇನ್ನು ಮೇಲೆ ಆ ರೀತಿ ಎಂದೂ ಕೂಡ ಹೋಗದಹಾಗೆ ನೋಡಿಕೊಳ್ಳತಕ್ಕಂಥ ಜವಾಬ್ದಾರಿ ನಮ್ಮ ಮೇಲೆ ಇದೆ. ನಾವು ಅದನ್ನು ನಿರ್ವಹಣೆ ಮಾಡುತ್ತೇವೆ. ನಾವು ಈ ವಿಚಾರದಲ್ಲಿ ಮಾನ್ಯ ಸಭಾಧ್ಯಕ್ಷರಿಗೆ ಸಹಕಾರವನ್ನು ಕೊಡುತ್ತೇವೆ. ಆದರೆ ಅದೇ ಸಂದರ್ಭದಲ್ಲಿ ಅವರು, ಇಲ್ಲ, ಇಲ್ಲ ಅವರು ಹೊಡೆಯುವುದಕ್ಕೋಸ್ಕರವೇ ಬಂದಿದ್ದರು ಎಂದು ಹೇಳಿದರು.

ಡಾ|| ಆಳ್ವರವರೇ ಇದು ಸರಿಯಲ್ಲ, ಚಂದ್ರೇಗೌಡರೇ ಇದು ಸರಿಯಲ್ಲವೆಂದು ನಾನು ಒಬ್ಬನೇ ಅಲ್ಲ, ನಮ್ಮವರು ಎಲ್ಲರೂ ಹೇಳಿದ್ದಾರೆ. ಈ ರೀತಿ ಹೇಳಿದಕೂಡಲೇ ಅವರು ಹೊರಗಡೆ ತಮ್ಮ ಅಭಿಪ್ರಾಯವನ್ನು ಪತ್ರಿಕೆಗಳಿಗೆ ಹೇಳತಕ್ಕಂತ ಮಟ್ಟಕ್ಕೆ ಹೋಗಿದ್ದಾರೆ. ಇನ್ನೂ ಮಾತುಕತೆಯೇ ಮುಗಿದಿಲ್ಲ. ತಾವು ಹೇಳಿಕಳುಹಿಸಿದ್ದೀರಿ, ಮತ್ತೆ ತಮ್ಮ ಸೆಕ್ರೆಟರಿಯವರನ್ನು ಕಳುಹಿಸಿಕೊಟ್ಟಿರಿ. ನಾವು ಅಲ್ಲೇ ಮಾತುಕತೆಗೆ ಕಾಯುತ್ತಿದ್ದೇವೆ. ವಿರೋಧಪಕ್ಷದ ನಾಯಕರೂ ಕೂಡ ತಮ್ಮ ಛೇಂಬರಿಗೆ ಮಾತುಕತೆಗೆ ಬರಲಿಲ್ಲ. ಉದ್ದೇಶ ಏನೆಂದರೆ, ನಮ್ಮನಮ್ಮಲ್ಲಿ ಒಡಕು ತಂದುಹಾಕತಕ್ಕಂಥ ವಿಚಾರಧಾರೆ

ನಡೆಯಲಿಲ್ಲ. ಇಂತಹ ಸಂದರ್ಭಕ್ಕಾಗಿ ಕಾಯುತ್ತಿದ್ದರು. ಆದಕ್ಕಾಗಿ ಕೆಣಕತಕ್ಕ ಮಾತನ್ನು ಪದೇಪದೇ ಆಡಿದರು. ಆದರೂ ಕೂಡ ನಾವು ನುಂಗಿಕೊಂಡು, ತಡೆದುಕೊಂಡು ಕುಳಿತಿದ್ದೆವು ಎನ್ನುವ ಮಾತನ್ನು ನಾನು ಈಗ ಅನಿವಾರ್ಯವಾಗಿ ಹೇಳಬೇಕಾಗಿದೆ. ಇವತ್ತು ಅವರು ತಮ್ಮ ಕೊಠಡಿಗೆ ಬಂದು ತಮ್ಮ ಮುಂದೆ ಅವರ ವಿಚಾರಧಾರೆಯನ್ನು ಇಡಬೇಕಾಗಿತ್ತು. ನಿಜ ಹೇಳಬೇಕಾದರೆ, ಕರ್ತವ್ಯಲೋಪವಾಗಿದೆ ಎನ್ನತಕ್ಕ ವಿಚಾರ ಅವರ ಗಮನಕ್ಕೆ ಬಂದರೆ, ನಾನೂ ಸಂತೋಷಪಡುತ್ತೇನೆ. ಒಂದು ವೇಳೆ ತಮ್ಮ ಕೊಠಡಿಗೆ ಬಂದು ಹೇಳದಿದ್ದರು ಕೂಡ ಸದನಕ್ಕೆ ಬಂದು ವಿಚಾರ ಹೀಗಿದೆ ನಮ್ಮ ಅಭಿಪ್ರಾಯ ಹೀಗಿತ್ತು ಎನ್ನುವ ಮಾತನ್ನು ಈ ಸದನದ ಮುಖಾಂತರ, ಈ ರಾಷ್ಟ್ರದ ಜನತೆಗೆ, ಈ ದೇಶಕ್ಕೆ ಅವರು ಹೇಳುವುದಕ್ಕು ಕೂಡ ಸಾಧ್ಯವಿತ್ತು. ಈ ಸದನದಲ್ಲಿ ಅವರು ತಮಗಿರತಕ್ಕಂತ ಹಕ್ಕನ್ನು ಚಲಾವಣೆ ಮಾಡಲಿಲ್ಲ, ಸದುಪಯೋಗಪಡಿಸಿಕೊಳ್ಳಲಿಲ್ಲ. ಸಹಕಾರ ತಮಗೆ ಕೊಡಾ ಕೊಡಲಿಲ್ಲ.

ತಮ್ಮ ಅಣತಿಯನ್ನು ಸಂಪೂರ್ಣವಾಗಿ ಅನುಸರಿಸಿಕೊಂಡು ಹೋಗತಕ್ಕಂಥ ಕರ್ತವ್ಯವನ್ನು ತಮ್ಮ ಕೊಠಡಿಯಲ್ಲಾಗಲೀ, ಈ ಸದನದಲ್ಲಾಗಲೀ ಅವರು ಮಾಡಲಿಲ್ಲ ಎಂಬ ಅಂಶವನ್ನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಈ ಸದನದ ಮುಖಾಂತರ, ಕರ್ನಾಟಕ ರಾಜ್ಯದ ಜನತೆಯ ಗಮನಕ್ಕೆ ತರುತ್ತಿದ್ದೇನೆ. ಈ ವಿಚಾರದ ಬಗ್ಗೆ ಇಷ್ಟೇ ಮಾತು ಹೇಳಿ, ನಮ್ಮ ಕಡೆಯಿಂದ ಏನಾದರೂ ತಪ್ಪುಗಳು ನಡೆದಿದ್ದಾವೆ ಎಂಬ ವಿಚಾರ ತಮ್ಮ ಗಮನಕ್ಕೆ ಬಂದರೆ, ನಿಜವಾಗಲೂ ಯಾವುದೇ ಶಿಕ್ಷೆಗೆ ನಾವು ಸಿದ್ಧರಾಗಿದ್ದೇವೆ. ಮತ್ತು ಅದನ್ನು ಸರಿಪಡಿಸಿಕೊಳ್ಳುತ್ತೇವೆ ಎಂಬ ಮಾತನ್ನು ವಚನದ ಮುಖಾಂತರ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಸಂದರ್ಭದಲ್ಲಿ ವಿರೋಧಪಕ್ಷದ ಯಾರಿಗಾದರು ನಮ್ಮ ಕಡೆಯವರು ನೋವನ್ನು ಉಂಟುಮಾಡಿದ್ದರೆ ನಾವು ಅದಕ್ಕಾಗಿ ವಿಷಾದಿಸುತ್ತೇವೆ. ಆದರೆ ಆ ರೀತಿ ಯಾರೂ ಏನೂ ಕೊಡಾ ಮಾಡಿಲ್ಲ ಎಂಬ ಮಾತನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಮ್ಮ ಉದ್ದೇಶವೇನೂ ಆ ರೀತಿ ಇಲ್ಲ ಎಂಬುದನ್ನು ನಾನು ಸ್ಪಷ್ಟಪಡಿಸುತ್ತೇನೆ. ನಾನು ಇನ್ನೂ ಈ ನಿರ್ಣಯದ ಮೇಲಿನ ಉತ್ತರ ಕೊಟ್ಟಿಲ್ಲ. ಈಗಲೂ ಕೊಡಾ ನಾನು ವಿರೋಧ ಪಕ್ಷದ ನಾಯಕರಲ್ಲಿ ಹಾಗು ಎಲ್ಲಾ ವಿರೋಧಪಕ್ಷಗಳ ಮಾನ್ಯ ಸದಸ್ಯರುಗಳಲ್ಲಿ ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ಬರಬೇಕು, ಸದನದಲ್ಲಿ ನಿರ್ಣಯದ ಮೇಲೆ ಚರ್ಚೆ ನಡೆಯುತ್ತಿದೆ ಅದರಲ್ಲಿ ಪಾಲುಗೊಳ್ಳಬೇಕು, ಪಾಲುಗೊಂಡು ಅವರ ಅಭಿಪ್ರಾಯ ಅವರೇನು ವ್ಯಕ್ತಪಡಿಸಿದ್ದಾರೆ ಅದಕ್ಕೆ ತಾವು ಉತ್ತರ ಕೊಡುತ್ತೇವೆ, ಆ ಉತ್ತರವನ್ನು ಅವರು ಪಡೆಯಬೇಕು. ಮಧ್ಯೆ ಮಧ್ಯೆ ಏನಾದರು ಹೇಳಬೇಕೆಂದು ಆಸೆ ಇದ್ದರೆ, ತಮ್ಮ ಅಪ್ಪಣೆಯನ್ನು ಪಡೆದು ಹೇಳುವುದಕ್ಕೆ ಅವಕಾಶ ಇದೆ ಎಂದು ಮತ್ತೊಮ್ಮೆ ಹೇಳುತ್ತೇನೆ. ಈ ಸಂದರ್ಭದಲ್ಲಿ ಮತ್ತೊಮ್ಮೆ ನಾನು ತಮ್ಮ ಮುಖಾಂತರ ಮನವಿಯನ್ನು ಮಾಡುತ್ತೇನೆ, ಸದನಕ್ಕೆ ಅವರೆಲ್ಲರೂ ಬರಬೇಕೆಂದು ವಿನಂತಿ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಈ ಕರ್ನಾಟಕದ ವಿಧಾನಸಭೆಗೆ ಒಂದು ಮಹತ್ವದ ಇತಿಹಾಸ ಇದೆ. ದೊಡ್ಡ ಸಂಪ್ರದಾಯ ಇದೆ. ಅಂದು ಶಾಸನಸಭೆಗಳು ಅಸ್ತಿತ್ವದಲ್ಲಿ ಇಲ್ಲದೇ ಇದ್ದ ಕಾಲದಲ್ಲಿ ಅಂದಿನ ಮೈಸೂರಿನಲ್ಲಿ ಪ್ರಜಾಪ್ರತಿನಿಧಿಸಭೆ ಮತ್ತು ನ್ಯಾಯವಿಧಾಯಕ ಸಭೆ, – ಈ ಎರಡು ಸಭೆಗಳು ಚೆನ್ನಾಗಿ ಕೆಲಸ ಮಾಡಿಕೊಂಡು ಬಂದವು. ಶಾಸನಸಭೆಗಳಲ್ಲಿ ಪರ ಮತ್ತು ವಿರೋಧ ಅಭಿಪ್ರಾಯಗಳು ವ್ಯಕ್ತವಾಗತಕ್ಕಂಥಾದ್ದು ಸ್ವಾಭಾವಿಕ. ಕೆಲವು ಸಮಯ ಚೂಪಿನ ಟೀಕೆ ಟಿಪ್ಪಣಿಗಳು ಬರತಕ್ಕಂಥಾದ್ದು ಉಂಟು. ಯಾರು ಟೀಕೆಯನ್ನು ಮಾಡುವ ಶಕ್ತಿಯನ್ನು ಹೊಂದಿದ್ದಾರೋ ಅವರು ಆ ಟೀಕೆಗೆ ಉತ್ತರ ವಾಪಸ್ಸು ಬರುವಾಗ ಅದನ್ನು ಸ್ವೀಕರಿಸತಕ್ಕಂಥ ಶಕ್ತಿಯನ್ನು ಪಡೆದಿರಬೇಕು. ಇಲ್ಲದೇ ಹೋದರೆ ಶಾಸನಸಭೆಗಳು ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ನಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ದೊಡ್ಡ ಆಡಳಿತ ಪಕ್ಷ, ಬಹುದೊಡ್ಡ ಸಂಖ್ಯೆಯ ಬಲವನ್ನು ಪಡೆದಿರತಕ್ಕಂಥ ಪಕ್ಷದ ಮೇಲೆ ಬಹಳ ಹೆಚ್ಚಿನ ಜವಾಬ್ದಾರಿ ಮತ್ತು ಹೊಣೆಗಾರಿಕೆ ಇದೆ ಎಂದು ಹೇಳಿದರೆ ನನ್ನನ್ನು ದಯವಿಟ್ಟು ತಪ್ಪು ತಿಳಿಯಬಾರದು. ಈ ಜವಾಬ್ದಾರಿಯನ್ನು ನಾವು ಎಷ್ಟರಮಟ್ಟಿಗೆ ಈ ದಿವಸ ನಿರ್ವಹಿಸಿದ್ದೇವೆ ಎಂಬ ಪ್ರಶ್ನೆಯನ್ನು ಪ್ರತಿಯೊಬ್ಬರು ನಮ್ಮ ನಮ್ಮ ಆತ್ಮಕ್ಕೆ ನಾವೇ ಹಾಕಿಕೊಳ್ಳೋಣ. ನಮ್ಮ ವಿಧಾನಸಭೆ

ಹೇಗೆ ನಡೆಯಬೇಕು ಎನ್ನುವುದಕ್ಕೆ ವಿಧಿ ವಿಧಾನಗಳನ್ನು ಏತಕ್ಕೆ ರಚನೆ ಮಾಡಿದ್ದೀವೆ? ಮಾನ್ಯ ವಾಟಾಳ್ ನಾಗರಾಜ್‌ರವರು ಏನೋ ಹೇಳುತ್ತಿದ್ದರು. ಅವರು ಹೇಳತಕ್ಕಂಥಾದ್ದರಲ್ಲಿ ಅನ್‌ಪಾರ್ಲಿಮೆಂಟರಿ ಏನಾದರೂ ಇದ್ದರೆ ಯಾರೊಬ್ಬರ ವ್ಯಕ್ತಿತ್ವಕ್ಕೆ ಕುಂದು ತರುವಂತಹ ಅಭಿಪ್ರಾಯಗಳು ಇದ್ದರೆ, ಅದನ್ನು ನಿರ್ಬಂಧಿಸತಕ್ಕಂಥ ನಿಯಂತ್ರಣ ಮಾಡತಕ್ಕಂಥ ಶಕ್ತಿಯನ್ನು ಒಟ್ಟಾರೆ ನೀವು ನನಗೆ ಕೊಟ್ಟಿದ್ದೀರಿ.

ಆದರೆ ನನಗೆ ನಿಯಂತ್ರಣ ಮಾಡುವುದಕ್ಕೆ ಅವಕಾಶ ಕೊಡದ ರೀತಿಯಲ್ಲಿ ಹಲವಾರು ಮಾನ್ಯ ಸದಸ್ಯರುಗಳು ಸಭೆಯ ಆ ಕಡೆಗೆ ಒಮ್ಮೆಲೇ ಹೋಗಿ ನಿಂತರೆ ಸಭೆಯನ್ನು ನಡೆಸತಕ್ಕ ರೀತಿಯಾದರೂ ಹೇಗೆ? ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ತೀವ್ರ ಚಿಂತನೆಯನ್ನು ಮಾಡಬೇಕು. ಮಾನ್ಯ ಸಂಸದೀಯ ಸಚಿವರು ತೀವ್ರ ಚಿಂತನೆಯನ್ನು ಮಾಡಬೇಕು. ಇನ್ನೂ ನಾಲ್ಕು ವರ್ಷಗಳ ಕಾಲ ಶಾಸನಸಭೆಯ ನಿರ್ವಹಣೆಯನ್ನು ಮಾಡಬೇಕಾಗುತ್ತದೆ. ಮಾನ್ಯ ವಿರೋಧ ಪಕ್ಷದ ಸದಸ್ಯರುಗಳಿಗೂ ನಾನು ಹೇಳತಕ್ಕಂಥಾದ್ದು ಏನು ಎಂದರೆ, ಕೇಳತಕ್ಕಂಥಾದ್ದು ಏನು ಎಂದರೆ, ನೀವು ಟೀಕೆ ಮಾಡತಕ್ಕದ್ದೇ ಅಲ್ಲ, ಆ ಟೀಕೆಗೆ ಬರತಕ್ಕಂಥ ಉತ್ತರವನ್ನೂ ಕೂಡಾ ಪಡೆಯುವ ಸೌಹಾರ್ದತೆಯನ್ನು ನೀವು ತೋರಿಸಬೇಕಾಗುತ್ತದೆ. ಆದಿಲ್ಲದೇ ಹೋದರೆ ನಾವು ಶಾಸನಸಭೆಯನ್ನು ನಡೆಸುವುದಕ್ಕೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಈ ಒಂದು ಕಹಿ ಘಟನೆಯನ್ನು ನಾವೆಲ್ಲರೂ ಮರೆಯಬೇಕಾಗಿದೆ. ಹೊಸದಾಗಿ ಬಂದಿರತಕ್ಕಂಥ ಸದಸ್ಯರುಗಳಲ್ಲಿ ನಾನು ಅತ್ಯಂತ ಕಳಕಳಿಯಿಂದ ಹೇಳುವುದೇಂದರೆ, ನಮ್ಮ ಭಾವೋದ್ವೇಗಗಳಿಗೆ ನಾವು ವಶಿಗಳಾಗಿ, ನಮ್ಮ ಪಾರ್ಲಿಮೆಂಟರಿ ವರ್ತನೆಯನ್ನು ಡಿಸ್ಟಾರ್ಟ್ ಮಾಡಿಕೊಂಡು ಹೋದರೆ ಆದರಿಂದ ನಿಮಗೆ ಹಾಗು ಈ ಸಭೆಗೆ ಶೋಭೆ ತರುವುದಿಲ್ಲ ಎನ್ನತಕ್ಕಂಥಾದ್ದು ನನ್ನ ಖಂಡಿತವಾದಂಥ ಅಭಿಪ್ರಾಯ. ಇನ್ನು ಮುಂದೆ ಇಂತಹ ಘಟನೆಗಳು ಆಗುವುದಕ್ಕೆ ನಾನು ಎಡೆ ಕೊಡುವುದಿಲ್ಲವೆಂದು ಸಭಾನಾಯಕರು, ಮುಖ್ಯಮಂತ್ರಿಗಳು ನನಗೆ ಭರವಸೆಯನ್ನು ಕೊಟ್ಟಿದ್ದಾರೆ. ಆ ಭರವಸೆಯ ಆಧಾರದ ಮೇಲೆ ನಾನು ಅಧ್ಯಕ್ಷನಾಗಿ ಮುಂದುವರಿಯುವುದಕ್ಕೆ ಇಷ್ಟಪಡುತ್ತೇನೆ. ಮತ್ತೊಮ್ಮೆ ನಾನು ನನ್ನ ವಿರೋಧಪಕ್ಷದ ಮುಖಂಡರುಗಳಿಗೆ, ನಾಯಕರಿಗೆ ಹಾಗೂ ವಿರೋಧಪಕ್ಷದ ಎಲ್ಲಾ ಸದಸ್ಯರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಒಂದು ಕಹಿ ಘಟನೆಯನ್ನು ಮರೆತು ನೀವು ಸದನದ ಒಳಗೆ ಬಂದು ಕರ್ನಾಟಕ ರಾಜ್ಯದ ಜನಕೋಟಿಯ ಆಸೆ ಮತ್ತು ಆಶೋತ್ತರಗಳಲ್ಲಿ ನೀವು ಸಹ ಭಾಗಿಗಳಾಗಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗ ಮಾನ್ಯ ಮುಖ್ಯಮಂತ್ರಿಗಳು ಠರಾವಿನ ಮೇಲೆ ನಡೆದ ಚರ್ಚೆಗೆ ಉತ್ತರ ಕೊಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :- ಮಾನ್ಯ ಸಭಾಧ್ಯಕ್ಷರೇ, ಈ ನಿರ್ಣಯವನ್ನು ಈ ಸದನದ ಮುಂದೆ ಏತಕ್ಕೆ ಇಟ್ಟಿದ್ದೇವೆ ಎನ್ನತಕ್ಕಂತ ಅಂಶದ ಬಗ್ಗೆ ರಾಜ್ಯಪಾಲರ ಆದೇಶದಿಂದ ಹಿಡಿದು ಎಲ್ಲಾ ಕಾರಣಗಳನ್ನು ನಾನು ಸದನದ ಮುಂದೆ ಪೂರ್ವಭಾವಿಯಾಗಿ ಇಟ್ಟಿದ್ದೇನೆ. ಆದ್ದರಿಂದ ಅದರ ಹಿನ್ನೆಲೆ ಈಗ ಬೇಕಾಗಿಲ್ಲ. ಈ ವಿಚಾರದಲ್ಲಿ ನಾನು ಬೇರೆ ಯಾವುದೇ ವಿಚಾರವನ್ನು ಪೂರ್ವ ಪೀಠಿಕೆಯಾಗಿ ಹೇಳಲಿಲ್ಲ. ನಿರ್ಣಯವನ್ನು ಸದನದ ಮುಂದೆ ನಾನು ಇಟ್ಟೆ. ಕೆಲವು ಸಾರಿ ಬೆಳವಣಿಗೆಗಳು ಬಂದವು, ಸಂದರ್ಭ ಹಾಗೆ ಬಂತು, ಎನ್ನತಕ್ಕಂಥ ಮಾತನ್ನು ಆಡಿ, ರಾಜ್ಯಪಾಲರ ಆದೇಶಕ್ಕೆ ನಾನು ನೇರವಾಗಿ ಜಂಪ್ ಮಾಡಿ ಮುಕ್ತಾಯ ಮಾಡುತ್ತೇನೆ. ಮತ್ತೆ ರಾಜ್ಯಪಾಲರ ಆದೇಶದಂತೆ ಒಂದು ನಿರ್ಣಯವನ್ನು ಈ ಸದನದಲ್ಲಿ ತರಲಾಯಿತು ಎನ್ನತಕ್ಕಂಥ ಮಾತನ್ನು ನಾನು ಇಟ್ಟೆ. ಆದರೂ ಕೂಡ ಅದರ ಹಿನ್ನೆಲೆಯಲ್ಲಿ ಅವರವರ ಅರ್ಥದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರಾದಿಯಾಗಿ ಅನೇಕ ಮಾನ್ಯ ಮಿತ್ರರು ಶ್ರೀಮಾನ್ ಕಮರುಲ್ ಇಸ್ಲಾಮ್‌ರವರೊಬ್ಬರನ್ನು ಬಿಟ್ಟು ಉಳಿದಿರತಕ್ಕಂಥ ಎಲ್ಲಾ ವಿರೋಧಪಕ್ಷದ ಮಾನ್ಯ ಸದಸ್ಯರು ತಮ್ಮದೇ ಆದ ಅರ್ಥದಲ್ಲಿ, ತಮ್ಮದೇ ಆದ ಧಾಟಿಯಲ್ಲಿ ಮಾತನಾಡಿದ್ದಾರೆ. ಅದರೆ ಅವರು ವಿಚಾರ ಮಾಡಬೇಕಾಗಿತ್ತು. ಏಕೆಂದರೆ ಒಂದು ಪಕ್ಷಕ್ಕೆ ಬಹುಮತವಿದ್ದು ಸರ್ಕಾರ ನಡೆಸತಕ್ಕಂಥ ಸಂದರ್ಭದಲ್ಲಿ ನಾಯಕತ್ವದ

ಬದಲಾವಣೆಯಾದರೆ ಸರ್ಕಾರ ತತ್‌ಕ್ಷಣ ಬದಲಾವಣೆಯಾಗುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಆಗುವುದಿಲ್ಲ ಎನ್ನತಕ್ಕ ಅಂಶ ಅವರ ಗಮನದಲ್ಲಿರಬೇಕಾಗಿತ್ತು. ಆದರೆ ಈ ನಮ್ಮ ಪಕ್ಷದಲ್ಲಿ ಒಡಕು ಬರುತ್ತದೆ, ವ್ಯತ್ಯಾಸ ಬರುತ್ತದೆ. ಅದರ ದುರ್ಲಾಭವನ್ನು ಪಡೆಯತಕ್ಕಂಥ ಸಂಚನ್ನು ಹಂಚಿಕೆಯನ್ನು ಆ ಪಕ್ಷದವರು ಹೂಡಿದ್ದರು ಎನ್ನತಕ್ಕಂತ ಮಾತು ಕರ್ನಾಟಕ ರಾಜ್ಯದ ಜನತೆಗೆ ಮತ್ತು ಹೊರಗಡೆ ಕೂಡ ಗೊತ್ತಿದೆ. ನಾನು ಈ ಮಾತನ್ನು ಪೂರ್ವಪೀಠಿಕೆಯಾಗಿ ಮಾತನಾಡಲಿಲ್ಲ. ಏಕೆಂದರೆ, ಈ ಬಗ್ಗೆ ವಿರೋಧಪಕ್ಷದ ನಾಯಕರಾದರು ಸ್ವಲ್ಪ ಎಚ್ಚರಿಕೆ ವಹಿಸುತ್ತಾರೆಂದು ನಾನು ಭಾವಿಸಿದ್ದೆ. ಏಕೆಂದರೆ, ಅವರು ಆ ವಿಚಾರವನ್ನು ಮುಟ್ಟಿದಷ್ಟು ಅವರಿಗೇ ಅದು ರೀಬೌಂಡ್ ಆಗುತ್ತದೆ ಎನ್ನುವ ವಿಚಾರ ಅವರಿಗೆ ಗೊತ್ತಿರಬೇಕಾಗಿತ್ತು. ನಾನು ಮೊದಲು ಅವರ ಬಾಯಿಂದ ಬಂದ ಮೇಲೆ ಉತ್ತರ ಕೊಡೋಣ ಎಂದು ಸುಮ್ಮನೆ ಇದ್ದೆ. ಮಾನ್ಯ ಸಭಾಧ್ಯಕ್ಷರೇ, ಅವರೇ ಒಪ್ಪಿಕೊಂಡಿದ್ದಾರೆ. ರಾಜ್ಯಪಾಲರ ಹತ್ತಿರ ಹೋಗಿರತಕ್ಕಂಥಾದ್ದನ್ನು ಅವರ ಭಾಷಣದಲ್ಲಿಯೇ ಒಪ್ಪಿಕೊಂಡಿದ್ದೆ. ಒಬ್ಬರಲ್ಲ, ಇಬ್ಬರಲ್ಲ, ವಿರೋಧಪಕ್ಷದ ನಾಯಕರಾದಿಯಾಗಿ ಉಪ ನಾಯಕರಾದಿಯಾಗಿ ಅವರ ಪಕ್ಷದ ರಾಜ್ಯ ಮಟ್ಟದಲ್ಲಿ ಅಧ್ಯಕ್ಷರು ಇತ್ಯಾದಿ ಇತ್ಯಾದಿಯವರಾದಿಯಾಗಿ ರಾಜ್ಯಪಾಲರನ್ನು ಭೇಟಿ ಮಾಡಿದ್ದನ್ನು ನಾವು ರಾಜ್ಯಪಾಲರಿಗೆ ಕೊಟ್ಟಿರತಕ್ಕಂಥ ಮೆಮೋರಾಂಡಂ ಈ ರೀತಿ ಇದೆ ಎನ್ನುವುದನ್ನು ಸಹ ಹೇಳಿದ್ದಾರೆ. ಅವರ ಪಕ್ಷದ ಹಿಂದಿನ ಮುಖ್ಯಮಂತ್ರಿಗಳು ಹಾಗು ಹಾಲಿ ಈ ಸದನದ ಸದಸ್ಯರಾದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಹೇಳಿಕೆ ಸ್ಪಷ್ಟವಾಗಿ ಇದೆ. ಅಂತಿಮವಾಗಿ ನಮ್ಮ ಪಕ್ಷದಲ್ಲಿ ಬಂದಿರತಕ್ಕಂಥ ವ್ಯತ್ಯಾಸದ ದುರ್ಲಾಭ ಪಡೆದು ಸಾಧ್ಯವಾದರೆ ಅವರ ಸರ್ಕಾರ, ಇಲ್ಲದಿದ್ದರೆ ಈ ಒಂದು ಸದನವನ್ನೇ ಸಂಪೂರ್ಣವಾಗಿ ವಿಸರ್ಜನೆ ಮಾಡಬೇಕೆನ್ನುವ ಅಂಶ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಕೊಟ್ಟಿರತಕ್ಕಂಥ ಹೇಳಿಕೆಯಲ್ಲಿ ಸ್ಪಷ್ಟವಾಗಿ ಇದೆ. ಅದು ಪತ್ರಿಕೆಗಳಲ್ಲಿ ತುಂಬಾ ಬಂದಿದೆ. ನಾವು ಅದನ್ನು ಪ್ರಸ್ತಾಪ ಮಾಡಲಿಲ್ಲ. ಆದರು ಕೂಡ ನಾನು ಅದನ್ನು ಒಂದು ಮೂಲೆಯಲ್ಲಿ ಹಾಗೆಯೇ ಇಟ್ಟುಕೊಂಡಿದ್ದೆ. ಇದು ಪತ್ರಿಕೆಗಳ ತುಂಬಾ ಬಂದಿರತಕ್ಕಂಥ ವಿಚಾರ. ಇದು ಏನು ತೋರಿಸುತ್ತದೆ. ಅದು ಒಂದು ಕಡೆಗೆ ಇರಲಿ. ನಮ್ಮ ಪಕ್ಷದ ಹಿಂದಿನ ಮುಖ್ಯಮಂತ್ರಿಗಳು ಸರ್ಕಾರ ರಚನೆ ಮಾಡುವುದಾದರೆ ನಾವು ಬೆಂಬಲ ಕೊಡುತ್ತೇವೆ ಎನ್ನುವ ಮಾತು ಇದೆ. ಸುಮಾರಾಗಿ ಅವರ ಪಕ್ಷದಲ್ಲಿ ಆ ನೀತಿ ಇಲ್ಲ. ಅದು ರಾಷ್ಟ್ರ ಮಟ್ಟದಲ್ಲೂ ಇಲ್ಲ. ಎಲ್ಲೂ ಕೂಡಾ ಇಲ್ಲ. ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ಕೊಟ್ಟು ಸರ್ಕಾರ ರಚನೆ ಮಾಡತಕ್ಕಂಥಾ ನೀತಿ ಜನತಾ ದಳದಲ್ಲಿ ಇಲ್ಲ. ಇವತ್ತು ನೀತಿ ಬಗ್ಗೆ ಪ್ರತಿಪಾದನೆ ಮಾಡತಕ್ಕಂಥವರು ಇವರು, ಕರ್ನಾಟಕ ರಾಜ್ಯದಲ್ಲಿ ಮಾತ್ರ ಅದಕ್ಕೆ ಒತ್ತು ಕೊಟ್ಟು ರಾಷ್ಟ್ರಪತಿಗಳ ಆಳ್ವಿಕೆ ಇರತಕ್ಕಂತ ಕಾಲದಲ್ಲಿ ವೀರೇಂದ್ರಪಾಟೀಲ್‌ಜೀಯವರಿಗೆ ಪುನಃ ಸರ್ಕಾರವನ್ನು ರಚನೆ ಮಾಡುವ ಹಾಗಿದ್ದರೆ ನಾವು ಬೆಂಬಲವನ್ನು ಕೊಡುತ್ತೇವೆ ಎನ್ನುವು ಮಾತನ್ನು ಹೇಳಿದ್ದಾರೆ. ಆದರ ಅರ್ಥ ಏನು? ಎಂದು ಪ್ರಶ್ನೆ ಮುಖಾಂತರ ನಾನು ಇಡುತ್ತಿದ್ದೇನೆ. ಆದರ ಅರ್ಥ ಏನಾದರೂ ಆಗಲಿ, ಚಿಂತೆ ಇಲ್ಲ, ನೀತಿ ಇಲ್ಲ, ಏನು ಇಲ್ಲ. ಆದರು ಕೂಡಾ ನಮ್ಮ ಸರ್ಕಾರ ಸುಭದ್ರವಾಗಿ ಇರುವುದಕ್ಕೆ ಕರ್ನಾಟಕದ ಜನತೆ ಅವಕಾಶ ಕೊಟ್ಟಿದ್ದಾರೆ. ಅವರ ಅಧಿಕಾರ ಮೇಲೆ ಏನಿದೆ? ಅದು ಕೂಡಾ ಅಲ್ಲಾಡುತ್ತಿದೆ. ಆದರ ಬಗ್ಗೆ ನಾನು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಅದು ಇಡೀ ದೇಶದಲ್ಲಿ ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ಅವರ ಸಂಪೂರ್ಣ ಸಹಕಾರದಿಂದ ಇಲ್ಲಿ ಸುಭದ್ರವಾಗಿರತಕ್ಕಂಥ ರಾಜ್ಯ ಸರ್ಕಾರವನ್ನು ಅಭದ್ರತೆಗೆ ಒಳಪಡಿಸಬೇಕು, ಇದನ್ನು ಛಿದ್ರ ಛಿದ್ರ ಮಾಡತಕ್ಕಂಥ ದೃಷ್ಟಿಯಿಂದ ದೊಡ್ಡ ಹೊಂಚನ್ನು, ಹವಣಿಕೆಯನ್ನು ಅವರು ಸ್ಪಷ್ಟವಾಗಿ ಮಾಡಿದ್ದಾರೆ. ಅವರು ಬರೀ ಗೌರ್ನರ್‌ರವರ ಮನೆಯಲ್ಲಿ ಓಡಾಡತಕ್ಕಂತ ವಿಚಾರವಷ್ಟೇ ಅಲ್ಲ, ಅವರು ಎಷ್ಟೆಷ್ಟು ಹೊತ್ತಿಗೆ ಎಲ್ಲೆಲ್ಲಿ ಹೋಗಿದ್ದಾರೆ, ಏನೇನು ಮಾಡಿದ್ದಾರೆ ಎನ್ನತಕ್ಕಂಥ ವಿವರಗಳು ನನ್ನ ಹತ್ತಿರ ಒಂದಷ್ಟು ಇವೆ. ದೆಹಲಿಗೆ ಏಕೆ ಹೋದರು? ಒಂದು ವೇಳೆ ವಿಚಾರ ಹಾಗಿದ್ರೆ, ಇವತ್ತು ಗೌರ್ನರ್‌ರವರು ತಮ್ಮ ವರದಿಯನ್ನು ರಾಷ್ಟ್ರಾಧ್ಯಕ್ಷರಿಗೆ ಕಳುಹಿಸಿಕೊಡುತ್ತಾರೆ. ಅದನ್ನು ಕೇಂದ್ರದಲ್ಲಿ ಹೋಮ್ ಮಿನಿಸ್ಟರ್‌ರವರು ನೋಡುತ್ತಾರೆ. ಅವರು ಯಾವ ರೀತಿ ಅಭಿಪ್ರಾಯವನ್ನು ಕೊಡಬೇಕೋ ಅಲ್ಲಿ ಕೊಡುತ್ತಾರೆ. ಇದರ ಬಗ್ಗೆ ಎಷ್ಟೊಂದು ಒತ್ತಡವನ್ನು ತಂದಿದ್ದಾರೆ ಎನ್ನುವ ಬಗ್ಗೆ ಸಂಪೂರ್ಣವಾದ ವಿವರಗಳು ನನ್ನ ಹತ್ತಿರ

ಇದೆ. ಎಷ್ಟೊಂದು ಒತ್ತಡ. ಏನಾದರೂ ಮಾಡಿ ಈ ಶಾಸನ ಸಭೆಯನ್ನು ಡಿಸಾಲ್ವ್ ಮಾಡಬೇಕು, ಪುನಃ ಚುನಾವಣೆಯನ್ನು ಕರ್ನಾಟಕ ರಾಜ್ಯದಲ್ಲಿ ತರಬೇಕೆನ್ನತಕ್ಕಂತ ಏಕೈಕ ಗುರಿಯನ್ನು ಹೊಂದಿ ಅದಕ್ಕಾಗಿ ಇವರು ಸಂಪೂರ್ಣವಾಗಿ ಕೆಲಸ ಮಾಡಿದ್ದಾರೆ. ಇವತ್ತು ನಮ್ಮ ಪಕ್ಷದ ರಾಜ್ಯಾಂಗದ ಬಗ್ಗೆ ಮಾತನಾಡುವುದಕ್ಕೆ ಹೋಗುತ್ತಾರೆ. ನಮ್ಮ ಪಕ್ಷದ ಅಂತರಿಕ ವಿಚಾರಗಳನ್ನು ಮಾತನಾಡುತ್ತಾರೆ. ನಮ್ಮ ವಿಚಾರದ ಬಗ್ಗೆ ಮಾತನಾಡತಕ್ಕಂತ ಹಕ್ಕು, ಶಕ್ತಿ ಯಾರಿಗೂ ಕೂಡಾ ಬರುವುದಿಲ್ಲ. ಅವರ ಪಕ್ಷದ ಅಂತರಿಕ ವಿಷಯದ ಬಗ್ಗೆ ಮಾತನಾಡತಕ್ಕಂತ ಶಕ್ತಿ, ಹಕ್ಕು ನಮಗೆ ಇಲ್ಲವೆಂಬ ಅರಿವು ನಮಗೆ ಹೇಗಿದೆಯೋ ಅದೇ ರೀತಿಯ ಅರಿವು ಅವರಿಗೂ ಕೂಡಾ ಇರಬೇಕಾಗಿತ್ತು.

ಆದರೆ ಮತ್ತೊಬ್ಬ ವ್ಯಕ್ತಿ, ಹೆಸರಾಂತ ವಕೀಲರು, ಅವರೂ ಕೂಡ ಹೋಗಿ ಗೌರ್ನರ್‌ರವರನ್ನು ಕಂಡಿಲ್ಲವೆ? ಇವರ ಜೊತೆಯಲ್ಲಿ ಅವರು ಹೋಗಿಲ್ಲವೆ? ಅವರ ಹೆಸರನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅವರು ಈ ಮನೆಯ ಮಾನ್ಯ ಸದಸ್ಯರಲ್ಲ. ಏಕೆಂದರೆ, ಶ್ರೀಮಾನ್ ರಾಮಕೃಷ್ಣ ಹೆಗಡೆಯವರಿಗೆ ಸದಾ ಕಾಲ ಲೀಗಲ್ ಅಡ್ವೈಸರ್ ಆಗಿದ್ದಂಥವರು, ಬೆನ್ನೆಲುಬು ಆಗಿದ್ದಂತವರು ಅವರು. ಅವರು ಹೋಗಿ ಕಾಂಗ್ರೆಸ್ ಪಕ್ಷದ ರಾಷ್ಟ್ರದ ಸಂಪೂರ್ಣ ಕಾನ್ಸಿಟ್ಯೂಷನ್ ಆಫ್ ಇಂಡಿಯಾವನ್ನು ಮುಗಿಸಿದ್ದಾರೆ. ಯಾವ ರೀತಿ ಮುಗಿಸಿದ್ದಾರೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇಲ್ಲಿ ನಮ್ಮ ಪಕ್ಷದ ರಾಜ್ಯಾಂಗದ ಬಗ್ಗೆ ವ್ಯಾಖ್ಯಾನ ಮಾಡುವುದಕ್ಕೆ ಗೌರ್ನರ್‌ರವರ ಮನೆಗೆ ಹೋಗಿದ್ದಾರೆ. ಇವತ್ತು ಗೌರ್ನರ್‌ರವರಿಗೆ ಇರತಕ್ಕಂಥ ಸ್ಥಾನಮಾನದ ಬಗ್ಗೆ ನಮಗೆ ಗೌರವ ಇದೆ. ನಾವು ಗೌರವವನ್ನು ಕೊಡುತ್ತೇವೆ. ಏತಕ್ಕೆಂದರೆ, ಕಾನ್ಸಿಟ್ಯೂಷನ್ ಹೆಡ್ ಮತ್ತು ರಾಜ್ಯಾಂಗಬದ್ಧವಾಗಿ ಅವರಿಗೆ ಎಷ್ಟು ಗೌರವ ಕೊಡಬೇಕೋ ಅಷ್ಟು ಕೊಡುತ್ತೇವೆ. ನಾವು ಆ ಬಾಂಧವ್ಯವನ್ನು ಇಟ್ಟುಕೊಂಡಿದ್ದೇವೆ. ಏನಾದರು ಮಾಡಿ ಈ ವಿಚಾರವನ್ನು ಗೌರ್ನರ್‌ರವರಿಗೆ ಹೇಳಬೇಕೆಂದು ಅವರು ಹೋದರು. ಆದರೆ ಮಾನ್ಯ ರಾಜ್ಯಪಾಲರಿಗೆ ಅದು ಅರ್ಥವಾಯಿತು, ಗೊತ್ತಾಯಿತು ಇದು ಎಂದೂ ಕೂಡ ಕಾನೂನು ಪ್ರಕಾರ ನಿಲ್ಲತಕ್ಕದ್ದಲ್ಲ, ಅಷ್ಟೇ ಅಲ್ಲ, ಇದು ಅನ್ಯಾಯದ ನೆಲೆಗಟ್ಟಿನ ಮೇಲೆ ನಿಂತಿರತಕ್ಕಂಥ ವಿಚಾರಧಾರೆ ಎನ್ನತಕ್ಕಂಥ ದೃಷ್ಟಿಯಿಂದ ಈ ವಿಚಾರವನ್ನು ಅವರು ಒಪ್ಪಲಿಲ್ಲ. ಅದಕ್ಕಾಗಿ ಅಂತಿಮ ವರದಿಯನ್ನು ಕೇಂದ್ರ ಸರಕಾರಕ್ಕೆ ಕಳುಹಿಸಿಕೊಡಬೇಕಾದರೆ, ಇಲ್ಲಿ ಪ್ರಜಾಸತ್ತೆಯ ಸ್ವತಂತ್ರ ಸರ್ಕಾರವನ್ನು ರಚನೆ ಮಾಡಿಸಲೇ ಬೇಕಾಗುತ್ತದೆ, ಆ ಸದವಕಾಶ ಇಲ್ಲಿ ಇರಲೇಬೇಕಾಗುತ್ತದೆ ಎನ್ನುವ ಉದ್ದೇಶದಿಂಥ ಅವರು ಅಂತಿಮ ವರದಿಯನ್ನು ಕಳುಹಿಸಿಕೊಟ್ಟರು. ಆದರೆ ಇವರು ಎಲ್ಲಿಯವರೆಗೆ ಪ್ರಯತ್ನ ಮಾಡಿದ್ದಾರೆ ಎನ್ನುವುದನ್ನು ಹೇಳುತ್ತೇನೆ.

ನಾನು ನಮ್ಮ ಪಕ್ಷದಲ್ಲಿ ನಾಯಕನಾಗಿ ಆ ಆಯ್ಕೆಯಾದ ಮೇಲೆ ಮೊಟ್ಟಮೊದಲನೆ ಬಾರಿಗೆ ಮಾನ್ಯ ರಾಜ್ಯಪಾಲರು ನನಗೆ ಫೋನ್ ಮಾಡಿ ಪ್ರಮಾಣ ವಚನ ಸ್ವೀಕಾರ ಮಾಡಬೇಕು ಎಂದು ಹೇಳಿದರು. ಪ್ರೆಸಿಡೆಂಟ್ ರೂಲ್ ರಿವೋಕ್ ಮಾಡುವ ಆರ್ಡರ್ ಇನ್ನು ಕೂಡ ಇಷ್ಯೂ ಆಗಿರಲಿಲ್ಲ. ಇವರು ಕೊನೇ ಘಳಿಗೆಯವರೆಗೂ ಕೂಡ ಕೇಂದ್ರದಲ್ಲಿ ಕೆಲಸಮಾಡಿದ್ದಾರೆ. ಇಲ್ಲಿ ಪ್ರಜಾಪ್ರಭುತ್ವದ ಬಗ್ಗೆ ಭಾಷಣ ಮಾಡುತ್ತಿದ್ದಾರೆ, ಇವರು ಏನಾದರು ಮಾಡಿ ಪ್ರೆಸಿಡೆಂಟ್ ರೂಲನ್ನು ರಿವೋಕ್ ಮಾಡುವುದಕ್ಕೆ ಅವಕಾಶಕೊಡಬಾರದೆಂಬ ದೃಷ್ಟಿಯಿಂದ ಕೊನೆ ಘಳಿಗೆಯವರೆಗೆ ಕೂಡಾ ಪ್ರಯತ್ನ ಮಾಡಿದ್ದರು. ಮಾನ್ಯ ಸಭಾಧ್ಯಕ್ಷರೇ ಈ ಸಂದರ್ಭದಲ್ಲಿ ನಮ್ಮ ಪಕ್ಷದ ನಾಯಕರನ್ನು ಅಭಿನಂದಿಸಲೇಬೇಕಾಗುತ್ತದೆ. ಅವರ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ. ಪಾರ್ಲಿಮೆಂಟಿನ ಸದಸ್ಯರುಗಳನ್ನು ಅಭಿನಂದಿಸಲೇಬೇಕಾಗುತ್ತದೆ. ಅಷ್ಟೇ ಅಲ್ಲ, ಅವರ ಪಕ್ಷದಲ್ಲೂ ಕೊನೆ ಪಕ್ಷ ಒಬ್ಬಿಬ್ಬರಾದರು ಕೂಡ ಒಳ್ಳೆಯವರು ಇದ್ದಾರೆ. ಅವರ ಹೆಸರುಗಳನ್ನು ಹೇಳುವುದು ಸರಿಯಲ್ಲ. ಅದು ಪತ್ರಿಕೆಗಳಲ್ಲಿ ಬಂದಿದೆ. ಅವರು ಅಭಿಪ್ರಾಯ ಕೊಟ್ಟರು. No this is highly incorrect and, illegal. ಕಾಂಗ್ರೆಸ್ ಪಕ್ಷದ ಸರ್ಕಾರ ಇಲ್ಲಿ ಪುನಃ ಪ್ರತಿಷ್ಠಾಪನೆ ಆಗಬೇಕಾಗುತ್ತದೆ ಎನ್ನುವ ಅಂಶವನ್ನು ಅವರು ಹೇಳಿದರು. ತಮಿಳುನಾಡಿನ ಮುಖ್ಯಮಂತ್ರಿಗಳೂ ಹೇಳಿದ್ದರು. ಕಮ್ಯುನಿಸ್ಟ್ ಪಕ್ಷದವರೂ ಕೂಡ ಹೇಳಿದ್ದರು. ನಾನು ಇದನ್ನು ಪೂರ್ವ ಪೀಠಿಕೆಯಲ್ಲಿ ಹೇಳುವುದಕ್ಕೆ ಹೋಗಲಿಲ್ಲ.

ಏಕೆಂದರೆ, ಸುಮ್ಮನೆ ಅದನ್ನು ಕೆಣಕಿ ವಿವರಗಳಿಗೆ ಹೋಗತಕ್ಕಂಥ ಅವಶ್ಯಕತೆ ಇಲ್ಲ ಎನ್ನತಕ್ಕಂಥ ಭಾವನೆಯಿಂದ ನಾನು ಸುಮ್ಮನೆ ಇದ್ದೆ. ಆದರೆ ಇವೊತ್ತು ಅವರೇ ಈ ಮಾತನ್ನು ಹೇಳಿದ್ದರಿಂದ ನಾನು ಹೇಳುತ್ತಿದ್ದೇನೆ. ಅಧಿಕಾರದ ದಮ್ಮಿನಿಂದ, ಏನೋಂದು ಇವರ ಮನಸ್ಸಿನಲ್ಲಿ ಇತ್ತು ಅಂದರೆ, ಏನಾದರೂ ಮಾಡಿ ಪರಿಸ್ಥಿತಿಯ ದುರುಪಯೋಗ ಮಾಡಬೇಕು, ಪ್ರಜಾಸತ್ತೆ ಛಿದ್ರವಾಗಿ ಹೋಗಲಿ, ಹಾಳಾಗಿ ಹೋಗಲಿ, ಇಷ್ಟೊಂದು ಬಹುಮತವನ್ನು ಪಡೆದಿರತಕ್ಕಂತ ಕಾಂಗ್ರೆಸ್ ಪಕ್ಷವನ್ನು ಏನಾದರು ಮಾಡಿ ಪುಡಿ ಪುಡಿಯಾಗಿ ಮಾಡಬೇಕು, ಅವರಿಗೆ ಸರಕಾರ ಮಾಡುವುದಕ್ಕೆ ಬಿಡಬಾರದು ಎಂಬ ಒಂದು ಅಂಶಕ್ಕೆ ಅವರು ಹೋದರು. ಆದರೆ ಆ ಸಂದರ್ಭದಲ್ಲಿ ನಮ್ಮ ಕಾರ್ಯಕರ್ತರು, ನಮ್ಮ ಬೆಂಬಲಿಗರು, ಮತ್ತು ನಮ್ಮ ಕರ್ನಾಟಕ ರಾಜ್ಯದ ಜನತೆ, ಪಾರ್ಲಿಮೆಂಟಿನ ಸದಸ್ಯರಾದಿಯಾಗಿ ಇನ್ನೂ ಬಹಳಷ್ಟು ಜನರು ನಮಗೆ ಬೆಂಬಲವನ್ನು ಕೊಟ್ಟು ಸಹಕರಿಸಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ನಾನು ಅಭಿನಂದಿಸುತ್ತಿದ್ದೇನೆ. ಯಾರ್‍ಯಾರು ಈ ಕುರಿತು ಬಹಳಷ್ಟು ಪರಿಶ್ರಮಪೂರ್ವಕವಾಗಿ ದುಡಿದಿದ್ದಾರೆ, ಅವರೆಲ್ಲರನ್ನೂ ನಾನು ಇವೊತ್ತು ಅಭಿನಂದಿಸುತ್ತೇನೆ. ನಮ್ಮ ಸರಕಾರ ರಚನೆ ಆಗಬೇಕೆಂಬುದು ನಮ್ಮ ಇಚ್ಛೆಯಾಗಿತ್ತು. ನಾನು ಮುಖ್ಯಮಂತ್ರಿಯಾಗುತ್ತೇನೆ ಎಂಬುದು ನನಗೆ ಗೊತ್ತಿರಲಿಲ್ಲ. ನಾನಲ್ಲದಿದ್ದರೆ ಮತ್ತೊಬ್ಬರು ಆಗಬಹುದು, ಆದರೆ ಜನತೆಯು ಸಂಪೂರ್ಣವಾದಂಥ ತೀರ್ಪಿನೊಂದಿಗೆ ಭಾರಿ ಬಹುಮತ ಹೊಂದಿರತಕ್ಕಂಥ ಒಂದು ಪಕ್ಷವು ಸರಕಾರ ಸ್ಥಾಪನೆ ಮಾಡತಕ್ಕಂಥ ಸರ್ವ ಶಕ್ತಿಯನ್ನೂ ಪಡೆದಿರುವಾಗ, ಕಾನೂನು ಬದ್ಧವಾಗಿ, ಸಂವಿಧಾನಬದ್ಧವಾಗಿ ಅದು ತನ್ನ ಹಕ್ಕನ್ನು ಚಲಾವಣೆ ಮಾಡಬೇಕಾಗುತ್ತದೆ, ಅದಕ್ಕೆ ಅವಕಾಶ ಮಾಡಿಕೊಡಬೇಕಾಗುತ್ತದೆ. ಅದೇ ಕೆಲಸ ಇವತ್ತಾಗಿದೆ. ಇಂಥ ಒಂದು ವಾತಾವರಣ ಸೃಷ್ಟಿ ಮಾಡುವುದಕ್ಕೆ ಸೂಕ್ತ ವ್ಯಾಖ್ಯಾನ ಮಾಡಿದ್ದಾರೆ, ಪೂರ್ಣ ಬೆಂಬಲವನ್ನು ಕೊಟ್ಟಿದ್ದಾರೆ, ಶ್ರಮಿಸಿದ್ದಾರೆ, ಅವರೆಲ್ಲರನ್ನೂ ನಾನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ಈ ಸದನದಲ್ಲಿ ಇವೊತ್ತು ಮಾನ್ಯ ಸದಸ್ಯರು ಭಾರಿ ವ್ಯಾಖ್ಯಾನ ಮಾಡಿದರು. ಸರಕಾರ ಫಾಲ್ಸ್ ಆಗುತ್ತಿತ್ತು. ಸದನದಲ್ಲಿ ನಿಮ್ಮ ಸದಸ್ಯತ್ವ ಹೋಗುತ್ತಿತ್ತು ಎಂದು ಮುಂತಾಗಿ ವ್ಯಾಖ್ಯಾನಿಸಿ ಹೇಳಿದರು. ಅವರು ಹೇಳುವಂತೆ ಖಂಡಿತವಾಗಿಯೂ ಇಲ್ಲ, ಅಂಥ ಸಂದರ್ಭಕ್ಕೆ ನಮ್ಮ ಸದಸ್ಯರು ಸಿದ್ಧರಾಗಿದ್ದರು. ನಮ್ಮ ಸದಸ್ಯತ್ವ ಹೋದರೂ ಚಿಂತೆ ಇಲ್ಲ. ಆದರೆ ನಾವು ಪ್ರಜಾಪ್ರಭುತ್ವವನ್ನು ಉಳಿಸುತ್ತೇವೆ, ಬೆಳೆಸುತ್ತೇವೆ, ನಮ್ಮ ಸರಕಾರವನ್ನು ಸ್ಥಾಪನೆ ಮಾಡುವವರೆಗೂ ನಾವು ಸುಮ್ಮನಿರುವುದಿಲ್ಲ, ಒಂದು ವೇಳೆ ನಾವೇನಾದರು ಇದರಲ್ಲಿ ವಿಫಲರಾದರೆ ಮತ್ತೆ ಕರ್ನಾಟಕ ರಾಜ್ಯದ ಜನತೆಯ ಮುಂದೆ ಹೋಗುತ್ತೇವೆ ಎನ್ನತಕ್ಕಂಥ ಮಾತನ್ನು ಈ ಸದನದಲ್ಲಿ ಕುಳಿತಿರತಕ್ಕಂತ ನಮ್ಮ ಪಕ್ಷದ ಸದಸ್ಯರು ಎಲ್ಲರೂ ಸೇರಿ ಹೇಳಿದ್ದಾರೆ. ಅದಕ್ಕಾಗಿ ಅವರು ಹಗಲೂ ರಾತ್ರಿ ದುಡಿದಿದ್ದಾರೆ. ರಾಜಕೀಯದಲ್ಲಿ ಕೆಲವು ಭಿನ್ನಾಭಿಪ್ರಾಯಗಳು ಬರತಕ್ಕಂಥಾದ್ದು ಸಹಜವೆ. ಸಂಘ – ಸಂಸ್ಥೆಯಲ್ಲಿ, ಪಕ್ಷದಲ್ಲಿ, ಪಾರ್ಟಿಯಲ್ಲಿ ಭಿನ್ನಾಭಿಪ್ರಾಯಗಳು ಬರುವುದು ಸಹಜವೆ. ಅದನ್ನು ಸರಿಪಡಿಸಿಕೊಳ್ಳತಕ್ಕಂಥ ವಿಚಾರ ನಮ್ಮದು. ಅದು ನಮ್ಮ ಮನೆತನದ ವಿಚಾರ. ನಾವು ಅದನ್ನು ಶಾಂತಿಯುತವಾಗಿ ಸೌಹಾರ್ದ ವಾತಾವರಣದಲ್ಲಿ ಬಗೆಹರಿಸಿಕೊಳ್ಳುತ್ತೇವೆ. ಭಿನ್ನಾಭಿಪ್ರಾಯ ಬಂದಾಗ ಅದನ್ನು ಸರಿದೂಗಿಸಿಕೊಂಡು ಹೋಗತಕ್ಕಂಥ, ಸರಿಪಡಿಸಿಕೊಂಡು ಹೋಗತಕ್ಕಂಥ ಒಂದು ವಿಚಾರತನ, ಜವಾಬ್ದಾರಿ ನಮ್ಮ ಪಕ್ಷಕ್ಕೆ ಇದೆ. ನಾವು ಒಗ್ಗಟ್ಟು ಇಟ್ಟುಕೊಂಡಿದ್ದೇವೆ. ನಾವು ನಮ್ಮ ಪಕ್ಷದ ವರಿಷ್ಠರ ಆದೇಶವನ್ನು ಕಾಯುತ್ತೇವೆ. ಇಲ್ಲಿಯೂ ನಮ್ಮವರ ಅಭಿಪ್ರಾಯಗಳನ್ನು ರೂಢಿಸಿಕೊಳ್ಳುತ್ತೇವೆ. ನಾವು ಒಗ್ಗಟ್ಟಿನಿಂದ ಮುಂದೆ ಹೋಗುತ್ತೇವೆ. ಆದರೆ ಇಲ್ಲಿರತಕ್ಕಂಥ ಸ್ವಲ್ಪ ಭಿನ್ನಾಭಿಪ್ರಾಯವನ್ನು ಸಂಪೂರ್ಣ ಒಡಕು ಎನ್ನುವ ದೃಷ್ಟಿಯಿಂದ, ಇದೊಂದು ಲಕ್ಷ್ಮಣ ಗೆರೆ ಎನ್ನತಕ್ಕಂಥ ದೃಷ್ಟಿಯಿಂದ, ಒಂದು ರೀತಿಯಲ್ಲಿ ಇದರ ದುರ್ಲಾಭವನ್ನು ಪಡೆಯತಕ್ಕಂಥ ದೃಷ್ಟಿಯಿಂದ ಈ ಜನರು ರಾಜಕೀಯ ಚಿಂತನೆ ಮಾಡಿರತಕ್ಕದ್ದು ಅವರು ಯಾವ ಮಟ್ಟದ ರಾಜಕಾರಣ ಮಾಡುವುದಕ್ಕೆ ಹೋಗಿದ್ದರು ಎನ್ನತಕ್ಕಂಥಾದ್ದು ರಾಷ್ಟ್ರ ರಾಜಕಾರಣದಲ್ಲಿ ಎತ್ತಿ ತೋರಿಸುತ್ತದೆ. ಜನತಾದಳದವರು ಮತ್ತಿತರರು ನಮ್ಮ ಮಿತ್ರರು ಆ ಸಂದರ್ಭದಲ್ಲಿ ಕೈ ಹಾಕಿರತಕ್ಕಂಥಾದ್ದು ಇದೆ. ಮಾನ್ಯ ಸಭಾಧ್ಯಕ್ಷರೆ, ನಾನು

ಇಷ್ಟು ವಿಚಾರಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಹೇಳಿದ್ದೇನೆ, ಇನ್ನು ಉಳಿದಿರತಕ್ಕಂಥ ವಿಚಾರಗಳನ್ನು ನಾನು ಹೇಳುವುದಿಲ್ಲ. ಮಾನ್ಯ ವಿರೋಧಪಕ್ಷದವರು ಬೇಕಾದಷ್ಟು ಹೇಳಿದ್ದಾರೆ. ನಾನು ಹಿಂದುಳಿದ ವರ್ಗದವನು ಎಂಬಿತ್ಯಾದಿಯಾಗಿಯೂ ಹೇಳಿದ್ದಾರೆ. ಕ್ಷಮಿಸಬೇಕು, ಹುಟ್ಟಿನಲ್ಲಿ ಯಾವುದೊ ಒಂದು ಜಾತಿಯಲ್ಲಿ ವ್ಯಕ್ತಿ ಹುಟ್ಟಬೇಕಾಗುತ್ತದೆ. ಹುಟ್ಟಿಗೂ ಮನುಷ್ಯನಿಗೂ ನಂಟು ಹೇಳುವುದು ಸರಿಯೆ? ಇಲ್ಲಿ ಒಂದು ಮಾತನ್ನು ನಾನು ಹೇಳಬೇಕಾದುದು ಏನೆಂದರೆ, ಈ ಒಂದು ಸಂದರ್ಭವನ್ನು ಉಪಯೋಗಿಸಿಕೊಂಡು ಈ ಮಾತನ್ನು ಹೇಳಬೇಕೆಂದು ಆಶೆ ಉಳ್ಳವನಾಗಿದ್ದೇನೆ. ನಮ್ಮ ಸಮಾಜವಾದದ ಸಿದ್ಧಾಂತ ಏನಿದೆ, ಅದರ ಪ್ರಕಾರ ದೇಶದ ಸರ್ವರ ಏಳಿಗೆ ಸರ್ವದಿಶೆಯಲ್ಲಿ ಆಗಬೇಕಾಗಿದೆ.

ಇದು ನಮ್ಮ ಕಾಂಗ್ರೆಸ್ ಪಕ್ಷದ ನೀತಿ ಕೂಡ ಆಗಿದೆ. ನಮ್ಮ ಹಿಂದಿನ ಪ್ರಧಾನಿಯವರಾಗಿದ್ದ ಇಂದಿರಾಗಾಂಧೀಜಿಯವರ ಕಾಲದಿಂದಲೂ ಈ ನೀತಿಯನ್ನು ನಾವು ಇಟ್ಟುಕೊಂಡು ಬಂದಿದ್ದೇವೆ. ಅಂತೆಯೇ ಇನ್ನೊಂದು ನೀತಿಯನ್ನು ಇತರ ಎಲ್ಲಾ ರಾಜಕೀಯ ಪಕ್ಷಗಳವರು ಇಟ್ಟುಕೊಂಡ ಹಾಗೆ ನಾವು ಇಟ್ಟುಕೊಂಡಿದ್ದೇವೆ. ಅದೇನೆಂದರೆ, ಹರಿಜನ, ಗಿರಿಜನರಿಗೆ ಮತ್ತು ಅಲ್ಪಸಂಖ್ಯಾತರಿಗೆ ಹಿಂದುಳಿದ ವರ್ಗಗಳಿಗೆ ಸೂಕ್ತ ರಕ್ಷಣೆ ಕೊಡಬೇಕು, ಅವರುಗಳು ಕೂಡ ಮೇಲೆ ಬರಬೇಕು, ಅದಕ್ಕೋಸ್ಕರವಾಗಿ ಕಾಲಾನುಸಾರವಾಗಿ ಕಾನೂನುಗಳನ್ನು ಮಾಡಿ ಜಾರಿಗೆ ಕೊಟ್ಟಿದ್ದೇವೆ. ಅವರಿಗೆ ಸರಕಾರಿ ನೌಕರರ ಸೇವಾ ಕ್ಷೇತ್ರದಲ್ಲಿ, ಶಿಕ್ಷಣ ಕ್ಷೇತ್ರದಲ್ಲಿ ಸೂಕ್ತ ಪ್ರಾತಿನಿಧ್ಯವನ್ನು ಕೊಟ್ಟಿದ್ದೇವೆ. ಮಂತ್ರಿಮಂಡಲದಲ್ಲಿ ಮುಂದುವರಿದ ಕೋಮಿನವರಿಗೆ ಪ್ರಾತಿನಿಧ್ಯಕೊಟ್ಟಿಲ್ಲ ಎಂದಿದ್ದಾರೆ. ಏಕೆ ನಾವು ಕೊಟ್ಟಿಲ್ಲವೆ? ಅದು ಪದೇ ಪದೇ ಪತ್ರಿಕೆಗಳಲ್ಲಿ ಬಂದಿಲ್ಲವೆ? ನಾನು ಮುಂದುವರಿದ ಕೋಮಿನವರನ್ನು ಅಭಿನಂದಿಸುತ್ತೇನೆ. ಅವರು ಕೊಟ್ಟ ಸಹಕಾರವನ್ನು ಅಭಿನಂದಿಸುತ್ತೇನೆ. ಅವರ ವಿವರಗಳನ್ನು ಈಗ ಹೇಳುವುದಕ್ಕೆ ಹೋಗುವುದಿಲ್ಲ. ಒಟ್ಟಿನಲ್ಲಿ ಇಷ್ಟು ಮಾತ್ರ ಹೇಳಬಲ್ಲೆ. ಯಾವುದೇ ಜಾತಿ ಇರಬಹುದು, ಏನೇ ಇರಬಹುದು. ಎಲ್ಲಾ ಜಾತಿಗಳಲ್ಲಿಯೂ ಬಡವರು ಇದ್ದಾರೆ ಎನ್ನತಕ್ಕಂತ ಮಾತನ್ನು ಪ್ರಾಮುಖ್ಯವಾಗಿ, ಮೂಲಭೂತವಾಗಿ ಇಟ್ಟುಕೊಂಡಿರುವವನು ನಾನು. ಈ ಮಾತನ್ನು ನಾನು ಎಂದು ಬಿಡುತ್ತೇನೆ. ಅಂದೇ ನಾನು ರಾಜಕಾರಣವನ್ನು ಕ್ಲೋಸ್ ಮಾಡುತ್ತೇನೆ. ಇದನ್ನು ನಾನು ಸ್ಪಷ್ಟಪಡಿಸುತ್ತೇನೆ. ನಾನು ಯಾವ ನೀತಿಯನ್ನು ಇಟ್ಟುಕೊಂಡಿದ್ದೇನೆ ಎನ್ನತಕ್ಕಂಥಾದ್ದು ನಮ್ಮ ಸ್ನೇಹಿತರಿಗೆ ಗೊತ್ತಿದೆ. ಕೋರ್ಟ್‌ನಲ್ಲಿರತಕ್ಕಂಥ ಕೇಸ್‌ಗಳ ಬಗ್ಗೆ ಹೇಳಿದ್ದಾರೆ, ಬೇರೆ ಬೇರೆ ಆರೋಪಗಳನ್ನು ಮಾಡಿದ್ದಾರೆ. ಅದೆಲ್ಲವನ್ನು ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಇವರು ಬೇರೆ ಬೇರೆ ರೀತಿಯಲ್ಲಿ ನನಗೆ ಸಾಕಷ್ಟು ತೊಂದರೆ ಕೊಟ್ಟಿದ್ದಾರೆ. ಈ ಮಾನ್ಯ ಮಿತ್ರರುಗಳು ಆಡಳಿತಪಕ್ಷದಲ್ಲಿದ್ದಾಗ, ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯವರಾಗಿದ್ದಾಗ ಕೊಟ್ಟಂಥ ಎಲ್ಲಾ ತೊಂದರೆಗಳನ್ನೂ ನಾನು ತಡೆದುಕೊಂಡು ಬಂದಿದ್ದೇನೆ. ಎಷ್ಟು ಕೇಸುಗಳನ್ನು ಹಾಕಿದ್ದಾರೆ, ಎಷ್ಟು ನೋಟೀಸ್‌ಗಳನ್ನು ಕೊಟ್ಟಿದ್ದಾರೆ. ನಮ್ಮ ಮೇಲೆ ಎಷ್ಟು ಹೊರಿಸಿದ್ದಾರೆ. ಇದೆಲ್ಲ ಕರ್ನಾಟಕ ರಾಜ್ಯದ ಜನರಿಗೆ ಗೊತ್ತಿಲ್ಲವೆಂದು ತಿಳಿದುಕೊಂಡಿದ್ದಾರೆಯೇ? ಇಷ್ಟಾದರೂ ಕೂಡ ಜನರ ಕಣ್ಣಲ್ಲಿ ತಮ್ಮ ಕಣ್ಣಲ್ಲಿ ಪರವಾಗಿಲ್ಲ ಇನ್ನೂ ನಾಲ್ಕು ವರ್ಷ ರಾಜಕಾರಣ ಮಾಡಬಹುದು ಇವರನ್ನು ಇಟ್ಟುಕೊಳ್ಳಬಹುದು ಎನ್ನತಕ್ಕಂಥ ಹೆಬ್ಬಯಕೆಯನ್ನು ವ್ಯಕ್ತಪಡಿಸಿರತಕ್ಕಂಥಾದ್ದು ನಾನು ಇಷ್ಟು ವರ್ಷಗಳ ರಾಜಕಾರಣದಲ್ಲಿ ಇಟ್ಟುಕೊಂಡಿರತಕ್ಕ ನಂಬಿಕೆಗೆ ದ್ಯೋತಕ, ಅದಕ್ಕಾಗಿ ತಮಗೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇನ್ನು ಜಾತಿ ಬಗ್ಗೆ ಹೇಳಬೇಕಾಗಿದೆ. ಜಾತಿ ಹುಟ್ಟಿನಿಂದ ಆದದ್ದು. ಮೊದಲೆ ನಮಗೆಲ್ಲ ಆಯ್ಕೆ ಇದ್ದದ್ದೇ ಆಗಿದ್ದರೆ ಈ ರಾಷ್ಟ್ರದ ಅಪಾರ ಜನರು ನಾನು ಕೂಡ ನಮಗೆ ಬೇಕಾದ ಜಾತಿ ಆರಿಸಿ ಅದರಲ್ಲಿ ಹುಟ್ಟಿಕೊಳ್ಳಬಹುದಿತ್ತು. ಆದರೆ ಹಾಗೆ ಮಾಡಲು ಬರುವುದಿಲ್ಲ ಇದು ದೇವರ ತೀರ್ಮಾನ. ಇದು ಕ್ರೈಸ್ತರ ತೀರ್ಮನ, ಅಲ್ಲಾ ತೀರ್ಮಾನ, ಹಿಂದೂ ದೇವರ ತೀರ್ಮಾನ, ಜೈನ ಧರ್ಮದ, ಬೌದ್ಧ ಧರ್ಮದ, ಸಿಖ್ ಪಂಥದ ತೀರ್ಮಾನ, ಮುಸಲ್ಮಾನ್ ಬಾಂಧವರ ತೀರ್ಮಾನ ಎಲ್ಲರ ತೀರ್ಮಾನವೂ ಇದೆ. ದೇವರು ಒಬ್ಬ ನಾಮ ಹಲವು ಅಂಥ ದೇವನ ತೀರ್ಮಾನ. ಅದರಂತೆ ನಾವು ಹುಟ್ಟಿಬಿಟ್ಟಿದ್ದೇವೆ. ಆದರೆ ಸೌಹಾರ್ದಯುತವಾದ

ವಾತಾವರಣದಲ್ಲಿ ನಡೆಸಿಕೊಂಡು ಹೋಗತಕ್ಕಂಥ ಜವಾಬ್ದಾರಿ ಮಾತ್ರ ನಮ್ಮದು, ನಮ್ಮೆಲ್ಲರದು ಎನ್ನತಕ್ಕಂಥ ಅನಿಸಿಕೆಯನ್ನು ಇಟ್ಟುಕೊಂಡಿದ್ದೇನೆ. ಯಾರು ಏನಾದರು ಅಂದುಕೊಳ್ಳಲಿ ನನ್ನ ಚಿಂತನೆ, ನನ್ನ ಪಕ್ಷದ ನೀತಿ ಬಿಟ್ಟು ಮುಂದಕ್ಕೆ ಹೋಗುವುದಿಲ್ಲ. ಈ ಮಾತನ್ನು ನಾವು ಜನತೆ ಮುಂದಿಟ್ಟಿದ್ದೇವೆ. ನಮ್ಮ ನಾಯಕರೆಂದು ಶ್ರೀ ರಾಜೀವ್‌ಗಾಂಧಿಯವರನ್ನು ಇಟ್ಟುಕೊಂಡಿದ್ದೇವೆ, ಹಾಗೆಯೇ ಕಾಂಗ್ರೆಸ್ ಪಕ್ಷದ ನೀತಿ ಇದು ಎಂದು ಇಟ್ಟುಕೊಂಡಿದ್ದೇವೆ. ಅದರಂತೆ ನಾವು ಅಪಾರ ಬಹುಮತದಿಂದ ಚುನಾವಣೆಯಲ್ಲಿ ಗೆದ್ದು ಬಂದಿದ್ದೇವೆ. ಈಗ ತಮ್ಮ ಬಳಿ ವಿಶ್ವಾಸ ಮತ ಕೇಳಲು ನಿಂತಿದ್ದೇನೆ. ಅಧ್ಯಕ್ಷರೇ ಈಗ ಮಾನ್ಯ ವಿರೋಧಪಕ್ಷದ ನಾಯಕರು ಇರಬೇಕಾಗಿತ್ತು. ನಿಜ ಹೇಳಬೇಕಾದರೆ, ಅವರು ಇಲ್ಲದೆ ಭಾಷಣ ಮಾಡುವುದಕ್ಕೆ ನನಗೆ ಮನಸಿಲ್ಲ. ಅವರು ಮಧ್ಯೆ ಮಧ್ಯೆ ತೊಂದರೆ ಕೊಟ್ಟರು ಮಾತನಾಡುತ್ತಾ ನಾನು ಹೋಗುತ್ತೇನೆ. ಮಹಾರಾಷ್ಟ್ರ, ಆಂಧ್ರದ ಮುಖ್ಯಮಂತ್ರಿಗಳು ಹಿಂದೆ ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ತಿರುಪತಿಯಲ್ಲಿ ನಡೆದ ಸಭೆ ಬಗ್ಗೆ ಪ್ರಸ್ತಾಪ ಮಾಡಿದರು. ಮುಂದೆ ಮಹಾಬಲೇಶ್ವರದಲ್ಲಿ ಮೀಟಿಂಗ್ ಆಗುತ್ತದೆ ಎಂದು ಹೇಳಿದರು. ಇವರು ಸ್ವತಂತ್ರವಾಗಿ ಚಿಂತನೆ ಮಾಡತಕ್ಕಂಥ ವಿಚಾರತನವುಳ್ಳವರು ಎಂದು ಹೇಳಿದ್ದು ಒಂದು ವೇಳೆ ಅಂತಹ ವಿಚಾರತನ ಇದ್ದರೆ ಅದಕ್ಕೆ ನಾವು ಬೆಲೆ ಕೊಡಬೇಕಾಗಿಲ್ಲ. ಏನಾದರು ಮಾಡಿ ನಮ್ಮ ನಾಯಕರ ಮೇಲೆ ಎತ್ತಿಕಟ್ಟುವಂಥಾ ಕೆಳದರ್ಜೆ ರಾಜಕಾರಣ ಮಾಡುತ್ತಿದ್ದಾರೆ. ಅದು ಅವರ ಮಟ್ಟಕ್ಕೆ ಹಿತವಾದದ್ದಲ್ಲ. ಜೊತೆಗೆ ಶ್ರೀ ವೀರೇಂಧ್ರಪಾಟೀಲರು ನಮ್ಮ ಸರ್ಕಾರದಲ್ಲಿಲ್ಲದಿದ್ದರೂ ಕೂಡ ಅಷ್ಟೇ ವೇಗದಿಂದ ನಮ್ಮ ಕೆಲಸ ಕಾರ್ಯಗಳನ್ನು ತೆಗೆದುಕೊಂಡು ಹೋಗುತ್ತಿದ್ದೆವು. ಇದೇ ಒಗ್ಗಟ್ಟನ್ನು ಇಟ್ಟುಕೊಳ್ಳುತ್ತಿದ್ದೆವು. ಆಮೇಲೆ ವಿಪ್ ಅಥವಾ ಆದೇಶದ ಬಗ್ಗೆ ಹೇಳಿದರು. ಅದು ಸಹಜ. ನಮ್ಮ ಪಕ್ಷದಲ್ಲಷ್ಟೇ ಅಲ್ಲ, ಎಲ್ಲಾ ರಾಜಕೀಯ ಪಕ್ಷದಲ್ಲೂ ಇದೆ. ಈಗ ಏನು ಮಾಡುತ್ತಾರೆ? 7ನೇ ತಾರೀಖು ಪ್ರಧಾನಮಂತ್ರಿಗಳು ನಮ್ಮ ಹಾಗೆ ಸಂಸತ್ತಿನಲ್ಲಿ ವಿಶ್ವಾಸಮತ ಕೇಳುವವರಿದ್ದಾರೆ. ಇದನ್ನು ನಾನು ಸ್ವಲ್ಪ ಪೂರ್ವಪೀಠಿಕೆಯಾಗಿ ಹೇಳಿದ್ದೆ. ನಾನು ವಿವರಣೆಗೆ ಹೋಗುವುದಿಲ್ಲ. ಅವರು ಆದೇಶ ಕೊಡುವುದಿಲ್ಲವೋ? ಸ್ವಲ್ಪ ದಯ ಮಾಡಿ ನೋಡಿ, ಈ ದೇಶದ ಜನ ನೋಡಲಿ. ಇವತ್ತು ವಿಪ್ ಕೊಡುವ ವಿಚಾರದಲ್ಲಿ ಕಾನೂನು ಇದ್ದಾಗ ಅದನ್ನು ಚಲಾವಣೆ ಮಾಡುವುದು ಆಯಾ ರಾಜಕೀಯ ಪಕ್ಷಕ್ಕೆ ಬಿಟ್ಟಿದ್ದು, ಕೇಂದ್ರಸರ್ಕಾರದ ಔದಾರ್ಯದಿಂದ ನಮ್ಮ ಸರ್ಕಾರ ಆಯಿತು ಎನ್ನುವ ಮಾತನ್ನು ಅವರು ಹೇಳಿದರು. ಕ್ಷಮಿಸಬೇಕು, ಪ್ರಜಾಪ್ರಭುತ್ವದ ಮೇಲ್ವರ್ಗದ ಔದಾರ್ಯದಿಂದ ನಾವು ಇಲ್ಲಿ ಪುನಃ ಸರ್ಕಾರವನ್ನು ಪ್ರತಿಷ್ಠಾಪನೆ ಮಾಡಿದ್ದೇವೆ ಎನ್ನತಕ್ಕ ಮಾತನ್ನು ನಾನು ಆಡುತ್ತಿದ್ದೇನೆ. ಈ ಮಾತನ್ನು ಸ್ಪಷ್ಟಪಡಿಸುತ್ತಿದ್ದೇನೆ. ಒಂದು ವೇಳೆ ನಮಗೆ ಸರ್ಕಾರ ಮಾಡಲು ಅವಕಾಶ ಕೊಡಲಿಲ್ಲ ಎಂದು ಇಟ್ಟುಕೊಳ್ಳೋಣ, ಆಲ್‌ರೈಟ್ ನಾವು ಜನರ ಮುಂದೆ ಹೋಗುತ್ತಿದ್ದೆವು, ಬಹುಮತ ಬರುತ್ತದೆಂಬ ನಂಬಿಕೆಯಿಂದ ಚುನಾವಣೆಗೆ ನಿಲ್ಲುತ್ತಿದ್ದೆವು, ಒಂದು ವೇಳೆ ಬಹುಮತ ಬರಲಿಲ್ಲ ಎಂದರೆ ಅವರ ಸ್ಥಾನದಲ್ಲಿ ಕುಳಿತುಕೊಳ್ಳುತ್ತೇವೆ, ಹಿಂದೆ ಕೂಡ ಕುಳಿತಿದ್ದೇವೆ ಅದೇನು ಹೊಸದಲ್ಲ. ಇದು ಪ್ರಜಾಪ್ರಭುತ್ವದ ನೀತಿ. ನಾವು ಗೆದ್ದರೆ ಅಧಿಕಾರ ನಮ್ಮದು, ಈ ಕುರ್ಚಿಯಲ್ಲಿ ಕುಳಿತುಕೊಳ್ಳೋಣ. ಇಲ್ಲದಿದ್ದರೆ ಅಧಿಕಾರ ಬಿಟ್ಟುಕೊಟ್ಟು ಜನರ ತೀರ್ಪಿಗೆ ತಲೆಬಾಗುತ್ತೇವೆ. ಅದೇ ನಮ್ಮ ಪಕ್ಷದ ನೀತಿ, ಅದೇ ಪ್ರಜಾತಂತ್ರಕ್ಕೆ ನಾವು ಕೊಡುವ ಮನ್ನಣೆ ಎಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ಅವರು ಮತ್ತೊಂದು ಮಾತು ಹೇಳಿದರು. ನಾನು ಪ್ರಮಾಣ ವಚನ ಸ್ವೀಕಾರ ಮಾಡಿದ 17ನೇ ತಾರೀಖು ಸಂಜೆ 5-45ಗಂಟೆಯಲ್ಲಿ ಈ ಮನೆಯ ವಿರೋಧ ಪಕ್ಷದ ನಾಯಕರನ್ನು ಮತ್ತು ಪರಿಷತ್ತಿನ ವಿರೋಧ ಪಕ್ಷದ ನಾಯಕರು ಮುಂತಾದವರನ್ನು ಕರೆಯಲಿಲ್ಲವೆಂದು ಹೇಳಿದರು. ಕ್ಷಮಿಸಬೇಕು, ಅದು ನಾವು ಏರ್ಪಾಡು ಮಾಡಿರತಕ್ಕಂಥ ಸಮಾರಂಭ ಅಲ್ಲ. ಏಕೆಂದರೆ, ಆಗ ನಮ್ಮ ಆಡಳಿತವೇ ಇರಲಿಲ್ಲ. ಇದು ಕಾನೂನು ವಿಚಾರ. ಆಗ ರಾಷ್ಟ್ರಪತಿ ಆಳ್ವಿಕೆ ಇತ್ತು, ಆ ಸರ್ಕಾರ ಅದನ್ನು ಏರ್ಪಾಟು ಮಾಡಬೇಕು, ನಾನು ಆ ದಿನ ಸಂಜೆ ಐದುಮುಕ್ಕಾಲು ಗಂಟೆಯವರೆವಿಗೂ ಮುಖ್ಯಮಂತ್ರಿಯಾಗಿರಲಿಲ್ಲ ಅಲ್ಲಿ ರುಜು ಹಾಕುವವರೆಗೂ ಯಾರೂ ಮುಖ್ಯಮಂತ್ರಿ ಆಗುವುದಿಲ್ಲ, ಅದು ಕಾನೂನು ಪ್ರಶ್ನೆ. ಆ ಸಮಾರಂಭವನ್ನು ಏರ್ಪಾಡು ಮಾಡಿರತಕ್ಕಂಥಾದ್ದು ರಾಷ್ಟ್ರಪತಿ ಆಳ್ವಿಕೆ ಅಥವಾ ಗೌರ್ನರ್ ಆಳ್ವಿಕೆಯಲ್ಲಿ. ಅದು ಅವರ ಜವಾಬ್ದಾರಿಯೇ ವಿನಹಾ ಆ ಮಾತು ನಮಗೆ

ಸಂಬಂಧ ಇಲ್ಲ. ದಯಮಾಡಿ ಆ ವಿಷಯವನ್ನು ಸಂಬಂಧಪಟ್ಟವರ ಮುಂದೆ ಅವರು ಇಡತಕ್ಕಂಥಾದ್ದು ಬಹಳ ಅವಶ್ಯಕತೆ ಇದೆ ಎನ್ನತಕ್ಕಂಥ ಮಾತನ್ನು ಮಾತ್ರ ನಾನು ಕಾನೂನು ವಿಚಾರದಲ್ಲಿ ಹೇಳುತ್ತಿದ್ದೇನೆ. ನಿಜ, ಆ ದಿವಸ ತಮಗೂ ಸ್ವಲ್ಪ ತೊಂದರೆಯಾಯಿತು, ಅದನ್ನು ನಾನೇ ಕಣ್ಣಾರೆ ಕಂಡೆ. ನಮಗೂ ಕೂಡಾ ಗೊತ್ತಿರಲಿಲ್ಲ, ಭಾರಿ ಜನಸ್ತೋಮ ಬಂತು, ನಾನು ಅವರಿಗೆಲ್ಲಾ ಅಭಿನಂದಿಸುತ್ತೇನೆ. ನಮ್ಮ ಸರ್ಕಾರದ ಪರವಾಗಿ ಅವರಿಗೆಲ್ಲಾ ನಾನು ಅಭಿನಂದಿಸುತ್ತೇನೆ. ಜನ ಹೋರಾಟ ಮಾಡಿದರು, ಅಭಿಮಾನದಿಂದ ಅವರವರೇ ಬಂದು ಸೇರಿದರು, ಸುಮಾರು 30-35 ಸಾವಿರ ಜನ ಬಂದರು. ಅವರು ಎಲ್ಲಿಂದ ಬಂದರೋ ನನಗೂ ಕೂಡಾ ಗೊತ್ತಿಲ್ಲ. ನಾನು ಅವರನ್ನು ಎಷ್ಟು ಮನಸಾರೆ ಹೊಗಳಿದರೂ ಸಾಲದು, ಅವರಿಗೆ ಎಷ್ಟು ನಮಸ್ಕಾರ ಮಾಡಿದರೂ ಸಾಲದು. ಅವರಿಗೆ ಮತ್ತೊಮ್ಮೆ ನಾನು ಅಭಿನಂದಿಸುತ್ತೇನೆ. ಅವತ್ತು ತಮಗೂ ಕೂಡಾ ತೊಂದರೆಯಾಯಿತು. ನಾವು ಏರ್ಪಾಡು ಮಾಡಿರತಕ್ಕಂಥ ಜನ ಅಲ್ಲದಿದ್ದರೂ ಕೂಡಾ ಅವತ್ತು ತಮಗೂ ಕೂಡ ನೋವು ಆಯಿತಲ್ಲಾ ಎನ್ನತಕ್ಕಂಥ ದೃಷ್ಟಿಯಿಂದ ನಾನೇ ತಮ್ಮನ್ನು ಮಾತನಾಡಿಸಿದೆ. 'ಕೃಷ್ಣಾಜಿ' ತಮಗೆ ತೊಂದರೆಯಾಯಿತು, ನಾನೇ ಕಣ್ಣಾರೆ ಕಂಡೆ ಎನ್ನತಕ್ಕಂತ ಮಾತನ್ನು ಕೂಡಾ ನಾನು ತಮಗೆ ಹೇಳಿದ್ದೇನೆ. ನಿಜ ಹೇಳಬೇಕೆಂದರೆ, ಆ ಸಮಾರಂಭದಲ್ಲಿ ನನ್ನ ಜೊತೆಗೆ ಬಂದಿರತಕ್ಕಂಥ ಒಬ್ಬೊಬ್ಬರು ಎಲ್ಲೆಲ್ಲಿಯೋ ಆಗಿಬಿಟ್ಟರು. ಜನರು ನುಗ್ಗಿಕೊಂಡು ಬಂದುಬಿಟ್ಟರು, ನನಗೆ ಗೊತ್ತಿರಲಿಲ್ಲ. ನಿಜ ಹೇಳಬೇಕೆಂದರೆ, ನನ್ನ ಜೊತೆಯಲ್ಲಿ ಯಾರು ಇದ್ದರು ಎನ್ನುವುದನ್ನು ಏನೊ ಸ್ಪೆಷಲ್ ಆಗಿ ಹೇಳಿಕೊಳ್ಳುತ್ತೇನೆ. ನಮ್ಮ ಮನೆಯವರೂ ಕೂಡಾ ಇದ್ದರು. ಎಲ್ಲೆಲ್ಲಿ ಹೋದರೋ ಗೊತ್ತಿಲ್ಲ. ಮೊಮ್ಮಕ್ಕಳು ಎಲ್ಲೆಲ್ಲಿ ಹೋದರೋ ನನಗೆ ಗೊತ್ತಾಗಲಿಲ್ಲ. ಇದನ್ನೆಲ್ಲಾ ತಾವೇ ಕಣ್ಣಾರೆ ಕಂಡಿದ್ದೀರಿ. ಆ ಪರಿಸ್ಥಿತಿಯಲ್ಲಿ ಹಾಗೆ ಆಯಿತು. ಹಾಗೆಯೇ ತಮಗೂ ಕೂಡ ತೊಂದರೆಯಾಯಿತು. ಅನೇಕ ಜನರಿಗೂ ಕೂಡಾ ತೊಂದರೆಯಾಯಿತು. ಆ ತೊಂದರೆಯ ಬಗ್ಗೆ ನಾನು ಪತ್ರಿಕಾ ಹೇಳಿಕೆಯ ಮುಖಾಂತರ ಹೇಳಿದ್ದೇನೆ. ಅನೇಕ ಜನರಿಗೆ ತೊಂದರೆಯಾಯಿತು, ದಯಮಾಡಿ ಕ್ಷಮೆ ಇರಲಿ, ಏಕೆಂದರೆ, ನಮ್ಮ ಸಮಾರಂಭವೇ ಆಗಿರುವುದರಿಂದ ನಾನು ಮಾತನಾಡಿದೆ. ನಾವು ಏರ್ಪಾಡು ಮಾಡದಿದ್ದರೂ ಕೂಡಾ ಇದು ನಮ್ಮಿಂದ ಆಗಿರತಕ್ಕಂತ ಸಮಾರಂಭ. ತಮ್ಮಗಳಿಗೆ ನೋವು ಆಗಿದ್ದರೆ ಕ್ಷಮಿಸಬೇಕು ಎನ್ನುವ ಮಾತನ್ನು ಜನತೆಗೆ ಹೇಳಿದ್ದೇನೆ. ತಮಗೂ ಕೂಡಾ ನೋವು ಆಯಿತು. ಆ ಸದನದ ವಿರೋಧ ಪಕ್ಷದ ನಾಯಕರು ಇರಬಹುದು, ಈ ಸದನದ ನಾಯಕರು ಇರಬಹುದು ಅಥವಾ ಯಾರೇ ಇರಬಹುದು, ಅಧ್ಯಕ್ಷರು ಇರಬಹುದು, ನಾನು ಈಗಲೂ ಕೂಡಾ ತಮ್ಮಲ್ಲಿ ಕ್ಷಮೆ ಕೇಳುತ್ತೇನೆ. ಮುಂದೆ ನಮ್ಮ ಕಾರ್ಯವ್ಯಾಪ್ತಿಯಲ್ಲಿ ಆ ವಿಚಾರ ಬಂದಾಗ ನಾವು ತಪ್ಪು ಆಗದ ಹಾಗೆ ನೋಡಿಕೊಳ್ಳುತ್ತೇವೆ. ತಪ್ಪು ಆದರೆ ತಮ್ಮ ಕ್ಷಮೆಯನ್ನು ಕೋರುತ್ತೇವೆ. ಇನ್ನು ಉಳಿದಿರತಕ್ಕಂಥ ವಿಚಾರವನ್ನು ನಾನೇನೂ ಮಾತನಾಡುವುದಕ್ಕೆ ಹೋಗುವುದಿಲ್ಲ . ಡಾಕ್ಟರ್ ಆಳ್ವ ಅವರು ಇದು ಒಂದು ಬಂಡೆ ಕಲ್ಲು, ಅಭೇದ್ಯವೆಂದು ತಿಳಿದುಕೊಂಡಿದ್ದಾರೆ ಎಂದು ಹೇಳಿದರು. ಆದರೆ ಹಡಗಿಗೆ ತೂತು ಬೀಳತಕ್ಕಂಥ ವಿಚಾರವನ್ನು ಉದಾಹರಣೆಯಾಗಿ ಕೊಟ್ಟರು. ತೂತು ಬೇಕಾದಾಗ ಹಡಗಿನ ಬುಡ ಹಿಡಿಯುತ್ತಾರೆ, ಅಭೇದ್ಯವಾಗಿರತಕ್ಕ ಬಂಡೆ ವಿಚಾರ ಬಂದಾಗ ಬಂಡೆ ಕಲ್ಲಿಗೆ ನಮ್ಮನ್ನು ಹೋಲಿಸುತ್ತಾರೆ. ಪುಣ್ಯಕ್ಕೆ ಅವರ ಅನುಕೂಲಕ್ಕೆ ತಕ್ಕಂತೆ ಮಾತನಾಡತಕ್ಕಂಥ ಶಕ್ತಿ ಅವರಿಗೆ ಇದೆ ಎನ್ನುವ ದೃಷ್ಟಿಯಿಂದ ಅವರು ಮಾತನಾಡಿದ್ದಾರೆ. ಆದ್ದರಿಂದ ಅವರು ಹಡಗನ್ನಾದರೂ ಇಟ್ಟುಕೊಳ್ಳಲಿ, ಬಂಡೆಕಲ್ಲನ್ನಾದರೂ ಇಟ್ಟುಕೊಳ್ಳಲಿ ನಾವು ಏನೂ ಹೇಳುವುದಿಲ್ಲ. ನಾನು ನಮ್ಮ ನೀತಿ ನೆಲೆಗಟ್ಟಿನ ಮೇಲೆ, ನಮ್ಮ ಒಗ್ಗಟ್ಟು, ನಮ್ಮ ಚಿಂತನೆ, ನಮ್ಮ ಕಾರ್ಯಕ್ರಮ, ಬಡ ಜನತೆಗೆ ಕಾರ್ಯಕ್ರಮವನ್ನು ಮಾಡತಕ್ಕಂಥ ವಿಚಾರ ಇದೆ. ನಾವು ಅದಕ್ಕೆ ಗಮನವನ್ನು ಹರಿಸುತ್ತೇವೆ. ಇನ್ನು ಕೇವಿಯಟ್ ಬಗ್ಗೆ ಹೇಳಿದರು. "ಪ್ರೈ ನಾಟ್ ಅನುಮಾನ ಬಂದಾಗ ಹೈಕೋರ್ಟ್ ಇರಬಹುದು, ಯಾವುದೇ ನ್ಯಾಯಾಲಯ ಇರಬಹುದು, ಅವರು ಯಾವ ಮಟ್ಟಕ್ಕೆ ಹೋಗುತ್ತಾರೆ ಎನ್ನತಕ್ಕಂಥಾದ್ದು ನಮಗೆ ಗೊತ್ತಿತ್ತು. ಅದಕ್ಕೋಸ್ಕರ ನಮ್ಮ ಪಕ್ಷದ ವತಿಯಿಂದ ಹೋಗಿ ಕೇವಿಯೆಟ್‌ನ್ನು ಹಾಕಿಸಿ ಯಾವುದೇ ಇಂಜಕ್ಷನ್ ವಗೈರೆ ಸಿಗದ ಹಾಗೆ ನೋಡಿಕೊಳ್ಳಬೇಕು ಎಂದು ಮಾಡಿದರು. ಇದು ನನಗೇ ಗೊತ್ತಿರಲಿಲ್ಲ. ಕಾನೂನು ವಿಚಾರ ನಾವು ಮಾಡಿದಾಗ ನಮ್ಮ ಪಕ್ಷದ ಕಾನೂನು ಪ್ರಜ್ಞೆಯನ್ನು ಇದು

ಎತ್ತಿ ತೋರಿಸುತ್ತದೆ. ನಿಜ ಹೇಳಬೇಕೆಂದರೆ, ಇದು ಬಹಳ ಸಂತೋಷ ಪಡತಕ್ಕಂಥ ವಿಚಾರ. ಆಮೇಲೆ ನನ್ನ ವಿಚಾರದಲ್ಲಿ ಕೂಡಾ ಹೇಳಿದರು. ನಾನು ಅದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಬೋಪಣ್ಣ ಕಮಿಷನ್ ಬಗ್ಗೆ ಹೇಳಿದರು, ಕೋರ್ಟಿನಲ್ಲಿ ಈಗಲೂ ಕೂಡಾ ಇದೆ. ಯಾರು ಕೇಸನ್ನು ಹಾಕಿಸಿದರು. ಏನು ಹಾಕಿದರು ಎನ್ನತಕ್ಕಂಥ ವಿಚಾರದ ಬಗ್ಗೆ ನಾನು ಮತ್ತೆ ಮಾತನಾಡಿ ಆ ಕಾನೂನನ್ನು ಮುರಿಯುವುದಕ್ಕೆ ಹೋಗುವುದಿಲ್ಲ. ಆದರೆ ನಾನೇ ನಾನಾಗಿ ರಾಜೀನಾಮೆಯನ್ನು ಕೊಟ್ಟಿರತಕ್ಕಂಥವನು. ಆದರೆ ಆದೇ ರಾಮಕೃಷ್ಣ ಹೆಗಡೆಯವರು ಅರ್ರ್ಯಾಕ್ ಬಾಟ್ಲಿಂಗ್ ಕಂಟ್ರಾಕ್ಟ್ ಕೇಸ್‌ನಲ್ಲಿ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಬಂದಮೇಲೆ ಅವರು ಏನು ಮಾಡಿದರು ಅಂದರೆ ಪುನಃ ಮುಖ್ಯಮಂತ್ರಿಯಾಗಿಯೇ ಮುಂದುವರಿದರು. ಆ ಕೆಲಸವನ್ನು ನಾನು ಮಾಡಲಿಲ್ಲ. ನಾನು ನೀತಿಯಿಂದ ರಾಜೀನಾಮೆಯನ್ನು ಕೊಟ್ಟೆ. ಅವರು ಇಲ್ಲಿ ಮುಂದುವರೆದರು. ಹೈಕೋರ್ಟ್ ಜಡ್ಜ್‌ಮೆಂಟ್ ಬಂದಾಗ ಮಾತ್ರ ರಾಜೀನಾಮೆಯನ್ನು ಕೊಟ್ಟು ಮಾರನೇ ದಿವಸ ಬಂದರು. ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಆದಾಗ ಮಾತ್ರ ಬರಲಿಲ್ಲ. ಈ ಮಾತನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇಂಥವರು ಈಗಲೂ ಕೂಡಾ ನಮ್ಮ ನಾಯಕರು ಎನ್ನತಕ್ಕಂಥ ಮಾತನ್ನು ಆಡಿಸಿಕೊಂಡರು. ಅವರು ಆ ನಾಯಕತ್ವದಲ್ಲಿಯೇ ಹೋಗಲಿ. ಅದು ಅವರ ನಂಬಿಕೆಗೆ ಬಿಟ್ಟಿರತಕ್ಕಂಥ ವಿಚಾರ. ಅಂಥವರು ಇದ್ದಷ್ಟೂ ಕೂಡಾ ಕರ್ನಾಟಕ ರಾಜ್ಯದ ಜನತೆಗೆ ಏನೂ ಅನುಮಾನ ಇಲ್ಲದೇ ಒಂದು ತೀರ್ಪು ಕೊಡುವುದಕ್ಕೆ ಅಲ್ಲಿ ಅನುವು ಆಗುತ್ತದೆ ಎನ್ನತಕ್ಕಂಥ ಒಂದು ಮಾತನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತಂದಿದ್ದೇನೆ. ಇನ್ನು ನಮ್ಮ ಪಕ್ಷದ ಎ.ಐ.ಸಿ.ಸಿ. ಜನರಲ್ ಸೆಕ್ರೆಟರಿ ವಿಚಾರ ಮತ್ತೊಂದು ವಿಚಾರ ಹೇಳಿದ್ದಾರೆ. ತಾವು ಅದನ್ನು ಕಡತಕ್ಕೆ ತಂದಿಲ್ಲ ಎಂದು ನಾನು ಭಾವಿಸಿದ್ದೇನೆ. ದಯಮಾಡಿ ಆ ವಿಚಾರದಲ್ಲಿ ಅವರು ಮಾತನಾಡತಕ್ಕಂಥದ್ದು ಕೂಡಾ ಸರಿಯಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಇನ್ನು ಉಳಿದಿರತಕ್ಕ ವಿಚಾರದ ಬಗ್ಗೆ ಹೇಳುವುದಾದರೆ, ಇಲ್ಲಿ ಬೆಂಬಲ ಕೊಟ್ಟಿರತಕ್ಕದ್ದು ಇದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಎಂ.ಜಿ.ಆರ್. ಅವರು ಕಾಯಿಲೆ ಇದ್ದರು, ಮತ್ತೊಬ್ಬರು ಇದ್ದರು. ಇಲ್ಲಿ ಕೂಡ ವೀರೇಂದ್ರ ಪಾಟೀಲರು ಕಾಯಿಲೆ ಇದ್ದಾಗ ಅದೇರೀತಿ ಇವರನ್ನು ಮುಂದುವರೆಸಬಹುದಿತ್ತು ಎಂದು ಹೇಳಿದ್ದಾರೆ. ಅದು ಪಕ್ಷದ ತೀರ್ಮಾನ. ಮಾನ್ಯ ವೀರೇಂದ್ರ ಪಾಟೀಲರ ಬಗ್ಗೆ ಅಪಾರವಾದ ಗೌರವ ಇದೆ ಎನ್ನತಕ್ಕ ಮಾತನ್ನು ನಾನು ಹೇಳಿದ್ದೇನೆ. ಆದ್ದರಿಂದ ಈ ಮಾತನ್ನು ಇಲ್ಲಿಗೇ ನಿಲ್ಲಿಸಿ ಈ ಸಂದರ್ಭದಲ್ಲಿ ಮುಸ್ಲಿಂ ಲೀಗ್‌ನ ಮಾನ್ಯ ಸದಸ್ಯರಾದ ಖಮರುಲ್ ಇಸ್ಲಾಂ ಅವರು ನಮಗೆ ಬೆಂಬಲವನ್ನು ಕೊಟ್ಟಿದ್ದಕ್ಕಾಗಿ, ಅವರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಹಾಗೆಯೇ ಎ.ಐ.ಎ.ಡಿ.ಎಂ.ಕೆನ ಮಾನ್ಯ ಸದಸ್ಯರುಗಳು ಭಾಷಣ ಮಾಡುವುದಕ್ಕೆ ಆಗಲಿಲ್ಲ. ಆದರೆ ಅವರು ಬೆಂಬಲವನ್ನು ಕೊಡತಕ್ಕಂಥ ವಿಚಾರವನ್ನು ನಮಗೆ ತಿಳಿಸಿದ್ದಾರೆ. ಅದಕ್ಕಾಗಿಯೇ ಅವರು ಇಲ್ಲಿ ಕುಳಿತಿದ್ದಾರೆ ಎಂದು ನಾನು ತಿಳಿದಿದ್ದರಿಂದ ಅವರಿಗೆ ಕೂಡಾ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಮತ್ತು ಯಾವುದೇ ಮಾನ್ಯ ಸದಸ್ಯರು ಅಂದರೆ ಅಸೋಸಿಯೇಟ್ ಮೆಂಬರ್ಸ್ ಇರಬಹುದು, ಬೇರೆ ಸದಸ್ಯರು ಇರಬಹುದು ಅಥವಾ ಈ ಸಂದರ್ಭದಲ್ಲಿ ಯಾರೇ ಇರಬಹುದು, ಮತ್ತೊಂದು ಪಕ್ಷದ ಸದಸ್ಯರಯ ಇಲ್ಲಿ ಕುಳಿತುಕೊಂಡಿದ್ದರೆ ಅವರಲ್ಲಿ ನಾನು ಈಗಲೂ ವಿನಂತಿ ಮಾಡಿಕೊಳ್ಳುತ್ತೇನೆ. ಸರ್ವಾನುಮತದಿಂದ ಈ ನಿರ್ಣಯವನ್ನು ಪಾಸ್ ಮಾಡೋಣ. ದಯಮಾಡಿ ಬೆಂಬಲ ಕೊಡಿ ಎನ್ನತಕ್ಕ ದೃಷ್ಟಿಯಿಂದ ನಾನು ಬೆಳಿಗ್ಗೆಯೇ ಹೇಳಿದೆ. ಅವರು ಕೊನೆಯ ಘಳಿಗೆಯವರೆಗೆ ಪ್ರಯತ್ನ ಮಾಡಿದರು. ಆತ್ಮಸಾಕ್ಷಿಯಾಗಿ ನೀವು ಮತ ನೀಡಿ ಮುಟ್ಟಿ ಮುಟ್ಟಿ ನೋಡಿ ಎಂದು ಹೇಳಿದರು. ಅವರು ಆತ್ಮಸಾಕ್ಷಿಯಾಗಿ ಮಾತನಾಡುತ್ತಿಲ್ಲ. ಆತ್ಮ ಇದ್ದರೆ ತಾನೆ ಅವರು ಸಾಕ್ಷಿಯಾಗಿ ಮಾತನಾಡುವುದು. ಆದ್ದರಿಂದ ಈ ರಾಜಕಾರಣ ಎಂದಿಗೂ ಹೇಳಿಸಿದ್ದಲ್ಲ ಎನ್ನತಕ್ಕ ಮಾತನ್ನು ಹೇಳುತ್ತೇನೆ. ನಮ್ಮ ಪಕ್ಷದಲ್ಲಿ ಒಗ್ಗಟ್ಟು ಶಿಸ್ತು, ನಮ್ಮ ನಾಯಕರಲ್ಲಿ ನಿಷ್ಠೆ ಇಟ್ಟುಕೊಂಡು ನಾವು ಮುಂದಕ್ಕೆ ಹೋಗುತ್ತೇವೆ. ನಮ್ಮ ಗುರಿ ಕರ್ನಾಟಕದ ಜನತೆಯ ಹಿತದ ಗುರಿ. ಅದಕ್ಕಾಗಿ ಈ ಸರ್ಕಾರವನ್ನು ನಮ್ಮ ಪಕ್ಷ ಪುನಃ ರಚನೆ ಮಾಡಿದೆ. ಅದಕ್ಕಾಗಿ ಇವತ್ತು ಒಳ್ಳೆಯ ವಾತಾವರಣ ನಮಗೆ ಬೇಕಾಗಿದೆ. ಈ ರಾಜ್ಯದಲ್ಲಿ ಕಲುಷಿತ ವಾತಾವರಣ ಕೆಲವಾರು ಕಾರಣದಿಂದ ನಡೆದಿದೆ.

ದೇಶದಲ್ಲಿಯೇ ನಡೆದಹಾಗೆ ನಡೆದಿದೆ. ಇದರ ಬಗ್ಗೆ ನಾನು ಮತ್ತೆ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನಮ್ಮ ಪಕ್ಷಕ್ಕೆ ಮತ್ತೊಂದು ಸಾರಿ ಸದವಕಾಶ ಸಿಕ್ಕಿದಾಗ ಅದನ್ನು ಸದುಪಯೋಗಪಡಿಸಿಕೊಳ್ಳತಕ್ಕಂಥ ನಿಷ್ಠೆ, ನಂಬಿಕೆ ಮತ್ತು ತಾಕತ್ತಿನ ಬಗ್ಗೆ ಅಪಾರವಾದ ನಂಬಿಕೆಯನ್ನು ಇಟ್ಟುಕೊಂಡು ನಾವು ಮುಂದಕ್ಕೆ ಹೋಗುತ್ತೇವೆ. ಫಲಿತಾಂಶವನ್ನು ಜನತೆಯ ಹಿತದೃಷ್ಟಿಯಿಂದ ತರುತ್ತೇವೆ. ಕರ್ನಾಟಕ ರಾಜ್ಯದ ಅಭ್ಯುದಯ ದೃಷ್ಟಿಯಿಂದ ಕೂಡ, ನಾವು ಅವರ ಒಳಿತಿಗೋಸ್ಕರ ವಿಚಾರ ಮಾಡುತ್ತೇವೆ ಎಂದು ನಮ್ಮ ಮುಖಾಂತರ, ಈ ಸದನದ ಮುಖಾಂತರ ಕರ್ನಾಟಕ ರಾಜ್ಯದ ಜನತೆಗೆ ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಈಗ ನಾನು ಏನು ನಿರ್ಣಯವನ್ನು ಮಂಡನೆ ಮಾಡಿದ್ದೇನೆ, ಇದಕ್ಕೆ ಸಂಪೂರ್ಣವಾದ ಬೆಂಬಲವನ್ನು ಸದನದ ಎಲ್ಲಾ ಮೂಲೆಗಳಿಂದಲೂ ನಾನು ಕೋರುತ್ತಿದ್ದೇನೆ ಹಾಗೂ ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತೇನೆ.

ವಿಶ್ವಾಸ ಮತದ ನಿರ್ಣಯದ ಅಂಗೀಕಾರ

ಅಧ್ಯಕ್ಷರು:- ''ಶ್ರೀ ಎಸ್.ಬಂಗಾರಪ್ಪ ಅವರ ನೇತೃತ್ವದ ಮಂತ್ರಿಮಂಡಲದಲ್ಲಿ ಈ ಸದನವು ತನ್ನ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ.'' ಎಂಬ ನಿರ್ಣಯವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಹೀಗಿದೆ '' ಈ ಸದನವು ಶ್ರೀ ಎಸ್.ಬಂಗಾರಪ್ಪ ಅವರ ನೇತೃತ್ವದ ಮಂತ್ರಿಮಂಡಲದಲ್ಲಿ ತನ್ನ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಪ್ರಸ್ತಾವಕ್ಕೆ ಸಭೆಯು ಸರ್ವಾನುಮತದಿಂದ ಅಂಗೀಕಾರವನ್ನು ನೀಡಿತು.

ಕರ್ನಾಟಕದಲ್ಲಿ ಮತೀಯ ಗಲಭೆಗಳ ಪ್ರಸ್ತಾವ

ಅಧ್ಯಕ್ಷರು:-ಕರ್ನಾಟಕದ ಮತೀಯ ಸೌಹಾರ್ದತೆಯ ಬಗೆಗಿನ ಪ್ರಸ್ತಾವವನ್ನು ಮಾನ್ಯ ಮುಖ್ಯಮಂತ್ರಿಯವರು ಮಂಡಿಸಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ(ಮಾನ್ಯ ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ಈ ಕೆಳಕಂಡ ಪ್ರಸ್ತಾವವನ್ನು ಸಭೆಯ ಅನುಮೋದನೆಗಾಗಿ ಮಂಡಿಸುತ್ತಿದ್ದೇನೆ.

''ಕರ್ನಾಟಕದಲ್ಲಿ ಮತೀಯ ಗಲಭೆಗಳನ್ನುಂಟು ಮಾಡುವ ಕೆಲವು ಘಟನೆಗಳಿಗಾಗಿ ಈ ಸದನವು ತೀವ್ರ ಆತಂಕ ಹಾಗೂ ದುಃಖವನ್ನು ವ್ಯಕ್ತಪಡಿಸುತ್ತದೆ. ಕರ್ನಾಟಕವು ಮತೀಯ ಸ್ನೇಹ, ಸೌಹಾರ್ದತೆಯ ಉನ್ನತ ಪರಂಪರೆಯನ್ನು ಪೂರ್ವಜರಿಂದಲೂ ಉಳಿಸಿಕೊಂಡು ಬಂದಿದೆ ಮತ್ತು ನಮ್ಮ ಪೂರ್ವಜರು ಸತತ ತ್ಯಾಗ, ಬಲಿದಾನಗಳಿಂದ ಗಳಿಸಿಕೊಟ್ಟ ಒಳ್ಳೆಯ ಕೀರ್ತಿ ಮತ್ತು ಪರಂಪರೆಯನ್ನು ಉಳಿಸಿ, ಬೆಳೆಸಿಕೊಳ್ಳುವುದು ರಾಜ್ಯದ ಪ್ರತಿಯೊಬ್ಬ ನಾಗರೀಕನ ಕರ್ತವ್ಯವಾಗಿದೆ. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಶಾಂತಿ ಹಾಗೂ ಸೌಹಾರ್ದತೆಗೆ ಹೆಸರಾದ ಕರ್ನಾಟಕ ರಾಜ್ಯದ ಜನತೆ, ಸಮಾಜದ ಎಲ್ಲಾ ವರ್ಗದ ಜನರೊಂದಿಗೆ ಪರಸ್ಪರ ಪ್ರೀತಿ, ವಿಶ್ವಾಸದಿಂದಿರಲು ಪ್ರಯತ್ನ ಮಾಡುವ ಮೂಲಕ ಜಾತ್ಯಾತೀತ ಭಾರತವನ್ನು ಇನ್ನೂ ಹೆಚ್ಚು ಬಲವಾಗಿ ನಿರ್ಮಿಸುವರೆಂಬ ಆತ್ಮವಿಶ್ವಾಸವನ್ನು ಈ ಸದನವು ಹೊಂದಿದೆ. ಪ್ರತ್ಯೇಕತೆಯ ಬೆದರಿಕೆಯನ್ನು ಒಂದು ಸವಾಲೆಂದು ಪರಿಗಣಿಸಿ, ಎಲ್ಲಾ ಸಮಯದಲ್ಲೂ ಶಾಂತಿಯಿಂದ ಹಾಗೂ ಪೂರ್ವಜರ ನಿರೀಕ್ಷೆಯಂತೆ, ದೇಶಪ್ರೇಮದ ಭಾವನೆಯನ್ನು ಚೇತನಗೊಳಿಸಲು ಶಾಂತಿಪ್ರಿಯ ಕರ್ನಾಟಕದ ಜನತೆಯಲ್ಲಿ ಮನವಿ ಮಾಡಿಕೊಳ್ಳಲು ಈ ಸದನವು ಸರ್ವಾನುಮತದಿಂದ ನಿರ್ಣಯಿಸುತ್ತದೆ.

ಮಾನ್ಯ ಅಧ್ಯಕ್ಷರೆ, ಈ ಮುಂಚೆ ತಮ್ಮ ಕೊಠಡಿಯಲ್ಲಿ ಕಾರ್ಯಕಲಾಪಗಳ ಸಮಿತಿಯ ಸಭೆಯಲ್ಲಿ ಆಗಿರತಕ್ಕ ತೀರ್ಮಾನದ ಪ್ರಕಾರ ಈಗ ನಿರ್ಣಯವನ್ನು ಮಂಡಿಸಿದ್ದೇನೆ. ಈ ಸಂದರ್ಭದಲ್ಲಿ ಈ ನಿರ್ಣಯವನ್ನು ಮಂಡಿಸತಕ್ಕ ಉದ್ದೇಶವಾದರೂ ಇಷ್ಟೆ. ನಿಜ ಹೇಳಬೇಕೆಂದರೆ ಈ ವಿಚಾರದಲ್ಲಿ ನಾನು ಬೆಳಿಗ್ಗೆ ಪ್ರಸ್ತಾವನೆ ಮಾಡತಕ್ಕ ಸಂದರ್ಭದಲ್ಲಿ ಅಂದರೆ ಪೀಠಿಕೆ ಹಾಕತಕ್ಕ ಸಂದರ್ಭದಲ್ಲಿ ಹೇಳಿದ್ದೇನೆ. ಯಾವುದೇ ವಿವರಗಳ ಡಿಸ್‌ಕಷನ್‌ಗೆ ನಾವು ಹೋಗುವ ಹಾಗೆ ಇಲ್ಲ. ಹೋಗಬಾರದು ಎನ್ನತಕ್ಕಂಥ ವಿಚಾರ ಇದೆ. ಏತಕ್ಕಾಗಿ ಹೋಗಬಾರದೆಂಬ ವಿಚಾರ ಇದೆಯೆಂದರೆ, ರಾಷ್ಟ್ರದಲ್ಲಿ ಕೆಲವು